ಪುಸ್ತಕ ಪ್ರಪಂಚ

ಜುಲೈ ೧೯೮೩



ವೈಕಂ ಮಹಮದ್ ಬಷೀರ: ವಿಶೇಷ ಸಂಚಿಕೆ

ಪುಸ್ತಕ ಪ್ರಪಂಚ
ಮಾಸಿಕ

ಪರಿವಿಡಿ

ಪುಸ್ತಕ ವಿಭಾಗ

ಸಂಪುಟ ೪೧ ಸಂಚಿಕೆ–೧೨

PUSTAKA PRAPANCHA : Monthly

Published and printed by Karnataka State Adult Eductaion Council, Mysore-4 Pages 128. Price : Rupees three

ಬಿಡಿಪ್ರತಿ : ರೂ. 3

ವಾರ್ಷಿಕ ಚಂದಾ : ರೂ. 30

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. 300

ಸಂಸ್ಥೆಗೆ : ರೂ. 500

೯.೨.೮೨

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-570 004

ಸಂಪಾದಕೀಯ

ವೈಕಂ ಮುಹಮ್ಮದ್ ಬಷೀರ-ಮಲೆಯಾಳ ಸಾಹಿತ್ಯದ ಒಬ್ಬ ಮಹತ್ವಪೂರ್ಣ ಲೇಖಕ. ಅಷ್ಟೇ ಜನಪ್ರಿಯ ಕೂಡ. ಈತ ಈ ಭಾಷೆಯಲ್ಲಿ ಅಷ್ಟೆ ಅಲ್ಲ, ಈ ಶತಮಾನದ ಜಗತ್ತಿನ ಯಾವುದೇ ಭಾಷೆಯ ಶ್ರೇಷ್ಠ ಲೇಖಕರಲ್ಲಿ ಒಬ್ಬ ಕೂಡ. ಇಂಥ ಲೇಖಕನೊಬ್ಬನ ಬಗ್ಗೆ ನಮಗೆ ತಿಳಿದಿರುವುದು ಅತ್ಯಲ್ಪ. ನಮ್ಮ ದೇಶದ ಸಂಪರ್ಕ ಮಾಧ್ಯಮಗಳಿಗೆ ನಮ್ಮ ವಿಮರ್ಶಕ ವರೇಣ್ಯರ ಕಣ್ಣಿಗೆ ತಟ್ಟನೆ ಬೀಳುವುದು ಎಲ್ಲೋ ಒಂದು ಕಡೆ ಒಂದಿಷ್ಟು ಕುತೂಹಲ ಕೆರಳಿಸದ ಒಬ್ಬ ರಶ್‌ದೀ ಒಬ್ಬ ವಿಕ್ರಮ್ ಸೇಠ್, ಇಲ್ಲವೇ ಅಮಿತಾವ್‌ಘೋಷ್. ಇವರಿಗೆ ಇವರ ಕೃತಿಗಳಿಗೆ ಸಿಕ್ಕಿದ ಮಾನ್ಯತೆ ಪ್ರಚಾರ ಬಹುಷಃ ಇವರಿಗೇ ವಾಕರಿಕೆ ತರಿಸಿಬಿಡುವ ಮಟ್ಟನದಾಗಿದೆ. ಇಂಥ ವಿಪರ್ಯಾಸದ ನಡುವೆ ಯಾವ ಕಾಲಕ್ಕೂ ಅರ್ಥಪೂರ್ಣವಾಗಿ ಉಳಿಯಬಲ್ಲ ಬಷೀರರಂಥ ಲೇಖಕರ ಹೆಸರುಗಳು ನಮ್ಮ ಫರಂಗಿರೋಗಗ್ರಸ್ಥ ಕಿವಿಗಳನ್ನು ತಾಕುವುದೇ ಇಲ್ಲ. ತಾಕಿದರೂ ಅಪರೂಪ.

ಭಾರತದ ಪ್ರತಿಯೊಂದು ಪ್ರಾದೇಶಿಕ ಭಾಷಾ ಸಾಹಿತ್ಯ ಲೋಕದಲ್ಲೂ ಬಷೀರರಂಥ ಅಪರೂಪದ ಲೇಖಕರು ಇದ್ದೇ ಇದ್ದಾರೆ. ಇಂಥವರ ಮೂಲಕ ಆಯಾ ಭಾಷೆಯ ಸಾಹಿತ್ಯ ಘನತೆಯನ್ನು ಮಾನ್ಯತೆಯನ್ನು ಪಡೆದುಕೊಳ್ಳುತ್ತದೆ. ದುರ್ದೈವವೆಂದರೆ ನಮ್ಮ ದೇಶದಲ್ಲಿ ಯಾವುದು ಶ್ರೇಷ್ಠ, ಯಾವುದು ಅಲ್ಲ ಅನ್ನುವ ನಿರ್ಧಾರ ಕೆಲವು ಅಪಾತ್ರರ ಕೈಯಲ್ಲಿದೆ. ಜ್ಞಾನಪೀಠ, ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್ ಇಂಥ ಪ್ರತಿಷ್ಠಿತ ಸಂಸ್ಥೆಗಳು ಕೆಲವು ಅಪರೂಪದ ಹಾಗೂ ಕೆಲವು ಕಳಪೆಯ ಕೃತಿಗಳನ್ನು ಆ ಈ ಭಾಷೆಗಳಿಗೆ ತಂದಿವೆ. ಆದರೆ ನಿಜವಾಗಿಯೂ ಆಯಾ ಭಾಷೆಯ ಅತ್ಯುತ್ಕೃಷ್ಟ ಕೃತಿಗಳನ್ನೇ ಬಿಟ್ಟಿರುತ್ತವೆ. ಉದಾ: ಕನ್ನಡದ ಮಹಾ ಕಾದಂಬರಿಗಳಾದ 'ಕಾನೂರು ಹೆಗ್ಗಡತಿ', 'ಮಲೆಗಳಲ್ಲಿ ಮದುಮಗಳು' ಇನ್ನೂ ಯಾವುದೇ ಭಾರತೀಯ ಭಾಷೆಯಲ್ಲೂ ಬಂದಿರದೇ ಇರುವುದು. 'ಗ್ರಾಮಾಯಣಕ್ಕೆ' ಬರಬೇಕಿದ್ದ ಕೇಂದ್ರ ಪ್ರಶಸ್ತಿ ಆ ಸಲ ಯಾವುದೋ ಒಂದು ಕಳಪೆ ಕೃತಿಗೆ ಬಂದದ್ದು. ಇದಕ್ಕೆಲ್ಲ ಕಾರಣ ನಿಜವಾದ ಸೃಷ್ಟ್ಯಾತ್ಮಕ ಪ್ರತಿಭೆಯಿಲ್ಲದ ವ್ಯಕ್ತಿ ಸಾಹಿತ್ಯದ ಹೆಸರಿನಲ್ಲಿ ನೀಚ ರಾಜಕೀಯ ಮಾಡುತ್ತಿರುವುದು. ಇಂಥ ಹುಳಗಳು ಯಾರ ಪುಸ್ತಕ ಅನುವಾದಿಸಬೇಕು, ಯಾರಿಗೆ ಪ್ರಶಸ್ತಿ ಕೊಡಿಸಬೇಕು, ಅವನು ಯಾವ ಜಾತಿ, ಯಾವ ಗುಂಪು ಎನ್ನುವ ಕ್ಷುದ್ರ ಕಾಯಕದ ಗುತ್ತಿಗೆ ಪಡೆದಿರುತ್ತವೆ. ಇಂಥವರಿಗೆ ಬಷೀರ ಎಲ್ಲಿ ಮುಟ್ಟಬೇಕು? ಇವನ ಕೃತಿಗಳ ಮಹತ್ವ ಹೇಗೆ ತಿಳಿಯಬೇಕು? ಜ್ಞಾನಪೀಠದಂಥ ಸಂಸ್ಥೆಯೂ ಸರಿಯಾದ ಪಾತ್ರರ ಕೈಯಲ್ಲಿದ್ದರೆ ಬಷೀರರಿಗೆ ಎಂದೋ ಜ್ಞಾನಪೀಠ ಪ್ರಶಸ್ತಿ ಸಿಗಬೇಕಿತ್ತು. ಅದು ಮುಂದೆಯೂ ಸಿಗುವುದೆ ಇಲ್ಲವೇನೋ? ಈ ಸಲ ಇನ್ನಾವ "ಪಿಂಜ್ರಾಪೋಲ್" ಕೃತಿಗಾಗಿ ಅದು ಕಾದಿದೆಯೊ? ಅದಕ್ಕಾಗಿ ಏನೆಲ್ಲಾ ಮಸಲತ್ತು ಹಿಕಮತ್‌ಗಳು ನಡೆಯುತ್ತಿವೆಯೋ? ಇದು ಸವಕಲ ಮಾತು ನಿಜ, ಆದರೂ ನಾನು ಇನ್ನೊಮ್ಮೆ ಹೇಳಲೇಬೇಕು..."ಜ್ಞಾನಪೀಠದಿಂದ ವೈಕಮ್ ಅವರಿಗೆ ಬೆಲೆ ಬರಬೇಕಿಲ್ಲ, ವೈಕಮ್ ಅವರಿಂದ ಜ್ಞಾನಪೀಠಕ್ಕೆ ಬೆಲೆ ಬರುತ್ತದೆ."

ಇತ್ತೀಚಿಗೆ ನಮ್ಮನ್ನು ಅಗಲಿದ ನಮ್ಮ ಒಬ್ಬ ಒಳ್ಳೆಯ ಕವಿ ಅದಕ್ಕಿಂತ ಮುಖ್ಯವಾಗಿ ಒಬ್ಬ ಮಾನವತಾವಾದಿಯಾಗಿದ್ದ ಗಂಗಾಧರ ಚಿತ್ತಾಲರ ಪರಿಚಯ ಹಾಗೂ ಅವರ ಕವಿತೆಗಳ ದೀರ್ಘ ವಿಮರ್ಶೆ ಈ ಸಂಚಿಕೆಯಲ್ಲಿವೆ. ಚಿತ್ತಾಲ ಯಾವ ಅಬ್ಬರ ಯಾವ ಸದ್ದು ಗದ್ದಲವಿಲ್ಲದೆ ಮೌನವಾಗಿ ಕನ್ನಡ ಕಾವ್ಯಕ್ಕೆ ತಮ್ಮದೇ ಆದ ಒಂದು ದನಿಯನ್ನು ಕೂಡಿಸಿದವರು. ಈ ದನಿ ಬೇಗ ಸಾಯುವ ದನಿಯಲ್ಲ. ಬಹಳಷ್ಟು ಕಾಲ ಕೇಳಿಸುತ್ತಲೇ ಇರುವ, ಕೇಳಿದವರ ಹೃದಯವನ್ನು ವಿಷಾದದಿಂದ ದ್ರವಿಸುತ್ತಲೇ ಹೋಗುವ ಅಪೂರ್ವ ದನಿ.

ಶ್ರೀಕೃಷ್ಣ ಆಲನಹಳ್ಳಿ
ಗೌರವ ಸಂಪಾದಕ

ಮಹಾಲೇಖಕ: ಬಷೀರ

ಶ್ರೀಕೃಷ್ಣ ಆಲನಹಳ್ಳಿ

ನನಗೂ ಮಲೆಯಾಳಕ್ಕೂ ಒಂದು ವಿಚಿತ್ರವಾದ ನಂಟು. ಅದು ಚಿಕ್ಕಂದಿನಿಂದಲೇ ಹುಟ್ಟಿದ್ದು. ನನ್ನ ಹಳ್ಳಿ ಒಂದು ಕಾಲಕ್ಕೆ ಕಗ್ಗಾಡಿಗೆ ಸೇರಿದಂತಿತ್ತು. ಏನೆಲ್ಲಾ ತುಂಬಿಕೊಂಡಿದ್ದ ಆ ಕಾಡಿ ನಾಚೆಗೆ ನಿಗೂಢ 'ಸ್ತ್ರೀ ಮಲೆಯಾಳ'. ಅದರ ಬಗ್ಗೆ ಅದೆಷ್ಟು ರಮ್ಯ ಕತೆಗಳು? ಅದರಲ್ಲೂ ಅಲ್ಲಿನ ಭೂತಗಳು ಮತ್ತು ಚಂದದ ಹೆಣ್ಣುಗಳು. ನನ್ನ ನಂಟರು ಕೆಲಸದವರು ನಮ್ಮ ಕೋಟೆ ಕಾಡಿಗೆ ಅಂಟಿಕೊಂಡಿದ್ದ ವೈನಾಡಿನಲ್ಲಿ ನೆಲೆಸಿದ್ದಾರೆ. ಅವರಿಗೆ ಕಾಫಿ ತೋಟಗಳಿವೆ. ಆಗೀಗ ಅಲ್ಲಿಗೆ ಹೋಗಿ ಬಂದವರು ಹೇಳುತ್ತಿದ್ದರು: ಅವರ ಕಾಫಿ, ಕಿತ್ತಳೆ ತೋಟಗಳ ಕಾವಲಿಗೆ ಭೂತಗಳನ್ನೇ ನೇಮಿಸಿದ್ದಾರಂತೆ. ಒಂದೇ ಒಂದು ಕೆಳಗೆ ಬಿದ್ದ ಹಣ್ಣನ್ನೂ ಮುಟ್ಟುವಂತಿಲ್ಲ. ಅವನ್ನು ಮುಟ್ಟಿದರೆ ಸಾಕು, ಕೈಕಾಲುಗಳನ್ನು ಅಲುಗಾಡಿಸುವಂತೆಯೇ ಇಲ್ಲವಂತೆ. ಅವರ ತೋಟಗಳು ಘಟ್ಟದಿಂದ ಕೆಳಗೆ ಇಳಿಯುತ್ತ ಹೋದಂತೆ ಶುರುವಾಗಿಬಿಡುತ್ತವೆ. 'ಸ್ತ್ರೀ ಮಲೆಯಾಳ'—ಅಲ್ಲಿ ಹೆಣ್ಣಿನದೇ ಎಲ್ಲಾ. ಅವರು ಹೇಳಿದ್ದೇ ನಡೆಯಬೇಕು. ಗಂಡು ದುಸರಾ ಮಾತಾಡುವಂತಿಲ್ಲ. ಅವನು ಹೆಣ್ಣಿನ ನೆರಳಷ್ಟೆ. ನನ್ನ ಊರಿನಲ್ಲಿ ಯಾರಿಗೆ ದೆವ್ವ ಹಿಡಿಯಲಿ, ಬಿಡಿಸಲು ಮಳೆಯಾಳದ ಮಂತ್ರದವನು ಬರುತ್ತಿದ್ದ. ಚಿಕ್ಕಂದಿನಲ್ಲಿ ನನಗೆ ಯಾರೋ 'ಮಾಟ' ಮಾಡಿಸಿದ್ದಾರೆ ಅಂತ ಅವ್ವ ನನಗೂ ಅಂಥ ಮಂತ್ರವಾದಿಯಿಂದ ಮಾಟ ಒಡೆಸಿದ ನೆನಪು. ಗಂಡಸರು ಮಾತ್ರ ಅಲ್ಲ, ಅಲ್ಲಿ ಹೆಂಗಸರೂ ಈ ವಿದ್ಯೆಯಲ್ಲಿ ನಿಪುಣರಂತೆ. ಹಾಗೇ ಅಲ್ಲಿ ಕುಟುಂಬದ ಆಸ್ತಿ—ಮಗನಿಗಲ್ಲ, ಮಗಳಿಗೆ, ಅಂದರೆ ಅಳಿಯ ಸಂತಾನ. ಎಲ್ಲಕ್ಕಿಂತ ಮೇಲಾಗಿ ಅಲ್ಲಿನ ಹೆಣ್ಣುಗಳ ಚೆಲುವು. ಕೈತೊಳೆದು ಮುಟ್ಟಬೇಕಂತೆ. ಅದಕ್ಕೇ ಅದು 'ಸ್ತ್ರೀ ಮಲೆಯಾಳ'.

ಚಿಕ್ಕಂದಿನಿಂದ ನನಗೆ ಇಂಥ ಅದ್ಭುತಗಳ ನಾಡನ್ನು ಕಾಣುವ ತವಕ. ಒಮ್ಮೊಮ್ಮೆ ಅದು ಎಷ್ಟು ಗಾಢವಾಗಿತ್ತು ಅಂದರೆ ಮುಂದಿನ ಸಲ ಯಾರಾದರೂ ಮಂತ್ರದವರು ಬಂದಾಗ ಮಗೆಯುವರ ಕಣ್ಣು ತಪ್ಪಿಸಿ ಓಡಿಬಿಡುವ ಹುನ್ನಾರಗಳನ್ನು ಯೋಚಿಸುತ್ತ ದಿನ ಕಳೆಯುತ್ತಿದೆ. ಅಂತೂ ಬಹಳ ಕಾಲ ನನ್ನ ಬಯಕೆ ಫಲಿಸಲೇ ಇಲ್ಲ. ಯಾಕೋ ಒಂದು ಕಾಲಕ್ಕೆ 'ಗೊಂಡಾರಣ್ಯ' ಅನಿಸಿದ್ದ ಕಾಕನಕೋಟೆ ಕಾಡನ್ನು ದಾಟಲಾಗಲೇ ಇಲ್ಲ. ಕ್ರಮೇಣ ನಾನು ಬೆಳೆದಂತೆ ನನ್ನೆಲ್ಲ ವಿಸ್ಮಯಗಳ ತವರಾಗಿದ್ದ ನನ್ನ ಕಾಡು ಕರಗತೊಡಗಿತು. ಕಾಡನ್ನು ಎರಡು ಹೋಳು ಮಾಡಿದ ಹೆದ್ದಾರಿ. ಕಪಿಲಾ ನದಿಯ ದಂಡೆಯುದ್ದಕ್ಕೂ ಸಮಾನಾಂತರವಾಗಿ ಇನ್ನೊಂದು ವಿಷದ ಹೊಳೆ ಹರಿಯುವಹಾಗೆ ಸಾಗಿದ ತಾರು ರಸ್ತೆ. ಈಗ ನನ್ನ ಊರಿಂದ ಬಸ್ಸಿನಲ್ಲಿ ಕೂತರೆ ಎರಡೇ ಗಂಟೆಯೊಳಗೆ ಬಾವಲಿ ನದಿ. ನದಿಯ ಆಚೆ ದಡ ಮಲೆಯಾಳ. ಈಚೆ ದಡ ಕನ್ನಡ. ನನ್ನ ಬಾಲ್ಯ ಕಳೆಯಿತೆನ್ನುವಷ್ಟರಲ್ಲಿ ಶುರುವಾದ ಕಪಿಲಾ ಜಲಾಶಯ ಕಾಕನಕೋಟೆ ಕಾಡಿನ ಬಹು ಭಾಗವನ್ನು ಬಲಿತೆಗೆದುಕೊಂಡುಬಿಟ್ಟಿತ್ತು.

೨. ಯಾವ ಗುರುತನ್ನೂ ಉಳಿಸದೆ ದಿನಗಳು ಕಳೆದುಹೋದ ಹಾಗೆ ನನ್ನ ಬಾಲ್ಯದ ಹಲವಾರು ಕನಸುಗಳು ಕಾಲನ ತುಳಿತಕ್ಕೆ ಸಿಕ್ಕಿ ಮಣ್ಣಾಗಿವೆ. ಕೆಲವೇ ಕೆಲವು ಮಾತ್ರ ಉಳಿದಿವೆ ಬಂಡೆಗಳ ಬಿರುಕುಗಳಲ್ಲಿ ನಗುವ ಗರಿಕೆ ಕುಡಿಗಳಂತೆ. ಒಂದು ದಿನ ನನಗೊಂದು ಅಪೂರ್ವ ನಿಧಿ ಸಿಕ್ಕಿತು. ಅದು ಮಲೆಯಾಳದಿಂದ ಕನ್ನಡಕ್ಕೆ ಅನುವಾದ ಗೊಂಡಿದ್ದ ಎಂ. ಟಿ. ವಿ. ಅವರ ಕಾದಂಬರಿ 'ಚಾಕಟ್ಟಿನ ಮನೆ'. ಅದು ನಾನು ಓದಿದ ಕೃತಿಯಷ್ಟೇ ಆಗಲಿಲ್ಲ. ತನ್ನೊಳಗೆ ನನ್ನನ್ನು ಮುಳುಗಿಸಿಕೊಂಡಿತು. ಎಲ್ಲಕ್ಕಿಂತ ಮಿಗಿಲಾಗಿ ಚಾಕಟ್ಟಿನ ಮನೆಯ ಹೆಣ್ಣುಗಳು, ಅದರಲ್ಲೂ ಅಮ್ಮಿಣ್ಣಿ ನನ್ನ ಚಿಕ್ಕಂದಿನ ವಿಸ್ಮಯಭರಿತ 'ಸ್ತ್ರೀ ಮಲೆಯಾಳ'ಕ್ಕೆ ನನ್ನನ್ನು ಆಹ್ವಾನಿಸಿದ್ದು. ಆ ದೊಡ್ಡ ಮನೆ ಮಾವನ ಚಿಕ್ಕಮಗಳು—ಅಮ್ಮಿಣ್ಣಿ. ಎಳೆ ಬಾಳೆಸುಳಿ ಅವರು. ಅರೆಬೆತ್ತಲೆಯಾಗಿ ನಾಗಮಂಡಲದೊಳಗೆ ನಿಂತಿದ್ದಾರೆ. ಕೈಯಲ್ಲಿ ಹಿಂಗಾರ ಹಿಡಿದಿದ್ದಾರೆ. ಸಂಗೀತದ ಲಯಕ್ಕೆ ತೂಗುವ, ಬಾಗುವ, ಬಳುಕುವ ನಾಗಕನ್ಯೆ. ಅಪ್ಪುಣಿಯ ರಕ್ತಕ್ಕೆ ಹುಚ್ಚು ಹಿಡಿಸಿ ಬಿಡುತ್ತಾಳೆ. ಹಾಗೇ ನನ್ನ ಬಾಲ್ಯದ ಕನಸೊಂದು ಕಮರಿ ಹೋಗಿಬಿಡದಂತೆ ಅದನ್ನೂ ಕುಡಿಯೊಡೆಸುತ್ತಾಳೆ.

ಹೀಗೆ ನಾನು 'ಚಾಕಟ್ಟಿನ ಮನೆ'ಯ ಮೂಲಕ ಮಲೆಯಾಳ ಸಾಹಿತ್ಯ ಪ್ರಪಂಚವನ್ನು ಪ್ರವೇಶಿಸಿದೆ. ಅದೇ ವರ್ಷ ಅಂದರೆ ೧೯೭೨ ರಲ್ಲಿಯೇ ನನಗೆ ಇನ್ನೊಂದು ಮಲೆಯಾಳಂ ಕೃತಿ ಸಿಕ್ಕಿತು. ಅದರಲ್ಲಿ ಎರಡು ನೀಳ್ಗತೆಗಳಿದ್ದವು. ಒಂದು 'ಪಾತುಮ್ಮನ ಆಡು' ಇನ್ನೊಂದು 'ಬಾಲ್ಯಕಾಲ ಸಖಿ'. ಇವು ನನ್ನ ಕಣ್ಣೆದುರು ತೆರೆದಿಟ್ಟ ಲೋಕ, ಈ ತನಕ ನಾನು ಕಂಡಿರದಿದ್ದ ಲೋಕವಾಗಿತ್ತು. ಅಲ್ಲಿನ ಮಾತುಗಳು ಪಿಸುದನಿಯ ಮಾತುಗಳಾಗಿದ್ದವು. ಅದೆಷ್ಟು ಸಲ ಓದಿದೆನೋ ನೆನಪಿಲ್ಲ. ಪ್ರತಿ ಸಲವೂ ಹೊಸ ಹಾಗಿಯೇ ಓದಿದ ಅನುಭವ. ಯಾವ ಪದವೂ ಸವಕಲಾಗಲಿಲ್ಲ. ಯಾವ ಅನುಭವವೂ ಹಳಸಿತು ಅನಿಸಲಿಲ್ಲ. ಅವರ ಓದು ನನಗಿನ್ನೂ ಪ್ರಿಯವಾಗಿರುವಾಗಲೇ ಅವರ ಕಾದಂಬರಿ ನನ್ನಜ್ಜನಿಗೊಂದು ಆನೆಯಿತ್ತು ಹೊರಬಂದಿತು. ಇದಂತೂ ನನ್ನನ್ನು

ತುಂಬಾ ಗಾಢವಾಗಿ ಪ್ರಭಾವಗೊಳಿಸಿತು. ಇವತ್ತಿಗೂ ನಾನು ಓದುತ್ತಲೇ ಇರುವ ಕೆಲವೇ ಕೃತಿಗಳಲ್ಲಿ ಇದೂ ಒಂದು. ಒಂದು ಕತೆಗೆ, ಒಂದು ಕಾದಂಬರಿಗೆ ಒಂದು ಅಪೂರ್ವವಾದ 'ಕಾವ್ಯ ಧ್ವನಿ ಶಕ್ತಿ' ಯಿರಬಲ್ಲದೆಂಬುದನ್ನು ಮೊದಲ ಬಾರಿಗೆ ನಾನು ಈ ಮಹಾ ಲೇಖಕನ ಕೃತಿಗಳಿಂದ ಕಂಡುಕೊಂಡೆ. ವೈಕಂ ತಮ್ಮ ಕತೆ, ಕಾದಂಬರಿಗಳ ಮೂಲಕ ಮಲೆಯಾಳ ಸಾಹಿತ್ಯದ ಬಗೆಗೆ ನಮ್ಮಲ್ಲಿ ಗೌರವಭಾವ ಮೂಡುವಂತೆ ಮಾಡಿದ್ದಾರೆ. ಅಷ್ಟೇ ಅಲ್ಲ ನನ್ನಂಥವನಿಗೆ ಅಪರಿಚಿತವೆನಿಸಿದ್ದ ಮುಸ್ಲಿಂ ಸಮಾಜ ವೊಂದರ ಮುಸ್ಲಿಂ ಸಮಾಜದಲ್ಲಿರುವ ಒಳಿತು ಕೆಡಕುಗಳನ್ನು ಧಾರ್ಮಿಕ ವಿಧಿಗಳ ವೈಪರೀತ್ಯಗಳನ್ನು ಸರಳವಾಗಿ, ನವುರಾದ ಹಾಸ್ಯದೊಡನೆ ತೆಗೆದು ತೋರಿದ್ದಾರೆ. ಯಾವುದನ್ನೂ ಮುಚ್ಚಿಡದೆ, ಯಾವ ಬಗೆಯ ಆದೇಶಕ್ಕೂ ಒಳಗಾಗದೆ ಸಮಾಧಾನ ಚಿತ್ತನಾಗಿ ಹೀಗೆ ಬರೆಯಬಲ್ಲ ಲೇಖಕ ಭಾರತದಲ್ಲಿ ಮಾತ್ರ ಅಲ್ಲ ವಿಶ್ವಸಾಹಿತ್ಯದಲ್ಲೆ ತುಂಬಾ ವಿರಳ. ಬಷೀರರ ಒಂದೊಂದು ಕೃತಿಯೂ ಒಂದೊಂದು ಅಪರೂಪದ ಸೃಷ್ಟಿ ಗಳೇ. ಇಲ್ಲಿನ ಪಾತ್ರಗಳು ನಮ್ಮ ಕಣ್ಣಮುಂದೆ ಬಂದು ಹಾಗೇ ಹೋಗಿಬಿಡುವ ಪಾತ್ರ ಗಳಲ್ಲ. ನಮ್ಮ ಜೊತೆ ಹೃದಯ ಸಂವಾದಕ್ಕೆ ತೊಡಗುವ ಪಾತ್ರಗಳು. ಇಂಥ ಪಾತ್ರ ಗಳ ಸೃಷ್ಟಿಕರ್ತ ಬಷೀರರನ್ನು ಕಾಣದೆ, ಕಂಡು ಮಾತಾಡದೆ ಇರುವುದಾದರೂ ಹೇಗೆ?

೩. ಕಡೆಗೊಂದು ದಿನ ಕಲ್ಲಿಕೋಟೆ ಅಂತ ನಮ್ಮ ಕಡೆ ಕರೆಯಲ್ಪಡುವ ಕೋಳಿಕ್ಕೋಡಿಗೆ, ಹಳೆಯ ಮಲಬಾರಿಗೆ ಬಸ್ಸು ಹತ್ತಿದೆ. ಕಾಫಿ ತೋಟಗಳನ್ನು ದಾಟಿ ದಾಟಿ ಪಶ್ಚಿಮ ಘಟ್ಟಗಳನ್ನು ಇಳಿಯುವಾಗ ಆ ರುದ್ರರಮಣೀಯ ನಿಸರ್ಗ ಸೌಂದರ್ಯಕ್ಕೆ ಮೂಕನಾದೆ. ಕಣಿವೆಗಳಲ್ಲಿ ಕೆನೆಗಟ್ಟಿ ನಿಂತ ಬೆಳ್ಳಿ ಮೋಡಗಳು. ನನ್ನ ಮನಸ್ಸಿನ ಆಳದಲ್ಲೂ ಮುಡುಗಟ್ಟಿದ ಬಾಲ್ಯದ ಕನಸುಗಳು. ಘಟ್ಟ ಇಳಿದಿದ್ದೇ ದಾರಿ ಉದ್ದಕ್ಕೂ ತೆಂಗು, ಅಡಿಕೆ ಮತ್ತು ಬಾಳೆ ತೋಟಗಳು. ನಡುನಡುವೆ ಭತ್ತದ ಗದ್ದೆಗಳ ಹಸಿರು ದ್ವೀಪಗಳು. ಯಾವ ಕಡೆ ನೋಡಿದರೂ ನಳನಳಿಸುವ ಹಸಿರು. ಬರೀ ಹಸಿರು. ನೋಡ ನೋಡುತ್ತ ಕಣ್ಣುಗಳೇ ಹಸಿರುಗಟ್ಟಿಬಿಟ್ಟವೇನೋ ಅನಿಸಿತು. ಬಸ್ಸಿನ ಕಿಟಕಿಯಲ್ಲಿ ಮುಖವಿಟ್ಟು ಕೂಡ ನನಗೆ ನನ್ನ ಹಳೆಯ ಕಲ್ಪನೆಗಳು ಒಂದೊಂದೆ ನೆಲಕ್ಕಿಳಿದು ಕಣ್ಣಿಗೆ ತಾಕತೊಡಗಿದವು. ಸ್ವಲ್ಪ ದೂರ ಸಾಗಿದ್ದೆ. ಉರಿವ ಸೂರ್ಯ ಮಂಕಾದಂತೆ, ಅದೆಲ್ಲಿದ್ದವೋ ಕರಿಯ ಮೋಡಗಳು ದಟ್ಟೈಸಿ ಬಂದವು. ಹಗಲೇ ಕತ್ತಲಾದಂತೆ, ಪಟಪಟ ನಾಲ್ಕು ಹನಿ ಸಿಡಿದಿದ್ದೆ ಮತ್ತೆ ಎತ್ತಿ ಬಗ್ಗಿಸಿದಂತೆ ಮಳೆ ಧಾರೆ ಯಾಗಿ ಅಡ್ಡಗಟ್ಟಿತು. ಬಸ್ಸಿನ ವೇಗ ನಿಧಾನವಾಯಿತು. ಕಂಗೊಳಿಸುತ್ತಿದ್ದ ಹಸಿರುವ ಸಿರಿ ಮಳೆಯಲ್ಲಿ ಮುಳುಗಿಹೋದಂತೆ. ಅಲ್ಲಲ್ಲಿ ಊರು ಸಿಕ್ಕಲ್ಲಿ ಕೊಡೆಗಳ ಮೆರವಣಿಗೆ. ಬಣ್ಣಬಣ್ಣದ ಕೊಡೆಗಳ ಕೆಳಗೆ ಹೆಣ್ಣುಗಳೆ ಇರಬೇಕು. ಅವನ್ನು ಕಾಣುವ ತವಕ ನನಗೆ. ಅವೆಲ್ಲ ನನ್ನ ಬಾಲ್ಯದ ಮಾಟಗಾತಿಯರ ಮುಖಗಳೇ ಇರಬೇಕು.

ಬೆಳಗ್ಗೆ ನಾನು ಹೇಳುವ ಮುಂಚೆ ಕೋಳಿಕ್ಕೋಡಿನ ಸೂರ್ಯ ಎದ್ದು ಕೂತಿದ್ದ. ಅವರನ್ನು ಕಾಣುವ ಉದ್ವೇಗಕ್ಕೆ ಒಳಗಾದೆ. ಅವರು ಹೇಗಿಬಹುದು? ಅವರನ್ನು ಕಂಡಿದ್ದೆ ಏನು ಕೇಳುವುದು? ಏನನ್ನು ಕೇಳಿದರೆ ಅರ್ಥಪೂರ್ಣ? ಯಾವುದು ಸರಿ? ಯಾವುದಲ್ಲ? ಜೋರಾಗಿ ಸುತ್ತುತ್ತಿದ್ದ ಫ್ಯಾನಿನ ಕೆಳಗೆ ಕೂತಿದ್ದರೂ ತಲೆ ಕುಡಿಮಡಕೆ

ಯಾಗಿತ್ತು. ಟ್ಯಾಕ್ಸಿ ಹಿಡಿದು ವಿಳಾಸ ಹೇಳಿದೆ. ಡ್ರೈವರ್ ನಗುತ್ತಾ ಅಂತ ತಲೆಯಾಡಿಸಿದ. ಕೇರಳದ ಯಾವ ಊರಲ್ಲಿ ಹೋಗಿ ಯಾವ ಲೇಖಕನ ವಿಳಾಸ ಕೇಳಿದರೂ ಅದು ಅಕ್ಷರಬಲ್ಲ ಪ್ರತಿಯೊಬ್ಬನಿಗೂ ಗೊತ್ತು. ಅದರಲ್ಲೂ ವೈಕಂ ಅವರ ಹೆಸರು, ಮನೆ ಯಾರಿಗೆ ಗೊತ್ತಿಲ್ಲ? ದೊಡ್ಡ ರಸ್ತೆಯಲ್ಲಿಳಿಸಿದ ಚಾಲಕ ಒಂದು ಸಣ್ಣ ಓಣಿಯ ಮೂಲಕ ಹೋಗಲು ಕೈಸನ್ನೆಯ ಮೂಲಕವೇ ಹೇಳಿದ. ಸಣ್ಣ ಓಣಿ ದಾಟಿದೆ ಬಷೀರ್ ಮನೆ ಸಿಕ್ಕಿತು. ಮಳೆಗೆ ಕಪ್ಪುಕರೆ ಕಟ್ಟಿದ ಹೆಂಚಿನ ಮನೆ. ಸುತ್ತ ತೆಂಗು, ಅಡಿಕೆ, ಮಾವು, ಬಾಳೆಯ ಜೊತೆಗೆ ಇನ್ನೇನೊ ಮರಗಿಡಗಳಿದ್ದ ಪುಟ್ಟ ತೋಟ.


ಬಾಗಿಲಲ್ಲಿ ನಿಂತಿದ್ದ ನನ್ನನ್ನು ಕಂಡಿದ್ದೆ ವರಾಂಡದಲ್ಲಿದ್ದ ವೈಕಂ ಎದ್ದು ಬಂದು ಸ್ವಾಗತಿಸಿದರು. ಮಹಾ ಲೇಖಕನೆಂಬ ಯಾವ ಗತ್ತೂ ಅವರಲ್ಲಿರಲಿಲ್ಲ. ಎಲ್ಲಾ ಮಲೆಯಾಳಿಗಳಂತೆ ಇವರೂ, ಸೊಂಟದಲ್ಲೊಂದು ಪಂಚೆ ಬಿಟ್ಟರೆ ಮೈಮೇಲೆ ಏನೂ ಇರಲಿಲ್ಲ. ನನ್ನ ಪರಿಚಯ ಹೇಳಿದೆ. ಮುಖದಲ್ಲೊಂದು ತೆಳುಮಂದಹಾಸ ತೇಲಿತು. ಹಳೆಯ ಆರಾಮಕುರ್ಚಿಯಲ್ಲಿ ಕೂತರು. ನಾನೂ ಎದುರಾಗಿ ಕೂತೆ. ನಡುವೆ ಒಂದು ಪುಟಾಣಿ ಸ್ಟೂಲು. ಅದರ ಮೇಲೆ ಒಂದು ಕಟ್ಟು ಬೀಡಿ, ಬೆಂಕಿಪೊಟ್ಟಣ, ಬಳಸಿ ಬಳಸಿ ಸವೆದಂತಿದ್ದ ಕಪ್ಪುಕಟ್ಟಿನ ಕನ್ನಡಕ ಹಾಗೂ ಕುಡಿದಿಟ್ಟಿದ್ದ ಒಂದು ಟೀ ಲೋಟ. ಯಾವ ಆಡಂಬರವೂ ಇಲ್ಲ. ಎಲ್ಲ ಅವರ ಕೃತಿಗಳಂತೆಯೆ ಸರಳ. ಏನು ಕೇಳುವುದಕ್ಕೂ ತೋಚಲಿಲ್ಲ.

ಬಷೀರ ಗಂಭೀರವಾದ ಕಡಲಿನಂತೆ ಕೂತಿದ್ದರು. ಯಾಕೋ ಮಾತೇ ಬರಲಿಲ್ಲ. ಅವರೇ ಮೌನಮುರಿದು ತಮ್ಮ ಹೆಂಡತಿಗೆ ಕೂಗಿ ಏನೋ ಹೇಳಿದರು. ಸ್ವಲ್ಪ ಹೊತ್ತಿನಲ್ಲೆ ತಟ್ಟೆತುಂಬ ಏನೇನೋ ತಿಂಡಿಗಳನ್ನು ಅವರ ಪತ್ನಿ ತಂದಿರಿಸಿದರು. ಅವರ ಪತ್ನಿಯನ್ನು ಪರಿಚಯಿಸಿದಾಗ ನನಗೆ ಆಶ್ಚರ್ಯ. ಅವರ ಪತ್ನಿ ಅವರಿಗಿಂತ ತುಂಬಾ ಚಿಕ್ಕವರು. ನನ್ನ ಆಶ್ಚರ್ಯ ಕುತೂಹಲ ವೈಕಂ ಅವರಿಗೆ ಹೇಗೆ ಹೊಳೆಯಿತೊ ಕಾಣೆ? ಅವರೇ ತಾವು ತುಂಬಾ ತಡವಾಗಿ ಮದುವೆಯಾದುದನ್ನು ತಿಳಿಸಿದರು. ಮೊಮ್ಮಕ್ಕಳಂತಿದ್ದ ಇಬ್ಬರು ಮಕ್ಕಳನ್ನು ಕರೆದು ತೋರಿಸಿ ಅವರಿನ್ನೂ ಶಾಲೆಯಲ್ಲಿ ಓದುತ್ತಿದ್ದಾರೆ ಅಂದರು. ಜೊತೆಗೆ ತಟ್ಟೆಯಲ್ಲಿದ್ದುದನ್ನು ತಿನ್ನಲು ಒತ್ತಾಯಿಸಿದರು. ನನಗೋ ಇನ್ನೂ ಮೈಚಳಿ. ತಿನ್ನುವ ಸದ್ದಿನ ಭಯ ಬೇರೆ. ಒಂದು ಚೂರು ಬಾಯಲ್ಲಿಟ್ಟು ಹಾಗೇ ಕೂತೆ. ಕಡೆಗೆ ವೈಕಂ ನನ್ನ ಬಗ್ಗೆ, ಕನ್ನಡದ ಬಗ್ಗೆ ವಿಚಾರಿಸಿದರು. ಕೊಂಚ ಸರಾಗವಾಯಿತು. ಒಂದೊಂದೆ ಮಾತನ್ನು ತಡವರಿಸುತ್ತ ಆಡಿದ ನೆನಪು ನನ್ನ ಮಾತಿಗೆ ಪ್ರತಿಯಾಗಿ ಬಷೀರರೂ ತಮ್ಮ ಭೂತಕ್ಕೆ ಮರಳಿ ನೆನಪಿನಾಳದಿಂದ ಒಂದೊಂದೆ ಅನುಭವಗಳನ್ನು ಹೊರತೆಗೆಯತೊಡಗಿದರು.

ಬಾಲ್ಯದಲ್ಲೆ ತಾವು ಮನೆಬಿಟ್ಟದ್ದು, ಇಡೀ ಭಾರತವನ್ನು ಬರಿಗಾಲಿನಲ್ಲಿ ಸುತ್ತಿದ್ದು, ಗಾಂಧಿಯವರ ಗಾಢಪ್ರಭಾವಕ್ಕೆ ಒಳಗಾಗಿದ್ದು, ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದ್ದು, ಉಪ್ಪಿನ ಸತ್ಯಾಗ್ರಹ, ಜೈಲುವಾಸ, ಸಮುದ್ರಯಾನ ಹೀಗೆ ತಮ್ಮ ಹೋರಾಟದ ಬದುಕನ್ನು ಬಿಚ್ಚುತ್ತಾ ಹೋದರು. ಬಷೀರರ ಕೃತಿಗಳಲ್ಲಿ ಬರುವ ಪಾತ್ರಗಳ ಬಗ್ಗೆ ಬಷೀರ ಏನೂ ಹೇಳಲಿಲ್ಲ. ಆ ಬಗ್ಗೆ ಕೇಳಿದಾಗ ಮೌನವಾದರು. ಸುಮಾರು ವರ್ಷದ



ವೈಕಂ—1987ರಲ್ಲಿ



ವೈಕಂ ತಮ್ಮ ಪತ್ನಿ, ಮಗ, ಮಗಳು ಹಾಗೂ ಮೊಮ್ಮಗನೊಂದಿಗೆ



ವೈಕಂ ಅವರ ಕಲ್ಲಿಕೋಟೆಯಲ್ಲಿನ ಮನೆ



ಕೈಲಂ—ಶ್ರೀಕೃಷ್ಣ ಆಲನಹಳ್ಳಿ ಅವರೊಂದಿಗೆ

ಅವರು ಹೇಳಿದ ಮಾತುಗಳನ್ನು ನನ್ನ ನೆನಪಿನಲ್ಲಿ ಕೂಡಿಟ್ಟುಕೊಂಡಿದ್ದೇನೆ. ಬಷೀರ ದರು: "ನನ್ನ ತಾಯಿ ಭಾಷೆ ಮಲಯಾಳಂ, ನನ್ನ ಧರ್ಮ ಇಸ್ಲಾಂ. ಆದರೆ ಲ್ಲಂರ ಭಾಷೆ ಅನ್ನುವುದು ಮನುಷ್ಯ ಕಲ್ಪನೆ." ಹಾಗೆಯೇ ಧರ್ಮದ ಬಗೆಗಿನ ಅವರ ರಗಳೂ ಅರ್ಥಗರ್ಭಿತವಾಗಿದ್ದವು. 'ಮಾನವ ಪ್ರೇಮ'ಕ್ಕಿಂತ ಮಿಗಿಲಾದ ಧರ್ಮ ವುದಿದೆ ಎಂದರು. ಅದೇ ಅವರ ಎಲ್ಲಾ ಕೃತಿಗಳ ಅಂತಃಸತ್ವ ಕೂಡ. ತಾವು "ನನ್ನಜ್ಜ ಒಂದಾನೆಯಿತ್ತು" ಕೃತಿ ಪ್ರಕಟಿಸಿದಾಗ ಕೇರಳದ ತಮ್ಮ ಕುಲಬಾಂಧವರೇ ಹೇಗೆ ಶತ್ರುಗಳಾದರೆಂಬುದನ್ನು ಹೇಳಿದರು. ಅಸಾಧಾರಣ ಕಾವ್ಯದಂತಿರುವ ಈ ಕೃತಿಯಲ್ಲಿ ದರು ತಾವು ತುಂಬಾ ಗೌರವಿಸುವ ತಮ್ಮ ಅನೇಕಾನೇಕ ಪ್ರತೀಕಗಳನ್ನು ಗಳನ್ನು ವೈಚಿತ್ರ್ಯಪೂರ್ಣವಾಗಿ ಬಳಸಿಕೊಂಡಿದ್ದಾರೆ. ಹಾಗೇ ಮುಸಲ್ಮಾನ ಜದ ಅರ್ಥಹೀನ ಆಚಾರವನ್ನು, ಮೌಢ್ಯಗಳನ್ನು ಬಷೀರ ರಾಗದ ಉದ್ವೇಗ ದೆ ಪೂರ್ವಾಗ್ರಹಗಳನ್ನು ಒಳಗಾಗದೆ ಬಹು ಸ್ವತಂತ್ರ್ಯದಂತೆ ಕಂಡಿದ್ದಾರೆ; ಹಾಗಾಗಿ ರೆ. ಈ ಕಾಣ್ಕೆ ಸಾಮಾನ್ಯ ಸಾಧಕನಿಗೆ ದಕ್ಕುವಂತದ್ದಲ್ಲ. ಈ ಕೃತಿಯಲ್ಲಿ ಬರುವ ಗ್ಗ ಹೆಣ್ಣುಮಗಳು ಕುಞಪಾತುಮ್ಮಳೇ ಕೃತಿಯ ಕೇಂದ್ರ ಪ್ರಜ್ಞೆ. ಅವರ ಸ್ತ್ರೀಕೃತಿಗಳ ಬಲಕವೇ ಆ ಕುಟುಂಬ ಹೇಗೆ ಸಿರಿವಂತಿಕೆಯಿಂದ ಕಡುಬಡತನಕ್ಕೆ ಇಳಿಯುತ್ತದೆಯೆಂಬು ನ್ನು ಲೇಖಕ ಮನಮುಟ್ಟುವ ಹಾಗೆ ಚಿತ್ರಿಸಿದ್ದಾರೆ. ಸಿರಿವಂತ ಕುಟುಂಬದ ಮಗಳು ಕುಞಪಾತುಮ್ಮ ಎಲ್ಲವನ್ನೂ ಕಳೆದುಕೊಂಡಿರುತ್ತಾಳೆ. ಆದರೆ ತನ್ನ ಹುಟ್ಟಿನೊಂದಿಗೇ ಕೊಂಡಿದ್ದ ಅಂಧ ಶ್ರದ್ಧೆಗಳ ಮೌಢ್ಯಗಳ ಹೊರೆಯನ್ನು ಮಾತ್ರ ಇಳಿಸಲಾರಳು. ರ ಪಾಲಿಗೆ ಸೃಷ್ಟಿಯಲ್ಲಿ ಇದ್ದುದ್ದು ಎರಡೇ ವರ್ಗ, ಒಂದು ಇಸ್ಲಾಮು, ಇನ್ನೊಂದು ರ್. ಕಾಫರು ಸತ್ತರೆ ಅವರಿಗೆ ನರಕವೇ ಗತಿ. ಎಲ್ಲಾ ಕೇಡಿನ ಮೊತ್ತ ಕಾಫರ್. ಥ ನಂಬಿಕೆ ಕುಞಪಾತುಮ್ಮಳದು. ಅವರು ತನ್ನಲ್ಲಿ ಒಡವೆವಸ್ತುಗಳನ್ನೂ ಕಳೆದು ಂಡುಬಿಡುತ್ತಾಳೆ. ಅವರ ಸಂಪತ್ತಿನಲ್ಲಿ ಮೊಳೆಚಿಕೊಂಡ ಶಕ್ತಿ ಅವರ ಅಂಧಶ್ರದ್ಧೆಗಳನ್ನು ಟ್ಟುವುದಿಲ್ಲ. ಅವಳು ಸದಾ ಮೌಢ್ಯಗಳ ತಿರುಗಣಿಮಡುವಿಗೆ ಸಿಕ್ಕಿ ಸುತ್ತುತ್ತಾಳೆ. ಥ ಸ್ಥಿತಿಯಲ್ಲಿ ಅವಳನ್ನಿಟ್ಟಿರುವ ಸಮಾಜದ ಬಗೆಗೆ ರೋಷವುಂಟಾಗುತ್ತದೆ. ಆದರೆ ಖಕ ಬಷೀರ ರೋಷಗೊಳ್ಳುವುದಿಲ್ಲ. ನಗುನಗುತ್ತಲೇ ಆ ಸಮಾಜದ ವಿಕೃತಿಗಳಿಗೆ ದಿ ಹಿಡಿಯುತ್ತಾರೆ. ತಾವೇನು ಮಾಡುತ್ತೇನೆ ಅನ್ನುವುದೆ ಅರಿವಿರದ ಮುಗ್ಧರ ಸ್ವಭಾವವನ್ನು ತೆರೆದುತೋರಿ ಅವರ ಬಗೆಗೆ ನಮ್ಮಲ್ಲಿ ಅನುಕಂಪವುಂಟಾಗುವಂತೆ ಮಾಡುತ್ತಾರೆ. ಇದು ಅಂತರ್ಮುಖಿಯಾದ ಲೇಖಕನಿಂದ ಮಾತ್ರ ಸಾಧ್ಯ. ಬೋಳು ಯ ಮೇಲೆ ಕೈಯಿಟ್ಟುಕೊಂಡು ಸೃಷ್ಟಿರಹಸ್ಯಗಳನ್ನೆಲ್ಲಾ ತನ್ನೊಳಗೇ ಬಿಡಿಸಿ ಳ್ಳುತ್ತಾ, ತನಗೆ ತಾನೇ ನಗುತ್ತ, ಗಂಭೀರನಾಗುತ್ತ, ಆಗಾಗ ಉನ್ಮಾದರೋಗಕ್ಕೆ ಗಾಗುತ್ತ, ಪೂರ್ಣವಾದ ಬಾಳನ್ನು ಬಾಳುತ್ತಿರುವ ಬಷೀರ ನಿಜವಾದ ಅರ್ಥದಲ್ಲಿ ಷ್ಟಿ ಅನುಭಾವಿ.

ಸುಮಾರು ನಾಲ್ಕುಗಂಟೆಗಳಾಗಿದ್ದವು. ನಾನು ಬಷೀರರ ಮುಂದೆ ಕಿವಿ ತೆರೆದು ತು ಇಷ್ಟು ತನ್ಮಯನಾಗಿ ನಾನೆಂದೂ ಯಾರ ಮುಂದೆಯೂ ಹೀಗೆ ಕೂತವನೇ ಅಲ್ಲ. ವಯೋವೃದ್ಧ ಹಾಗೂ ಜ್ಞಾನವೃದ್ಧ ವ್ಯಕ್ತಿ ನನಗೆಂದು 'ಮುಲಿಯಾಳ ಮೋಡಿ'

ಹಾಕಿಬಿಟ್ಟಂತೆ ನೋಡ ನೋಡುತ್ತ ಈ ಬಶೀರ ತಾನು ಹೊದ್ದುಕೊಂಡಿದ್ದ ಇಸ್ಲಾಂ ಚಾದರವನ್ನೂ ಕಳಚಿಟ್ಟಂತೆ. ಯಾವ ಧರ್ಮದ ಚಾದರದಲ್ಲೂ ಮಲಿನತೆ ಇಲ್ಲದೆ ಇಲ್ಲ ಎಂದು ತೋರಿಸುತ್ತಿರುವಂತೆ. ಕಡೆಗೆ 'ಮಾನವ ಪ್ರೇಮ' ಒಂದೇ ನಿಜವಾದ ಧರ್ಮ ನೋಡಿ ಎಂದು ಹೇಳುತ್ತಾ ನಮ್ಮ ಪ್ರಾಚೀನ ಋಷಿಯೇ ಆಗಿಬಿಟ್ಟಂತೆ. ಬಷೀರರ ಜ್ಞಾನ ಮತ್ತು ಅನುಭವಗಳು ಅವರ ಮನೆಯಿಂದ ಕೂಗಳತೆ ದೂರದಲ್ಲಿರುವ ಅರಬ್ಬೀ ಸಮುದ್ರವಾಗಿದ್ದವು. ನನ್ನ ಸಣ್ಣ ಪಾತ್ರೆಯಲ್ಲಿ ನಾನು ಇನ್ನೆಷ್ಟನ್ನು ತಾನೆ ತುಂಬಿಕೊಳ್ಳಲಿ?

ನನ್ನ ಕೇರಳದ ಮೊದಲ ಪ್ರವಾಸ ಸಾಹಿತ್ಯ ಪ್ರವಾಸವಾಗಿತ್ತು. ನನ್ನ ಬಹುದಿನದ ಬಯಕೆ ಈಡೇರಿದ ತೃಪ್ತಿಯಿಂದ ಉಲ್ಲಸಿತನಾದೆ. ನಂತರ ಕೇರಳದ ಉದ್ದಗಲಕ್ಕೂ ಮೂರು ನಾಕು ಸಲ ಸುತ್ತಿ ಬಂದೆ. ಆದರೆ ಯಾವುದೂ ನನ್ನ ಪ್ರಥಮ ಪ್ರವಾಸದಷ್ಟು ಅದ್ಭುತ ಅಂತ ಅನ್ನಿಸಲೇ ಇಲ್ಲ. ಈಗ ನನಗೆ ಮಲಯಾಳಂ ಸಾಹಿತ್ಯದ ಪರಿಚಯ ಸಾಕಷ್ಟಿದೆ. ಆ ಭಾಷೆಯ ಆಧುನಿಕ ಬರಹಗಾರರ ಮಹತ್ವದ ಕೃತಿಗಳನ್ನು ಕನ್ನಡ ಇಲ್ಲವೇ ಇಂಗ್ಲಿಷಿನಲ್ಲಿ ಓದಿಕೊಂಡಿದ್ದೇನೆ. ತಕಳಿ, ಕೇಶವದೇವ್, ಉರುಬ್, ಪೊಟ್ಟೆಕ್ಕಾಟ್, ಎಂ.ಟಿ.ವಿ. ಅವರ ಮುಖ್ಯ ಕೃತಿಗಳು ಕನ್ನಡಕ್ಕೆ ಬಂದಿವೆ. ವಳ್ಳತ್ತೋಳ್, ಆಸಾನ್, ಕುರುಪ್ ಹಾಗೂ ಅಯ್ಯಪ್ಪಪಣ್ಣಿಕ್ಕರ, ಕಡಮನಟ್ಟ ರಾಮಕೃಷ್ಣ ಮುಂತಾದ ಕವಿಗಳ ಕವಿತೆಗಳೂ ಕನ್ನಡದಲ್ಲಿವೆ. ಇವನೆಲ್ಲಾ ತುಂಬಾ ಗಂಭೀರವಾಗಿ ಅಭ್ಯಾಸ ಮಾಡಿದ್ದೇನೆ. ಆದರೆ ಯಾರೂ ಬಷೀರ ನನ್ನೊಳಗೆ ಇಳಿದಂತೆ ಇಳಿಯಲಿಲ್ಲ.

ಕಳೆದ ಓಣಂ ಹಬ್ಬಕ್ಕೆ ಸರಿಯಾಗಿ ನಾನು ನನ್ನ ಲೇಖಕ ಮಿತ್ರರೊಡನೆ ಇನ್ನೊಮ್ಮೆ ಕೇರಳ ಪ್ರವಾಸಕ್ಕೆ ಹೊರಟೆ. ಜೊತೆಗೆ ದೇವನೂರ ಮಹಾದೇವನೂ ಇದ್ದ. ಕೇರಳ ದೊಳಕ್ಕೆ ಕಾಲಿಡುತ್ತಿದ್ದಂತೆ ಹಬ್ಬದ ಸಂಭ್ರಮ. ಇಡೀ ಕೇರಳ ಮದುಮಗಳಂತೆ ಸಿಂಗರಿಸಿ ಕೊಂಡು ಬೀಗುತ್ತಿತ್ತು. ಮಲಯಾಳಿಗಳಿಗೆ ಓಣಂ ದೊಡ್ಡ ಹಬ್ಬ. ಅವರ ಸಡಗರವನ್ನು ಹೇಳತೀರದು. ಗೆಳೆಯ ಸುಂದರೇಶನ ಹಳೆಯ ವಿದೇಶಿಕಾರು ಗಂಟೆಗೆ ಮುವತ್ತು ಕಿಲೋ ಮೀಟರ್ ವೇಗದಲ್ಲಿ ಸಾಗತೊಡಗಿತ್ತು. ಯಾಕೊ ಕೊಂಚ ವೇಗಗೊಳಿಸಿದರೆ ಸಾಕು ಕಾರಿನ ಇಂಜನ್ನಿಗೆ ಇಲ್ಲ ಚಾಲಕನಿಗೆ ಏನಾದರೂ ತೊಂದರೆ. ಪ್ರವಾಸದುದ್ದಕ್ಕೂ ಹಗಲೆಲ್ಲಾ ಕಾರಿನ ಇಂಜನ್ನಿಗೆ ರಾತ್ರಿಯಾದರೆ ಚಾಲಕನಾದ ಸುಂದರೇಶನಿಗೆ ಎಣ್ಣೆ ಹಾಕಿಸಿ ಹಾಕಿಸಿ ಸಾಕಾಯಿತು. ಅದರ ನಿಧಾನ ಒಂದು ರೀತಿ ಒಳ್ಳೆಯದಾಯಿತು. ಕೇರಳದ ಇಂಚು ಇಂಚನ್ನೂ ಕಣ್ಣಿಗೆ ತುಂಬಿಕೊಳ್ಳಲು ಸಾಧ್ಯವಾಯಿತು. ಪ್ರತಿ ಊರಲ್ಲೂ ನಿಂತು ಬಾರದ ಮಲಯಾಳವನ್ನೇ ಬಳಸಿ, ನಗಿಸಿ, ನಾವು ನಕ್ಕು ಸಾಗಿದೆವು. ಒಂದು ದಿನದಲ್ಲಿ ಹೋಗಿ ಬಂದು ಬಿಡಬಹುದಾಗಿದ್ದ ದೂರವನ್ನು ಒಂದು ವಾರ ಇಡಿಯಾಗಿ ಸವೆಸಿದೆವು. ಈ ಸಲದ ಪ್ರವಾಸದಲ್ಲಿ ನನ್ನ ಹೆಸರು ಕೇರಳದಲ್ಲಿ ಸಾಕಷ್ಟು ಜನಪ್ರಿಯವಾಗಿ ಬಿಟ್ಟಿರುವುದನ್ನು ಕಂಡೆ.

ನನ್ನ 'ಕಾಡಿ'ಗಿಂತ ಗೆಂಡೆತಿಮ್ಮ ಇಲ್ಲಿ 'ಪಾವತ್ತಾನ್' ಹೆಸರಿನಲ್ಲಿ ಮಲಯಾಳಿ ಗಳಿಗೆ ತುಂಬಾ ಪ್ರಿಯವಾಗಿತ್ತು. 'ಗೆಂಡೆತಿಮ್ಮ' 'ಮಾರಕೆ'ಯರು ಅಲ್ಲಿಯವರಿಗೆ ಚಿರಪರಿಚಿತ ರಾಗಿ ಬಿಟ್ಟಿದ್ದರು.

ಈ ಸಲವೂ ನಮಗೆ ಬಷೀರರ ದರ್ಶನವೇ ಮಹತ್ವದ್ದಾಗಿತ್ತು. ಬಷೀರರನ್ನು ಕಾಣಲು ಎಲ್ಲರೂ ಅವರ ಮನೆ ಮುಟ್ಟಿದೆವು. ಪಕ್ಕೆ ಹಿಡಿದು ಕೆಮ್ಮುತ್ತಲೇ ಹೊರಗೆ ಬಂದರು. ತುಂಬಾ ಹಣ್ಣಾಗಿ ಬಿಟ್ಟಿದ್ದರು. ತಮ್ಮ ಅನಾರೋಗ್ಯವನ್ನೂ ಲೆಕ್ಕಿಸದೆ ನಮ್ಮ ಜೊತೆ ಕೂತರು. ಅವರನ್ನು ಕಂಡಿದ್ದೆ ಮಹಾದೇವ ಅವಕ್ಕಾದ. ಅವನಿಗೂ ನಾನು ಮೊದಲ ಸಲ ಅವರನ್ನು ಕಂಡಾಗ ಆಗಿದ್ದ ಅನುಭವವಾಗಿರಬೇಕು. ಅವರನ್ನೇ ನೋಡುತ್ತಾ ಮಾತಾನಾಡದೆ ಕೂತ. ನಾನು ಆ ಮನೆಯಲ್ಲಿ ಒಂದು ಬದಲಾವಣೆ ಮಾತ್ರ ಗಮನಿಸಿದೆ. ಕಳೆದ ಬಾರಿ ಬಂದಿದ್ದಾಗ ಕಂಡಿದ್ದ ಶಾಲೆ ಕಲಿಯುತ್ತಿದ್ದ ಮಗಳು ಮದುವೆಯಾಗಿ ಅವಳಿಗೊಂದು ಗಂಡು ಮಗುವಾಗಿತ್ತು. ಮೊಮ್ಮಗನನ್ನು ಅಪ್ಪಿಕೊಂಡಿದ್ದ ಬಷೀರರ ಪಕ್ಕದಲ್ಲಿ ಬೆಳೆದು ದೊಡ್ಡವನಾಗಿದ್ದ ಮಗನಿಂತಿದ್ದ.

ಕೆಮ್ಮುತ್ತಲೇ ಇದ್ದ ಬಷೀರರ ಜೊತೆ ಮಾತಾಡುವುದು ಕಷ್ಟವಾಗಿತ್ತು. ಆದರೂ ನಮ್ಮ ತವಕ ತಾಳಿ ಕೊಳ್ಳಬೇಕಲ್ಲ. ಕೇಳಿಯೇ ಕೇಳಿದೆವು. ನಮ್ಮ ಅಸಂಬದ್ಧ ಕೇಳಿಕೆಗೂ ಬಷೀರ ಸಾವಧಾನದಿಂದಲೇ ಉತ್ತರಿಸಿದರು. ಇತ್ತೀಚೆಗೆ ಕೇರಳಕ್ಕೆ ಕೊಲ್ಲಿ ದೇಶಗಳಿಂದ ಬರುವ ಹಣ. ನಾವು ಕೇರಳದ ದಾರಿ ಉದ್ದಕ್ಕೂ ಕಂಡ ಆಧುನಿಕ ಸೌಧಗಳು. ಇಲ್ಲಿನ ಜನರ ಬದುಕಿನಲ್ಲಿ ಇದರಿಂದಾದ ಪರಿಣಾಮಗಳು. ಹಿಂದೂ ಮುಸ್ಲಿಂ ಘರ್ಷಣೆಗಳು. ಬಷೀರ ಹೇಳಿದರು: ಭಾರತದಿಂದ ಕೊಲ್ಲಿಗೆ ಹೋದ ಬಹಳಷ್ಟು ಮುಸ್ಲಿಂ ಜನ ಬರೀ ಕೂಲಿಕಾರರು. ಸ್ವಲ್ಪ ತಂದದ್ದನ್ನೇ ತುಂಬಾ ಅನ್ನುವಂತೆ ತೋರಿಸಿಕೊಳ್ಳುತ್ತಾರೆ. ಆದರೆ ನಿಜವಾಗಿಯೂ ಕೊಲ್ಲಿಯಿಂದ ತುಂಬಾ ತರುತ್ತಿರುವ ಹಿಂದೂ ಡಾಕ್ಟರು, ಇಂಜನಿಯರು ಎಲ್ಲಿ ತೋರಿಸಿಕೊಳ್ಳುತ್ತಿದ್ದಾರೆ?

ಹಿಂದೂಸ್ಥಾನದ ಮುಸ್ಲಿಂರು ಒಳಗಾಗಿರುವ ಆತಂಕ ಅನುಮಾನಗಳಿಗೆ ಈ ದಾರ್ಶನಿಕ 'ಬಷೀರ' ನಿಟ್ಟುಸಿರಾಗಿದ್ದರು. ಅವರು ಅಂದರು: "ಎಲ್ಲಿಯತನಕ ಹಿಂದೂಸ್ಥಾನ ಮತ್ತು ಪಾಕಿಸ್ಥಾನ ಒಂದಾಗುವುದಿಲ್ಲವೊ ಅಲ್ಲಿಯತನಕ ಮುಸ್ಲಿಂರ ತಲೆ ಮೇಲೆ ಆತಂಕದ ಕತ್ತಿ ತೂಗುತ್ತಲೆ ಇರುತ್ತದೆ." ಮುಂದೆ ನಮಗೆ ಬೇರೆ ಯಾವ ಮಾತೂ ಬರಲಿಲ್ಲ. ನಮಗೆ ಮುಂದೆ ಉಳಿದಿದ್ದ ಕ್ರಿಯೆ ಒಂದೇ ಆಗಿತ್ತು. ಅದು ಅವರ ಕಾಲು ಮುಟ್ಟಿ ನಮಸ್ಕರಿಸಿ ಬಂದು ಬಿಡುವುದು.

ಪ್ರಶಂಸೆ ಸರಿ—ನೀನದನ್ನು ಉಚ್ಛ್ವಸಿಸದಿದ್ದರೆ.

ಅಡ್ಲಾಯ್ ಸ್ಟೀವನ್ಸನ್

ವೈಕಮ್ ಮುಹಮದ್ ಬಷೀರ್

ಜಿ. ಕುಮಾರ ಪಿಳ್ಳೈ

ನಾನು ಮತ್ತೆ ಮತ್ತೆ ಓದಲು ಇಷ್ಟಪಡುವ ಲೇಖಕರಲ್ಲೊಬ್ಬರು ವೈಕಮ್ ಮುಹಮದ್ ಬಷೀರ್. ಅವರನ್ನು ಪ್ರತಿಸಲವೂ ನಾನು ಅತ್ಯಾನಂದದಿಂದ ಓದುತ್ತೇನೆ; ಏಕೆಂದರೆ, ಅವರ ಕಥೆಗಳು ಎಂದಿಗೂ ತಮ್ಮ ಪರಿಣಾಮ ನೂತನತೆಯನ್ನು ಕಳೆದುಕೊಳ್ಳುವುದಿಲ್ಲ. ಇದು, ಕಥನವಾಚಕರಾದ ಸಾವಿರಗಟ್ಟಲೆ ಮಲಯಾಳಂ ಭಾಷಿಕರೊಡನೆ ನಾನು ಹಂಚಿಕೊಳ್ಳುವ ಅನುಭವ ಎಂಬುದು ನನಗೆ ಖಚಿತವಾಗಿದೆ. ಶಬ್ದದ ಸಂಪೂರ್ಣಾರ್ಥದಲ್ಲಿ ಸಾಹಿತ್ಯ ಕಲಾವಿದರಾದ ಬಷೀರ್ ತಮ್ಮ ಜೀವನ ದರ್ಶನದ ವ್ಯಾಪ್ತಿ ಮತ್ತು ಗಾಢತೆಯಿಂದ ಹಾಗೂ ಈ ದರ್ಶನವನ್ನು ಸಂವಹನಗೊಳಿಸುವ ಅನನುಕರಣೀಯ ಶೈಲಿಯ ಶಕ್ತಿ, ಸೌಂದರ್ಯಗಳಿಂದ ನಮ್ಮನ್ನು ತಟ್ಟುತ್ತಾರೆ. ಮಲಯಾಳದಲ್ಲಿರುವ ಅತ್ಯುತ್ತಮ ಕಥೆಗಳ ಡಜನ್ ಸಂಕಲನಗಳಲ್ಲಿ ಯಾವುದೂ ಅವರನ್ನು ವರ್ಜಿಸಲಾರದು, ಮತ್ತು ಈ ಭಾಷೆಯ ಡಜನ್ ಅತ್ಯುತ್ತಮ ಕಾದಂಬರಿಗಳ ಯಾವುದೇ ಸೂಚಿ ಅವರ ಕೃತಿಗಳಲ್ಲೊಂದರ ಶೀರ್ಷಿಕೆಯನ್ನೊಳಗೊಳ್ಳುವುದು ಖಂಡಿತ. ಕಿರಿಯ ಕಥನವ ವಲಯದಲ್ಲಿ ಅವರ ಕೃತಿ ಕೇರಳದಲ್ಲಿ ಮಾತ್ರವಲ್ಲ, ಜಗತ್ತಿನ ಯಾವುದೇ ಭಾಗದಲ್ಲಿರುವ ಅವರ ಸಮಕಾಲೀನರ ಅತ್ಯುತ್ತಮ ಕೃತಿಯನ್ನು ಸರಿಗಟ್ಟುತ್ತದೆ.

ತನ್ನ ಜೀವಿತ ಕಾಲದಲ್ಲೇ ಐತಿಹ್ಯವಾಗಿಬಿಡುವ ಮನುಷ್ಯನ ಮಾದರಿ, ಬಷೀರ್. ವಾಚಕ ಜನತೆಯ ಎಲ್ಲ ವರ್ಗಗಳಲ್ಲಿ ಅವರು ಜನಪ್ರಿಯರಾಗಿದ್ದರೂ, ಅವರನ್ನು ಕಂಡಿರುವ ಅಥವಾ ಆಲಿಸಿರುವ ಮಂದಿ ಕಡಮೆ. ಪ್ರತಿಯೊಬ್ಬ ಲೇಖಕನೂ ಸಾರ್ವಜನಿಕ ಉಪನ್ಯಾಸಕನಾಗಿರಬೇಕೆಂದು ನಿರೀಕ್ಷಿಸುವ ಮತ್ತು ಸಮ್ಮೇಳನಗಳು, ವಿಚಾರಗೋಷ್ಠಿಗಳು ಮತ್ತು ಸಾಂಸ್ಕೃತಿಕ ಕೂಟಗಳು ಅಸಂಖ್ಯವಾಗಿರುವ ನಾಡೊಂದರಲ್ಲಂತೂ ಇದು ವಿಚಿತ್ರವೇ. ವಿಸ್ತಾರವಾದ

ಮಿತ್ರವಲಯವನ್ನುಳ್ಳ ಸ್ನೇಹಶೀಲ ವ್ಯಕ್ತಿ ಬಷೀರ್ ಉಜ್ವಲ ಸಂಭಾಷಣಕಾರರು. ಆದರೆ ಸಾರ್ವಜನಿಕವಾಗಿ ಕಾಣಿಸಿಕೊಳ್ಳುವುದನ್ನು ಅವರು ಇಷ್ಟಪಡುವುದಿಲ್ಲ; ಎಂದೂ ವೇದಿಕೆಯ ಮೇಲೆ ಕಾಣಿಸಿಕೊಳ್ಳುವುದಿಲ್ಲ. ಇದು ಅವರಿಗೊಂದು ನಿಗೂಢತೆಯ ಪ್ರಭಾವಳಿಯನ್ನಿತ್ತಿದೆ; ಅವರ ಕಥೆಗಳಲ್ಲಿ ವ್ಯಕ್ತವಾಗುವ ಅವರ ಬದುಕಿನ ಇಣುಕು ನೋಟಗಳು, ಅವರೊಡನೆ ನಡೆದ ಸಂದರ್ಶನಗಳ ವರದಿಗಳು, ಅವರು ಸಂಪಾದಕರಿಗೆ ಕಳುಹಿಸುವ ಮತ್ತು ಅವರು ಇವರ ಕತೆಗಳಿಗೆ ಬದಲು ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸುವ ತಮಾಷೆ ಪತ್ರಗಳು—ಇವೆಲ್ಲ ಆ ಪ್ರಭಾವಳಿಯನ್ನು ಬಲಗೊಳಿಸಿವೆ. ಹದಿಹರೆಯದಲ್ಲಿ ಶಾಲೆ ಮತ್ತು ಮನೆ ಬಿಟ್ಟದ್ದು, ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದು, ತತ್ಪರಿಣಾಮವಾಗಿ ಪೋಲಿಸರ ಉಪದ್ರವ ಮತ್ತು ಜೈಲುವಾಸದ ಕೆಲವು ಅವಧಿಗಳು, ಭಾರತದ ಉದ್ದಗಲಗಳಲ್ಲಿ ಮತ್ತು ಇನ್ನೂ ಆಚೆ ಸಾಹಸಪೂರ್ಣವಾಗಿ ಅಲೆದಾಡಿದ ಎಂಟು ವರ್ಷಗಳು, ಹೋರಾಟನಿರತ ಲೇಖಕನಾಗಿ ಉಪವಾಸದ ವರ್ಷಗಳು, ಆಗಾಗ ಮರುಕೊಳಿಸುವ ಮಾನಸಿಕ ಅಸ್ವಸ್ಥತೆ, ವಿಳಂಬ ವಿವಾಹ ಮತ್ತು ನಿಷ್ಠಾವಂತ ಪತಿಯಾಗಿ ಮತ್ತು ಅತಿ ವಾತ್ಸಲ್ಯದ ತಂದೆಯಾಗಿ ಬೇಜವಾಬ್ದಾರಿ ಬ್ರಹ್ಮಚಾರಿಯೊಬ್ಬನ ವಿಕಾಸ—ಇವು ಘಟನಾಪೂರ್ಣ ಜೀವನವೊಂದರ ಅಧ್ಯಾಯಗಳಾಗಿದ್ದು, ಅವರ ವ್ಯಕ್ತಿತ್ವದ ಪ್ರತಿಮೆಗೆ ಬಣ್ಣ ಕೊಡುತ್ತವೆ. ಇದೆಲ್ಲದರ ಜೊತೆಗೆ, ಈ ಮನುಷ್ಯನ ಸ್ವಭಾವ, ನಗೆಗಾರ ಪ್ರವಾದಿ ಲೇಖಕನ ಭಾವಚಿತ್ರವಾಗಿ ವಾಚಕನ ಮೇಲೆ ತನ್ನ ಮುದ್ರೆಯನ್ನೊತ್ತುತ್ತದೆ.

ಬಷೀರರ ಸಾಹಿತ್ಯಕ ಉತ್ಪಾದನೆ ತೌಲನಿಕವಾಗಿ ಅಲ್ಪ. 'ಕತೆಯೊಂದರ ಬೀಜ' ಎಂಬ ಏಕಾಂಕ ನಾಟಕ, 'ಸ್ಮೃತಿ ಕೊರಡಿಗಳು' ಎಂಬ ಆತ್ಮ ವೃತ್ತಾತ್ಮಕ ಕೃತಿ, 'ಸತ್ಯ ಮತ್ತು ಕಲ್ಪನೆ' ಎಂಬ ಸಂಕೀರ್ಣ ಬರಹಗಳ ಸಂಪುಟ—ಇವುಗಳನ್ನು ಬಿಟ್ಟರೆ, ಬೇರಾವುದೇ ಉದ್ಯೋಗವಿಲ್ಲದ ನಲವತ್ತು ವರ್ಷಗಳಿಗೂ ಹೆಚ್ಚಿನ ಬರವಣಿಗೆಯ ಬದುಕಿನಲ್ಲಿ ಅವರು ಹೊರತಂದಿರುವುದು ಸುಮಾರು ಒಂದು ನೂರು ಸಣ್ಣ ಕತೆಗಳು ಮತ್ತು ಸುಮಾರು ಒಂದು ಡಜನ್ ಕಿರುಕಾದಂಬರಿಗಳು ಅಥವಾ ನೀಳ್ಗತೆಗಳು ಮಾತ್ರ. ಆದರೆ ಪ್ರಮಾಣದ ಕೊರತೆಯನ್ನು ಅವರು ಗುಣದಲ್ಲಿ ತುಂಬಿಕೊಳ್ಳುತ್ತಾರೆ. ಪ್ರವೃತ್ತಿಯಲ್ಲಿ ಪರಿಪೂರ್ಣತಾವಾದಿಯಾದ ಬಷೀರ್, ಕಳಪೆಯಾದುದೇನನ್ನೂ ನಮಗೆ ಕೊಟ್ಟಿಲ್ಲ. ಎತ್ತಿಹೇಳಬಹುದಾದ ಪರಿಮಿತಿ ಅಥವಾ ದೋಷವೆಂದರೆ, ಅವರು ದೀರ್ಘ ಕಾದಂಬರಿಯ ಪ್ರಯತ್ನ ಮಾಡಿಲ್ಲ,ಮತ್ತು ಒಮ್ಮೊಮ್ಮೆ, ತಮ್ಮ 'ಶಬ್ದಗಳು' ಕಿರುಕಾದಂಬರಿಯ ಕೆಲವು ಭಾಗಗಳಲ್ಲಿ ಮಾಡಿರುವಂತೆ ತುಚ್ಛವಾದುದನ್ನು ತದೇಕ ದೃಷ್ಟಿಯಿಂದ ವರ್ಣಿಸುವುದರಲ್ಲಿ ಸುಖಿಸುವಂತೆ ತೋರುತ್ತಾರೆ ಎಂಬುದು. ಇವುಗಳನ್ನು ಬಿಟ್ಟರೆ, ಕತೆ ಹೇಳುವ ಕಲೆಯಲ್ಲಿ ಅಧಿಕೃತ ಆಚಾರ್ಯನೊಬ್ಬನ ಅಳಿಸಲಾಗದ ಪ್ರಭಾವ ಮುದ್ರೆಯನ್ನು ಧರಿಸಿರುವ ಕೃತಿ ಸಮುದಾಯವನ್ನು ಅವರು ನಮಗಿತ್ತಿದ್ದಾರೆ.

ಮಲಯಾಳಂನಲ್ಲಿ ಗದ್ಯಕಥನ ಸುಮಾರು ಒಂದು ಶತಮಾನದ ಹಿಂದೆ ಹುಟ್ಟಿತು. ವೆಂಗಯಿಲ್ ಕುನ್ಹಿ ರಾಮನ್ ನಾಯನರ್ (೧೮೬೧-೧೯೧೪) ಮತ್ತು ಕೆ.ಸುಕುಮಾರನ್ (೧೮೭೨-೧೯೫೬) ರಂತಹ ಉತ್ತಮ ಕತೆಗಾರರು ಮೊದಲ ಪೀಳಿಗೆಯಲ್ಲಿ, ಇ.ವಿ.ಕೃಷ್ಣ

ಪಿಳ್ಳೆಯಂತಹವರು ಎರಡನೆಯ ಪೀಳಿಗೆಯಲ್ಲಿ ಕಂಡು ಬರುತ್ತಾರೆ; ಅವರು ಪ್ರಹಸ ವೊಂದನ್ನು ನೇಯಬಲ್ಲರು ಅಥವಾ ಸುರಚಿತ ಕತೆಯೊಂದನ್ನು ರೂಪಿಸಬಲ್ಲರು. ಆದರೂ ಮಲಯಾಳಂ ಸಣ್ಣಕತೆ ಈ ಶತಮಾನದ ಮೂರನೆಯ ದಶಕದಲ್ಲಷ್ಟೆ ತನ್ನ ಹಕ್ಕು ಗಳನ್ನು ಪಡೆದುಕೊಂಡಿತು. ಕಾದಂಬರಿಯ ಬಗ್ಗೆ ಹೇಳುವುದಾದರೆ, ಆರಂಭದಲ್ಲಿ ಇಬ್ಬರು ದೈತ್ಯರನ್ನು ಪಡೆಯುವ ಭಾಗ್ಯ ನಮ್ಮದಾಗಿತ್ತು: ಓ. ಚಂದು ಮೆನನ್ (೧೮೪೭—೧೮೯೯)—ಅವರ 'ಇಂದುಲೇಖಾ' ೧೮೮೯ರಲ್ಲಿ ಪ್ರಕಟವಾಯಿತು; ಸಿ.ವಿ ರಾಮನ್ ಪಿಳ್ಳೆ (೧೮೫೮—೧೯೨೨)—ಅವರ 'ಮಾರ್ತಾಂಡವರ್ಮ' ೧೮೯೧ರಲ್ಲಿ ಹೊರಬಂತು. ಆದರೆ ಅವರ ಕಾಲದ ನಂತರ, ಕಾದಂಬರಿ ಸೊರಗಿತು; ಈ ಶತಮಾನದ ನಾಲ್ಕನೆಯ ದಶಕದಲ್ಲಿ ಅದಕ್ಕೆ ಹೊಸ ಜೀವ ತುಂಬಲಾಯಿತು. ಮೂರನೆಯ ದಶಕದಲ್ಲಿ ಸಣ್ಣಕತೆಯ ಸುವರ್ಣಯುಗವನ್ನು ಮೊದಲು ಮಾಡಿದ ಲೇಖಕರ ಪೀಳಿಗೆಯೆ ಮುಂದಿನ ದಶಕದಲ್ಲಿ ಕಾದಂಬರಿಯ ಚರಿತ್ರೆಯಲ್ಲಿ ದ್ವಿತೀಯ ಸೃಜನಾತ್ಮಕ ಅವಧಿಯನ್ನು ತೆ ಯಲು ಮುಂದುವರಿಯಿತು. ಕಥನವನ್ನು ನಮ್ಮ ಸಾಹಿತ್ಯದ ಪ್ರಮುಖ ವೈಭವಗ ಳ್ಳೊಂದನ್ನಾಗಿ ಮಾಡಿದ ಮಹಾ ಪ್ರತಿಭಾಶಾಲಿ ಲೇಖಕರ ಈ ತಲೆಮಾರಿಗೆ ಸೇರಿದವರು, ವೈಕಂ ಮುಹಮ್ಮದ್ ಬಷೀರ್ (ಜ. ೧೯೧೦). ಈ ಗುಂಪಿನ ಇತರ ಮುಖ್ಯ ಲೇಖಕರು, ಪಿ. ಕೇಶವದೇವ್, ತಕಳಿ ಶಿವಶಂಕರ ಪಿಳ್ಳೆ, ಎಸ್. ಕೆ. ಪೊಟ್ಟೆಕ್ಕಾಟ್, ಲಲಿತಾಂಬಿಕಾ ಅಂತರ್ಜನಂ, ಕರೂರು ನೀಲಕಂಠ ಪಿಳ್ಳೆ, ಪೊಂಕುನ್ನಮ್ ವಾರ್ಕೆ ಮತ್ತು ಪಿ. ಸಿ. ಕುಟ್ಟಿಕೃಷ್ಣನ್. ಸಮಕಾಲೀನ ಸಾಮಾಜಿಕ ವಾಸ್ತವಗಳನ್ನು ಕುರಿತ ಅಪಾರ ಕಳಕಳಿಯಲ್ಲಿ ಅವರು ಪಾಲ್ಗೊಳ್ಳುತ್ತಾರೆ ಮತ್ತು ಅವರ ಶೈಲಿ ಒಟ್ಟಿನಲ್ಲಿ ಸಂಭಾಷಣಾತ್ಮಕ ನುಡಿಗಟ್ಟನ್ನು ಆಧರಿಸಿದ್ದು. ಇದರಾಚೆಗೆ ಅವರನ್ನು ಕುರಿತ ಸಾಧಾ ರಣೀಕರಣ ಸಾಧ್ಯವಿಲ್ಲ. ವಾಸ್ತವವಾಗಿ, ಯಾವುದೇ ಸಾಧಾರಣೀಕರಣ ತುಂಬ ದಾರಿ ತಪ್ಪಿಸುವಂಥದು; ಏಕೆಂದರೆ, ಅವರಲ್ಲಿ ಒಬ್ಬೊಬ್ಬರಿಗೂ ಬದುಕನ್ನು ನೋಡುವ ವ್ಯಷ್ಟಿ ವಿಧಾನವಿದೆ ಮತ್ತು ಕಥನಕೌಶಲವನ್ನು ಕುರಿತ ವಿಶಿಷ್ಟ ಮಾರ್ಗವಿದೆ.

ಸಾಮಾಜಿಕ ದೃಷ್ಟಿಯಿಂದ ಬಷೀರ್ ನಮ್ಮ ಪಾಲಿಗೆ ವಿಶೇಷ ಅರ್ಥವತ್ತಾಗಿದ್ದಾರೆ. ಅವರು ಕೇರಳದ ದೊಡ್ಡ ಮುಸ್ಲಿಂ ಸಮಾಜದಿಂದ ಉದ್ಭವಿಸಿದ ಮೊದಲ ಹಿರಿಯ ಲೇಖಕ. ಹೀಗಾಗಿ, ಮಲಯಾಳಂ ಬರವಣಿಗೆ ಮಲಯಾಳವನ್ನಾಡುವ ಸಮಸ್ತ ಜನತೆಯ ಸಾಹಿತ್ಯವಾಗಿ ವಿಕಸಿಸುವಲ್ಲಿ ಅವರು ಮಹತ್ವದ ಕೊಡುಗೆಯನ್ನಿತ್ತರು. ಅವರು ನಮ್ಮ ಸಾಹಿತ್ಯಕ್ಕೆ ಮುಸ್ಲಿಂ ಹಿನ್ನೆಲೆಯನ್ನು, ಮುಸ್ಲಿಂ ಧಾರ್ಮಿಕ ಪರಂಪರೆಯ ಪ್ರತಿಮೆಗಳನ್ನು, ಆ ಸಮಾಜಕ್ಕೆ ವಿಶಿಷ್ಟವಾದ ಪರಿಣಾಮಕಾರಿ ನುಡಿಗಟ್ಟು, ಅಭಿವ್ಯಕ್ತಿ ಗಳನ್ನು ಪ್ರವೇಶಗೊಳಿಸಿದ್ದು ಸಾಮಾಜಿಕವಾದುದಕ್ಕಿಂತ ಹೆಚ್ಚಿನ ಅರ್ಥವನ್ನು ಪಡೆದಿದೆ. ಅವರ ಕೆಲವು ಕೃತಿಗಳಿಗೆ ಅದು ವಿಶಿಷ್ಟ ಬಣ್ಣವೊಂದನ್ನು ಸೇರಿಸು ತ್ತದೆ, ಅದರಲ್ಲೂ ಅವರ ಮೂರು ಕಾದಂಬರಿಗಳಿಗೆ: 'ಬಾಲ್ಯಕಾಲಸಖಿ' (೧೯೪೩), 'ನನ್ನಜ್ಜನಿಗೊಂದು ಆನೆಯಿತ್ತು' (೧೯೫೧) ಮತ್ತು 'ಪಾತುಮ್ಮನ ಆಡು' (೧೯೫೯). ಬಷೀರರ ಬರವಣಿಗೆಯ ಶಾಶ್ವತ ಪರಿಣಾಮಕ್ಕೆ ಕಾರಣ, ಎಲ್ಲ ಪಕ್ಷ ಪರಿಗಣನೆ ಗಳನ್ನೂ ಮೀರಿದ ಗಾಢ ಮಾನವೀಯತೆ ಎಂಬುದನ್ನೂ ಅದಕ್ಕೊಂದು 'ಸ್ಥಳೀಯ

ನೆಲೆ ಹಾಗೂ ನಾವು' ವನ್ನೀಯಲು ಮುಸ್ಲಿಂ ಅಂಶ ಬಳಕೆಗೊಂಡಿದೆ ಎಂಬುದನ್ನೂ ಒತ್ತಿ ಹೇಳಬೇಕು.

ಮಲಯಾಳಂ ಕಾದಂಬರಿಯ ಚರಿತ್ರೆಯಲ್ಲಿ ದ್ವಿತೀಯ ಸೃಜನಾತ್ಮಕ ಅವಧಿ ಯೆಂದು ನಾನು ಕರೆದುದನ್ನು ಉದ್ಘಾಟಿಸಿದ ಮೊದಮೊದಲಿನ ಕಾದಂಬರಿಗಳಲ್ಲೊಂದು, 'ಬಾಲ್ಯಕಾಲಸಖಿ'. ಅದು ಅವನತಿ ಹೊಂದುತ್ತಿರುವ ಮಧ್ಯಮವರ್ಗದ ಮುಸ್ಲಿಂ ಕುಟುಂಬವೊಂದರ ಹಿನ್ನೆಲೆಯಲ್ಲಿ ನಿರೂಪಿತವಾದ ತೀವ್ರ ತರುಣ ಪ್ರೇಮದ ಸರಳ ಕಥೆ; ಮಲಯಾಳಂನಲ್ಲಿ ಮುಸ್ಲಿಂ ರೀತಿ, ಪದ್ಧತಿಗಳನ್ನು ಚಿತ್ರಿಸುವ ಮೊದಲ ಮುಖ್ಯ ಸಾಹಿತ್ಯ ಕೃತಿ. ಆದರೆ ಅದು ಮುಖ್ಯವಾಗಿ ಮಜೀದ್ ಮತ್ತು ಸುಹ್ರಾರ ದುರಂತದ ಜ್ವಲಂತ ಗಾಢತೆಯಿಂದ ನೆನಪಿನಲ್ಲುಳಿಯುತ್ತದೆ. 'ಪಾತುಮ್ಮಾಳ ಆಡು', ದೊಡ್ಡ ದರಿದ್ರ ಮುಸ್ಲಿಂ ಕುಟುಂಬವೊಂದರ ದೈನಂದಿನ ಜೀವನದ ಸುತ್ತ ಹೆಣೆಯಲಾದ ಹೃದಯ ಸ್ಪರ್ಶಿ ದುರಂತ-ವೈನೋದಿಕ. ಇಲ್ಲಿಯೂ ಪರಿಣಾಮ ಸಾರ್ವತ್ರಿಕವಾದುದು; ಏಕೆಂದರೆ ದಿನದಿನದ ಘಟನೆಗಳ ಅತ್ಯಂತ ಕ್ಷುದ್ರ ಸಂಗತಿಗಳನ್ನು ಸುಂದರವಾದ ಕಲೆಯ ಸಾಮಗ್ರಿ ಯನ್ನಾಗಿ ಮಾರ್ಪಡಿಸುವ ಲೇಖಕನ ಕಲಾಪರುಷದಿಂದ ಅದು ಬರುತ್ತದೆ. ಮುಸ್ಲಿಂ ಸಮಾಜಕ್ಕೊಂದು ಸ್ಪಷ್ಟ ಸಂದೇಶವಿರುವ, ಪ್ರಾಯಶಃ ಏಕೈಕವಾದ ಕೃತಿ 'ನನ್ನಜ್ಜನಿ ಗೊಂದು ಆನೆಯಿತ್ತು'. ಕುಂಜುಪತ್ತುಮ್ಮಳಿಗಾಗಿ ನಿಸ್ಸಾರ್ ಅಹಮದ್‌ನ ಪ್ರೇಮದ ಸುತ್ತ ಕತೆ ನೇಯಲಾಗಿದೆ. ಆದರೆ ಪ್ರಮುಖ ಪಾತ್ರ ಕುಂಜಪತ್ತುಮ್ಮಳ ತಾಯಿ; ಗತ ವೈಭವದ ಬಗ್ಗೆ ಹಿಗ್ಗುವವಳು. ಅವಳು ಎತ್ತಿ ಹಿಡಿಯುವ ಮೌಲ್ಯದ ಮತ್ತು ಸುಶಿಕ್ಷಿತ, ಪ್ರಗತಿಪರ ನಿಸ್ಸಾರ್ ಅಹಮದ್‌ನ ಮೌಲ್ಯದ ನಡುವಣ ಘರ್ಷಣೆ ಕೇಂದ್ರ ವಸ್ತು. ಆಧುನೀಕರಣದ ಅಗತ್ಯದ ಸಂದೇಶ ಕತೆಯಲ್ಲಿ ಪುರಾಣವೊಂದರ ವಿಚಿತ್ರ ಸೌಂದರ್ಯ ಸಹಿತ ಗರ್ಭೀಕೃತವಾಗಿದೆ. ಅದರಲ್ಲಿ ಹಿತಕರ ಹಾಸ್ಯದ ಮಸಾಲೆಯಿದೆ, ಮತ್ತು ಅದು ಮುಸ್ಲಿಂ ಧಾರ್ಮಿಕ ಪರಂಪರೆಯ ಪ್ರತಿಮೆಗಳಿಂದ ಹಾಗೂ ಪ್ರಸಂಗಗಳಿಂದ ಬಣ್ಣಗೊಂಡಿದೆ.

ಬಷೀರರ ಸಣ್ಣ ಕತೆಗಳ ಮತ್ತು ನೀಳ್ಗತೆಗಳ ಯಾವನೇ ಅಭ್ಯಾಸಿ, ಅವುಗಳ ವಸ್ತು, ಧೋರಣೆಗಳ ವೈವಿಧ್ಯದಿಂದ ಪ್ರಭಾವಿತನಾಗುತ್ತನೆ. ಅವರು ಅವುಗಳಲ್ಲಿ ಹಸಿವಿನ ಮತ್ತು ಲೈಂಗಿಕತೆಯ ನೋವಿನಿಂದ ಹಿಡಿದು ಅನುಭಾವಿಕ ದರ್ಶನದ ಆನಂದದ ವರೆಗೆ ಎಲ್ಲ ಬಗೆಯ ಅನುಭವಗಳನ್ನೂ ಅಡಗಿಸಿದ್ದಾರೆ. ಅವುಗಳ ವ್ಯಾಪ್ತಿ ಭೌತಿಕ ಜಗತ್ತಿನ ಶುದ್ಧ ವಾಸ್ತವ ವಿಚಿತ್ರಗಳನ್ನೆಂತೊ ಅಂತೆ ಭೂತ ಪ್ರೇತಗಳು ತುಂಬಿದ ಭ್ರಾಮಕ ಪ್ರಾಂತವನ್ನೂ ಒಳಗೊಳ್ಳುತ್ತದೆ. ಪ್ರೀತಿ ಮತ್ತು ದ್ವೇಷ, ರಾಜಕಾರಣಿಗಳು ಮತ್ತು ಕಿಸೆಗಳ್ಳರು, ಹೆಂಗಸರ ಕುಂದುಕೊರತೆಗಳು, ಮನುಷ್ಯ ಚಿತ್ತದ ನಿಗೂಢತೆ, ಬಾಲ್ಯದ ಕಲ್ಪನೆಗಳು ಮತ್ತು ವಯಸ್ಕ ಜೀವನದ ಭ್ರಮನಿರಸನ—ಎಲ್ಲವನ್ನೂ ಕುರಿತು ಅವರು ಬರೆದಿದ್ದಾರೆ. ಅವರ ಜೀವನದರ್ಶನ, ಭವ್ಯವಾದುದರಿಂದ ಹಾಸ್ಯಾಸ್ಪದವಾದುದರವರೆಗೆ ಎಲ್ಲವನ್ನೂ ಗ್ರಹಿಸುವಷ್ಟು ವಿಶಾಲವಾಗಿದೆ. ಅವರಿಗೆ ಬದುಕಿನ ದುರಂತದ ಸಾಂದ್ರ ಪ್ರಜ್ಞೆಯಿದೆ; ಅದೇ ಹೊತ್ತಿನಲ್ಲಿ, ಹಾಸ್ಯದ ಅದಮ್ಯ ಪ್ರಜ್ಞೆಯೂ ಇದೆ.

ಬಷೀರರ ಯಶಸ್ಸುಗಳ ಗುಟ್ಟುಗಳಲ್ಲಿ ಒಂದೆಂದರೆ, ವಾಚಕನೊಡನೆ ಅವರು ಸ್ಥಾಪಿಸಿಕೊಳ್ಳುವ ವಿರಳ ರೀತಿಯ ಆಪ್ತತೆ. ತನ್ನ ಸ್ವಂತ ವೈಯಕ್ತಿಕ ಅನುಭವವನ್ನು

ಅನಾವರಣ ಮಾಡುತ್ತಿದ್ದಾನೆಂಬ ಅನಿಸಿಕೆಯನ್ನು ಲೇಖಕ ಉಂಟುಮಾಡುವುದರಿಂದ ಈ ಬಗೆಯ ಸಂಬಂಧ ಉದ್ಭವಿಸುತ್ತದೆ. 'ತಾಯಿ'ಯಲ್ಲಿ ಅವರು ಬರೆಯುತ್ತಾರೆ: "ನನ್ನ ತಾಯಿ ಬಗೆಗೆ ನಾನಿದನ್ನು ಹೇಳುತ್ತಿದ್ದೇನೆ; ಇನ್ನು ಮೇಲೆ ನಾನು ಹೇಳಬಯಸ ತಕ್ಕದ್ದೆಲ್ಲ ನನ್ನ ತಾಯನ್ನು ಕುರಿತದ್ದು". 'ನೀಲಿ ಬೆಳಕು' ಈ ಮಾತುಗಳಿಂದ ಮೊದಲಾಗುತ್ತದೆ: "ನನ್ನ ಬದುಕಿನ ಆಶ್ಚರ್ಯಕರ ಘಟನೆಗಳಲ್ಲೊಂದರ ಕತೆಯಿದು." ಬಹುಪಾಲು ಕತೆಗಳಲ್ಲಿ ಲೇಖಕನ ಯಾವುದೋ ಬಗೆಯ ವೈಯಕ್ತಿಕ ಮಗ್ನತೆ ಸೂಚಿತ ವಾಗುತ್ತದೆ. 'ತಾಯಿ'ಯಂತಹ ಕತೆಯಲ್ಲಿ ಅಪ್ಪಟ ವ್ಯಕ್ತಿನಿಷ್ಠ ಅಂಶವೊಂದಿದೆ. ವಾಸ್ತವವಾಗಿ, ಅವರ ಕತೆಗಳಲ್ಲಿ ಕೆಲವು ಆತ್ಮಚರಿತ್ರಾತ್ಮಕ ಅಂಶವನ್ನೊಳಗೊಂಡಿವೆ ಮತ್ತು ಅವರ ಕತೆಗಳು, ಅವರು ದಿಟವಾಗಿ ಹಾದುಹೋಗಿರುವ ಅನುಭವಗಳ ಅಸಾಮಾನ್ಯ ವೈವಿಧ್ಯದಿಂದ ಶ್ರೀಮಂತವಾಗಿವೆ. ಆದರೆ ಕತೆಯ 'ನಾನು' ಲೇಖಕ ನಾಗಿರಲಿ, ಇಲ್ಲದಿರಲಿ, ಈ ತಂತ್ರ ಕಥನತಂತ್ರದ ಒಂದು ಅಂಗವಾಗಿ ಬಹಳ ಪರಿಣಾಮ ಕಾರಿಯಾಗಿದೆ. ಈ ವಿಷಯದಲ್ಲಿ ಅವರು ತಮ್ಮ ಪ್ರಸಿದ್ಧ ಸಮಕಾಲೀನರಾದ ತಕಳಿ ಶಿವಶಂಕರ ಪಿಳ್ಳೆಯವರಿಗೆ ಸಂಪೂರ್ಣ ವಿರುದ್ಧ; ವ್ಯಕ್ತ್ಯತೀತ ಕಥನಕಾರನ, ತಟಸ್ಥ ವೀಕ್ಷಕನ, ವಸ್ತುನಿಷ್ಠ ವಿಶ್ಲೇಷಕನ ವಿಧಾನ ಪಿಳ್ಳೆಯವರದು.

'ತಾಯಿ', 'ಹುಲಿ', 'ಬಾಯಿಬಡಕ ಪಣಿಕ್ಕರ್', ದಂತಹ ಕತೆಗಳಲ್ಲಿ ವಾಸ್ತವಿ ಕತೆಯ ಸ್ಫುಟಪ್ರವೃತ್ತಿಯಿದೆ; ಆದರೆ ಅವು ಇತರ ಗುಣಗಳಿಂದಲೂ ಆಕರ್ಷಕವಾಗಿವೆ. 'ಏಕಾಂತತೆಯ ತೀರ'ದಂತಹ ಕೃತಿ ಅವರ ಕಲೆಯ ವರ್ಣಪಟಲದ ಇನ್ನೊಂದು ತುದಿಗೆ ಸೇರುತ್ತದೆ. ಅದು, ಕತೆಗಳಾಗಿರುವುದಕ್ಕಿಂತ ಗದ್ಯಕವಿತೆಗಳಾಗಿರುವ ಕೃತಿಗಳನ್ನೊಳ ಗೊಂಡ ಗುಂಪಿನಿಂದ ಬಂದುದಾಗಿದ್ದು, ಅಧ್ಯಾತ್ಮ ಸಂಬಂಧವಾದ ಅನುಭವಸ್ತರವನ್ನು ಶೋಧಿಸುತ್ತದೆ. ಅದು ನಮಗೆ ಸೂಫಿ ಅನುಭಾವಿಗಳ, ಟಾಗೋರ್ ಮತ್ತು ಗಿಬ್ರಾನರ ನೆನಪು ತರುತ್ತದೆ. ಅದು ಮಾಂಸ ಬಂಧನಗಳಾಚೆಗಿರುವ, ಕಾಲದೇಶಾತೀತವಾದ ಪ್ರೇಮದ ಜಾಜ್ವಲ್ಯಮಾನ ಪ್ರತಿಮೆಯನ್ನು ಚಿತ್ರಿಸುತ್ತದೆ. ಅದು ಅಮರ ಪ್ರೇಯಸಿ ಗಾಗಿ ಚಿರಂತನ ಪ್ರೇಮಿಯ ಆತ್ಮಪೂರ್ಣ ಅಭೀಪ್ಸೆಯಾಗಿದೆ. ಬಷೀರ್ ಅವರಲ್ಲಿ ಅಪೂರ್ವ ಕಾವ್ಯ ಪ್ರತಿಭೆಯಿದೆ; ಇತರ ಅನೇಕ ಕತೆಗಳಲ್ಲೂ ಅದರ ಇಣುಕುನೋಟ ಗಳು ನಮಗೆ ಸಿಗುತ್ತವೆ. ಆದರೆ ಅವರಲ್ಲಿನ ಕವಿ ಪರಿಪೂರ್ಣವಾಗಿ ಅಭಿವ್ಯಕ್ತಿಗೊಂಡಿರು ವುದು 'ಏಕಾಂತತೆಯ ತೀರ'ದಂಥ ಕೃತಿಗಳಲ್ಲಿ.

ಬಷೀರ್ ಅವರಿಗೆ ಅಸಾಮಾನ್ಯವಾದುದರ, ನಿಗೂಢವಾದುದರ ಮತ್ತು ಅತಿಮಾನುಷವಾದುದರ ಚಿತ್ರಣದಲ್ಲಿ ಸಹಜಸಾಮರ್ಥ್ಯವಿದೆ. 'ನೀಲಿ ಬೆಳಕು', 'ಹಾವು ಮತ್ತು ಕನ್ನಡಿ'ಯಂತಹ ಕತೆಗಳಲ್ಲಿ ಅವರು ಭ್ರಾಮಕ ಜಗತ್ತೊಂದನ್ನು ಸೃಜಿಸುತ್ತಾರೆ; ಅಗತ್ಯವಾದ 'ಅಪನಂಬಿಕೆಯ ಇಚ್ಛಾಪೂರ್ಣ ಅಮಾನತ್ತಿ'ನಲ್ಲಿ ತಮಗಿರುವ ಅತ್ಯುನ್ನತ ಕೌಶಲದಿಂದ ಅದನ್ನು ಸಂಪೂರ್ಣ ವಿಶ್ವಾಸಯೋಗ್ಯವನ್ನಾಗಿಸುತ್ತಾರೆ. ಸುಂದರ ತರುಣಿ ಯೊಬ್ಬಳ ಪ್ರೇತದ ವಿನಾ ಮತ್ತಾರೂ ಜೊತೆಗಿಲ್ಲದೆ ದೆವ್ವದ ಮನೆಯೊಂದರಲ್ಲಿ ಎಷ್ಟೋ ದಿವಸ ವಾಸಿಸುವ ವಿಚಿತ್ರಾನುಭವ, ಅಥವಾ ಒಬ್ಬ ವ್ಯಕ್ತಿಯ ಎಡತೋಳಿಗೆ ಸುತ್ತಿ ಕೊಂಡು ಅಲ್ಲಿಂದ ಕನ್ನಡಿಯಲ್ಲಿ ತನ್ನ ಪ್ರತಿಬಿಂಬದ ಸೌಂದರ್ಯವನ್ನು ಶಾಂತವಾಗಿ

ಆಸ್ವಾದಿಸುವ ಸರ್ಪದ ಭಯಾನಕ ಸಂಪರ್ಕ–ಇಂಥ ಸಂಗತಿಗಳನ್ನು ಬಷೀರ್ ಅಧಿಕೃತತ್ವದ ಖಚಿತ ಸ್ಪರ್ಶದೊಡನೆ ನಿರೂಪಿಸಬಲ್ಲರು. ಮನುಷ್ಯನೆಂಬ ರಹಸ್ಯದ ಅನಿರೀಕ್ಷಿತ ಅನಾವರಣದಿಂದ ಹೇಗೆ ಶುದ್ಧ ಮಾನವೀಯ ಕಥೆಗೂ ನಿಗೂಢಾರ್ಥವನ್ನು ಕೊಡಬಹು ದೆಂಬುದನ್ನು 'ಮನುಷ್ಯ' ತೋರಿಸುತ್ತದೆ. 'ಒಂದು ಹಳೆಯ ಪ್ರೇಮಕಥೆ' ಈ ವರ್ಗಕ್ಕೆ ಸೇರುವಂತೆ ಕಾಣುವುದಿಲ್ಲ. ಆದರೆ ಅದರಲ್ಲಿ ವಾಸ್ತವಿಕ ಚೌಕಟ್ಟಿದ್ದರೂ, ಇದ್ದಕ್ಕಿದ್ದಂತೆ ದುಃಸ್ವಪ್ನವಾಗಿ ಪರಿಣಮಿಸಿದ ಕನಸೊಂದರ ಅಸಾಮಾನ್ಯ ಅನುಭವವೊಂದನ್ನು ಅದು ಕುರಿತಿದೆ.

ಆದರೆ ಬಷೀರರ ಕತೆಗಳೆಲ್ಲ ಅತಿಮಾನುಷ ಮತ್ತು ಅಸಾಮಾನ್ಯವಾದುದಕ್ಕೆ ಸಂಬಂಧಿಸಿಲ್ಲ. ಅವರ ಬಹುಪಾಲು ಕತೆಗಳು ಮಣ್ಣಿನ ವಾಸ್ತವದಲ್ಲಿ ಬೇರುಬಿಟ್ಟಿವೆ ಮತ್ತು ತಮ್ಮ ಸಹಜೀವಿಗಳನ್ನು ಕುರಿತ ಅವರ ಪ್ರೇಮದಿಂದ ದೀಪ್ತವಾಗಿವೆ. ಲೇಖಕರ ಕಲ್ಪನಾತ್ಮಕ ಸಹಾನುಭೂತಿ ಎಂಥದೆಂದರೆ, ಅವರೆಲ್ಲರ ಸುಖದುಃಖಗಳು ಮತ್ತು ಸರ್ವಸಮಸ್ಯೆಗಳು ಅವರವೆಂತೊ ಅಂತೆ ಇವರವೂ ಆಗುತ್ತವೆ. 'ಆನೆಕೂದಲು' ಒಂದು ಆಕರ್ಷಕ ಕಥೆ; ಒಂಬತ್ತು ವರ್ಷದ ಹುಡುಗನೊಬ್ಬನ ಮನಸ್ಸಿನ ಅಸಾಧಾರಣ ಒಳನೋಟ ಅದರಲ್ಲಿದೆ. ಒಂದು ನವಿಲುಗರಿಯನ್ನೊ ಆನೆ ಕೂದಲನ್ನೊ ಅಮೂಲ್ಯ ನಿಧಿಯೆಂದು ಕಾಪಾಡಿಕೊಳ್ಳುವಂತಹ ವಯಸ್ಸಿನ ಕ್ಷುಲ್ಲಕ ಅಸೂಯೆಗಳು, ವಿಜಯಗಳು, ಅಪಮಾನಗಳು ಮತ್ತು ಸಾಹಸಗಳನ್ನು ಯಥಾರ್ಥವಾಗಿ ಮತ್ತು ನಿರ್ಭಾವುಕವಾಗಿ, ವಿಶ್ಲೇಷಣೆಗೆ ಸಿಗದ ಕಲಾರಹಿತ ಸರಳತೆಯಿಂದ ವರ್ಣಿಸಲಾಗಿದೆ. ಇದು ನಮಗೆ, ಒಂದಕ್ಕೊಂದು ಸೇರಿಸಿದರೆ ತುಸು ದೊಡ್ಡ ಒಂದಾಗುತ್ತದೆ ಎಂದು 'ಬಾಲ್ಯಕಾಲಸಖಿ' ಯಲ್ಲಿ ಘೋಷಿಸುವ ಮಗು ಮಜೀದನನ್ನು ಮತ್ತು ಮದುವೆಯೆಂದರೆ ಎಲೆಯಡಕೆಯ ಸೌಲಭ್ಯ ತಂದುಕೊಡುವಂಥದ್ದೆಂದು ಭಾವಿಸುವ 'ನಮ್ಮಜ್ಜನಿಗೊಂದು ಆನೆಯಿತ್ತು' ಕತೆಯ ಮುಗ್ಧೆ ಕುಂಜುಪತುಮ್ಮಳನ್ನು ಜ್ಞಾಪಿಸುತ್ತದೆ. ಶೈಶವದ ಮುಗ್ಧತೆಗೂ ಅಪರಾಧಿಯೊಬ್ಬನ ಸಂಕೀರ್ಣ ಮನಸ್ಸಿಗೂ ಅಜಗಜಾಂತರವಿದೆ. ಆದರೆ ಬಷೀರ್ ಎರಡನ್ನೂ ಸಮಾನ ಗ್ರಹಿಕೆಯಿಂದ ಚಿತ್ರಿಸಬಲ್ಲರು. ಭೂಗತ ಜಗತ್ತಿನ ಪಾತ್ರಗಳೊಡನೆ ವ್ಯವಹರಿಸುವ ಅವರ ಸಿದ್ಧತೆಗಳಲ್ಲಿ ಜಾನಪದದ ಬಾಳಿಕೆಯಿದೆ. 'ಇಸ್ಪೀಟಾಟದಲ್ಲಿ ಮಂಚಿಸುವವನ ಮಗಳು,' 'ಆನೆಕಳ್ಳ ಮತ್ತು ಚಿನ್ನದ ಶಿಲುಬೆ', 'ಸ್ಥಳೀಯ ಪ್ರಧಾನ' ಇವುಗಳಲ್ಲಿ ಅವರು ಸಣ್ಣಪುಟ್ಟ ಕಳ್ಳರ, ಜೇಬು ಕತ್ತರಿಸುವವರ, ಆಗೀಗ ಜೂಜಾಡು ವವರ ಮತ್ತು ತಮ್ಮ ಉದ್ಯಮದಲ್ಲಿ ದೊರೆಗಳಾದ ಇಬ್ಬರ–ಆನೆಕಳ್ಳನಾದ ರಾಮನ್ ನಾಯರ್ ಮತ್ತು ಚಿನ್ನದ ಶಿಲುಬೆಯ ಥೋಮ–ಕಿರುಪ್ರಪಂಚವನ್ನು ಸೃಷ್ಟಿಸಿದ್ದಾರೆ. ಅವರನ್ನೆಲ್ಲ ಲೇಖಕರು ಅಮರಗೊಳಿಸಿದ್ದಾರೆ–ಅಪರಾಧಿಗಳನ್ನಾಗಿ ಅಲ್ಲ, ವಿಭಿನ್ನ ಜೀವನ ಮಾರ್ಗವನ್ನುಳ್ಳ ವರ್ಣರಂಜಿತ ಮಾನವ ಜೀವಿಗಳನ್ನಾಗಿ.

ಮನುಕುಲವನ್ನು ಕುರಿತ ಬಷೀರರ ಅಸೀಮ ಪ್ರೀತಿ ಅವರನ್ನು ತಾರುಣ್ಯದಲ್ಲಿ ಬಂಡಾಯಗಾರರನ್ನಾಗಿಸಿತು. ಎಲ್ಲ ಬಗೆಯ ದಬ್ಬಾಳಿಕೆ, ಕಾಪಟ್ಯ, ಮೂಢನಂಬಿಕೆಗಳ ಬಗೆಗಿನ ರಾಜಿರಹಿತ ವಿರೋಧ ಅವರ ಬರವಣಿಗೆಯಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವ ವಸ್ತು. ಕೆಲವೊಮ್ಮೆ ಈ ವಿರೋಧ, 'ಶಬ್ದಗಳು' ಕಿರುಕಾದಂಬರಿಯ ಕಹಿ ಅರಾಜಕತಾ

ವಾದ ಮತ್ತು ಗಂಭೀರ ಸಿನಿಕತನದಲ್ಲಿರುವಂತೆ ನೇತ್ಯಾತ್ಮಕ ತಿರುವು ಪಡೆದುದುಂಟು. ಆದರೆ ಬಹಳ ಸಲ, ಅದರಲ್ಲೂ ಅವರ ಮೊದಮೊದಲಿನ ಕತೆಗಳಲ್ಲಿ, ಅವರ ದನಿ ಆವೇಶ ಪೂರ್ಣ ಆದರ್ಶವಾದದ ಪರವಾಗಿದೆ. ರಾಷ್ಟ್ರೀಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗ ವಹಿಸಿದ ಕೆಲವೇ ಲೇಖಕರಲ್ಲಿ ಅವರೊಬ್ಬರು. ನಮ್ಮ ಸ್ವಾತಂತ್ರ್ಯಸಂಗ್ರಾಮದ ಬಿರುಗಾಳಿಯ ದಿನಗಳ ನೋವು, ಉನ್ಮಾದಗಳನ್ನು ಉಜ್ವಲವಾಗಿ ಸೆರೆಹಿಡಿಯುವ ಕತೆಗಳನ್ನವರು ಬರೆದಿದ್ದಾರೆ. 'ತಾಯಿ' ಈ ವರ್ಗದ ಒಂದು ಶಕ್ತ ಕಥೆ; 'ಭಾರತಮಾತೆ', 'ಪೋಲೀಸ್‌ಪೇದೆಯ ಮಗಳು' ಮುಂತಾದ ಇತರ ಕತೆಗಳೂ ಇದೇ ಗುಂಪಿನವು. ವ್ಯಕ್ತಿ ಸನ್ನಿವೇಶವೊಂದರ ಕರುಣವನ್ನು ಮಾನವಜನಾಂಗದ ಸಾರ್ವತ್ರಿಕ ದುಃಖದೊಡನೆ ಹಾಸುಹೊಕ್ಕಾಗಿಸುವುದರಿಂದ, ತಾಯಿಯ ಮತ್ತು ತಾಯ್ನಾಡಿನ ಘರ್ಷಣಾತ್ಮಕ ಕರೆಗಳನ್ನು ಸಂಯೋಗಿಸುವುದರಿಂದ ಅವರು 'ತಾಯಿ'ಯಲ್ಲಿರುವ ನೇರವೂ ಅನಲಂಕೃತವೂ ಅವ ಕತೆಗೆ ಅಪೂರ್ವ ತೀವ್ರತೆಯನ್ನಿತ್ತಿದ್ದಾರೆ. 'ಹುಲಿ' ಮತ್ತು 'ಬಾಯಿಬಡುಕ ಪಣಿಕ್ಕರ್' ಕತೆಗಳು ಜೈಲು ಜೀವನದ ಹಿನ್ನೆಲೆಯಲ್ಲಿ ಆತ್ಮಹೀನ ದಬ್ಬಾಳಿಕೆಯನ್ನು ನಿರೂಪಿಸುತ್ತವೆ; ಸ್ವಾತಂತ್ರ್ಯ ಹೋರಾಟಗಾರರಾಗಿ ಮತ್ತು 'ಅಪಾಯಕಾರಿ ಲೇಖಕ' ರಾಗಿ ಆ ಬದುಕಿನ ಪರಿಚಯವನ್ನು ಬಷೀರ್ ಪಡೆದಿದ್ದರು. ತುಳಿತದ ಪ್ರಬಲವಾದ ಆಪಾದನೆಯ ಪರಿಣಾಮ, ಅಲಂಕಾರದ ಅಥವಾ ಭಾವಾತಿರೇಕದ ಬಳಕೆಯಿಲ್ಲದೆ ನಮಗೆ ಸಂವಹನಗೊಳ್ಳುತ್ತದೆ.

ಬಷೀರ್ ಬದುಕನ್ನೊಂದು ದುರಂತ-ವೈನೋದಿಕವನ್ನಾಗಿ ನೋಡುತ್ತಾರೆ. ಅವರ ವೈನೋದಿಕ ಪ್ರಜ್ಞೆ, ಅವರ ಕತೆಗಳ ವಿಶಾಲತರ ಪ್ರಭಾವಕ್ಕೆ ಕೊಡುಗೆ ಸಲ್ಲಿಸುವ ಅತ್ಯಸಾಧಾರಣ ಲಕ್ಷಣಗಳಲ್ಲಿ ಒಂದಾಗಿದೆ. ಅವರಲ್ಲಿ ಹಾಸ್ಯದ ನೂತನ, ರುಚಿಕರ ಪ್ರಜ್ಞೆಯಿದೆ; ಚತುರೋಕ್ತಿ, ವ್ಯಂಗ್ಯ, ವಿಡಂಬನೆಗಳ ಮೇಲಿನ ಪ್ರಭುತ್ವವಿದೆ. 'ಗೋಡೆಗಳ'ಲ್ಲಿ ಅವರು ಹೇಳುವಂತೆ, ನಗುವ ಅವಕಾಶವನ್ನು ಅವರೆಂದಿಗೂ ಕಳೆದು ಕೊಳ್ಳುವುದಿಲ್ಲ; ನಗುವನ್ನವರು 'ದೇವರ ವಿಶೇಷ ಕೊಡುಗೆ'ಯೆಂದು ಪರಿಗಣಿಸುತ್ತಾರೆ. 'ಪ್ರೇಮಪತ್ರ', 'ಆನೆಕಳ್ಳ ...'ಗಳಂತಹ ನೀಳ್ಗತೆಗಳ ಉಲ್ಲಾಸಕರ ಹಾಸ್ಯ ನಮ್ಮ ಸಾಹಿತ್ಯದ ಇಡೀ ಶ್ರೇಣಿಯಲ್ಲಿ ಅತ್ಯಂತ ಆನಂದದಾಯಕ ಸಂಗತಿಗಳಲ್ಲೊಂದು. ಬಹುತೇಕ ಅವರ ಎಲ್ಲ ಕಾದಂಬರಿ ಮತ್ತು ನೀಳ್ಗತೆಗಳಲ್ಲಿ ಗಂಭೀರವಾದುದು ಮತ್ತು ವಿನೋದಾತ್ಮಕವಾದುದು ವಿಭಿನ್ನ ರೀತಿಗಳಲ್ಲಿ ಹಾಸುಹೊಕ್ಕಾಗಿವೆ.

'ಪ್ರೇಮಪತ್ರ'ದಲ್ಲಿ ತರುಣ ಬಷೀರ್ ತಮ್ಮ ಅತ್ಯುತ್ತಮ ಸ್ತರದಲ್ಲಿರುವುದನ್ನು ಕಾಣುತ್ತೇವೆ. ವಸ್ತು ಪ್ರೇಮವೆಂಬುದು ಸ್ಪಷ್ಟ: ಆದರೆ ಅದು ಮತದಿಂದ ಮುರಿದ ಪ್ರೇಮ. ಅದು ಸಾರಮ್ಮ ಎಂಬ ಕ್ರೈಸ್ತ ಹುಡುಗಿಗಾಗಿ ಕೇಶವನ್ ನಾಯರ್ ಎಂಬ ನಾಯರ್ (ಹಿಂದೂ) ಯುವಕನೊಬ್ಬನ ರೊಮ್ಯಾಂಟಿಕ್ ಪ್ರೇಮ. ಅವಳು ಕ್ಲೇಶದಲ್ಲಿ ಲುವ ಕ್ರೈಸ್ತ ಕನ್ಯೆ–ತಂದೆ ಹಾಗೂ ಮಲತಾಯಿಗೊಂದು ಹೊರೆ. ಅವಳಿಗೆ ಉದ್ಯೋಗ ವಿಲ್ಲ, ಭಾವೀ ವರನಿಗೆ ಕೊಡಲು ವರದಕ್ಷಿಣೆಯಿಲ್ಲ. ಅದು ಅಲಂಕಾರ, ಭಾವಾತಿರೇಕ, ಮೆಲೊಡ್ರಾಮಗಳಿಗೆ ಬಹಳಷ್ಟು ಅವಕಾಶವೊದಗಿಸುವ ಗಂಭೀರ ಸನ್ನಿವೇಶ. ಆದರೆ ಬಷೀರ್ ಅದನ್ನು ಅಪೂರ್ವ ಸ್ಪರ್ಶಲಾಘವದಿಂದ ಎದುರಿಸುತ್ತಾರೆ ಮತ್ತು ಸಂಕೀರ್ಣ

ನ್ನಿವೇಶದಲ್ಲಿ ಅಂತರ್ಗತವಾಗಿರುವ ಹಲವಾರು ಸಮಸ್ಯೆಗಳಲ್ಲಿ ಯಾವುದನ್ನೂ ತಳ್ಳಿ ಾಕದೆ ಆ ಕೆಲಸ ಮಾಡುತ್ತಾರೆ. ವಾಸ್ತವವಾಗಿ, ಹಾಸ್ಯವನ್ನು ಕುರಿತ ಅವರ ಪ್ರಸಿದ್ಧ ೂಕ್ತಿಗಳಲ್ಲೊಂದು ಈ ಕಥೆಯಲ್ಲಿ ಬರುತ್ತದೆ: “ಹಾಸ್ಯ ಬದುಕಿನ ಪರಿಮಳ.” ೇಶವನ್ ನಾಯರ್ ಸಾರಮ್ಮಳ ತಂದೆಯ ಮನೆಯಲ್ಲಿರುವ ಬ್ಯಾಂಕ್ ನೌಕರ; ವಳು ಒಂದು ಉದ್ಯೋಗ ದೊರಕಿಸುವಲ್ಲಿ ಸಹಾಯ ಕೋರಿ ಅವನಲ್ಲಿಗೆ ಹೋಗುತ್ತಾಳೆ. ಹಳ ಆಲೋಚನೆ ಮಾಡಿದನಂತರ ಅವನು ಅವಳಿಗೆ ನಿಯತ ವೇತನ ಮತ್ತು ಶಾಶ್ವತ ್ಥಾನ ಒದಗಿಸುತ್ತಾನೆ–ತನ್ನ ಸ್ವಂತ ಹೃದಯದಲ್ಲಿ. ಅವಳು ಕೊಡುಗೆಯನ್ನೊಪ್ಪಿ ೊಳ್ಳುತ್ತಾಳೆ ಮತ್ತು ತಿಂಗಳುಗಟ್ಟಲೆ ವೇತನ ಪಡೆಯುತ್ತ ಹೋಗುತ್ತಾಳೆ, ತನ್ನನ್ನು ುಟ್ಟಲು ಅವನಿಗೆ ಅವಕಾಶವಾಗದಂತೆ. ಅಂತಿಮವಾಗಿ ಅವನು ವಿಜಯಿಯಾಗು ್ತಾನೆ, ಅವನ ಪ್ರೇಮ ಗೆಲ್ಲುತ್ತದೆ; ಅವಳು ಕೇರಳದ ಹರ್ಷಭರಿತ ಹೆಣ್ಣುಗಳಲ್ಲಿ ಅತ್ಯಂತ ರ್ಷಿತಳಾಗಿ ಹೊರಬರುತ್ತಾಳೆ.

ಲಘು ಮನೋಧರ್ಮದಿಂದ ಬಷೀರ್ ಬರೆದಿರುವ ಸಣ್ಣಕತೆಗಳಲ್ಲಿ ‘ಪೂವನ್ ನಾನಾ’ ಪ್ರಾಯಶಃ ಅತ್ಯಂತ ರಂಜಕವಾದದ್ದು. ಗಯ್ಯಾಳಿಯನ್ನು ಪಳಗಿಸುವುದರ ಧುನಿಕ ರೂಪವಾದ ಈ ಕಥೆಯನ್ನು ಬರೆಯುವಲ್ಲಿ ಸ್ತ್ರೀಸ್ವಾತಂತ್ರ್ಯವಿರೋಧವನ್ನು ೇಖಕರಿಗೆ ಶುಷ್ಕ ವಿಮರ್ಶಕರು ಆರೋಪಿಸಿರುವುದು ವಿಷಾದಕರ.

ಶುದ್ಧ ತಮಾಷೆಯ ಬಗೆಗಿನ ಪ್ರೀತಿ ಬಷೀರರ ವೈನೋದಿಕ ದರ್ಶನದ ಪ್ರಮುಖತಮ ಲಕ್ಷಣವಾದರೂ, ಅವರು ಆಗಾಗ ವ್ಯಂಗ್ಯದ ಅಥವಾ ವಿಡಂಬನದ ಧೋರಣೆಯನ್ನು ತಳೆಯುತ್ತಾರೆ. ‘ಯುದ್ಧ ಕೊನೆಗೊಳ್ಳಬೇಕಾದರೆ’ ಕತೆಯಲ್ಲಿ, ಪ್ರಸಿದ್ಧ ಲೇಖಕ ಎಲ್ಲ ಯುದ್ಧಗಳನ್ನೂ ಕೊನೆಗಾಣಿಸಲು ತನ್ನ ಹೊಚ್ಚಹೊಸ ಪರಿಹಾರವನ್ನು ಪ್ರಕಟಿಸುತ್ತಾನೆ: ‘....ಈ ಭೂಮಿಯ ಮೇಲೆ ಜೀವಿಸುವ ಪ್ರತಿಯೊಬ್ಬ ಗಂಡಸಿಗೂ ಹೆಂಗಸಿಗೂ ನನಗಿರು ನಂತೆ ಒಣಕಜ್ಜಿ ಹತ್ತಬೇಕು.” ಇಲ್ಲಿ ಬಷೀರ್ ನಿಶ್ಶಸ್ತ್ರೀಕರಣ ಯೋಜನೆ, ಯುದ್ಧ ಒಪ್ಪಂದಗಳು ಹಾಗೂ ಶಾಂತಿಯಾತ್ರೆಗಳು ಮುಂತಾದುವುಗಳ ವೈಫಲ್ಯ ವನ್ನು ಕುರಿತು ತಮಾಷೆಯಾಗಿ ಚುಚ್ಚುತ್ತಿದ್ದಾರೆ ಮಾತ್ರವಲ್ಲ, ಭೂಮಿಯ ಮೇಲಿರುವ ಎಲ್ಲ ಸಂಗತಿಗಳ ಬಗೆಗೂ ಪ್ರತಿಯೊಬ್ಬ ಪ್ರಸಿದ್ಧ ವ್ಯಕ್ತಿಯೂ ತನ್ನ ಅಭಿಪ್ರಾಯ ವ್ಯಕ್ತ ಪಡಿಸಬೇಕೆಂದು ನಿರೀಕ್ಷಿಸುವ ಹಟಮಾರಿ ಪತ್ರಕರ್ತರನ್ನು ಲೇವಡಿಮಾಡುತ್ತಿದ್ದಾರೆ. ತುಸು ಅಸಾಮಾನ್ಯವಾದ ಯಾವುದರಿಂದಾಗಲಿ ಕುತೂಹಲಗೊಳ್ಳುವ ಜನಜಂಗುಳಿಯ ಮನಸ್ಸನ್ನು ಮತ್ತು ಪಕ್ಷಹಿತಗಳಿಗಾಗಿ ಎಲ್ಲವನ್ನೂ ಶೋಷಿಸುವ ರಾಜಕಾರಣಿಗಳ ಮೂಢಮೂಲ ಪ್ರವೃತ್ತಿಯನ್ನು ಕುರಿತ ಪರಿಣಾಮಕಾರಿ ವಿಡಂಬನವಾಗಿದೆ, ‘ಜಗತ್ಪ್ರಸಿದ್ಧ ಮೂಗು’ ಎಂಬ ವಿಲಕ್ಷಣ ಕಥೆ.

ಅನುವಾದ: ಸಿ.ಪಿ.ಕೆ.

'ನನ್ನ ಅಜ್ಜನಿಗೊಂದು ಆನೆಯಿತ್ತು'

"ಬಷೀರ್‌ರ ಮಹತ್ವದ ಕೊಡುಗೆ"

ಡಾ. ಸಿ. ಪಿ. ಸಿದ್ಧಾಶ್ರಮ

ಮಲೆಯಾಳದ ಆಧುನಿಕ ಬರಹಗಾರರಲ್ಲಿ ಶ್ರೀ ವೈಕಂ ಮುಹಮ್ಮದ್ ಬಷೀರರದು ದೊಡ್ಡ ಹೆಸರು. ವಾಸ್ತವ ಬದುಕಿನ ಚಿತ್ರಣವನ್ನು ನೀಡುವ ಬಷೀರರು ಅತ್ಯಂತ ಸತ್ವಶಾಲಿ ಕಾದಂಬರಿಕಾರರು; ಪ್ರಗತಿಶೀಲ ಚಿಂತಕರು. 'ನನ್ನ ಅಜ್ಜನಿಗೊಂದು ಆನೆಯಿತ್ತು' ಬಷೀರರ ಉತ್ತಮ ಕೃತಿ ಮಾತ್ರವಲ್ಲ, ಮಲೆಯಾಳ ಭಾಷೆಯಲ್ಲಿನ ಒಂದು ಶ್ರೇಷ್ಠ ಕೃತಿ. ಸಿರಿತನದ ವೈಭವದಿಂದ ಬಡತನದ ಬವಣೆಗೆ ಜಾರುವ ಮುಸ್ಲಿಂ ಕುಟುಂಬವೊಂದರ ದಾರುಣ ಕಥೆಯನ್ನು ಚಿತ್ರಿಸುವ ಈ ಕಾದಂಬರಿ, ಮಾನವ ಸ್ವಭಾವಗಳನ್ನು, ಬದುಕಿನ ನಂಬಿಕೆಗಳನ್ನು, ಸಂಪ್ರದಾಯದ ಸೋಲನ್ನು, ಜೀವನ ಶ್ರದ್ಧೆಯನ್ನು, ಅಪ್ಪಟ ಪ್ರೀತಿಯ ಪರಿಯನ್ನು, ಪ್ರಗತಿಶೀಲತೆಯನ್ನು ತನ್ಮಯತೆಯಿಂದ ರೇಖಿಸುತ್ತದೆ. ನೂರಾ ಹನ್ನೊಂದು ಪುಟಗಳ ಈ ಚಿಕ್ಕ ಕಾದಂಬರಿ ತಾನು ಹೇಳಬೇಕಾದುದನ್ನು ಎಲ್ಲ ಚಿಕ್ಕ ಪುಟ್ಟ ವಿವರಗಳೊಂದಿಗೆ ಅತ್ಯಂತ ಔಚಿತ್ಯಪೂರ್ಣವಾಗಿ ಆತ್ಮೀಯವಾಗಿ ಕಾವ್ಯದನಿಯಲ್ಲಿ ಹೇಳಿಬಿಡುತ್ತದೆ.

ಕುಞಪಾತುಮ್ಮ ಈ ಕಾದಂಬರಿಯ ಕೇಂದ್ರ ಬಿಂದು, ಅವಳ ಗತಜೀವನದ ಸ್ಮರಣೆಯ ಮೂಲಕ ಕಾದಂಬರಿ ಬಿಚ್ಚಿಕೊಳ್ಳುತ್ತದೆ. ಕಾದಂಬರಿಯ ಬದುಕು ಮುನ್ನಡೆಯುವುದು ಈ ಪಾತ್ರದ ಮೂಲಕವೇ. ಕಾದಂಬರಿಯ ಜೀವಶಕ್ತಿಯೇ ಈ ಕುಞಪಾತುಮ್ಮ. ಕುಞಪಾತುಮ್ಮ ತನ್ನ ಸಹವಾಸಕ್ಕೆ ಬರುವ ಯಾವ ಜೀವ ಜಂತುವಿಗೂ ನೋವುಂಟು ಮಾಡಿದವಳಲ್ಲ; ತೊಂದರೆ ಕೊಟ್ಟವಳಲ್ಲ. ಬದಲಾಗಿ ಯಾರಾದರೂ ಅವಳಿಗೆ ನೋವನ್ನುಂಟು ಮಾಡಿದರೆ, ತೊಂದರೆ ಕೊಟ್ಟರೆ ಅವಳು ಅದನ್ನು ಕ್ಷಮಿಸಿ ಬಿಟ್ಟಾಳು. ಜಗತ್ತಿನ ಎಲ್ಲರನ್ನೂ, ಪಶು-ಪಕ್ಷಿಗಳನ್ನೂ

ಪ್ರೀತಿಸುವ ಕೋಮಲ ಹೃದಯದ ಹೆಣ್ಣು ಈಕೆ. ಕಾದಂಬರಿಯ ಆರಂಭದಲ್ಲೆ ಕಾದಂಬರಿಕಾರರು "ಕುಞಪಾತುಮ್ಮ ಯಾರನ್ನೂ ಬೇಸರಪಡಿಸಿದ್ದಿಲ್ಲ. ಒಂದು ಇರುವೆಯನ್ನಾದರೂ ಅವಳು ನೋಯಿಸಿದ್ದೇದಿಲ್ಲ. ರಬ್ಬೂಲ್ ಆಲಮೀನನಾದ ಒಡೆಯನ ಸೃಷ್ಟಿಯಲ್ಲಿ ಯಾವುದಕ್ಕೂ ಅವಳು ದ್ರೋಹ ಬಗೆದವಳಲ್ಲ. ಸಣ್ಣ ಪ್ರಾಯದಿಂದಲೇ ಅವಳಿಗೆ ಎಲ್ಲ ಜೀವಜಂತುಗಳ ಮೇಲೆಯೂ ಅಪಾರವಾದ ಪ್ರೀತಿಯಿತ್ತು" ಎಂದು ಹೇಳುವಲ್ಲಿ ಕುಞಪಾತುಮ್ಮನ ಮೃದುವಾದ ಸಾತ್ವಿಕ ವ್ಯಕ್ತಿತ್ವವನ್ನು, ವಿಶ್ವಪ್ರೇಮವನ್ನು ಪರಿಚಯಿಸುತ್ತಾರಲ್ಲದೆ, ಮುಂದೆ ಕಾದಂಬರಿ ಲೋಕದಲ್ಲಿ ಕುಞಪಾತುಮ್ಮ ಎಂಥ ಉದಾತ್ತ ಮನೋಭಾವದ ಚೇತನವಾಗಿ ಬೆಳೆಯಬಲ್ಲಳೆಂಬುದನ್ನೂ ಸೂಚಿಸುತ್ತಾರೆ.

ಸಂಪ್ರದಾಯನಿಷ್ಠ ದೊಡ್ಡ ಶ್ರೀಮಂತ ಮನೆತನದಲ್ಲಿ ಹುಟ್ಟಿದವಳು, ಕುಞಪಾತುಮ್ಮ. ಅವಳ ತಂದೆ ವಟ್ಟನಡಿಮು, ಇಡೀ ಊರಿಗೆ ಶ್ರೀಮಂತ. ಮಸೀದಿಯ ಅಧಿಕಾರಿ ಬೇರೆ. ಊರಿಗೆ ಊರೇ ಅವನನ್ನು ಭಕ್ತಿ ಗೌರವಗಳಿಂದ ಕಾಣುತ್ತದೆ. ಇಂಥ ಶ್ರೀಮಂತ ತಂದೆಯ ಮಗಳಾದ ಇವಳ ಮೂಗು, ಕಿವಿ, ಕೈಕಾಲುಗಳು ಚಿನ್ನದ ಆಭರಣಗಳಿಂದ ತುಂಬಿ ಹೋಗಿವೆ. ಇವಳು 'ಹಸಿವೆ ಇಲ್ಲದೆ ಊಟ ಮಾಡುತ್ತಾಳೆ. ನಿದ್ರೆ ಇಲ್ಲದೆ ಮಲಗುತ್ತಾಳೆ; ಇಂಥ ಸಿರಿತನದ ವೈಭವದಲ್ಲಿ ಇವಳು ಮುಳುಗಿ ಹೋಗಿದ್ದರೂ ಸಂಪ್ರದಾಯದ ಸೆರೆ ಇವಳನ್ನು ಬಿಗಿದು ಹಾಕಿದೆ; ಸ್ವಾತಂತ್ರ್ಯವನ್ನು ಕಸಿದುಕೊಂಡಿದೆ. ಇವಳು ಅಂಗಳಕ್ಕೆ ಬಂದು ನಕ್ಷತ್ರಗಳನ್ನು ನೋಡುವಂತಿಲ್ಲ. ಬೇರೆಯವರೊಂದಿಗೆ ಮಾತನಾಡುವಂತಿಲ್ಲ. ಗಂಡಸರನ್ನು ಮಾತನಾಡಿಸುವುದಿರಲಿ, ನೋಡುವಂತೆಯೂ ಇಲ್ಲ. ಇವಳು ಶ್ರೀಮಂತ ಆನೆಮಕ್ಕಾರನ ಮುದ್ದು ಮೊಮ್ಮಗಳಾದ್ದರಿಂದ ಬೇರೆ ಮಕ್ಕಳೊಂದಿಗೆ ಬೆರೆಯುವಂತಿಲ್ಲ; ಆಟ ಆಡುವಂತಿಲ್ಲ. ಒಟ್ಟಿನಲ್ಲಿ ಚಿನ್ನದ ಪಂಜರದ ಗಿಳಿಯಂತೆ ಇವಳ ಸ್ಥಿತಿ. "ಹೇಳಿದಂತೆ ಮಾಡುವುದು, ಕೊಟ್ಟದ್ದನ್ನು ಸ್ವೀಕರಿಸುವುದು—ಇವು ಮುಸ್ಲಿಂ ಯುವತಿಯ ಧರ್ಮ" ಎಂದು ಇವಳನ್ನು ಕುರಿತು ಬಷೀರರು ಹೇಳುವ ಈ ಮಾತು ಇಡೀ ಭಾರತೀಯ ಸ್ತ್ರೀ ಸಮೂಹದ ದುರಂತ ಕಥೆಯನ್ನು ವ್ಯಂಜಿಸುತ್ತದೆ.

ಇಸ್ಲಾಂ ಧರ್ಮ ಪ್ರವಚನಗಳನ್ನು ಇವಳು ಕೇಳಿದ್ದರಿಂದ ಧಾರ್ಮಿಕ ಚೌಕಟ್ಟಿನಲ್ಲಿ ಸೃಷ್ಟಿಯ ಉತ್ಪತ್ತಿ, ಸ್ಥಿತಿ, ಲಯಗಳ ಬಗ್ಗೆ ಅರಿತಿದ್ದಾಳೆ. ಮುಸ್ಲಿಂ ಧರ್ಮದ ಆಚಾರ–ವಿಚಾರಗಳೂ, ವಿಧಿ–ನಿಷೇಧಗಳೂ ಇವಳಿಗೆ ತಿಳಿದಿವೆ. ಇವಳು ಸುಂದರಿಯಾದರೂ ಒಂದು ಕಪ್ಪು ಮಚ್ಚೆ ಮಾತ್ರ ಇವಳ ಕೆನ್ನೆಯಲ್ಲಿದೆ. ಅದು ಭಾಗ್ಯದ ಮಚ್ಚೆ ಎಂಬುದನ್ನು ತನ್ನ ಹದಿನಾಲ್ಕನೆಯ ವಯಸ್ಸಿನಲ್ಲಿ ಇವಳು ತನ್ನ ತಂದೆ–ತಾಯಿಗಳ ಮೂಲಕ ತಿಳಿಯುತ್ತಾಳೆ. ಆದರೆ ವಟ್ಟನಡಿಮನ ಏಳು ಜನ ಸಹೋದರಿಯರು ತಮಗೆ ಬರಬೇಕಾದ ಆಸ್ತಿಯ ಪಾಲನ್ನು ಕೋರ್ಟಿನ ಮೂಲಕ ಪಡೆದುಕೊಂಡಾಗ ವಟ್ಟನಡಿಮು ಕಡುಬಡವನಾಗಿ ಬಿಡುತ್ತಾನೆ; ಸುಳ್ಳು ದಾಖಲೆಗಳನ್ನು ಸೃಷ್ಟಿಮಾಡಿ ಶ್ರೀಮಂತನಾಗಿ ಮೆರೆಯುತ್ತಿದ್ದ ವಟ್ಟನಡಿಮು ಈಗ ಲೋಕದ ದುರ್ಲಕ್ಷ್ಯಕ್ಕೆ ಈಡಾಗುತ್ತಾನೆ. ಅವನ ಪಾಲಿಗೆ ಉಳಿಯುವ ಆಸ್ತಿ ಎಂದರೆ ಒಂದು ಸಣ್ಣ ಹಿತ್ತಲು ಮಾತ್ರ. ಅಲ್ಲಿ ಅವನಿಗೆ ಒಂದು ಸಣ್ಣ ಹುಲ್ಲಿನ ಮನೆ, ಒಂದು ಹುಣಸೇಮರ, ನಾಲ್ಕು ಕಾಗಿನ ಮರ, ಒಂಭತ್ತು ತೆಂಗಿನ ಮರ, ಒಂದು ಬಾವಿ ಮತ್ತು ಒಂದು ನೈದಿಲೆ ಕೊಳ ಮಾತ್ರ

ಇವೆ. ಈಗ ಆ ಭಾಗ್ಯದ ಮಚ್ಚೆಯನ್ನು 'ಭಾಗ್ಯದೋಷಿ ಮಚ್ಚೆ,' 'ಕೇಡುಮಚ್ಚೆ' ಎಂದು ತಿಳಿಯುತ್ತಾಳೆ ಕುಞಪಾತುಮ್ಮನ ತಾಯಿ ಕುಞತಾಚುಮ್ಮ. ಸಿರಿತನದ ತುತ್ತತುದಿಯಲ್ಲಿದ್ದವರು ಬಡತನದ ಕಂದಕದಲ್ಲಿ ಬಿದ್ದಾಗ ಪಡುವ ಎಲ್ಲ ಯಾತನೆ ನೋವುಗಳನ್ನು ಅನುಭವಿಸುತ್ತಾರೆ ಕುಞಪಾತುಮ್ಮನ ತಂದೆ–ತಾಯಿಗಳು.

ಆದರೆ ಸಂಪ್ರದಾಯದ ಸೆರೆಯಲ್ಲಿ, ಸಿರಿವಂತಿಕೆಯ ಬಂಧನದಲ್ಲಿ ಜರ್ಜರಿತವಾಗಿದ್ದ ಕುಞಪಾತುಮ್ಮನಿಗೆ ಒಂದು ರೀತಿಯ ಬಿಡುಗಡೆ, ಸ್ವಾತಂತ್ರ್ಯ ದೊರಕಿದಂತಾಗುತ್ತದೆ. ಈಗ ಅವಳಿಗೆ ಮನೆಬಿಟ್ಟು ಹೊರಗೆ ಹೋಗಲು, ತಿರುಗಾಡಲು ಅವಕಾಶ ಇರುವುದರಿಂದ ಗಾಳಿ–ಬಿಸಿಲುಗಳಿಗೆ ಮೈಯೊಡ್ಡಿ ತಿರುಗಾಡಲು, ಬೆಳದಿಂಗಳಿನ ಆನಂದವನ್ನು ಹೀರಲು, ನೈದಿಲೆ ಕೊಳದಲ್ಲಿ ಸ್ನಾನ ಮಾಡಲು ಸಾಧ್ಯವಿದೆ. ಹೀಗೆ ಅವಳು ಪ್ರಕೃತಿಯೊಂದಿಗೆ ಬೆರೆತು, ಪಂಚಮಹಾಭೂತಗಳೊಂದಿಗೆ ಸಂಮಿಲನಗೊಂಡು ತನ್ನ ಅನುಭವದ ಆಳವನ್ನು ವಿಸ್ತರಿಸಿಕೊಳ್ಳುತ್ತಾಳೆ; ಹೊಸಹೊಸ ಅನುಭವಗಳಿಗೆ ಸ್ಪಂದಿಸುತ್ತಾಳೆ. ಈಗ ಅವಳು ಬಡವಿಯಾದ್ದರಿಂದ ಯಾವ ಭೂತ–ಪ್ರೇತವೂ, ಇಬಿಲೀಸ್‌ನೂ ಅವಳನ್ನು ಮೋಹಿಸಿ ಕಾಡುವುದಿಲ್ಲ. ಹೀಗೆ ಅವಳು ತನ್ನ ಸೊಕ್ಕಿನ ತಾಯಿ ಕೊಡುವ ಎಲ್ಲ ಹಿಂಸೆಗಳನ್ನು ಸಹಿಸಿಕೊಂಡು ನಿಸರ್ಗದ ಮಗುವಾಗಿ ಬೆಳೆಯತೊಡಗುತ್ತಾಳೆ; ಶ್ರಮಪಟ್ಟು ಕೆಲಸ ಮಾಡುವುದನ್ನೂ ಕಲಿತುಕೊಳ್ಳುತ್ತಾಳೆ. ಸಿರಿತನ ಹೋಗಿ ಆನೆಮಕ್ಕಾರನ ಮುದ್ದು ಮಗಳ ಮಗಳು ಹೀಗಾದಳಲ್ಲ! ಎಂದು ಒಂದು ಸಲ ಅನಿಸಿದರೂ, ಅದು ಅವಳು ಮಾನಸಿಕವಾಗಿ ಬೌದ್ಧಿಕವಾಗಿ ಬೆಳೆಯಲು, ಅವಳ ವ್ಯಕ್ತಿತ್ವಗಟ್ಟಿಗೊಳ್ಳಲು ಸಹಾಯಕವೇ ಆಗುತ್ತದೆ. ನಿಸರ್ಗದ ಸಹವಾಸದಿಂದಾಗಿ ಕುಞಪಾತುಮ್ಮ ತನ್ನ ಬದುಕಿನ ಇತರ ನೋವುಗಳನ್ನು ಸುಲಭವಾಗಿ ಮರೆತು ಬಿಡುತ್ತಾಳೆ.

ಒಂದು ದಿನ ಕುಞಪಾತುಮ್ಮ ಸುಂದರವಾದ ನೈದಿಲೆ ಕೊಳಕ್ಕೆ ಸ್ನಾನ ಮಾಡಲು ಹೋದಾಗ, ಜಿಗಳೆಯೊಂದು ಅವಳ ಕೋಮಲ ತೊಡೆಯ ರಕ್ತವನ್ನು ಹೀರಿದ್ದರೂ ಅದನ್ನು ಕೊಲ್ಲದೆ, ಬದುಕಿಕೊಳ್ಳಲಿ ಎಂದು ಮೆಲ್ಲಗೆ, ಅದಕ್ಕೆ ನೋವಾಗದಂತೆ ಕೊಳಕ್ಕೆ ಎಸೆಯುತ್ತಾಳೆ. ಆದರೆ ಅದು ಬೀಳುವುದನ್ನೇ ಕಾದು ನಿಂತಿದ್ದ ಒಂದು 'ವರಾಲು' ಮೀನು ಅದನ್ನು 'ಗಪಕ್' ಎಂದು ನುಂಗಿ ಬಿಡುತ್ತದೆ. ಆ ವರಾಲು ಮೀನನ್ನು ಸೀರೊಳ್ಳೆಯೊಂದು ನುಂಗಿ ಹಾಕುತ್ತದೆ. ಅಲ್ಲದೆ ಆ ಸುಂದರವಾದ ಕೊಳದಲ್ಲಿ ಇನ್ನೂ ಅನೇಕ ರೀತಿಯ ಭೀಕರ ಜಲಪ್ರಾಣಿಗಳಿರುವುದನ್ನೂ ಆಕೆ ಅಂದು ನೋಡಿಬಿಡುತ್ತಾಳೆ. ಇದರಿಂದ ಅವಳಿಗೆ ಜಗತ್ತಿನಲ್ಲಿ ಒಳ್ಳೆಯದರ, ಸೌಂದರ್ಯದ ಜೊತೆ ಜೊತೆಯಲ್ಲಿಯೇ ಕೆಟ್ಟದ್ದು ಮತ್ತು ಭೀಕರತೆಯೂ ಇದೆ ಎಂಬ ಸತ್ಯ ಅರಿವಿಗೆ ಬರುತ್ತದೆ. ಕೊಳದಲ್ಲಿಯ ಭೀಮಸೌಂದರ್ಯದಂತೆಯೇ ಭೀಕರತೆಯೂ ಇರುವುದು ಪ್ರಕೃತಿ ನಿಯಮ ಇರಬಹುದೆಂದು ಬೋಧೆಯಾಗುತ್ತದೆ.

ಇನ್ನೊಂದು ದಿನ ಇವಳು ಸ್ನಾನಕ್ಕೆಂದು ಹೊರಗೆ ಬಂದಾಗ ಹೆಣ್ಣು ಗುಬ್ಬಿಯೊಂದು ಗಂಡು ಗುಬ್ಬಿಯಿಂದ ಕುಕ್ಕಿಸಿಕೊಂಡು ಆರ್ತನಾದ ಮಾಡುತ್ತ ಆಳವಾದ ತೋಡಿಗೆ ಬಿದ್ದು ಬಿಡುತ್ತದೆ. ಅದನ್ನು ಉಳಿಸಲೆಂದು ಗಿಡದ ಸಹಾಯದಿಂದ ತೋಡಿಗೆ ಇಳಿಯಲು ಪ್ರಯತ್ನಿಸಿದ ಕುಞಪಾತುಮ್ಮ ಕೈಜಾರಿ ತೋಡಿನಲ್ಲಿ ಬಿದ್ದು ಬಿಡುತ್ತಾಳೆ.

ಮೈಗೆ ಅಲ್ಲಲ್ಲಿ ಸಣ್ಣ ಪುಟ್ಟ ಗಾಯಗಳಾದರೂ ಕೈಗೆ ಮಾತ್ರ ದೊಡ್ಡ ಪೆಟ್ಟಾಗಿ ರಕ್ತ ಸುರಿಯತೊಡಗುತ್ತದೆ. ತನಗಾದ ಗಾಯವನ್ನೂ ಲೆಕ್ಕಿಸದ ಕುಞ್ಞಿಪಾತುಮ್ಮ ಗುಬ್ಬಿಯನ್ನು ಮಮತೆಯಿಂದ ಎತ್ತಿಕೊಂಡು ಅದು ಬದುಕಲೆಂದು (ಕೂಡಲೇ ನೀರು ಸಿಗದ್ದರಿಂದ) ತನ್ನ ಕೈ ರಕ್ತವನ್ನೇ ಕುಡಿಸಿಬಿಡುತ್ತಾಳೆ. ಗುಬ್ಬಿಗೆ ಹೋದ ಜೀವ ಬಂದಂತಾಗುತ್ತದೆ. ಅದು ಕಣ್ತೆರೆದು ನೋಡುತ್ತದೆ; ಮತ್ತು ಬದುಕಿಕೊಳ್ಳುತ್ತದೆ. ಆವಾಗಲೇ ಇವಳಿಗೆ ನಿಸ್ಸಾರ್ ಅಹಮದ್‌ನ ಪರಿಚಯವಾದದ್ದು. ಇವಳು ಗುಬ್ಬಿಯ ಮೇಲಿನ ಪ್ರೀತಿಯಿಂದಾಗಿ ಅದನ್ನು ರಕ್ಷಿಸಲು ಹೋಗಿ ತೋಡಿನಲ್ಲಿ ಬಿದ್ದುದನ್ನು ಕಂಡ ನಿಸ್ಸಾರ್ ಅಹಮದ್ ತೋಡಿಗೆ ಇಳಿದು ರಕ್ತ ಸೋರುತ್ತಿದ್ದ ಅವಳ ಕೈಗೆ ಸಿಗರೇಟಿನ ಹೊಗೆಸೊಪ್ಪು ಹಾಕಿ ತನ್ನ ಕರವಸ್ತ್ರದಿಂದ ಕಟ್ಟಿಬಿಡುತ್ತಾನೆ ಮತ್ತು ಅವಳ ಕೈಹಿಡಿದು ಮೆಲ್ಲನೆ ತೋಡಿನಿಂದ ಮೇಲಕ್ಕೆ ಹತ್ತಿಸಿಕೊಂಡು ಬರುತ್ತಾನೆ. ಬ್ಯಾಂಡೇಜ್ ಹಾಕಿದ ಕೈಯನ್ನು ನೀರಲ್ಲಿ ಒದ್ದೆ ಮಾಡಬಾರದೆಂದು ಹೇಳಿ ಮಾಯವಾಗಿ ಬಿಡುತ್ತಾನೆ. ಅಪರಿಚಿತ ವ್ಯಕ್ತಿ ನಿಸ್ಸಾರ್ ಅಹಮದ್ ತೋರಿದ ಈ ಪ್ರೀತಿ, ಸ್ನೇಹಗಳಿಗೆ ಮುಗ್ಧಹೃದಯದ ಕುಞ್ಞಿಪಾತುಮ್ಮ ಮನಸೋತು ಬಿಡುತ್ತಾಳೆ. ಅಂದಿನಿಂದಲೇ ಅವಳ ಅಂತರಂಗದ ಒಂದು ಮೂಲೆಯಲ್ಲಿ ನಿಸ್ಸಾರ್ ಅಹಮದನ ಬಗ್ಗೆ ಪ್ರೀತಿಯ ಕುಡಿ ಚಿಗುರ ತೊಡಗುತ್ತದೆ. ಯಕಶ್ಚಿತ್ ಗುಬ್ಬಿಯೊಂದರ ಪ್ರಾಣವನ್ನು ಉಳಿಸಲು ತನ್ನ ಪ್ರಾಣಭೀತಿಯನ್ನು ತೊರೆದು ತೋಡಿನಲ್ಲಿ ಬೀಳುವ ಕುಞ್ಞಿಪಾತುಮ್ಮನಂಥ ಕೋಮಲ ಮನಸ್ಸಿನ ಜೀವ ದಯಾಮಯಿಯನ್ನು ಮೊತ್ತಮೊದಲ ಬಾರಿಗೆ ಕಂಡ ನಿಸ್ಸಾರ್ ಅಹಮದ್‌ನಿಗೂ ಒಂದು ರೀತಿಯ ಒಲವು ಮೂಡುತ್ತದೆ ಇವಳ ಮೇಲೆ. ಹೀಗೆ ತನ್ನನ್ನು ಕಚ್ಚಿ ರಕ್ತ ಹೀರಿದ ಜಿಗಣೆಯನ್ನು ಸಾಯಿಸದೆ ಅದು ಬದುಕಲೆಂದು ಅದನ್ನು ಮೆತ್ತಗೆ ನೀರಲ್ಲಿ ಹಾಕಿದ್ದು, ಪ್ರಾಣಭೀತಿಯನ್ನು ತೊರೆದು ಗುಬ್ಬಿಯನ್ನು ರಕ್ಷಿಸಿದ್ದು. ಇವು ಕುಞ್ಞಿಪಾತುಮ್ಮ ಯಾವ ರೀತಿಯಾಗಿ ಜಗತ್ತಿನ ಜೀವಜಂತುಗಳ ಬಗ್ಗೆ ಅಪಾರವಾದ ಪ್ರೀತಿ ಕರುಣೆಗಳನ್ನು ಹೊಂದಿದ್ದಳೆಂಬುದನ್ನು ತೋರ್ಪಡಿಸುತ್ತದೆ.

ಮುಂದೆ ನಿಸ್ಸಾರ್ ಅಹಮದ್, ಕುಞ್ಞಿಪಾತುಮ್ಮನ ತಂದೆಯ ಒತ್ತಲಿನ ಪಕ್ಕದಲ್ಲೇ ಜಮೀನು ಮಾಡಿಕೊಂಡು ಅಲ್ಲೇ ವಾಸಿಸಲು ಬಂದನಂತರ ನಿಸ್ಸಾರ್ ಅಹಮದ್‌ನಲ್ಲಿ ಇಟ್ಟ ಕುಞ್ಞಿಪಾತುಮ್ಮನ ಪ್ರೀತಿ ಬೆಳೆಯುತ್ತಾ, ಗಾಢವಾಗುತ್ತಾ ಹೋಗುತ್ತದೆ. ನಿಸ್ಸಾರ್ ಅಹಮದನ ತಂದೆ ಆಧುನಿಕ ವಿದ್ಯಾಭ್ಯಾಸವನ್ನು ಓದಿ ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದರಿಂದ ಮನೆಯ ಎಲ್ಲ ಜನರೂ ಆಧುನಿಕ ರೀತಿಯ ವೇಷಭೂಷಣಗಳನ್ನು ತೊಡುತ್ತಿದ್ದರು; ಸಂಪ್ರದಾಯದ ಶುಷ್ಕ ಆಚರಣೆಗಳನ್ನು ತ್ಯಜಿಸಿ ಆಧುನಿಕ ಬದುಕಿಗೆ ಒಗ್ಗಿಕೊಂಡಿದ್ದರು. ಹೀಗಾಗಿ ಕುಞ್ಞಿಪಾತುಮ್ಮನ ತಾಯಿಗೆ ಇವರನ್ನು ಕಂಡರೆ ಆಗುತ್ತಿರಲಿಲ್ಲ. ಅವಳ ದೃಷ್ಟಿಯಲ್ಲಿ ಇವರು ಕಾಫರರೇ. ಆದರೆ ನಿಸ್ಸಾರ್ ಅಹಮದ್‌ನಂಥ ಸದಭಿರುಚಿಯ, ಸುಸಂಸ್ಕೃತ ವ್ಯಕ್ತಿಯ ಕೆಲವು ಆದರ್ಶಗಳು, ಮಾತು ಕಥೆಗಳು ಕುಞ್ಞಿಪಾತುಮ್ಮನನ್ನು ಸೆರೆಹಿಡಿದು ಬಿಟ್ಟಿದ್ದರಿಂದ ಅವನ ಮೇಲಿನ ಇವಳ ಪ್ರೀತಿ ದಿನ ದಿನಕ್ಕೆ ಅಧಿಕಗೊಳ್ಳುತ್ತಲೇ ಹೋಗುತ್ತದೆ. ಅವಳು ಅವನನ್ನು ತನ್ನ ಕಣ್ಣು ಮನಗಳಲ್ಲಿ ತುಂಬಿಕೊಂಡು ಬಿಡುತ್ತಾಳೆ. ಆದರೆ ಅವಳು ತಾನು ನಿಸ್ಸಾರ್ ಅಹಮದ್

ನನ್ನು ಪ್ರೀತಿಸುತ್ತಿರುವುದನ್ನು ಯಾರ ಮುಂದೆಯೂ ಹೇಳುವಂತಿಲ್ಲ. ಮುಸ್ಲಿಂ ಹೆಣ್ಣು ಮಾತ್ರವಲ್ಲ ಭಾರತೀಯ ಸಮಾಜದ ಯಾವ ಹೆಣ್ಣೂ ಮದುವೆಗಿಂತ ಮುಂಚೆ ಗಂಡಸನ್ನೂ ಪ್ರೀತಿಸುವುದು ದೊಡ್ಡ ಅಪರಾಧವಲ್ಲವೇ! ನಿಸ್ಸಾರ್ ಅಹಮದ್‌ನೆ, ತನ್ನನ್ನು ಕುಞಿಪಾತುಮ್ಮ ಪ್ರೀತಿಸುವುದನ್ನು ಅರಿತು ಅವಳಿಗೆ ಅಕ್ಷರ ಕಲಿಸಲು ತನ್ನ ಚೂಟಿ ತಂಗಿ ಆಯುಷಾಳಿಗೆ ಹೇಳುತ್ತಾನೆ. ಕುಞಿಪಾತುಮ್ಮನ ತಂದೆ–ತಾಯಿಗಳಿಗೆ ಗೊತ್ತಾಗದಂತೆಯೇ ಇವಳು ಅಕ್ಷರ ಕಲಿತು ಬಿಡುತ್ತಾಳೆ. ಕುಞಿಪಾತುಮ್ಮ ಅಕ್ಷರ ಕಲಿಯುವುದೂ ಧರ್ಮವಿರೋಧಿ ಎಂಬುದು ಇವಳ ತಂದೆ ತಾಯಿಗಳ ಅಭಿಮತ.

ಮುಂದೆ ಕುಞಿಪಾತುಮ್ಮನಿಗೆ ಗಂಡು ನೋಡಿ ಮದುವೆ ಮಾಡುತ್ತೇನೆಂದು ಅವಳ ತಂದೆ ಹೇಳಿದಾಗ, ಅದನ್ನು ಕೇಳಿಸಿಕೊಂಡೇ ಇವಳು ಸ್ಮೃತಿತಪ್ಪಿ ಬಿದ್ದು ಬಿಡುತ್ತಾಳೆ. ಅವಳಿಗೆ ತನ್ನ ಪ್ರಿಯತಮ ನಿಸ್ಸಾರ್ ಅಹಮದನನ್ನು ಬಿಟ್ಟರೆ ಬೇರೆ ಪ್ರಪಂಚವೇ ಇಲ್ಲ. ಅವನನ್ನು ಬಿಟ್ಟು ಅವಳಿಗೆ ಬದುಕಲು ಸಾಧ್ಯವಿಲ್ಲದಂಥ ಪ್ರೀತಿಯ ಉತ್ಕಟ ಮಟ್ಟಕ್ಕೆ, ಮಹೋನ್ನತ ಮಟ್ಟಕ್ಕೆ ತಲುಪಿಬಿಟ್ಟಿದ್ದಾಳೆ. ಅವನನ್ನು ಬಿಟ್ಟು ಬೇರೆ ಗಂಡನ್ನು ಅಪ್ಪ ಹುಡುಕುತ್ತಿರುವುದನ್ನು ಅವಳಿಗೆ ಸಹಿಸಲು ಸಾಧ್ಯವಾಗುವುದಿಲ್ಲ. ಅವಳಿಗೆ ಊಟವಿಲ್ಲ; ನಿದ್ರೆಯಿಲ್ಲ; ಆರೋಗ್ಯವಿಲ್ಲ. ಸೊರಗಿ, ಕೊರಗಿ, ಮಂಕಾಗಿ ಹೋಗಿದ್ದಾಳೆ. ಅವಳ ಈ ಸ್ಥಿತಿಯನ್ನು ಕಂಡ ಅವಳ ತಂದೆ ತಾಯಿಗಳು ಇವಳಿಗೆ ಸೈತಾನನ ಕಾಟವೆಂದು ಭ್ರಮಿಸಿ, ಸೈತಾನನನ್ನು ಓಡಿಸಲು ಮೌಲವಿಯನ್ನು ಕರೆತರುತ್ತಾರೆ. ಮೌಲವಿ ಸೈತಾನನನ್ನು ಓಡಿಸಲು ಬೆಂಕಿ ಹಾಕಿ ಮಂತ್ರ ಹೇಳಿ ಕುಞಿಪಾತುಮ್ಮನನ್ನು ಚೆನ್ನಾಗಿ ಥಳಿಸಿಬಿಡುತ್ತಾನೆ. ತನ್ನನ್ನು ಥಳಿಸಬಾರದೆಂದು ಕುಞಿಪಾತುಮ್ಮ ತನ್ನ ತಂದೆಯನ್ನೂ, ಮೌಲವಿಯನ್ನೂ ಬೇಡಿಕೊಂಡರೂ ಏನೂ ಪ್ರಯೋಜನ ಬೀಳುವುದಿಲ್ಲ. ಮೈಯಲ್ಲಿ ಸೇರಿಕೊಂಡಿರುವ ಸೈತಾನನನ್ನು ಓಡಿಸಲು ಚೆನ್ನಾಗಿ ಥಳಿಸದೆ ಇದ್ದರೆ ಆದೀತೆ! ಮೌಲವಿಯ ಅಂತಃಕರಣರಹಿತ ಬೆತ್ತದ ಏಟುಗಳಿಂದಾಗಿ ಪ್ರಜ್ಞೆ ತಪ್ಪಿಬಿದ್ದು, ಜೀವ ಹೋಗುವ ಸ್ಥಿತಿಗೆ ತಲುಪುತ್ತಾಳೆ. ಇಲ್ಲೆಲ್ಲ ನಾವು ಕುಞಿಪಾತುಮ್ಮನ ಉತ್ಕಟವಾದ ಪ್ರಚಂಡ ಪರಿಶುದ್ಧ ಪ್ರೇಮವನ್ನು ಕಾಣುತ್ತೇವೆ. ಇಲ್ಲಿ ಅವಳು ಪ್ರೇಮ ದೇವತೆಯಾಗಿ ಮೂಡಿಬಂದಿದ್ದಾಳೆ. ಕೊನೆಗೆ ಕುಞಿಪಾತುಮ್ಮನಿಗೆ ಹಿಡಿದಿರುವುದು ನಿಸ್ಸಾರ್ ಅಹಮದನ ಪ್ರೀತಿಯ ಭೂತವೆಂದರಿತು, ಅವರಿಬ್ಬರಿಗೂ ಮದುವೆ ಮಾಡುತ್ತಾರೆ. ಕುಞಿಪಾತುಮ್ಮ ಮದುವೆ ಆಗುವುದು ಸೀರೆ, ಬ್ಲೌಸ್, ಬಾಡಿಗಳನ್ನು ತೊಟ್ಟು; ತಲೆಬಾಚಿ ಹೂಮುಡಿದು; ಕಾಲಲ್ಲಿ ಚಪ್ಪಲಿ ಹಾಕಿಯೇ ಹೊರತು ಸಂಪ್ರದಾಯದ ವೇಷಭೂಷಣಗಳಲ್ಲಲ್ಲ. ಮದುವೆ ಯಾವ ಆಡಂಬರವೂ ಇಲ್ಲದೆ ಅತ್ಯಂತ ಸರಳವಾಗಿ ನಡೆದು ಬಿಡುತ್ತದೆ. ಇವರಿಬ್ಬರ ಈ ಮದುವೆ ಸಂಪ್ರದಾಯದ ಸಂಕೋಲೆಯನ್ನು ಮುರಿದ ಸರಳತೆಯನ್ನು ರೂಢಿಸಿಕೊಂಡ, ಪ್ರಗತಿಪಥದತ್ತ ಸಾಗಿದುದರ ಸಂಕೇತವಾಗಿದೆ.

ಕುಞಿಪಾತುಮ್ಮನ ತಾಯಿ ಕುಞಿತಾಚುಮ್ಮ, ಮಗಳ ಗುಣ ಸ್ವಭಾವಗಳಿಗೆ ತದ್ವಿರುದ್ಧವಾದವಳು. ತಾಯ್ತನದ ಮಮತೆ–ಪ್ರೀತಿಗಳಿಲ್ಲದ ಜೀವನ ಶ್ರದ್ಧೆ ಇಲ್ಲದ, ನಾಗರಿಕವಲ್ಲದ ಜಗಳಗಂಟಿ ಮಹಿಳೆ ಇವಳು. ತಾನು ಶ್ರೀಮಂತ ಆನೆಮುಕ್ಕಾರನ

ಮಗಳೆಂಬ ಅಹಂಕಾರ ಇವಳನ್ನೂ ನುಂಗಿನೊಣೆದಿದೆ. ಮಾತುಮಾತಿಗೂ ತಾನು ಆನೆಮಕ್ಕಾರನ ಮಗಳೆಂದೂ, ತನ್ನ ಮಗಳು ಆನೆಮಕ್ಕಾರನ ಮೊಮ್ಮಗಳೆಂದೂ ಹೇಳಿಕೊಂಡು ದರ್ಪವನ್ನು ಮೆರೆಯುತ್ತಾಳೆ. ಸಿರಿತನವಿದ್ದಾಗ ತನ್ನ ಮಗಳ ಕೆನ್ನೆಯ ಮೇಲಿನ ಕಪ್ಪು ಮಚ್ಚೆಯನ್ನು 'ಭಾಗ್ಯದ ಮಚ್ಚೆ' ಎಂದು ಬೀಗುತ್ತಿದ್ದ ಇವಳು ಸಿರಿತನ ಹೋಗಿ ಬಡತನ ಬಂದಾಗ ಅದನ್ನು 'ಕೇಡು ಮಚ್ಚೆ' ಎಂದೂ, 'ಭಾಗ್ಯದೋಷಿ ಮಚ್ಚೆ' ಎಂದೂ, ತನ್ನ ಮಗಳು ಭಾಗ್ಯದೋಷಿ' ಎಂದೂ ದೂಷಿಸುತ್ತಾಳೆ. ಈ ಮಗಳು ಹುಟ್ಟಿದ್ದಕ್ಕೆ ತಮಗೆ ಬಡತನ ಪ್ರಾಪ್ತವಾಯಿತೆಂದು ಕುಞಿಪಾತುಮ್ಮಳನ್ನು ಹಿಂಸಿಸುವ ಈ ಹೆಣ್ಣಿನಲ್ಲಿ ತಾಯ್ತನದ ಬೇರನ್ನೂ ಹುಡುಕಲು ಸಾಧ್ಯವಾಗುವುದಿಲ್ಲ. ಗಂಡನೊಂದಿಗಿನ ಇವಳ ಸಂಬಂಧವೂ ಆತ್ಮೀಯತೆಯಿಂದ ಕೂಡಿದ್ದಲ್ಲ. ಬಡತನ ಬಂದಾಗಿನಿಂದ ಗಂಡನನ್ನು ಸದಾ ಬಯ್ಯುತ್ತಲೇ ಹೋಗುತ್ತಾಳೆ. ಬಡತನದ ಬೇಗೆಯನ್ನು ನುಂಗಿಕೊಂಡು, ಇದ್ದುದರಲ್ಲೆ ಹೊಂದಿಕೊಂಡು ಪ್ರೀತಿ–ಸ್ನೇಹದಿಂದ ಬಾಳಬೇಕೆಂದು ಇವಳಿಗೆ ಅನಿಸುವುದೇ ಇಲ್ಲ. ಪ್ರತಿದಿನವೂ ಗಂಡನನ್ನು ಬಯ್ಯದಿದ್ದರೆ, ನಿಂದಿಸದಿದ್ದರೆ, ಅಡ್ಡಹೆಸರಿಟ್ಟು ಅವಮಾನಿಸದಿದ್ದರೆ, ಜಗಳ ಮಾಡದಿದ್ದರೆ ಇವಳಿಗೆ ತಿಂದ ಅನ್ನ ರಕ್ತವಾಗುವುದಿಲ್ಲ. ತನ್ನ ಈ ಜಗಳಗಂಟಿತನದ ಪ್ರವೃತ್ತಿಯಿಂದಾಗಿಯೇ ಒಂದು ಸಲ ಗಂಡನಿಂದ ಬಲವಾದ ಏಟು ತಿನ್ನುತ್ತಾಳೆ. ಇಡೀ ಕುಟುಂಬ ಬಡತನದ ಬವಣೆಯಲ್ಲಿ ಬಿದ್ದು ಬೇಯುತ್ತಿದ್ದರೂ ಇವಳಿಗೆ ಪ್ರತಿದಿನವೂ ಬಿಸಿನೀರಿನ ಸ್ನಾನ, ಒಳ್ಳೆಯ ಊಟ, ಮಡಿ ಬಟ್ಟೆಗಳೇ ಬೇಕು. ಸಂಸಾರದ ಸಮಸ್ಯೆಗಳನ್ನು ಕುರಿತು, ಮಗಳ ಭವಿಷ್ಯವನ್ನು ಕುರಿತು ಒಮ್ಮೆಯೂ ಇವಳು ಚಿಂತಿಸಿದವಳಲ್ಲ. ಅವಳಿಗೆ ಆ ಕುರಿತಂತೆ ಗಮನವೇ ಇಲ್ಲ. ಅಜ್ಜನ ಆನೆಯ ದಂತಿನ ಹಿಡಿಗಳುಳ್ಳ ಹಾವುಗೆಗಳನ್ನು ಯಾವಾಗಲೂ ಹಾಕಿಕೊಂಡು 'ಕ್ಟೋ! ಕ್ಟೋ!' ಎಂದು ಶಬ್ದ ಮಾಡುತ್ತ ದರ್ಪ ತೋರಿಸುವುದೇ ಇವಳ ಪರಮ ಕರ್ತವ್ಯವಾಗಿ ಬಿಟ್ಟಿದೆ.

ಕಾದಂಬರಿಯಲ್ಲಿ ಅಜ್ಜನ ಈ ಆನೆ ಶ್ರೀಮಂತಿಕೆಗೆ, ದರ್ಪಕ್ಕೆ, ಸಂಪ್ರದಾಯಕ್ಕೆ ಸಂಕೇತವಾಗಿ ನಿಂತುಕೊಂಡಿದೆ. ಕುಞಿತಾಚುಮ್ಮ ತನ್ನ ಮಗಳಿಗೆ ಎಚ್ಚರಿಕೆಯ ಮಾತಾಗಿ, ರಹಸ್ಯದ ವಿಷಯವಾಗಿ ಮತ್ತೆ ಮತ್ತೆ 'ನಿನ್ನಜ್ಜನಿಗೊಂದು ಆನೆಯಿತ್ತು' ಎಂದು ಹೇಳುವಲ್ಲಿ ಇದೇ ಅರ್ಥಗರ್ಭಿತವಾಗಿದೆ. ಕುಞಿತಾಚುಮ್ಮ ಆನೆಮಕ್ಕಾರನ ಮಗಳಾದ್ದರಿಂದ ಸಹಜವಾಗಿಯೆ ಅವಳಲ್ಲಿಯೂ ಆನೆಮಕ್ಕಾರನ ಶ್ರೀಮಂತಿಕೆಯ ದರ್ಪ ಜಂಬ ಮತ್ತು ಗೊಡ್ಡು ಸಂಪ್ರದಾಯಗಳು ತುಂಬಿಕೊಂಡಿವೆ. ಆಸ್ತಿಹೋಗಿ ಬಡತನ ಬಂದು, ಅವರು ಮೊದಲಿನ ವೈಭವಪೂರಿತ ದೊಡ್ಡಮನೆಯನ್ನು ಬಿಟ್ಟು, ಹಿತ್ತಲದ ಹುಲ್ಲು ಗುಡಿಸಲಿಗೆ ವಾಸಿಸಲು ಬರುವಾಗಲೂ ಅವಳು ಮರೆಯದೆ ಆನೆದಂತಿನ ಹಿಡಿಯುಳ್ಳ ಹಾವುಗೆಗಳನ್ನು ತೆಗೆದುಕೊಂಡು ಬರುತ್ತಾಳೆ. ಅವುಗಳನ್ನು ಗುಡಿಸಲಲ್ಲಿ ಹಾಕಿಕೊಂಡು ಶಬ್ದ ಮಾಡುತ್ತ ಒಣ ಜಂಬದಿಂದ ಬೀಗುತ್ತಾಳೆ; ಅಕ್ಕಪಕ್ಕದ ಜನರ ಮೇಲೆ ದರ್ಪ ತೋರಿಸುತ್ತಾಳೆ. ಅವಳು ಗುಡಿಸಲಿಗೆ ಬರುವಾಗಲೂ ಹಾವುಗೆಗಳನ್ನು ತಂದಿರುವುದು ಅವಳ ಸಂಪ್ರದಾಯ ನಿಷ್ಠತೆಯನ್ನು, ಜಂಬ, ದರ್ಪಗಳನ್ನು ಸಂಕೇತಿಸುತ್ತದೆ. ಅಂದರೆ ಸಿರಿತನ ಹೋದರೂ ಸಿರಿತನದ ವಾಸನೆಯಿಂದ, ಜಂಬ ಅಹಂಕಾರಗಳಿಂದ, ಸಂಪ್ರದಾಯ ನಿಷ್ಠತೆಯಿಂದ ಅವಳು ಮುಕ್ತಳಾಗಿಲ್ಲವೆಂದು ಅರ್ಥ. ಆದರೆ

ಕೊನೆಗೆ, ಮಗಳು ಕುಞಿಪಾತುಮ್ಮ ವಿಚಾರವಂತನಾದ ಸಂಪ್ರದಾಯ ವಿರೋಧಿಯಾದ ನಿಸ್ಸಾರ ಅಹಮ್ಮದನನ್ನು ಯಾವ ಆಡಂಬರವೂ ಇಲ್ಲದೆ ಸರಳ ರೀತಿಯಲ್ಲಿ ಮದುವೆ ಆದಾಗ ಅವಳ ದರ್ಪ, ಅಹಂಕಾರಗಳಿಗೆ, ಸಂಪ್ರದಾಯ ನಿಷ್ಠತೆಗೆ ಬಲವಾದ ಏಟು ಬೀಳುತ್ತದೆ. ಕಾದಂಬರಿಯ ಕೊನೆಯಲ್ಲಿ ಮಕ್ಕಳು ಕುಞಿತಾಚುಮ್ಮನಿಗೆ ಹೇಳುವ 'ಆನೆಮುಕ್ಕ್ರಾರನ ಆ ದೊಡ್ಡ ಆನೆ (ಧೂಳಿನಲ್ಲಿ ಬಿದ್ದುಕೊಂಡಿರುವ ತಿಗಣೆಯಂಥ) ಸಣ್ಣಕುಯ್ಯಾನೆ ಆಗಿತ್ತು'ಎಂದು ಹೇಳುವ ಮಾತುಗಳು ಧ್ವನಿಪೂರ್ಣವಾಗಿದ್ದು, ಮೇಲಿನ ಅರ್ಥವನ್ನೇ ಸ್ಥಿರಿಸುತ್ತವೆ.

ಕೃತ್ರಿಮ ಬದುಕಿನಿಂದ ದೂರವಾದ ನಿಸ್ಸಾರ ಅಹಮದ್, ಸದಭಿರುಚಿಯ ಸುಸಂಸ್ಕೃತ ತರುಣ. ಪಟ್ಟಣವನ್ನು ತೊರೆದು ಹಳ್ಳಿಗೆ ಬಂದ ಈತ ನಿಸರ್ಗದ ಮಡಿಲಲ್ಲಿ ಬಾಳಿ, ಬದುಕನ್ನು ಹಸನು ಮಾಡಿಕೊಳ್ಳಲು ಹವಣಿಸುವಂಥವನು. ಅಪ್ಪಟ ಪ್ರೀತಿಯ, ಕೋಮಲ ಹೃದಯದ, ಸುಸಂಸ್ಕೃತ ಹೆಣ್ಣನ್ನು ಜೀವನ ಸಂಗಾತಿಯಾಗಿ ಬಯಸುವ ಈತ ದುಡಿಮೆಯಲ್ಲಿ ಬದುಕಿನ ಸಾರ್ಥಕತೆಯನ್ನು ಕಂಡವನು; ಕಾಯಕವೇ ಕೈಲಾಸವೆಂಬ ದಾರ್ಶನಿಕ ವ್ಯಕ್ತಿತ್ವದವನು. ಅಪ್ಪಟ ವಿಚಾರವಾದಿಯಾದ ಈತ ವೈಚಾರಿಕತೆಯನ್ನು ಸ್ವಂತ ಜೀವನದಲ್ಲಿ ಅಳವಡಿಸಿಕೊಂಡ ಸಂತರ ಸಾಲಿಗೆ ಸೇರಿದವನು. ಪ್ರಗತಿಶೀಲನಾದ ಈತ ಮೃದು ಸ್ವಭಾವದವಳಾದ, ಸುಸಂಸ್ಕೃತಳಾದ ಮಹಾಪ್ರೇಮಿ ಕುಞಿಪಾತುಮ್ಮನನ್ನು ಮದುವೆ ಆಗುವುದು ಕಾದಂಬರಿಯ ಮಹತ್ವವನ್ನು ಹೆಚ್ಚಿಸಿದೆ; ಬದುಕಿನ ಅರ್ಥವನ್ನು ಹಿಗ್ಗಲಿಸಿದೆ; ಬಷೀರರ ಧೀಮಂತಿಕೆಯನ್ನು ಎತ್ತಿ ಹಿಡಿದಿದೆ.

ಬಷೀರರ ಕೈಯಲ್ಲಿ ಈ ಕಾದಂಬರಿ, ಕಾದಂಬರಿಯಾಗಿ ರೂಪುಗೊಳ್ಳದೆ ಕಾವ್ಯವಾಗಿ ಮಾರ್ಪಟ್ಟಿದೆ. ಎಲ್ಲೂ ಬೇಸರಕ್ಕೆ ಆಸ್ಪದ ನೀಡದ ಈ ಕೃತಿ ಓದುಗರಿಗೆ ಕಾವ್ಯದ ಅನುಭವವನ್ನು ನೀಡಿ, ಮನಸ್ಸನ್ನು ರಂಜಿಸಿ, ಹೊಸ ಅನುಭವಗಳ ದಿಗಂತವನ್ನು ತೆರೆದು ತೋರಿಸಿ, ಉದಾತ್ತತೆಯತ್ತ ಕೊಂಡೊಯ್ಯುತ್ತದೆ. ಇಲ್ಲಿನ ಪಾತ್ರಗಳು ಕಾದಂಬರಿಕಾರನ ಇಚ್ಛೆಗನುಸಾರವಾಗಿ ವರ್ತಿಸದೆ, ಸ್ವತಂತ್ರವಾಗಿ, ಹಂತಹಂತವಾಗಿ ಬೆಳೆದು ನಿಲ್ಲುತ್ತವೆ. ಕಾದಂಬರಿಕಾರರ ಈ ನಿರ್ಲಿಪ್ತ ಬರವಣಿಗೆಯಿಂದಾಗಿ, ಪ್ರಗತಿಶೀಲತೆಯಿಂದಾಗಿ ಕಾದಂಬರಿಯ ಸತ್ವ ಮತ್ತು ಮಹತ್ವಗಳು ಅಧಿಕಗೊಂಡಿವೆ. ಭಾಷಾ ಬಳಕೆ ಕಾದಂಬರಿಯ ಉದ್ದಕ್ಕೂ ಸಾಂಕೇತಿಕವೂ, ಧ್ವನಿಪೂರ್ಣವೂ ಆಗಿದ್ದು ಕಾದಂಬರಿಯ ಅರ್ಥಪುಷ್ಟಿಯನ್ನು, ಧ್ವನಿ ಮಹತ್ವವನ್ನು ಹೆಚ್ಚಿಸಿದೆ. ಮುಖ್ಯಪಾತ್ರವೊಂದರ ಸ್ಮರಣೆಯ ಮೂಲಕ ಕಾದಂಬರಿಯ ಜೀವನ ಬಿಚ್ಚಿಕೊಳ್ಳುವಂಥ ನವೀನ ತಂತ್ರದಿಂದಾಗಿ, ಮೇಲೆ ತಿಳಿಸಿದ ಮಿಕ್ಕ ಕಾರಣಗಳಿಂದಾಗಿ ಕಾದಂಬರಿ ಒಂದು ಅತ್ಯುತ್ತಮ ಕಲಾಕೃತಿಯಾಗಿ ನಿಂತುಕೊಂಡಿದೆ.

ತಾಯಿ

ವೈಕಂ ಮುಹಮದ್ ಬಷೀರ್

ದೂರದ ನಗರವೊಂದರ ಸಂಕಷ್ಟಗಳ ನಡುವೆ ತನ್ನ ಅನ್ನ ಸಂಪಾದಿಸಿಕೊಳ್ಳುತ್ತಿರುವ ಮಗನಿಗೆ ತಾಯಿ ಬರೆಯುತ್ತಾಳೆ. ಹೃದಯದಲ್ಲಿ ನೋವು ತುಂಬಿಕೊಂಡು ಅವಳು ಬರೆಯುತ್ತಾಳೆ.

"ಮಗು, ನಾನು ನಿನ್ನನ್ನು ನೋಡಬಯಸುತ್ತೇನೆ, ಅಷ್ಟೆ."

ಅಷ್ಟೆ ಅಲ್ಲ. ವ್ಯಾಕರಣವಿಲ್ಲದ ವಾಕ್ಯಗಳಲ್ಲಿ ಒಟ್ಟಿಗೆ ಕೋದ ಮತ್ತು ಗೀಚಿದ ಇನ್ನೂ ಅನೇಕ ಮಾತುಗಳು. ಆದರೂ ಅವಳ ಹೃದಯದ ನೋವು ಸಂದೇಹಾತೀತವಾಗಿ ಸ್ಪಷ್ಟ. ಅವರು ಪರಸ್ಪರ ನೋಡಿ ಬಹಳ ಕಾಲವಾಗಿದೆ.

ತಾಯಿ ತನ್ನನ್ನು ಪ್ರತಿನಿತ್ಯ ನಿರೀಕ್ಷಿಸುತ್ತಿದ್ದಾಳೆಂಬುದು ಮಗನಿಗೆ ಗೊತ್ತು. ಆದರೆ ಅವನೇನು ಮಾಡಬಲ್ಲ? ಪ್ರಯಾಣ ಮಾಡಲು ಅವನಲ್ಲಿ ಹಣವಿಲ್ಲ. ಪ್ರತಿಯೊಂದು ದಿನದ ಬದುಕೂ ಒಂದು ಸಮಸ್ಯೆ. "ನಾನು ನಾಳೆ ಹೇಗಾದರೂ ಹೊರಡಬೇಕು; ಹೋಗಿ, ತಾಯನ್ನು ಕಾಣಬೇಕು"—ಹೀಗೆ ಅವನು ತನ್ನನ್ನು ತಾನು ಸಮಾಧಾನಗೊಳಿಸುತ್ತಾನೆ. ಆದರೆ ದಿವಸಗಳು ವಾರಗಳಾಗುತ್ತವೆ, ವಾರಗಳು ತಿಂಗಳುಗಳಾಗುತ್ತವೆ ಮತ್ತು ತಿಂಗಳುಗಳು ವರ್ಷಗಳಾಗಿ ಪರಿಣಮಿಸುತ್ತವೆ.

ತಾಯಿ ಪ್ರತಿನಿತ್ಯ ಮಗನಿಗಾಗಿ ಕಾಯುತ್ತಾಳೆ.

ನಾನಿದನ್ನು ನನ್ನ ತಾಯ ಬಗ್ಗೆ ಹೇಳುತ್ತಿದ್ದೇನೆ. ಇನ್ನು ಮುಂದೆ ನಾನು ಹೇಳಬಯಸುವುದೆಲ್ಲ ನನ್ನ ತಾಯನ್ನು ಕುರಿತದ್ದು. ನಾವು ಬದುಕುತ್ತಿರುವ ಈ ಭಾರತದಲ್ಲಿ ಪ್ರತಿಯೊಬ್ಬ ಮಗನಿಗೂ ಅವನ ಸ್ವಂತ ತಾಯ ಬಗ್ಗೆ ಹೇಳಲು ಇಂತಹ ಸಂಗತಿಗಳಿರುತ್ತವೆ. ನಾನು ಸ್ವಾತಂತ್ರ್ಯ ಹೋರಾಟವನ್ನು ಕುರಿತು ಮಾತನಾಡಲು ಹೊರಟಿದ್ದೇನೆ. ಅದಕ್ಕೂ ನನ್ನ ತಾಯಿಗೂ ನೇರ ಸಂಬಂಧವಿಲ್ಲ, ನಾನು ನನ್ನ ತಾಯ ಮಗ ಎಂಬುದರ ವಿನಾ. ನನ್ನಂಥ ಮಕ್ಕಳಿಗೆ ಜನ್ಮವಿತ್ತಿರುವ

ತಾಯಂದಿರು ಭಾರತದಲ್ಲೆಲ್ಲ ಇದ್ದಾರೆ. ತಾಯ್ನಾಡಿನ ಸ್ವಾತಂತ್ರ್ಯ ಸಮರದಲ್ಲಿ ತಮ್ಮ ಮಕ್ಕಳು ಸೆರೆಮನೆಯಲ್ಲಿ ಬಂಧಿತರಾದಾಗ ಅವರೇನು ಮಾಡಿದರು? ಭಾರತದ ತರುಣ ತರುಣಿಯರು ಹಿಂಸೆಗೀಡಾದರು, ಥಳಿಸಲ್ಪಟ್ಟರು, ಮತ್ತು ವಿದೇಶೀ ಸರ್ಕಾರದ ಸೇವಕರಿಂದ ಮೂಳೆ ಮುರಿಸಿಕೊಂಡರು. ಅವರನ್ನು ಸೆರೆಮನೆಗಳಲ್ಲಿ ಕೂಡಿಹಾಕಲಾಯಿತು. ಹೊರಗೆ ಸಾವಿರಾರು ಮನೆಗಳಲ್ಲಿನ್ನ ಅವರ ತಾಯಂದಿರು ಏನು ಮಾಡಿದರು? ನಾನು ಖಚಿತವಾಗಿ ಹೇಳಲಾರೆ. ಆದರೆ ನನ್ನ ತಾಯಿ ಏನು ಮಾಡಿದಳೆಂಬುದನ್ನು ನಾನು ಚೆನ್ನಾಗಿ ಬಲ್ಲೆ.

ಯಾವುದೇ ಪ್ರೇರಣೆಯಿಲ್ಲದೆ ಏನು ನಡೆಯಿತೆಂಬುದನ್ನು ನಾನು ಗುರುತು ಹಾಕುತ್ತಿದ್ದೇನೆ. ನನ್ನ ತಾಯ ಪತ್ರವನ್ನೋದುವಾಗ, ಕೆಲವು ಹಳೆಯ ನೆನಪುಗಳು ನನಗೆ ಮರಳುತ್ತವೆ: ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಲು ನಾನು ಸೈಕಂನಿಂದ ಕಲ್ಲಿಕೋಟೆಗೆ ಹೇಗೆ ಹೋದೆನೆಂಬುದರ ಕತೆ.

ಆ ಘಟನೆಯನ್ನು ದಾಖಲಿಸುವುದಕ್ಕೆ ಮುನ್ನ ಇನ್ನೇನನ್ನೋ ನಾನು ಹೇಳಬೇಕು. ನಾನಿದನ್ನು ೧೯೩೭ರಲ್ಲಿ ಬರೆಯುತ್ತಿದ್ದೇನೆ ಅಥವಾ ಭಾರತ ಇನ್ನೂ ಸ್ವತಂತ್ರವಾಗಿಲ್ಲ ಎಂದು ನಾನು ಹೇಳುವಾಗ, ರಹಸ್ಯವೊಂದನ್ನು ನಾನು ಬಯಲು ಮಾಡುತ್ತಿಲ್ಲ. ಆದರೂ ನಾನು ಏಟು ತಿಂದೆ ಮತ್ತು ಗಾಂಧೀಜಿಯಿಂದಾಗಿ ಹಿಂಸೆಗೊಳಗಾದೆ ಎಂಬ ರಹಸ್ಯವನ್ನು ನಾನು ಹೊರಗೆಡಹಬೇಕು. ಅಂತೂ, ನನ್ನ ತಾಯಿ ನನಗೆ ಜನ್ಮ ಕೊಡದಿದ್ದರೆ ಇದೊಂದೂ ಘಟಿಸುತ್ತಿರಲಿಲ್ಲ. ನನ್ನಿಂದಾಗಿ ನನ್ನ ತಾಯಿ ಯಾವುದೇ ಮಾನಸಿಕ ಯಾತನೆಯನ್ನು ಅನುಭವಿಸುತ್ತಿರಲಿಲ್ಲ. ದಾಸ್ಯ, ದಾರಿದ್ರ್ಯ ಮತ್ತು ಅಗಣಿತ ದುಃಖದ ಈ ನಾಡಿಗೆ ನನ್ನ ತಾಯಿ ನನ್ನನ್ನೇಕೆ ತಂದಳು? ಪ್ರಾಯಶಃ ಈ ಪ್ರಶ್ನೆಯನ್ನು ಭಾರತದಲ್ಲಿ ಎಲ್ಲ ತಾಯಂದಿರ ವಿಷಯದಲ್ಲೂ ಅವರ ಪುತ್ರ, ಪುತ್ರಿಯರು ಕೇಳುತ್ತಿದ್ದಾರೆ. ಇಲ್ಲವಾದರೆ ಈ ಪ್ರಶ್ನೆ ಗಂಡುಹೆಣ್ಣುಗಳ ಮನಸ್ಸುಗಳಲ್ಲಿ ಅವ್ಯಕ್ತವಾಗಿ ಉಳಿದಿರಬೇಕು. ಭಾರತ ಏಕಿಷ್ಟು ದರಿದ್ರವಾಗಿದೆ? "ನಾನೊಬ್ಬ ಭಾರತೀಯ" ಎಂದು ನಾನು ಹೆಮ್ಮೆಯಿಂದ ಹೇಳಲಾರೆ. ನಾನೊಬ್ಬ ಗುಲಾಮ ಮಾತ್ರ. ಭಾರತವೆಂಬ ಗುಲಾಮದೇಶದ ಬಗ್ಗೆ ನಾನು ಅಸಹ್ಯ ಪಡುತ್ತೇನೆ....ಆದರೆ ಭಾರತವೂ ನನ್ನ ತಾಯಲ್ಲವೆ? ನನಗೆ ಜನ್ಮವಿತ್ತ ತಾಯಿ ನನ್ನ ಬಗ್ಗೆ ನಿರೀಕ್ಷೆಗಳನ್ನಿಟ್ಟುಕೊಂಡಿರುವಂತೆಯೇ, ಭಾರತವೂ ನನ್ನಿಂದ ಏನನ್ನಾದರೂ ನಿರೀಕ್ಷಿಸುವುದಿಲ್ಲವೆ? ನನ್ನ ತಾಯಿ ನನ್ನ ಜೀವಂತ ಶರೀರವನ್ನು ನೋಡಲು ನಿರೀಕ್ಷಿಸುವಂತೆ, ಭಾರತದ ನೆಲ ನನ್ನ ಮೃತಶರೀರವನ್ನು ಸ್ವೀಕರಿಸಲು ನಿರೀಕ್ಷಿಸುತ್ತದೆ.

ನಿರೀಕ್ಷೆಗಳು!

ನನಗೆ ನೆನಪಾಗುತ್ತದೆ:

ನನ್ನ ತಾಯಿ ನನಗೆ ಜನ್ಮ ಕೊಟ್ಟಳು. ನನ್ನನ್ನವಳು ಮೊಲೆಯೂಡಿಸಿ ಸಾಕಿದಳು. ನನ್ನನ್ನೊಬ್ಬ ಮನುಷ್ಯನನ್ನಾಗಿ ಮಾಡಿದಳು. ನನ್ನನ್ನು ಬಯಸಿ ಹೆತ್ತುದಾಗಿ ನನ್ನ ತಾಯಿ ಹೇಳುತ್ತಾಳೆ! "ಅಕ್ಕರೆಯ ನಿರೀಕ್ಷೆ ಮತ್ತು ಹಂಬಲದ ತರುವಾಯ ನೀನು ಹುಟ್ಟಿದೆ." ಪ್ರತಿಯೊಬ್ಬಳು ತಾಯೂ ಇದನ್ನು ತನ್ನ ಸಂತಾನಕ್ಕೆ ಹೇಳುತ್ತಾಳೆ. ನನ್ನ

ಯನ್ನು ತುಂಬುವ ಭಾವನೆಗಳನ್ನು ನಾನಿಲ್ಲಿ ದಾಖಲಿಸುವುದಿಲ್ಲ. ನನ್ನ ಕೈಯನ್ನು ಹಿಡಿದುವ ಕೋಳಗಳನ್ನೆಂತೋ ಅಂತೆ ನನ್ನ ಮುಂದೆ ಪೋಲೀಸ್ ಲಾಕಪ್ಪುಗಳನ್ನು, ಗ್ರಹಗಳನ್ನು, ಗಲ್ಲುಗಂಬಗಳನ್ನು, ಅವುಗಳ ಮುಂದೆ ಪೋಲೀಸರನ್ನು, ಸೈನಿಕರನ್ನು, ಅಧಿಕಾರಿಗಳನ್ನು ಕಾಣುತ್ತಿದ್ದೇನೆ!

"ಭಾರತ, ಮನಸ್ಸು ದೇಹಗಳನ್ನು ಬಂಧಿಸುವ ಎತ್ತರದ ಗೋಡೆಗಳನ್ನುಳ್ಳ ಲ ಸೆರೆಮನೆ!" ಗಾಂಧೀಜಿ ಇದನ್ನು ಹೇಳಿದರು. ಯಾವಾಗ ಎಂಬುದು ನನಗೆ ದು. ಗಾಂಧೀಜಿಯಿಂದಾಗಿ ನಾನು ಪೆಟ್ಟು ತಿಂದದ್ದು ಚೆನ್ನಾಗಿ ನೆನಪಿದೆ. ಟೇಶ್ವರ ಅಯ್ಯರ್ ಎಂಬ ಬ್ರಾಹ್ಮಣ ನನಗೆ ಹೊಡೆದರು. ಅವರು ವೈಕಂ ಇಂಗ್ಲಿಷ್ ಹಶಾಲೆಯ ಮುಖ್ಯೋಪಾಧ್ಯಾಯರು. ಚಿತ್ರದ ಏಳು ಚುರುಕಾದ ಏಟುಗಳು. ವೈಕಂ ಸತ್ಯಾಗ್ರಹದ ದಿನಗಳಲ್ಲಿ.

ನಗರದಲ್ಲಿ ಬಹಳ ಉದ್ರೇಕ ಮತ್ತು ಪ್ರಕ್ಷುಬ್ಧತೆಯಿತ್ತು; ಏಕೆಂದರೆ ಗಾಂಧೀಜಿ ನವರಾಗಿದ್ದರು.

ನಾಲೆಯ ದಂಡೆಯಲ್ಲಿ ಮತ್ತು ದೋಣಿಕಟ್ಟೆಯಲ್ಲಿ ದೊಡ್ಡ ಜನಸಮೂಹ ತ್ತು. ನಾನು ಇತರ ವಿದ್ಯಾರ್ಥಿಗಳೊಡನೆ ಗುಂಪನ್ನು ತಳ್ಳಿಕೊಂಡು, ಮುಂಚೂಣಿ ನ್ನು ತಲುಪಿದೆ. ಸ್ವಲ್ಪ ದೂರದಲ್ಲಿ ದೋಣಿಯಲ್ಲಿದ್ದ ಗಾಂಧೀಜಿಯನ್ನು ನೋಡಿದೆವು. ಮುದ್ರದಿಂದೆಂಬಂತೆ ಸಾವಿರ ಕಂಠಗಳಿಂದ ಗರ್ಜನೆಯೆದ್ದಿತು. ಅದು ವಿದೇಶೀ ಆಳ್ವಿಕೆಗೆ ಲಿನಂತೆ ಎದ್ದಿತು: "ಮಹಾತ್ಮಾ....ಗಾಂಧಿ....ಕಿ....ಜೈ!"

ಅರೆನಗ್ನ ಫಕೀರ ಕೈಮುಗಿದುಕೊಂಡು ಕಟ್ಟೆಯಲ್ಲಿಳಿದಂತೆ, ಎರಡು ಹಲ್ಲುಗಳಿಲ್ಲದ ಡು ತೆರೆದು, ಮುಗುಳ್ನಕ್ಕ. ಸುತ್ತ ಕೋಲಾಹಲವಾಯಿತು. ತೆರೆದ ಕಾರಿನಲ್ಲಿ ಅವರು ತರು. ಕಾರು ಜನಜಂಗುಳಿಯ ಮೂಲಕ ನಿಧಾನವಾಗಿ ಮುಂಬರಿದು ಸತ್ಯಾಗ್ರಹ ಮದತ್ತ ಸಾಗಿತು. ಹಲವರು ವಿದ್ಯಾರ್ಥಿಗಳು ಕಾರಿನ ಪಕ್ಕಕ್ಕೆ ಜೋತುಬಿದ್ದರು. ೂ ಅವರಲ್ಲೊಬ್ಬ. ಆ ಎಲ್ಲ ಗೊಂದಲದಲ್ಲೂ ನನಗೊಂದು ಆಸೆಯಿತ್ತು! ಲೋಕ ಮನಾದ ಮಹಾತ್ಮನನ್ನು ಮುಟ್ಟುವುದು! ಅವನನ್ನು ಮುಟ್ಟದಿದ್ದರೆ ನಾನು ಸತ್ತು ವೆನೆನ್ನಿಸಿತು. ಅಲ್ಲಿದ್ದ ನೂರಾರು ಸಾವಿರಾರು ಜನರಲ್ಲಿ ಯಾರಾದರೂ ನನ್ನನ್ನು ದು ನೀಳ್ವೆ ನೋಡಿದರೆ? ನಾನು ಹೆದರಿ, ಕಾತರದಿಂದಿದ್ದೆ. ಎಲ್ಲವನ್ನೂ ಅಲಕ್ಷಿಸಿ ಧೀಜಿಯ ಎಡ ಭುಜವನ್ನು ಹಗುರವಾಗಿ ಸ್ಪರ್ಶಿಸಿದೆ!

ಯಾರಿಗೂ ಅದು ಗೊತ್ತಾಗಲಿಲ್ಲ!

ಅಂದು ಸಂಜೆ ನಾನು ಮನೆಗೆ ಹೋದಾಗ, ಹೆಮ್ಮೆಯಿಂದ ನನ್ನ ತಾಯಿಗೆ ಳಿದೆ: "ಅಮ್ಮ, ನಾನು ಗಾಂಧಿಯನ್ನು ಮುಟ್ಟಿದೆ."

ಗಾಂಧಿ ಎಂಬ ಈ ವಸ್ತುವಿನ ಸ್ವರೂಪದ ಕಲ್ಪನೆಯಿಲ್ಲದಿದ್ದ ನನ್ನ ತಾಯಿ ಂಕೆ, ಗಾಬರಿಗಳಿಂದ ತತ್ತರಿಸಿದಳು. "ಓಹ್....ನನ್ನ ಮಗು....!" ಎಂದಳು ತಾಯಿ, ತ್ತ ಬಾಯಿಬಿಟ್ಟುಕೊಂಡು ನೋಡುತ್ತ.

ನನಗೆ ನೆನಪಾಗುತ್ತದೆ:

ನಮ್ಮ ಮುಖ್ಯೋಪಾಧ್ಯಾಯರು ಸತ್ಯಾಗ್ರಹಕ್ಕೆ ವಿರುದ್ಧವಾಗಿದ್ದರು; ಗಾಂಧಿಗೆ

ಕೂಡ. ಆದ್ದರಿಂದ ಅವರು, ಮನೆಯಲ್ಲಿ ನೂತ ಒರಟು ಖಾದಿ ಧರಿಸದಂತೆ ವಿದ್ಯಾರ್ಥಿಗಳನ್ನು ನಿಷೇಧಿಸಿದರು. ಅವರು ಆಶ್ರಮಕ್ಕೆ ಹೋಗಕೂಡದೆಂದು ಅಪ್ಪಣೆ ಮಾಡಿದರು.

ಆ ದಿನಗಳಲ್ಲಿ ನಾನು ಖಾದಿ ಹಾಕುತ್ತಿದ್ದೆ; ಆಶ್ರಮಕ್ಕೆ ಹೋಗುತ್ತಿದ್ದೆ. ಒಂದು ದಿವಸ, ನಾನು ತರಗತಿಯನ್ನು ಪ್ರವೇಶಿಸಿದಾಗ ಮುಖ್ಯೋಪಾಧ್ಯಾಯರು ನನ್ನನ್ನು ಕರೆದರು. ಕ್ರೂರ ನಗೆಯೊಡನೆ ಹೇಳಿದರು : "ಓ! ಅವನ ಬಟ್ಟೆಗಳನ್ನು ನೋಡಿ!"

ಅವರು ಏನನ್ನೂ ಹೇಳಲಿಲ್ಲ. ಮತ್ತೆ ನನ್ನನ್ನು ಕೇಳಿದರು, "ಪೋಕರಿ, ನಿನ್ನ ತಂದೆ ಎಂದಾದರೂ ಇದನ್ನು ಹಾಕಿದ್ದರಾ?"

ನಾನು ಹೇಳಿದೆ: "ಇಲ್ಲ"

ಒಂದು ದಿವಸ, ಗಂಟೆ ಬಾರಿಸಿದ ಮೇಲೆ ಸುಮಾರು ಮೂರು ನಿಮಿಷದಷ್ಟು ತಡವಾಗಿ ನಾನು ತರಗತಿಗೆ ಹೋದೆ. ಅವರು ಬೆತ್ತಸಹಿತ ವರಾಂಡದಲ್ಲಿ ನಿಂತಿದ್ದರು. ನಾನೇಕೆ ತಡಮಾಡಿದೆ ಎಂದು ಅವರು ಕೇಳಿದಾಗ, ಆಶ್ರಮಕ್ಕೆ ಹೋಗಿದ್ದೆನೆಂದು ಉತ್ತರಿಸಿದೆ.

"ಅಲ್ಲಿ ನಿನಗೆ ಯಾರಿದ್ದಾರೆ?" ಅವರು ನೇರವಾಗಿ ನಿಂತು, ಬೆತ್ತದಿಂದ ನನ್ನ ಅಂಗೈಗೆ ಆರು ಪೆಟ್ಟು ಕೊಟ್ಟರು.

"ಮತ್ತೆ ಅಲ್ಲಿಗೆ ಹೋಗಬೇಡ! ಅರ್ಥವಾಯಿತೆ, ಪೋಲಿ?" ಅವರು ನನ್ನ ಬೆನ್ನಿಗೆ ಮತ್ತೊಂದು ಪೆಟ್ಟು ಹಾಕಿದರು.

ಆದರೆ ನಾನು ಮತ್ತೆ ಹೋದೆ.

ನನಗೆ ನೆನಪಾಗುತ್ತದೆ:

ಆ ದಿನಗಳಲ್ಲಿ ನನಗೆ ಒಂದು ಖಾದಿ ಅಂಗಿ ಮತ್ತು ಒಂದು ಖಾದಿ ಧೋತಿ ಇದ್ದುವು. ಒಂದು ಅಂಗಿ, ಧೋತಿ ಅಷ್ಟೆ. ಆಗ ಖಾದಿ ಪ್ರತಿಭಟನೆಯ ಸಂಕೇತವಾಗಿತ್ತು. ವಿದೇಶೀ ವಸ್ತ್ರಗಳನ್ನು ಧರಿಸುವುದಿಲ್ಲವೆಂದು ನಾನು ಪ್ರತಿಜ್ಞೆ ಮಾಡಿದೆ. ನಾನು ಸತ್ತರೆ ನನ್ನನ್ನು ಖಾದಿ ಬಟ್ಟೆಯಲ್ಲಿ ಸುತ್ತಿ ಸಮಾಧಿ ಮಾಡಬೇಕೆಂದು ಹೇಳುತ್ತಿದ್ದೆ.

ತಾಯಿ ಕೇಳುತ್ತಿದ್ದಳು : "ತುರಿಕೆ ಬರಿಸುವ ಈ ಒರಟು ಬಟ್ಟೆ ನಿನಗೆಲ್ಲಿ ಸಿಕ್ಕಿತು?" ಖಾದಿ ಚರ್ಮಕ್ಕೆ ತುರಿಕೆ ಉಂಟುಮಾಡುತ್ತದೆ ಎಂದು ಅವಳು ನಂಬಿದ್ದಳು!

ನಾನು ಹೇಳುತ್ತಿದ್ದೆ: "ಈ ಬಟ್ಟೆ ನಮ್ಮ ಸ್ವಂತ ನಾಡಿನಲ್ಲಿ, ಭಾರತದಲ್ಲಿ ತಯಾರಿಸಿದ್ದು."

ಹಾಗೆಯೆ—ಗಾಂಧೀಜಿ, ಅಲಿ ಸೋದರರು, ಸ್ವ-ರಾಜ್ಯ, ಬ್ರಿಟಿಷ್ ಪ್ರಭುತ್ವ—ಇವು ಸಂಭಾಷಣೆಯ ವಿಷಯಗಳಾಗಿದ್ದುವು. ನಮ್ಮೂರಿನ ವೃದ್ಧನಿಗೆ ಇಬ್ಬರು ಮಾತ್ರ ಯುವಕ ಪುತ್ರರಿದ್ದರು; ಅವರಿಗೆ ಪ್ರಶ್ನೆ ಹಾಕಿ, ಇಂಗ್ಲೆಂಡ್ ಅಥವಾ ಚೀಣದ ಬಗ್ಗೆ ಸಂದೇಹಗಳನ್ನು ಜನ ಪರಿಹರಿಸಿಕೊಳ್ಳಬಹುದಿತ್ತು. ಒಬ್ಬ ವಿ.ಕೆ.ಆರ್. ನಾರಾಯಣನ್; ಬಳಲಿಕೆಯರಿಯದ ಈ ತರುಣ ಬಹುಪಾಲು ವೃತ್ತಪತ್ರಿಕೆಗಳ ವರದಿಗಾರನಾಗಿದ್ದ. ಯಾರಾದರೂ ಯಾವುದೇ ವಿಷಯದ ಬಗ್ಗೆ ನನ್ನನ್ನು ಕೇಳಿದಾಗ, "ನನಗೆ ಗೊತ್ತಿಲ್ಲ" ಎಂದು ಯಾವಾಗಲೂ ನಾನು ಹೇಳುತ್ತಿರಲಿಲ್ಲ, ಆದರೆ ಒಮ್ಮೆ ಸಮಸ್ಯೆಯೊಂದು ನನಗೆ ದಿಗ್ಭ್ರಮೆ ಹಿಡಿಸಿತು.

ತಾಯಿ ಕೇಳಿದಳು: "ಒಳ್ಳೆಯದು, ಈ ಗಾಂಧಿ ನಮ್ಮ ಉಪವಾಸವನ್ನು ನಿವಾರಿಸುತ್ತಾನೆಯೆ?"

ಅದೊಂದು ದೊಡ್ಡ ಸಮಸ್ಯೆಯಾಗಿತ್ತು. ಇಡೀ ದೇಶವನ್ನು ಅದು ತಟ್ಟಿತ್ತು. ನನಗೆ ಅದರ ಬಗ್ಗೆ ಏನೂ ಗೊತ್ತಿರಲಿಲ್ಲ. ಆದರೆ ನಾನು ಹೇಳಿದೆ, "ಭಾರತ ಸ್ವತಂತ್ರವಾದಾಗ, ನಮ್ಮ ಉಪವಾಸ ಕೊನೆಗೊಳ್ಳುತ್ತದೆ!"

ಸಾವಿರದ ಒಂಬಯ್ನೂರ ಮೂವತ್ತು–ಅದು, ಗಾಂಧೀಜಿ ತಮ್ಮ ಪ್ರಸಿದ್ಧವಾದ ಹನ್ನೊಂದಂಶದ ಕಾರ್ಯಕ್ರಮವನ್ನೊಳಗೊಂಡ ಪತ್ರವನ್ನು ವೈಸ್‌ರಾಯ್ ಲಾರ್ಡ್ ಇರ್ವಿನ್‌ಗೆ ಸಬರಮತಿ ಆಶ್ರಮದಿಂದ ಕಳುಹಿಸಿದ ವರ್ಷವೆಂದು ಭಾವಿಸುತ್ತೇನೆ. ಪತ್ರ ತೆಗೆದುಕೊಂಡವನು ರೇನಾಲ್ಡ್ಸ್ ಎಂಬ ತರುಣ ಆಂಗ್ಲನೆಂದು ತೋರುತ್ತದೆ. ಆದರೆ ತೃಪ್ತಿಕರ ಉತ್ತರ ಬರಲಿಲ್ಲ. ಪತ್ರದಲ್ಲಿ ತಿಳಿಸಿದ್ದಂತೆ ಗಾಂಧೀಜಿ ಸತ್ಯಾಗ್ರಹ ಕಾರ್ಯಕ್ರಮವನ್ನು ಆರಂಭಿಸಿದರು. ಅವರು ತಮ್ಮ ಎಪ್ಪತ್ತು ಮಂದಿ ಅನುಯಾಯಿಗಳೊಡನೆ ಉಪ್ಪಿನ ಕಾನೂನು ಮುರಿಯಲು ದಂಡಿಯ ಹತ್ತಿರದ ಸಮುದ್ರಕ್ಕೆ ಹೊರಟರು. ದೇಶದ ಲಕ್ಷಾಂತರ ಜನ ಬಳಸುವ ಉಪ್ಪಿನ ಮೇಲೆ ಕೂಡ ಬ್ರಿಟಿಷ್ ಸರ್ಕಾರ ತೆರಿಗೆ ವಿಧಿಸಿತ್ತು. ಇಡೀ ದೇಶವನ್ನು ಅಲುಗಿಸಿದ ದಂಡಿಯಾತ್ರೆಗೆ ಮುನ್ನ ಗಾಂಧಿ ಹೇಳಿದರು: "ನಮ್ಮ ಬೇಡಿಕೆಗಳನ್ನು ಸಾಧಿಸುವುದರಲ್ಲಿ ಜಯಗಳಿಸಿದ ಬಳಿಕ ನಾನು ಆಶ್ರಮಕ್ಕೆ ಮರಳುತ್ತೇನೆ, ಇಲ್ಲವೆ ನನ್ನ ಶವ ಅರೇಬಿಯನ್ ಸಮುದ್ರದಲ್ಲಿ ತೇಲುವುದು ಕಂಡುಬರುತ್ತದೆ."

ಗಾಂಧೀಜಿ ಸಾಯುವುದೆ? ಪ್ರಶ್ನೆ ಹಿಮಾಲಯದಿಂದ ಕನ್ಯಾಕುಮಾರಿಯ ತನಕ ಪ್ರತಿಧ್ವನಿಸಿತು; ಇಡೀ ದೇಶ ತಳಮಳಿಸುತ್ತಿತ್ತು. ಶಸ್ತ್ರರಹಿತ ಭಾರತೀಯರನ್ನು ವಿರೋಧಿಸಲು ಬ್ರಿಟಿಷ್ ಸರ್ಕಾರ ತನ್ನೆಲ್ಲ ಶಕ್ತಿಯನ್ನೂ ಬಳಸಿತು. ಸೈನ್ಯ, ಪೋಲೀಸರು, ಜೈಲುಗಳು–ಇಷ್ಟರಿಂದ ಮಾತ್ರ ಆಗಿತ್ತು ಸರ್ಕಾರ. ದಂಡಿಯ ಬಳಿಯ ಕಡಲ ತಡಿಯಲ್ಲಿ ಗಾಂಧೀಜಿ ಮತ್ತು ಅವರ ಅನುಯಾಯಿಗಳನ್ನು ಬಂಧಿಸಲಾಯಿತು.

ದೇಶದ ಇತರ ಭಾಗಗಳಂತೆ ಕೇರಳವೂ ಕ್ಷುಬ್ಧವಾಯಿತು. ಕಲ್ಲಿಕೋಟೆಯ ಸಮುದ್ರತೀರದಲ್ಲಿ ಉಪ್ಪಿನ ಕಾನೂನು ಭಂಗಮಾಡಿದ ಜನರನ್ನು ಪೋಲೀಸ್ ಮುಖ್ಯಾಧಿಕಾರಿಯ ಸೂಚನೆಯಂತೆ ಅಮಾನುಷವಾಗಿ ಹಿಂಸಿಸಲಾಯಿತು. ಅವರನ್ನು ಭಾರವಾದ ಬೂಟುಗಾಲುಗಳಿಂದ ಒದೆಯಲಾಯಿತು ಮತ್ತು ಲಾಠಿಗಳಿಂದ ಹೊಡೆಯಲಾಯಿತು. ಇದೆಲ್ಲ ಭಾರತೀಯ ಸೈನಿಕರ ಮತ್ತು ಪೋಲೀಸರ ಕೈಯಲ್ಲಿ!

ಕೇಳಪ್ಪನ್, ಮಹಮದ್ ಅಬ್ದುರ್ ರಹಿಮಾನ್ ಮತ್ತು ಇತರ ಮುಖಂಡರನ್ನು ಬಂಧಿಸಲಾಯಿತು. ಇನ್ನೂ ಹೆಚ್ಚು ಮಂದಿ ಕಾನೂನುಗಳನ್ನು ಉಲ್ಲಂಘಿಸಿದರು; ಇನ್ನಷ್ಟು ಬಂಧನಗಳಾದುವು. ಮತ್ತು ಪೋಲೀಸ್ ಹಿಂಸೆ. ಇದೆಲ್ಲಕ್ಕಿಂತ ಮಿಗಿಲಾಗಿ, ಅತ್ಯಂತ ಹೃದಯವಿದ್ರಾವಕವಾದುದು ಕಲ್ಲಿಕೋಟೆಯ ತೀರದಲ್ಲಿ ವಿದ್ಯಾರ್ಥಿಗಳನ್ನು ನಡೆಸಿಕೊಂಡ ರೀತಿ. ಎಳೆ ವಯಸ್ಸಿನ ವಿದ್ಯಾರ್ಥಿಗಳು! ಕೇರಳದ ಭಾವಿ ಪ್ರಜೆಗಳು. ಅವರನ್ನು ಪೋಲೀಸರು ಹೊಡೆದು ನೆಲಕ್ಕುರುಳಿಸಿದರು. ನೂರಾರು ವಿದ್ಯಾರ್ಥಿಗಳು ಕಲ್ಲಿಕೋಟೆಯ ಕಡಲ ದಂಡೆಯಲ್ಲಿ ತಲೆಯೊಡೆದು ರಕ್ತ ಸುರಿಸುತ್ತ ಬಿದ್ದಿದ್ದರು. ಇದು 'ಮಾತೃಭೂಮಿ' ಪತ್ರಿಕೆಯಲ್ಲಿ ಪ್ರಕಟವಾದ ನಾಯಕರೊಬ್ಬರ ಹೇಳಿಕೆ:

"ಪೋಲೀಸರು ಕೈಯೆತ್ತಿ, ಕಲ್ಲಿಕೋಟೆ ತೀರದಲ್ಲಿ ತಮ್ಮ ಮಾತೃಭೂಮಿ ಕರ್ತವ್ಯ ಸಲ್ಲಿಸಲು ನೆರೆದಿದ್ದ ಬಡಪಾಯಿ ವಿದ್ಯಾರ್ಥಿಗಳನ್ನು ಥಳಿಸಿದ್ದು! ಅವ ಕೇವಲ ಹುಡುಗರು–ನಿಶ್ಶಸ್ತ್ರಮುಗ್ಧರು. ಅವರ ತಲೆ, ತೋಳು, ಕಾಲುಗಳನ ಮಲಯಾಳಿ ಸ್ತ್ರೀಯರಿಗೆ ಹುಟ್ಟಿದವರೆಂದು ಹೇಳಿಕೊಳ್ಳುವ ಪೋಲೀಸರು ಒಡೆ ಹಾಕಿದರು! ಈ ನಗರದ ಘನತೆವೆತ್ತ, ಶ್ರೀಮಂತರೆನಿಸಿಕೊಂಡ ಜನ ಇಂಥ ಸಂಗತಿ ಬಗೆಗೆ ಮೌನದಿಂದಿರುವುದನ್ನು ನಾನು ಕಾಣುತ್ತಿರುವಾಗ, ತಮ್ಮ ಮೇಲಧಿಕಾರಿಗ ಆಜ್ಞೆಗಳನ್ನು ಕುರುಡಾಗಿ ಪಾಲಿಸುವ ಅಜ್ಞಾನಿ ಪೋಲೀಸರನ್ನು ನಾನೇಕೆ ದೂಷಿ ಬೇಕು?"

ಅಂತಸ್ತಿನ ಜನ ಮೌನದಿಂದಿದ್ದ ದಿನಗಳವು. ಆದರೆ ಸಾಮಾನ್ಯ ಗಂಡು ಹೆಣ್ಣುಗಳು ಸುಮ್ಮನಿರಲಿಲ್ಲ. ಅವರು ಸವಾಲಿನ ಹಾಡುಗಳನ್ನು ಹಾಡುತ್ತ ಪ್ರತಿಭಟ ಯಲ್ಲಿ ಸಾಗಿದರು.

ನಾನೂ ಹೋದೆ–ಯಾರನ್ನೂ ಕೇಳದೆ. ನಾನು ನನ್ನ ವ್ಯಾಸಂಗವನ್ನು ತೊರೆದ ಬಾವೊ ಎಂಬ ಸಂಗಡಿಗನೊಡನೆ ಕಲ್ಲಿಕೋಟೆಗೆ ಹೋದೆ. ಬಾವೊ ನನ್ನ ಮನೆಯಿಂ ಒಂದು ಚಿನ್ನದ ಒಡವೆ ತೆಗೆದುಕೊಂಡ. ಅದನ್ನು ವೈಕಂನಲ್ಲಿ ಮಾರಿದೆವು. ಆ ಸಂ ನನ್ನ ತಾಯಿ ಅಡುಗೆ ಮನೆಯಲ್ಲಿ ಅಡುತ್ತಿದ್ದಳು. ಅವಳಿಗೇನೂ ಗೊತ್ತಿರಲಿಲ್ಲ ಬೀಳ್ಕೊಳ್ಳುವಿಕೆಯ ಒಂದು ಬಗೆಯಾಗಿ ನನ್ನ ತಾಯಿಂದ ಒಂದು ಲೋಟ ನೀರು ತೆಗೆದ ಕೊಂಡೆ. ಅದನ್ನು ಕುಡಿದೆ, ಅವಳತ್ತ ನೋಡಿದೆ; ಹೊರಟುಹೋದೆ.

ಯಾರಾದರೂ ನಮ್ಮನ್ನು ಹಿಂಬಾಲಿಸುವರೆಂದು ನಾವು ಹೆದರಿದೆವು. ಎರ್ನಾಕುಲ ನಲ್ಲಿ ಇಳಿದು, ಎಡಪಲ್ಲಿ ರೈಲುನಿಲ್ದಾಣಕ್ಕೆ ನಡೆದುಹೋದೆವು. ಆಗ ಕತ್ತಲು, ಸೂರ್ಯ ಮುಳುಗಿ ಸಾಕಷ್ಟು ಹೊತ್ತಾಗಿತ್ತು. ರೈಲು ತುಂಬ ತಡವಾಗಿತ್ತು. ಆಗ ಕೆಲವರು ಪೋಲೀಸರು ಒಳಬಂದರು. ನಾವು ಭಯದಿಂದ ನಡುಗುತ್ತಿದ್ದೆವು. ಅವರು ಒಬ್ಬೊಬ್ಬ ರನ್ನೂ ಕರೆದು, ಪ್ರಶ್ನಿಸಿದರು. ನಾವು ನಿದ್ದೆಹೋದಂತೆ ನಟಿಸಿದೆವು. ಅವರಲ್ಲೊಬ್ಬ ನನ್ನ ಹೊಟ್ಟೆಗೆ ಲಾಠಿಯಿಂದ ತಿವಿದು, ಕರೆದ. ನನ್ನ ಮುಖಕ್ಕೆ ಬೆಳಕು ಬಿಟ್ಟು ಕೇಳಿದ, "ಪೋಕರಿ, ಎಲ್ಲಿಗೆ ಹೋಗ್ತಿದೀಯೆ?"

ನಾನೇನು ಹೇಳಬೇಕು? ನಾನು ಕಾಂಗ್ರೆಸ್ ಸೇರಲು ಕಲ್ಲಿಕೋಟೆಗೆ ಹೋಗು ತ್ತಿದ್ದೆನೆಂದು ಅವನಿಗೆ ಹೇಳಲು ಹೆದರಿಕೆಯಾಯಿತು. ಸುಳ್ಳು ಹೇಳಿದೆ, "ಷೋರನೂರಿಗೆ ಹೋಗ್ತಿದೇನೆ."

"ಯಾಕೆ?"

ಮತ್ತೊಂದು ಸುಳ್ಳು: "ನನ್ನ ಚಿಕ್ಕಪ್ಪ ಅಲ್ಲೊಂದು ಚಹಾ ಅಂಗಡಿ ಇಟ್ಟಿದಾನೆ."

ಅದೃಷ್ಟವಶಾತ್ ಅವನು ಇನ್ನಷ್ಟು ಪ್ರಶ್ನೆಗಳನ್ನು ನನಗೆ ಹಾಕಲಿಲ್ಲ. ಅವರು ಕಳ್ಳನೊಬ್ಬನ ಹುಡುಕಾಟದಲ್ಲಿದ್ದರು. ನಾವು ಷೋರನೂರಿಗೆ ಟಿಕೆಟ್ ತೆಗೆದುಕೊಂಡು, ಅಲ್ಲಿ ಇಳಿದೆವು; ಪಟ್ಟಾಂಬಿಗೆ ನಡೆದುಹೋಗಿ, ಮತ್ತೆ ಕಲ್ಲಿಕೋಟೆಗೆ ರೈಲು ಹಿಡಿದೆವು. ಅಲ್ಲಿ ಅಲ್–ಅಮಿನ್ ವಸತಿಗೃಹದಲ್ಲಿ ತಂಗಿದೆವು. ನಾನು ಮಾಡಿದ ಮೊದಲ ಕೆಲಸ ವೆಂದರೆ, ನನ್ನ ಹಳ್ಳಿಯ ಹತ್ತಿರದಿಂದ ಬಂದಿದ್ದ ವ್ಯಕ್ತಿಯೊಬ್ಬನಿಗೆ ಬರೆಯುವುದು.

ವನು ಸೈಯದ್ ಮಹಮದ್; ಆಗ ಬಳ್ಳಾರಿ ಜೈಲಿನಲ್ಲಿದ್ದವನು. ನಾನು ಮಾತೃ ೂಮಿಯ ಸೇವೆಗೆ ನನ್ನನ್ನು ಸಮರ್ಪಿಸಿಕೊಳ್ಳುವ ಸಂಕಲ್ಪ ಮಾಡಿರುವುದಾಗಿ ಅವನಿಗೆ ಿದೆ. ಅವಳನ್ನು ಬಂಧಿಸಿರುವ ದಾಸ್ಯದ ಸಂಕೋಲೆಯನ್ನು ಮುರಿಯಲು ನನ್ನೆಲ್ಲ ಶಕ್ತಿ ಳನ್ನೂ ಬಳಸುವೆನು. ನಾನು ಕೂಡಲೆ ಬಂಧನವನ್ನಪ್ಪಿಕೊಳ್ಳುತ್ತಿದ್ದೆ.

ಅವನು ಉತ್ತರಿಸಿದ: "ನನಗೆ ಇನ್ನು ಕೆಲದಿನಗಳಷ್ಟೆ ಉಳಿದಿವೆ. ಆಮೇಲೆ ನನಗೆ ಡುಗಡೆಯಾಗುವುದು. ನಾವು ಸೇರಿ ಮಾತನಾಡಿದಮೇಲೆ ಮಾತ್ರ ನೀನು ಕಾಂಗ್ರೆಸ್ ೇರಬಹುದು". ಅವನಾಗ 'ಅಲ್–ಅಮಾನ್' ಪತ್ರಿಕೆಯ ಸಹ ಸಂಪಾದಕನಾಗಿದ್ದ; ಬ್ಬ ಪ್ರಮುಖ ನಾಯಕನಾಗಿದ್ದ. ಅವನು ಇ. ಮೊಯಿದು ಮೌಲವಿ ಮತ್ತು ಇತರ ೊಡನೆ ಪೋಲೀಸ್ ಮುಖ್ಯಾಧಿಕಾರಿ ಅಮುವಿನಿಂದ ಬಲವಾದ ಪೆಟ್ಟು ತಿಂದಿದ್ದ. ಅವನು ಮರಳುವತನಕ ಕಾಯುವ ತಾಳ್ಮೆ ನನಗಿರಲಿಲ್ಲ. ಭಾರತ ಮರುದಿವಸ ಸ್ವತಂತ್ರ ಾಗಲಿತ್ತು; ಆ ಸ್ವಾತಂತ್ರ್ಯಕ್ಕಾಗಿ ಹೋರಾಡುವಲ್ಲಿ ನನಗೂ ಒಂದು ಪಾತ್ರವಿರಬೇಕು! ನ್ನ ಧರ್ಮದವರೆಂದು ಹೇಳಿಕೊಳ್ಳುವ ಅನೇಕರು ಸ್ವಾತಂತ್ರ್ಯಹೋರಾಟಕ್ಕೆ ಸೇರಿರ ಿಲ್ಲ. ಆ ಕೊರತೆಯನ್ನು ನಾನು ಸರಿಪಡಿಸಬೇಕು.

ಆದರೆ ನನ್ನ ಸಂಗಾತಿ ಕಾಂಗ್ರೆಸ್ ಸೇರಬಯಸಲಿಲ್ಲ. ಅವನು ನನ್ನನ್ನು ವಿಮುಖ ನನ್ನಾಗಿಸಲು ಅನೇಕ ಬಗೆಯಲ್ಲಿ ಯತ್ನಿಸಿದ. ಅವನ ತಂದೆ ಬಂದು, ತನ್ನ ಮಗನನ್ನು ಮನೆಯಿಂದ ಓಡಿಹೋಗಲು ಪ್ರೇರಿಸಿದ್ದಕ್ಕಾಗಿ ನನ್ನ ಮೇಲೆ ಬೈಗುಳದ ಮಳೆಗರೆದ. ಘಟನೆ ಮನೆಯಲ್ಲಿ ದೊಡ್ಡ ಗಲಾಟೆಯೆಬ್ಬಿಸಿತ್ತೆಂದು ಗ್ರಹಿಸಿದೆ. ನನಗೆ ಬೇಸರವೆನಿಸಿತು. ಅವನ ಮಗನೊಡನೆ ಮನೆಯಿಂದ ಓಡಿಹೋಗಿದ್ದವನು ನಾನಲ್ಲ. ಆದರೆ ಯಾರೂ ನನ್ನನ್ನು ನಂಬುವುದಿಲ್ಲ, ಏಕೆಂದರೆ ನಾನು ಅವನಿಗಿಂತ ದೊಡ್ಡವನು. ನಾನು ಶೋಚ ೀಯ ಸ್ಥಿತಿಯಲ್ಲಿದ್ದೆ. ಆ ವೇಳೆಗೆ ನನ್ನ ತಂದೆಯೂ ಬಂದರು. ಮತ್ತೆ ನಾನೊಂದು ಸುಳ್ಳು ಹೇಳಿದೆ: ನಾನು ಕಾಂಗ್ರೆಸ್ ಸೇರುತ್ತಿಲ್ಲ. ಶಾಲೆಗೂ ಮರಳುತ್ತಿಲ್ಲ. ಒಂದು ಕೆಲಸ ಹುಡುಕುತ್ತಿದ್ದೇನೆ. ಬೇಗ ಸಂಪಾದಿಸುತ್ತೇನೆ. ನನ್ನ ತಂದೆಯನ್ನು ಸಮಾಧಾನ ಪಡಿಸಿ, ಹಿಂದಕ್ಕೆ ಕಳುಹಿಸುವುದರಲ್ಲಿ ಯಶಸ್ವಿಯಾದೆ. ಆಮೇಲೆ ನಾನು ನೇರವಾಗಿ ಕಾಂಗ್ರೆಸ್ ಕಚೇರಿಗೆ ಹೋದೆ. ಅಲ್ಲಿ ಮತ್ತೆ ನಾನು ನಿರಾಶನಾಗುವ ಅವಕಾಶವಿತ್ತು. ಅವರು ನನ್ನನ್ನು ಸಿ. ಐ. ಡಿ. ಎಂದು ಶಂಕಿಸಿದರು. ಅವರ ಸಂಶಯಗಳು ನನ್ನ ದಿನಚರಿಯಿಂದ ದೃಢವಾದುವು. ಅದರಲ್ಲಿ ನಾನು ಸಂಗತಿಗಳನ್ನು ವಿವಿಧ ಭಾಷೆಗಳಲ್ಲಿ—ಇಂಗ್ಲಿಷ್, ಮಲಯಾಳಂ, ತಮಿಳು, ಹಿಂದಿ ಮತ್ತು ಅರ್ಯಾಬಿಕ್–ಗುರುತುಹಾಕಿದ್ದೆ. ಅದನ್ನು ನಾನು ಬೆಂಚಿನ ಮೇಲಿರಿಸಿ, ಶೌಚಗೃಹಕ್ಕೆ ಹೋದೆ. ನಾನು ಮರಳಿದಾಗ, ಕಾರ್ಯದರ್ಶಿ ಅದನ್ನೆತ್ತಿಕೊಂಡು ಓದುತ್ತಿದ್ದುದು ಕಂಡುಬಂತು. ಅದರಲ್ಲಿ ಬಹುಪಾಲು ಅವನಿಗೆ ಅರ್ಥವಾಗಿರಲಿಕ್ಕಿಲ್ಲ. ಆದರೆ ನನ್ನನ್ನು ಶಂಕಿಸಲು ಅವನಿಗದು ಕಾರಣವೊದಗಿ ತು. ಅವನಿಗೆ ನಾನು ಸೈಯದ್ ಮಹಮದರ ಪತ್ರ ತೋರಿಸಿದೆ. ಆಗಲೂ ಅವನ ಸಂದೇಹಗಳು ಪರಿಹಾರವಾಗಲಿಲ್ಲ. ನನ್ನ ಚಹರೆ, ವರ್ತನೆಗಳಿಂದ ನನ್ನನ್ನವರು ಅಳೆಯಲು ಯತ್ನಿಸಿದರು. ರಾಷ್ಟ್ರನಾಯಕರ ಭಾವಚಿತ್ರಗಳು ಕಚೇರಿಯ ಗೋಡೆಗಳ ಮೇಲೆ ತೂಗುತ್ತಿದ್ದುವು. ಮೇಲ್ದುಟಿಯ ಮೇಲೆ ತೆಳು ಮೀಸೆಯನ್ನುಳ್ಳ ಮತ್ತು

ಪ್ರಶಾಂತ ಘನತೆಯ ವ್ಯಕ್ತಿಯೊಬ್ಬನ ಚಿತ್ರವನ್ನು ನಾನು ನೋಡಿದೆ. ಅವನು ಓರೆಯಾಗಿ ಫೆಲ್ಟ್ ಹ್ಯಾಟನ್ನೂ ಅಗಲ ಕಾಲರಿನ ಬಿಳಿಯಂಗಿಯನ್ನೂ ಧರಿಸಿದ್ದ. ವಿದೇಶಿ ಉಡುಪಿನಲ್ಲಿದ್ದ ಈ ನಾಯಕನ ಬಗ್ಗೆ ನಾನು ತಾತ್ಸಾರ ತಳೆದೆ. ಅವನಾರೆಂದು ಕೇಳಿದೆ. "ಭಗತ್‌ಸಿಂಗ್" ಎಂದ, ಕಾರ್ಯದರ್ಶಿ.

ಅದನ್ನು ಕೇಳಿದಾಗ ನನ್ನ ಹೃದಯದ ಒಂದು ಬಡಿತ ತಪ್ಪಿದಂತಾಯಿತು. ಮಹಾ ಸಾಹಸಿ ಭಗತ್‌ಸಿಂಗ್! ಆಗ ಅವನನ್ನು ನೇಣುಹಾಕಿರಲಿಲ್ಲ. ಪಂಜಾಬ್ ಪಿತೂರಿ ಪ್ರಕರಣದಲ್ಲಿ ಸೇರಿದ್ದ ಮೂವರು ಕ್ರಾಂತಿಕಾರಿಗಳ ಬಗೆಗೆ ನಾನು ಪತ್ರಿಕೆಗಳಲ್ಲಿ ಓದಿದ್ದೆ: ಭಗತ್‌ಸಿಂಗ್, ರಾಜಗುರು ಮತ್ತು ಸುಖದೇವ್. ಶಾಸನಸಭೆಯಲ್ಲಿ ಬಾಂಬು ಹಾಕುವ ಮತ್ತು ವೈಸ್‌ರಾಯ್‌ನ ರೈಲನ್ನು ಸಿಡಿಸುವ ಅವರ ಪ್ರಯತ್ನಗಳ ಬಗೆಗೆ ಕೇಳಿದ್ದೆ. ಭಾವ ಚಿತ್ರವನ್ನು ಆಸಕ್ತಿಯಿಂದ ನೋಡಿದೆ. ಕಾರ್ಯದರ್ಶಿ ಹೇಳಿದ: "ನಿನ್ನಲ್ಲಿ ಭಗತ್‌ಸಿಂಗ್‌ನ ಲಕ್ಷಣಗಳಿವೆ. ನಿನ್ನ ಮೀಸೆ ಮತ್ತು ಅಂಗಿಯ ಕಾಲರ್ ಅದೇ ತರಹ ಇವೆ. ನಿನಗೆ ಅಗತ್ಯವಿರುವುದೆಲ್ಲ ಒಂದು ಫೆಲ್ಟ್ ಹ್ಯಾಟು!"

ನಾನೇನೂ ಹೇಳಲಿಲ್ಲ. ಭಗತ್‌ಸಿಂಗ್ ಹಾಗೂ ನನ್ನ ನಡುವಣ ಚಹರೆಗಳ ಸಾದೃಶ್ಯವನ್ನು ಕುರಿತು ನಾನೂ ಯೋಚಿಸುತ್ತಿದ್ದೆ. ಆಗ ಕಾರ್ಯದರ್ಶಿ ಮತ್ತೆ ನನ್ನನ್ನು ಕೇಳಿದ: "ನೀನು ನಿಜವಾಗಿಯ ೂ ಮುಸ್ಲಿಮನೆ?"

ನಾನೆಂದೆ: "ಅದರ ಬಗ್ಗೆ ನಿನಗೇಕೆ ಅನುಮಾನ?" ಅನಂತರ, ಅಂದಿನವರೆಗಿನ ನನ್ನ ಜೀವನಕಥೆಯನ್ನು ಅವನಿಗರುಹಿದೆ. ಕಡೆಯದಾಗಿ ನನ್ನನ್ನವನು ಕೇಳಿದ: "ನಾಳೆ ನೀನು ದಂಡೆಗೆ ಹೋಗಿ ಉಪ್ಪು ತಯಾರಿಸಲು ಸಿದ್ಧನಾಗಿದ್ದೀಯಾ?"

"ಸಿದ್ಧ!" ನಾನು ಒಪ್ಪಿದೆ.

ಮರುದಿನ ಬೆಳಗ್ಗೆ ನಾವು ಬೇಗ ಎದ್ದೆವು. ಮಡಕೆಗಳು, ಧ್ವಜಗಳು ಮತ್ತಿತರ ವಸ್ತುಗಳೊಡನೆ ನಾವು ಹೊರಡಲು ಅಣಿಯಾಗುತ್ತಿದ್ದೆವು; ಅಷ್ಟರಲ್ಲಿ ಮೆಟ್ಟಲುಗಳ ಮೇಲೆ ದಡದಡ ಸದ್ದು ಕೇಳಿಸಿತು. ಆರೇಳು ಮಂದಿ ಪೋಲೀಸರು ಒಬ್ಬ ಇನ್‌ಸ್ಪೆಕ್ಟರ ನೇತೃತ್ವದಲ್ಲಿ ಒಳಬರುತ್ತಿದ್ದುದನ್ನು ನೋಡಿ ಆಶ್ಚರ್ಯವಾಯಿತು. ನಾವು ಹನ್ನೊಂದು ಮಂದಿಯನ್ನೂ ಬಂಧಿಸಿ ಒಯ್ಯಲಾಯಿತು.

ಅದು ಭಾನುವಾರ ಬೆಳಗ್ಗೆ. ನಮ್ಮಲ್ಲಿ ಯಾರೂ ಏನೂ ತಿಂದಿರಲಿಲ್ಲ. ನಿದ್ದೆಯಿಲ್ಲದೆ ನನಗೆ ನಿಶ್ಶಕ್ತಿಯೆನಿಸುತ್ತಿತ್ತು. ಜನರ ಗುಂಪೊಂದು ನಮ್ಮನ್ನು ಹಿಂಬಾಲಿಸಿತು. ನಾವು ಪೋಲೀಸ್ ಠಾಣೆ ತಲುಪಿದಾಗ ನನ್ನ ಧೈರ್ಯವೆಲ್ಲ ಆವಿಯಾಗಿ ಹೋಯಿತು. ಇಂಥ ಜಾಗಕ್ಕೆ ಅದು ನನ್ನ ಮೊದಲ ಬರವಾಗಿತ್ತು. ಕತ್ತಿಗಳು, ಬಯೊನೆಟ್ಟುಗಳು ಮತ್ತು ಕೈಕೋಳಗಳು ಗೋಡೆಯಿಂದ ತೂಗುತ್ತಿದ್ದುವು; ದುಃಖಕರವಾಗಿ ನನ್ನತ್ತ ಹೊಳಪು ಬೀರುತ್ತಿದ್ದುವು. ಹೊಳೆಯುವ ಆಯುಧಗಳಿಂದಲೂ ಪೋಲೀಸರ ಕ್ರೂರಮುಖಗಳಿಂದಲೂ ನಾನು ಪೂರ್ತಿ ಭಯಗ್ರಸ್ತನಾದೆ. ನರಕದ ಬಗೆಗಿನ ನನ್ನ ಕಲ್ಪನೆಯನ್ನು ಆ ಜಾಗ ನನಗೆ ಜ್ಞಾಪಿಸಿತು.

ನಮ್ಮನ್ನು ವರಾಂಡದಲ್ಲಿ ಸಾಲುಗೊಳಿಸಲಾಯಿತು. ಕಿರಿದಾದ ಬೂದುಗಣ್ಣುಗಳ ಇನ್‌ಸ್ಪೆಕ್ಟರ್ ಒಳಹೋದ. ಉನ್ನತ ತೋಳುಗಳ ದೃಢಕಾಯ ಪೋಲೀಸ್ ಪೇದೆಯೊಬ್ಬ

ನಮ್ಮ ಮುಂದೆ ಅತ್ತಿಂದಿತ್ತ ಠಳಾಯಿಸುತ್ತಿದ್ದ. ಅವನ ಉಬ್ಬಿದ ಕೆಂಗಣ್ಣುಗಳು ನಮ್ಮಲ್ಲಿ ಒಬ್ಬೊಬ್ಬರನ್ನೂ ಸರದಿಯ ಪ್ರಕಾರ ನೋಡುತ್ತಿದ್ದುವು. ಅವನ ಸಂಖ್ಯೆ ೨೭೦. ನಮ್ಮ ಸ್ವಯಂಸೇವಕ ಮುಖಂಡನನ್ನು ಅವನು ಕಚೇರಿಕೋಣೆಗೆ ಕತ್ತುಹಿಡಿದು ದಬ್ಬಿದ. ಏಟು ಗಳು, ಒದೆತಗಳು ಮತ್ತು ಗಟ್ಟಿಯಾದ ಬೊಬ್ಬೆಗಳು ಕೇಳಿಬಂದುವು. ನಾನು ನಡುಗಿದೆ. ನಾನು ಸಾಲಿನಲ್ಲಿ ನಾಲ್ಕನೆಯವನಾಗಿ ನಿಂತಿದ್ದೆ. ಹತ್ತು ನಿಮಿಷಗಳ ಬಳಿಕ ಎರಡನೆಯವ ನನ್ನು ಒಳಕ್ಕೆ ಒಯ್ಯಲಾಯಿತು.

ಹೃದಯ ವಿದ್ರಾವಕ ಬೊಬ್ಬೆಗಳನ್ನು ಕೇಳಿದಂತೆ ನಾನು ಕಂಪಿಸಿದೆ. ನಾನು ಕ್ಷಮೆ ಕೇಳುವುದಾಗಿ ನಿರ್ಧರಿಸಿದೆ. ಒಂದು ನಿಮಿಷ ಮಾತ್ರ. ಮತ್ತೆ ನನ್ನಲ್ಲಿ ನಾನೆ ಆಲೋಚಿ ಸಿದೆ: ಏಕೆ ಕ್ಷಮೆ ಕೇಳಬೇಕು? ನಾನೇನೂ ತಪ್ಪು ಮಾಡಿಲ್ಲ. ಸ್ವಾತಂತ್ರ್ಯಸಾಧನೆ ಗಾಗಿ ಎಷ್ಟು ಮಂದಿ ತರುಣ, ತರುಣಿಯರು ಸಾವನ್ನಪ್ಪಿಲ್ಲ? ಭಗತ್‌ಸಿಂಗ್ ಮತ್ತು ಅವನ ಮಿತ್ರರ ಬಗೆಗೆ ಆಲೋಚಿಸಿದೆ. ನಾನು ಸಾಯುವಂತಾಗಲಿ. ಅದು ನನ್ನ ಕರ್ತವ್ಯ!

ನಮ್ಮಲ್ಲಿ ಒಬ್ಬೊಬ್ಬರೂ ಎಲ್ಲಿಂದ ಬಂದವರೆಂದು ಪೇದೆ ನಂ. ೨೭೦ ಕೇಳುತ್ತಿದ್ದ. ಅವರು ಹೇಳುತ್ತಿದ್ದರು: “ಕಣ್ಣಾನೂರು, ತೆಲ್ಲಿಚೆರಿ, ಪೊಣನಿ.”

ಅವನು ನನ್ನನ್ನು ಕೇಳಿದ: “ನಿನ್ನದು?”

ನಾನೆಂದೆ: “ವೈಕಂ!”

ವೈಕಂ. ಅವನು ಆಶ್ಚರ್ಯದಿಂದ ನನ್ನತ್ತ, ನೋಡಿದ. “ಹೆಸರು?”

ನಾನು ನನ್ನ ಹೆಸರು ಕೊಟ್ಟೆ. ನಂ. ೨೭೦ ತಲೆಯೆತ್ತಿ ನನ್ನನ್ನು ಕೇಳಿದ: “ತಿರುವಾಂಕೂರಿನಲ್ಲಿ ಸ್ವ-ರಾಜ್ಯವಿದೆಯೆ?”

ನಾನು ಹೇಳಿದೆ: “ಇಲ್ಲ. ಭಾರತೀಯ ರಾಜ್ಯಗಳಲ್ಲಿ ಯಾವುದೇ ಹೋರಾಟ ಇರಬೇಕಿಲ್ಲವೆಂದು ಗಾಂಧೀಜಿ ಹೇಳಿದ್ದಾರೆ.”

‘ಹಂ.’ ಅವನು ಹೆದರಿಕೆ ಹುಟ್ಟಿಸುವ ಸ್ವರವಿನ್ಯಾಸದಿಂದ ಗುರುಗುಟ್ಟಿದ. ಫಟ್ ಫಟ್! ಎರಡು ಬಲವಾದ ಹೊಡೆತಗಳು ನನ್ನ ಪಕ್ಕತ್ತಿನ ಮೇಲೆ ಬಿದ್ದುವು! ಆಮೇಲೆ ಅವನು ನನ್ನ ಭುಜ ಹಿಡಿದು, ಬಾಗುವಂತೆ ಮಾಡಿದ. ಹೊಡೆಯತೊಡಗಿದ. ತಾಮ್ರದ ಪಾತ್ರೆಯ ಮೇಲೆ ಪೆಟ್ಟುಗಳ ಮಳೆಗರೆಯುತ್ತಿರುವಂತೆ ಸದ್ದಾಯಿತು. ನಾನು ಹದಿನೇಳರ ವರೆಗೆ ಎಣಿಸಿದೆ ಅಥವಾ ಪ್ರಾಯಶಃ ಇಪ್ಪತ್ತೇಳು. ಆಮೇಲೆ ಎಣಿಸಲಿಲ್ಲ. ಏಕೆ ಎಣಿಸ ಬೇಕು?

ಚೆನ್ನಾಗಿ ಥಳಿಸಿದ ಮೇಲೆ ನನ್ನನ್ನು ಇಬ್ಬರು ಪೋಲೀಸರ ನೆರವಿನಿಂದ ಒಳಕ್ಕೆ ಕರೆದೊಯ್ಯಲಾಯಿತು. ನನ್ನ ಅವಸ್ಥೆಯನ್ನು ನೋಡಿ ಇನ್‌ಸ್ಪೆಕ್ಟರ್ ಕೇಳಿದ: ‘ಹಂ?’

ಒಬ್ಬ ಪೋಲೀಸ ಹೇಳಿದ: “ನಂಬಿಯಾರ್‌ನ ಉತ್ಸಾಹ ತುಸು ಹೆಚ್ಚಾಯಿತು—”

ಅದು ಏನೇನೂ ಅಲ್ಲವೆಂಬಂತೆ ಇನ್‌ಸ್ಪೆಕ್ಟರ್ ಗುರುಗುಟ್ಟಿದ: ‘ಹಂ’

ಮತ್ತೊಬ್ಬ ಪೋಲೀಸ ನನ್ನ ಅಂಗಿ ಮತ್ತು ಇತರ ಉಡುಪನ್ನು ತೆಗೆದು ಹಾಕಿದ; ನನ್ನ ಎತ್ತರ, ಸುತ್ತಳತೆ ಮತ್ತು ವಿಶಿಷ್ಟ ಗುರುತುಗಳನ್ನು ತೆಗೆದುಕೊಂಡ.

ಅಂತಿಮವಾಗಿ ನಾವು ಹನ್ನೊಂದು ಮಂದಿಯನ್ನು ಲಾಕಪ್‌ನಲ್ಲಿ ಹಾಕಲಾಯಿತು.

ಅದೊಂದು ಸಣ್ಣ ಸಿಮೆಂಟು ಕೊಠಡಿ. ಮೂಲೆಯಲ್ಲೊಂದು ಮೂತ್ರ ತುಂಬಿ ಮಡಕೆ ದುರ್ನಾತ ಬೀರುತ್ತಿತ್ತು. ಅಂದು ನಮಗೆ ಯಾವುದೇ ಆಹಾರ ಸಿಗಲಿಲ್ಲ. ಇರು ಅತಿ ಶೀತವಾಗಿತ್ತು. ಮಲಗಲು ಚಾಪೆಗಳಿರಲಿಲ್ಲ. ಬೆಳಗ್ಗೆ ನಮ್ಮ ಮುಖಗಳೆಲ್ಲ ಉ ಕೊಂಡಿದ್ದುವು. ನಡೆಯುವುದು ನಮ್ಮಿಂದಾಗುತ್ತಿರಲಿಲ್ಲ. ನಮಗೆ ಕೈಕೋಳ ಹಾ ಬಯೊನೆಟ್ ಹಿಡಿದ ಒಬ್ಬ ಪೋಲೀಸನ ಜೊತೆಯಲ್ಲಿ ಅಂಗಡಿಬೀದಿಯಲ್ಲಿ ನ್ಯಾಯಾಲಯ ನಡೆಯುವಂತೆ ಮಾಡಲಾಯಿತು.

ನಮ್ಮನ್ನು ಹದಿನಾಲ್ಕು ದಿವಸ ಸೆರೆಯಲ್ಲಿರಿಸಬೇಕೆಂದು ಕಲ್ಲಿಕೋಟೆ ಉಪಜೈಲಿ ಕಳುಹಿಸಲಾಯಿತು. ನಂ. ೨೭೦ ತನ್ನ ಮುಷ್ಟಿಯಿಂದ ನನಗೆ ಗುದ್ದಿ ಸುಸ್ತಾದಾ ಮಡಚಿದ ಮೊಳಕೈಗಳನ್ನು ನನ್ನ ಮೇಲೆ ಪ್ರಯೋಗಿಸಿದನೆಂದು ನನ್ನ ಸಂಗಡಿಗರು ಅ ನನಗೆ ಆಮೇಲೆ ತಿಳಿಸಿದರು. ಒಬ್ಬ ಸ್ವಯಂಸೇವಕ ನನಗೆ ಎಣ್ಣೆ ಹಚ್ಚಿ ಮಾಲೀ ಮಾಡಿದ. ರಕ್ತ ಹೆಪ್ಪುಗಟ್ಟಿ, ಎಣ್ಣೆ ಪರಿಣಾಮ ಬೀರದಂಥ, ಒಂದೊಂದು ರೂಪಾಯಿ ನಾಣ್ಯದಗಲದ ಒಂಬತ್ತು ಜಾಗಗಳು ನನ್ನ ಬೆನ್ನ ಮೇಲಿದ್ದುವೆಂದು ಅವನು ನನ ಹೇಳಿದ.

ನನಗೆ ಒಂಬತ್ತು ತಿಂಗಳ ಕಠಿಣಶಿಕ್ಷೆ ಸಿಕ್ಕಿತು. ಕಣ್ಣಾನೂರು ಕೇಂದ್ರ ಬಂದೀಖಾನೆ ನನ್ನನ್ನು ಒಯ್ಯಲಾಯಿತು. ಅಲ್ಲಿ ಆರುನೂರು ಮಂದಿ ರಾಜಕೀಯ ಖೈದಿಗಳಿದ್ದರ ಟಿ. ಪ್ರಕಾಶಂ ಮತ್ತು ಬಾಟ್ಲಿವಾಲಾ ಸೇರಿದಂತೆ.

ಕಾರಾಗೃಹದ ಆಹಾರ ತೀರ ಕೆಟ್ಟದ್ದಾಗಿತ್ತು. ನಮಗೆ ಕೊಡುತ್ತಿದ್ದ ಅಕ್ಕಿ ಗಂ ಯಲ್ಲಿ ಹುಳುಗಳ ಪದರ ತೇಲುತ್ತಿತ್ತು. ಅದನ್ನು ತಿನ್ನುವ ಮುನ್ನ ಹುಳಗಳನ್ನು ತೆಗೆ ಹಾಕುತ್ತಿದ್ದೆವು. ಒಳಬಂದ ಹೊಸ ಖೈದಿಗಳ ಮೂಲಕ ಮಾತ್ರ ನಾವು ಹೊರಜಗತ್ತಿ ಸುದ್ದಿಗಳನ್ನು ಪಡೆಯುತ್ತಿದ್ದೆವು. ಭಗತ್‌ಸಿಂಗ್ ಮತ್ತು ಅವನ ಸ್ನೇಹಿತರನ್ನು ಗಲ್ಲಿಗೇರಿ ದರೆಂದು ತಿಳಿದಾಗ, ನಾವು ಮೂರು ದಿನಗಳ ಉಪವಾಸ ಮುಷ್ಕರ ಹೂಡಿದೆವು.

ಅಲ್ಲಿ ಭಾರತದ ಎಲ್ಲ ಭಾಗಗಳಿಂದ ಬಂದ ಖೈದಿಗಳಿದ್ದರು. ವಿವಿಧ ತತ್ತ್ವವಾದಗ ಜನ ಅಲ್ಲಿದ್ದರು—ಕ್ರಾಂತಿಕಾರಿಗಳು, ಅರಾಜಕತಾವಾದಿಗಳು, ಸಮಾಜವಾದಿಗಳು ಮತ್ತ ಸಾಮ್ಯವಾದಿಗಳು. ಅವರಿಗೆಲ್ಲ ಒಂದು ಧ್ಯೇಯ ಸಮಾನವಾಗಿತ್ತು–ಭಾರತದ ಸ್ವಾತಂತ್ರ್ಯ ಕೆಲವು ತಿಂಗಳುಗಳ ಮೇಲೆ, ಗಾಂಧಿ–ಇರ್ವಿನ್ ಒಪ್ಪಂದದ ಫಲವಾಗಿ ನಮ್ಮ ಬಿಡುಗಡೆ ಯಾಯಿತು. ಎಲ್ಲಿಗೆ ಹೋಗಬೇಕೆಂಬುದು ನಮಗೆ ತಿಳಿದಿರಲಿಲ್ಲ. ನನ್ನಂತೆ ಅಲ್ಲಿ ಅನೇ ಸ್ವಯಂಸೇವಕರಿದ್ದರು. ನಮ್ಮಲ್ಲಿ ಬಹುಮಂದಿಗೆ ರೈಲ್ವೆ ಪಾಸ್‌ಕೂಡ ಇರಲಿಲ್ಲ.

ನನಗೆ ಎರಡು ಬಯಕೆಗಳಿದ್ದುವು. ಎರಡನೆಯದು, ಉಣ್ಣೆಯ ಶಾಲೊಂದನ್ನು ಪಡೆಯುವುದಾಗಿತ್ತು. ಮಿ. ಅಚ್ಯುತನ್, ದ್ವಾರಕಾರಸದಂಥಿನ ಖಾದಿ ಶಾಲೊಂದನ್ನು ನನಗೆ ಕೊಂಡುಕೊಟ್ಟರು. ಮೊದಲನೆಯ ಬಯಕೆ ನಂ. ೨೭೦ನ್ನು ಕೊಲ್ಲುವುದು ಆದರೆ ನನಗೆ ಆಯುಧಗಳಿರಲಿಲ್ಲ. ನನಗೊಂದು ರಿವಾಲ್ವರಷ್ಟೆ ಸಿಗ ಬೇಕಾಗಿದ್ದರೆ! ಅದಕ್ಕಾಗಿ ಹಂಬಲಿಸಿದೆ. ಪಲಯಂ ಕೂಡುದಾಣದಲ್ಲಿ ಅವನು ಟ್ರಾಫಿಕ್ ಕರ್ತವ್ಯದ ಮೇಲೆ ನಿಂತಿದ್ದುದನ್ನು ಕಂಡೆ. ಆರಡಿ ಎತ್ತರದ ರಾಕ್ಷಸ. ಬರಿಗೈಗಳಲ್ಲಿ ಅವನನ್ನು ಹೊಡೆದರೆ ಅವನಿಗದು ಗೊತ್ತೇ ಆಗದು. ಅವನ ಎದೆಗೆ ಚೂರಿ ಹಾಕಬೇಕು! ಆಲ್-ಅಮೀನ್

ವಸತಿಗೃಹದಿಂದ ಚಾಕುವೊಂದನ್ನು ಕದ್ದೆ. ಅವರೊಡನೆ ಹೋಗುತ್ತಿದ್ದಾಗ ವಿ. ಅಚ್ಯುತನ್ ಅವರನ್ನು ಕಂಡೆ. ಅವರಿಗೆ ನನ್ನನ್ನು ನೋಡಿ ಸೋಜಿಗವಾಯಿತು.

"ನೀನು ಹೋಗಿಲ್ಲವೆ?"

ನಾನೆಂದೆ: "ಇಲ್ಲ."

"ಮನೆಗೆ ಹೋಗಿ ತಂದೆ, ತಾಯಿಗಳನ್ನು ನೋಡಬಯಸುವುದಿಲ್ಲವೆ?"

ನಾನು ಹೇಳಿದೆ: "ಅದಕ್ಕೆ ಮುನ್ನ ಏನೋ ಒಂದನ್ನು ಮಾಡಬೇಕಿದೆ." ಎಲ್ಲವನ್ನೂ ಅವರಿಗೆ ಹೇಳಿದೆ. ಅವರು ಮನಂಚಿರ ಕೆರೆಯ ಹತ್ತಿರದ ಜಾಗವೊಂದಕ್ಕೆ ನನ್ನನ್ನು ಕರೆದೊಯ್ದು, ಮೃದುವಾಗಿ ಕೇಳಿದರು: "ನೀನೊಬ್ಬ ಸತ್ಯಾಗ್ರಹಿಯೆ?" ಆಮೇಲೆ, ಗಾಂಧೀಜಿ ತಮ್ಮ ಮುಂದಿನ ಎರಡು ಹಲ್ಲು ಕಳೆದುಕೊಂಡ ಕತೆಯನ್ನು ಅವರು ಹೇಳಿದರು. "ನೀನು ಕೊಲ್ಲಬಯಸಿದರೆ, ನೆನಪಿಡು—ಬದುಕುವ ಅರ್ಹತೆಯುಳ್ಳ ಒಬ್ಬನೇ ಒಬ್ಬ ಪೋಲೀಸನಿಲ್ಲ. ಪೋಲೀಸ್ ಪೇದೆ ಸರ್ಕಾರದ ಅಪರಿಹಾರ್ಯ ಭಾಗ. ಬಡಪಾಯಿಗಳು ಕೇವಲ ಉಪಕರಣಗಳು. ಅವರನ್ನು ದೂಷಿಸಿ ಫಲವೇನು? ತಾಳ್ಮೆಯಿರಲಿ. ಹೋಗು, ನಿನ್ನ ತಂದೆ ತಾಯಿಗಳನ್ನು ನೋಡು."

ವಿ. ಅಚ್ಯುತನ್ ನನ್ನನ್ನು ರೈಲು ಹತ್ತಿಸಿದರು. ಎರ್ನಾಕುಲಂನಲ್ಲಿ ನಾನು ಒಂದು ತಿಂಗಳಿದ್ದೆ, ಮುಸ್ಲಿಂ ವಿದ್ಯಾರ್ಥಿನಿಲಯದಲ್ಲಿ. ಅದು ಅಪಮಾನ, ನಿರಾಶೆ, ದುಃಖ ಮತ್ತು ಅನೈಚ್ಛಿಕತೆಯಾಗಿತ್ತು! ಕಡೆಗೆ, ಒಂದು ರಾತ್ರಿ ನಾನು ವೈಕಂ ತಲುಪಿದೆ. ಅಲ್ಲಿಂದ ತಲಯೊಲಪರಂಬುವಿಗೆ ನಡೆದುಹೋದೆ. ಆಗಲೆ ಮಧ್ಯರಾತ್ರಿ ಮೀರಿತ್ತು; ಬೆಳಗ್ಗೆ ಸುಮಾರು ಮೂರು ಗಂಟೆ. ಮನೆಯಂಗಳವನ್ನು ನಾನು ಪ್ರವೇಶಿಸಿದಾಗ, ನನ್ನ ತಾಯಿ ಕೇಳಿದಳು: "ಯಾರದು?" ನಾನು ವರಾಂಡಕ್ಕೆ ಕಾಲಿರಿಸಿದೆ. ತಾಯಿ ದೀಪ ಹಚ್ಚಿ, ಏನೂ ಆಗಿಲ್ಲವೆಂಬಂತೆ ಕೇಳಿದಳು. "ಮಗು, ಏನಾದರೂ ತಿಂದಿದ್ದೀಯಾ?"

ನಾನೇನೂ ಹೇಳಲಿಲ್ಲ. ನಾನು ವಿಚಲಿತನಾದೆ, ಉಸಿರು ಕಟ್ಟಿದಂತಾಯಿತು. ಇಡೀ ಜಗತ್ತು ನಿದ್ರಿಸುತ್ತಿತ್ತು! ನನ್ನ ತಾಯೊಬ್ಬಳು ಎಚ್ಚರವಾಗಿದ್ದಳು! ನೀರಿನ ಪಾತ್ರೆಯೊಂದನ್ನು ತಂದು, ಕೈಕಾಲು ತೊಳೆದುಕೊಳ್ಳುವಂತೆ ಹೇಳಿದಳು. ಆಮೇಲೆ ನನ್ನ ಮುಂದೆ ಅನ್ನದ ತಟ್ಟೆ ಇರಿಸಿದಳು.

ನನ್ನನ್ನವಳು ಏನೊಂದೂ ಕೇಳಲಿಲ್ಲ.

ನನಗೆ ಅಚ್ಚರಿಯಾಯಿತು. "ಅಮ್ಮ, ನಾನು ಇವತ್ತು ಬರ್ತೇನೆ ಅಂತ ನಿನಗೆ ಹೇಗೆ ಗೊತ್ತಿತ್ತು?"

ತಾಯಿ ಉತ್ತರಿಸಿದಳು: "ಓಹ್....ನಾನು ಅನ್ನ ಮಾಡಿ, ಪ್ರತಿದಿನ ಕಾಯ್ತೇನೆ."

ಅದೊಂದು ಸರಳ ಹೇಳಿಕೆ. ಪ್ರತಿ ರಾತ್ರಿ ನಾನು ಬರಲಿಲ್ಲ. ತಾಯಿ ಎಚ್ಚರವಾಗಿದ್ದು, ನನಗಾಗಿ ಕಾಯುತ್ತಿದ್ದಳು.

ವರ್ಷಗಳು ಉರುಳಿವೆ. ಅನೇಕ ಸಂಗತಿಗಳು ನಡೆದುಹೋಗಿವೆ ತಾಯಂದಿರು ಈಗಲೂ ತಮ್ಮ ಮಕ್ಕಳಿಗಾಗಿ ಕಾಯುತ್ತಾರೆ.

"ಮಗು, ನಾನು ನಿನ್ನನ್ನು ನೋಡಬಯಸುತ್ತೇನೆ, ಅಷ್ಟೆ...."

ಅನುವಾದ: ಡಾ|| ಸಿ.ಪಿ.ಕೆ.

ವಿಶ್ವ ವಿಖ್ಯಾತವಾದ ಮೂಗು

ವೈಕಮ್ ಮುಹಮ್ಮದ್ ಬಷೀರ್

ಅದೊಂದು ಗಾಬರಿಗೊಳಿಸುವಂಥ ಸುದ್ದಿಯಾಯಿತು. ಅಷ್ಟೇ ಅಲ್ಲ ಬುದ್ಧಿ ಜೀವಿಗಳೂ ಸಹ ಆ ಮೂಗಿನ ಬಗ್ಗೆ ಚರ್ಚೆ ಮಾಡಿ ತಲೆಕೆಡಿಸಿಕೊಂಡರು.

ನಾನು ಇಲ್ಲಿ ಆ ಮೂಗಿನ ಸತ್ಯಕತೆಯನ್ನು ಹೇಳುತ್ತಿದ್ದೇನೆ.

ಕಥೆ ಪ್ರಾರಂಭವಾಗುವಾಗ ಆ ಮೂಗಿನವನಿಗೆ ಇಪ್ಪತ್ತನಾಲ್ಕು ವರ್ಷ ವಯಸ್ಸು ಎಂದು ಕೊಳ್ಳಿ. ಅವರೆಗೂ ಅವನನ್ನು ಬಲ್ಲವರಿಲ್ಲ. ಇಪ್ಪತ್ತ ನಾಲ್ಕನೆಯ ವಯಸ್ಸು ಬದುಕಿನಲ್ಲಿ ಏನಾದರೂ ಮಹತ್ವ ಹೊಂದಿದೆಯೇ ? ಬಲ್ಲವರು ಯಾರು ? ವಿಶ್ವ ಚರಿತ್ರೆಯ ಪುಟಗಳಲ್ಲಿ ನೋಡಿದರೆ ಇಪ್ಪತ್ತನಾಲ್ಕನೇ ವರ್ಷ ಮಹತ್ವಪೂರಿತವಾದುದು ಎಂಬುದನ್ನು ಗಣ್ಯರ ಬದುಕಿನಲ್ಲಿ ಕಂಡುಕೊಳ್ಳದೇ ಇರಲಿಕ್ಕಿಲ್ಲ. ಇದನ್ನು ಇತಿಹಾಸದ ವಿದ್ಯಾರ್ಥಿಗಳೂ ಒಪ್ಪಿಹೇಳದೆ ಇರಲಾರರು.

ನೀವು ಅಪೇಕ್ಷಿಸುವ ಈ ಕಥೆಯ ನಾಯಕ ಒಬ್ಬ ಅಡಿಗೆಯವನು. ಅವನೇನೂ ಅಂಥ ಬುದ್ಧಿವಂತನಲ್ಲ. ಓದು ಬರಹ ಕಲಿತವನಲ್ಲ; ಅಡಿಗೆ ಮನೆಯೇ ಅವನ ಪ್ರಪಂಚ. ಅಡಿಗೆಮನೆಯ ಹೊರಗೆ ಆಗುವ ಘಟನೆಗಳಿಗೆ ಅವನು ಹೊರತಾದವನು. ಅದಿರಲಿ, ಅವನು ಏಕಾದರೂ ತಾನೆ ಅತ್ತ ಗಮನ ಅರಿಸಿಯಾನು ? ಅವನಿಗೆ ತೃಪ್ತಿಯಾಗುವಷ್ಟು ಊಟ ಮಾಡುತ್ತಾನೆ. ಬೇಕಾಗುವಷ್ಟು ನಶ್ಯೆ ಏರಿಸುತ್ತಾನೆ; ನಿದ್ರಿಸುತ್ತಾನೆ; ಇವಷ್ಟು ದಿನನಿತ್ಯದ ಕೆಲಸಗಳಿಗೆ ಸೀಮಿತವಾಗಿರುತ್ತಾನೆ.

ವರ್ಷದಲ್ಲಿನ ತಿಂಗಳುಗಳ ಬಗ್ಗೆ ಅವನು ಅಷ್ಟೇನು ತಲೆಕೆಡಿಸಿಕೊಂಡವನಲ್ಲ. ಸಂಬಳದ ದಿನ ಬಂದಾಗ ಅವನ ತಾಯಿಯೇ ಬಂದು ತೆಗೆದುಕೊಳ್ಳುತ್ತಾಳೆ. ಅವನಿಗೇನಾದರೂ ನಶ್ಯೆ ಬೇಕಾದರೆ ಆ ಮುದುಕಿಯೇ ತಂದುಕೊಡುತ್ತಾಳೆ. ಇಪ್ಪತ್ತನಾಲ್ಕು ವರ್ಷ

ವಯಸ್ಸು ತಲುಪುವವರೆಗೂ ಅವನು ಸಂತುಷ್ಟವಾಗಿ ಬದುಕಿದ. ನಂತರ ಒಂದು ವಿಸ್ಮಯ ಕಾರಿ ಘಟನೆ ಸಂಭವಿಸಿತು!

ಅವನ ಮೂಗು ಉದ್ದವಾಗಿ ಬೆಳೆಯತೊಡಗಿತು. ಅದು ಬಾಯ ಸರದನ್ನೂ ಮೀರಿ ಗಲ್ಲದ ಮಟ್ಟವನ್ನೂ ತಲುಪಿತು.

ನಿತ್ಯವೂ ಮೂಗು ಬೆಳೆಯಲು ತೊಡಗಿತು. ಬೆಳವಣಿಗೆಯನ್ನು ತಡೆಯಲು ಸಾಧ್ಯವೆ? ಒಂದು ತಿಂಗಳಲ್ಲಿ ಮೂಗು ತನ್ನದೇ ಮಟ್ಟಕ್ಕೆ ಬೆಳೆದು ನಿಂತಿತು. ಅವನು ಇದನ್ನು ಅನುಕೂಲವೆಂದೇನಾದರೂ ಭಾವಿಸಿದನೆ? ಲೇಶವೂ ಇಲ್ಲ! ನಿರಾಳವಾಗಿ ಉಸಿರಾಡುತ್ತಿದ್ದ. ಆಗಲೂ ಮೂಗಿಗೆ ನಶ್ಯ ತುಂಬುತ್ತಿದ್ದ. ವಾಸನೆಯನ್ನು ಗ್ರಹಿಸುತ್ತಿದ್ದ. ಮಾತನಾಡುವುದಕ್ಕೇನೂ ಅನಾನುಕೂಲವಾಗಿರಲಿಲ್ಲ.

ಈ ಮೂಗಿನ ದೆಸೆಯಿಂದಾಗಿಯೇ ಈ ಬಡ ಅಡಿಗೆಯವನು ಕೆಲಸದಿಂದ ವಜಾ ಆಗಬೇಕಾಗಿ ಬಂತು.

ಕಾರಣವೇನು?

'ವಜಾ ಮಾಡಿದ ಕೆಲಸಗಾರನನ್ನು ತೆಗೆದುಕೊಳ್ಳಿ' ಎಂದು ಯಾವೊಂದು ಗುಂಪಿನವರು ಧ್ವನಿ ಎತ್ತಲಿಲ್ಲ. ರಾಜಕೀಯ ಪಕ್ಷಗಳಂತೂ ಈ ಅನ್ಯಾಯವನ್ನು ವಿರೋಧಿಸದೆ ಅಸಹಾಯಕತೆಯಿಂದ ಕಣ್ಣು ಮುಚ್ಚಿ ಕುಳಿತವು.

ಮನುಷ್ಯತ್ವ ಇದ್ದ ಯಾರೊಬ್ಬರೂ 'ಈ ವ್ಯಕ್ತಿಯನ್ನು ಏಕೆ ವಜಾ ಮಾಡಿದಿರಿ?' ಎಂದೂ ಕೇಳಲಿಲ್ಲ.

ಬಡ ಅಡಿಗೆಯವನು!

ಅವನು ಕೆಲಸವನ್ನು ಕಳೆದುಕೊಂಡದ್ದೇಕೆ ಎಂದು ಯಾರೂ ಅವನಿಗೆ ತಿಳಿಯ ಹೇಳಲಿಲ್ಲ. ಅವನಿದ್ದ ಕೆಲಸದ ಮನೆಯವರಿಗೆ ಅವನಿಂದ ನೆಮ್ಮದಿಯೇ ಇಲ್ಲವಾಯಿತು. ಹಗಲು-ರಾತ್ರಿ ಜನ ಈ ನೀಳ ಮೂಗಿನವನನ್ನು ನೋಡಲು ಬರುತ್ತಿದ್ದರು. ಛಾಯಾಗ್ರಹಕರು ಉಪದ್ರ ಕೊಡುತ್ತಿದ್ದರು. ಪತ್ರಕರ್ತರು ಬಂದು ಪ್ರಶ್ನೆ ಕೇಳಿ ಗಲಾಟೆ ಮಾಡುತ್ತಿದ್ದರು. ಹೀಗಾಗಿ ಮನೆಯಿಂದ ಅನೇಕ ವಸ್ತುಗಳೂ ಹಾಳಾದವು.

ವಜಾ ಮಾಡಿದ ನಂತರ ಆ ಅಡಿಗೆಯವನು ತನ್ನ ಗುಡಿಸಲಿನಲ್ಲಿ ಉಪವಾಸವಿದ್ದ; ಅವನು ಮೂಗಿನಿಂದ ಹೆಚ್ಚು ಪ್ರಚಾರದಲ್ಲಿರುವುದೊಂದೇ ಅವನಿಗೆ ಸಮಾಧಾನ.

ದೂರ ದೇಶಗಳಿಂದಲೂ ಜನ ನೋಡಲು ಬರುವಂತಾದರು. ಅವನ ನೀಳ ಮೂಗನ್ನು ಕಂಡು ಆಶ್ಚರ್ಯದಿಂದ ನಿಟ್ಟುಸಿರು ಬಿಟ್ಟದ್ದುಂಟು. ಕೆಲವರಂತು ಮುಟ್ಟಿಯೂ ನೋಡಿದರು. ಆದರೆ ಯಾರೂ 'ಇಂದು ಊಟ ಮಾಡಿದೆಯಾ? ಏಕಿಷ್ಟು ಬಡವಾಗಿರುವೆ?' ಎಂದು ಮಾತ್ರ ಕೇಳಲಿಲ್ಲ. ಒಂದು ಚಿಟಿಕೆ ನಶ್ಯ ಕೊಳ್ಳುವಷ್ಟು ಕಾಸು ಅವನಲ್ಲಿರಲಿಲ್ಲ. ಉಪವಾಸವಿರಲು ಅವನೇನು ಕ್ರೂರ ಪ್ರಾಣಿಯೇ? ಅವನು ದಡ್ಡನಿರಬಹುದು, ಆದರೆ ಅವನೂ ಒಬ್ಬ ಮಾನವ ಜೀವಿ. ಒಂದು ದಿನ ವೃದ್ಧ ತಾಯಿಯನ್ನು ಕರೆದು ಬಿಸು ಮಾತಿನಲ್ಲಿ 'ಈ ಅನಿಷ್ಟ ಜನರನ್ನು ಹೊರಗೆ ತಳ್ಳಿ ಬಾಗಿಲು ಹಾಕು!' ಎಂದು ಹೇಳಿದ.

ಆ ತಾಯಿ ತಡಮಾಡದೆ ಅವರೆಲ್ಲರನ್ನು ಹೊರಗೆ ಹಾಕಿ ಬಾಗಿಲು ಮುಚ್ಚಿದಳು.

ಜನನದ ನಂತರ ಆ ತಾಯಿ ಮತ್ತು ಮಗುವಿಗೆ ಒಳ್ಳೆಯ ಅದೃಷ್ಟವೇ ಕಾ[illegible] ಜನ ಅವನ ತಾಯಿಗೆ ಬಂದುಕೊಟ್ಟು ಆ ಮಗುವನ್ನು ನೋಡುವುದಕ್ಕಾಗಿ! ನ್ಯಾಯವಂತ ಜನ ಈ ಅಂಚೆ ಪದ್ಧತಿಯನ್ನು ನಡೆಸಿದರು. ಆದರೂ ಅಂಚೆ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಸರ್ಕಾರದ ನಿರ್ಧಾರದ ಬಗ್ಗೆ ಪ್ರತಿಭಟಿಸಿದರಲ್ಲದೆ, ಸರ್ಕಾರವನ್ನು ಪತ್ರಿಕೆಯಲ್ಲಿ ಟೀಕಿಸಲು ಪ್ರಾರಂಭಿಸಿ ಬಿಟ್ಟರು.

ಆ ನೀಲ್ ಮುಂಗನವನ ಜನನದ ಸುದ್ದಿ ಹಬ್ಬಿತು. ಆ ದಿನ ನೀಲ್ [illegible] ನನು ಅನು ಪತ್ರಿಕೆಗಳಲ್ಲಿ ಕೋಲಾಹಲವನ್ನೇ ಎಬ್ಬಿಸಿತು.

ಮಗುವು ಬಾಲ ಚಿತ್ರಗಳಲ್ಲಿ ಅಭಿನಯಿಸಿದ. "ಮಗುವಿನ ಸಾಹಸ" ಕಲಾತ್ಮಕ ನಾಟಕ ಚಿತ್ರ, ಹೆಚ್ಚು ಜನರನ್ನು ಆಕರ್ಷಿಸಿತು! ಅದು ಕವಿಗ[illegible] ಮಗುವಿನವನ ಅದ್ಭುತ ಗುಣಗಳನ್ನು ಕುರಿತು ಮಹಾಕಾವ್ಯವನ್ನೇ [illegible] ಬರೆದುಕೊಟ್ಟು ಜನ ಪ್ರತಿನಿತ್ಯ ಲೇಖಕರು ನೀಲ್ ಮುಂಗನವನ ಭಾಗ್ಯ ಕುರಿತು [illegible] ಮಾಡಿದರಲ್ಲದೆ: ಅವನ ಜೀವನ ಚರಿತ್ರೆಯನ್ನು ಬರೆದರು.

ರಾಜಯೋಗ ಕೂಡಿದಂತೆ ಎಲ್ಲರಿಗಾಗಿ ಅತಿಥಿ ಗೃಹವೊಂದನ್ನು ತೆರೆ[illegible] ಯಾರು ಯಾವಾಗ ಬೇಕಾದರೂ ಉಚಿತ ನೀಡುವ ಸ್ಥಳಕ್ಕೆ ಬರಾಯಿತು: ಒಂದು ಚಿಟಿಕೆ ನಶ್ಯವನ್ನು ಪಡೆಯುವ ಅವಕಾಶವಾಯಿತು.

ಇಷ್ಟರು ಕಾಲ ನಡೆಗಳನ್ನು ಇಡಿಸಿಕೊಂಡೆ. ಅವರು ಸುಶಿಕ್ಷಿತ ಮಹಿ[illegible] ಆ ಇಷ್ಟರೂ ನೀಲ್ ಮುಂಗನವನನ್ನು ಪ್ರೀತಿಸುತ್ತಿದ್ದರು: ಆರಾಧಿಸುವಂತ[illegible] ಈ ಸುಂದರ ಹೆಂಗಸರಿಬ್ಬರೂ ಒಬ್ಬನನ್ನೇ ಯಾವಾಗ ಪ್ರೀತಿಸುವಂತಾದರೋ ತೊಂದರೆ ಬಂದಿದ್ದು ನೀಲ್ ಮುಂಗನವನ ಜೀವನದಲ್ಲಿ.

ನೀಲ್ ಮುಂಗಿನವನನ್ನು ಬೇರೆಯವರೂ ಪ್ರೀತಿಸುವಂತಾದರು. ನೀಲ್ ನ[illegible] ಪ್ರಸಿದ್ಧಿ ಹೆಚ್ಚಾಯಿತು: ಮಹತ್ವದ ಪತ್ರಿಕೆಗಳಲ್ಲಿ ಬಿಟ್ಟಿಸಿದ. ನೀಲ್ ಮುಂಗ[illegible] ಜಗತ್ತಿನ ಪ್ರಮುಖ ಸಂಗತಿಯ ಬಗ್ಗೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ. ಪತ್ರಿಕೆಗಳು ನೀಲ್ ಮುಂಗಿನವನು ಒಂದು ಗಂಟೆಯಲ್ಲಿ ಸಾವಿರ ಮೈಲಿ ಕ್ರಮಿಸುವ ವಿಮಾನ ನಿರ್ಮಾಣದ ಬಗ್ಗೆ ಚಿಂತಿಸುತ್ತಾನೆ ಎಂದು ಅವನ ಚಿತ್ರ ಪ್ರಕಟಿಸಿದವು.........

'ಡಾಕ್ಟರ್' ಬಂದಿದ್ದಾರೆ' [illegible] ಬಟ್ಟೆಗಳ' [illegible] ಮನುಷ್ಯನನ್ನು ಬದಲಿಸಿಗೆ ಹಾನಿ! ಈ ಕುರಿತು ನೀಲ್ ಮುಂಗಿನವನು ಈ ಭಾಷಣವನ್ನು ಮಾಡಿ[illegible]

ಯಾವಾಗ ಜನ ಪ್ರಪಂಚದ ಅತಿ ಎತ್ತರದ ಪರ್ವತವನ್ನು ಆಕ್ರಮ ಮಾಡಿದ[illegible] ಕೇಳಿದರೂ ಅವರು ಈ ಬಗ್ಗೆ ನೀಲ್ ಮುಂಗಿನವನು ಏನನ್ನು ಹೇಳುತ್ತಾ[illegible] ಕೇಳಿದರು.

ನೀಲ್ ಮುಂಗಿನವನು ಒಂದು ಸಂಗತಿಯ ಬಗ್ಗೆ ಏನನ್ನು ಹೇಳದೆ ಹೋ[illegible] ಅದು ಸಾಧ್ಯವಾಗುತ್ತಿರಲಿಲ್ಲ. ನೀಲ್ ಮುಂಗಿನವನು ನಿರೀಕ್ಷಿಸಿದಂತೆ ಈ ವಿಷಯ[illegible] ಚರ್ಚೆಯಾಗುವುದೇ! ಚಿತ್ರಕಲೆ, ನಡುವೆಯ ನೃತ್ಯ, ಸಂಗೀತ, ಛಾಯಾ[illegible]

ಜನತೆಯ ಪಕ್ಷ!" ಎಂದೆಲ್ಲ ಘೋಷಣೆಯನ್ನು ಕೂಗುತ್ತ ಒಂದು ರಾಜಕೀಯ ಪಕ್ಷ ಆಗಮಿಸಿತು.

ಇದರ ವಾಸನೆಯನ್ನು ಬೇರೆಲ್ಲ ಪಕ್ಷದ ಸದಸ್ಯರು ಅರಿತರು. ಅವರು ನೀಳ ಮೂಗಿನವನ ಕಾರ್ಯದರ್ಶಿನಿಯೊಬ್ಬಳನ್ನು ಹಿಡಿದು ಅವನ ವಿರುದ್ಧ ನೋವನ್ನುಂಟು ಮಾಡುವ ಒಂದು ಹೇಳಿಕೆ ಕೊಡಿಸಿದರು. "ನೀಳ ಮೂಗಿನವನು ಜನತೆಯನ್ನು ನಿರಾಶೆಗೊಳಿಸಿದ್ದಾನೆ! ಈ ಮೂಲಕ ಅವರೆಲ್ಲರನ್ನು ವಂಚಿಸಿದ್ದಾರೆ. ಈ ವಂಚನೆಯಲ್ಲಿ ನನ್ನನ್ನೂ ಭಾಗಿಯನ್ನಾಗಿ ಮಾಡಿದ್ದಾರೆ. ನಾನು ಈ ಸತ್ಯವನ್ನು ಸಾರ್ವಜನಿಕರಿಗೆ ಬಹಿರಂಗಪಡಿಸುವೆ; ಆ ನೀಳ ಮೂಗು ರಬ್ಬರಿನಿಂದ ಮಾಡಲ್ಪಟ್ಟಿದ್ದು !"

ಎಲ್ಲಾ ವೃತ್ತ ಪತ್ರಿಕೆಗಳೂ ತಮ್ಮ ಮುಖ ಪುಟಗಳಲ್ಲಿ ಇದನ್ನು ಬರೆದವು. ನೀಳ ಮೂಗಿನವನ ಮೂಗು ರಬ್ಬರಿನಿಂದ ಮಾಡಲ್ಪಟ್ಟಿದೆ ಎಂದೆಲ್ಲ ಅಚ್ಚು ಮಾಡಿದವು.

ಜನರು ಈ ಬಗ್ಗೆ ಸುಮ್ಮನಿದ್ದರೆ? ಪ್ರತಿಕ್ರಿಯೆ ವ್ಯಕ್ತಪಡಿಸದೆ ಬಿಟ್ಟರೆ? ಅಧ್ಯಕ್ಷರಿಗೆ ಪ್ರಪಂಚದಾದ್ಯಂತ ತಂತಿ, ಫೋನ್ ಕರೆಗಳು, ಪತ್ರಗಳು ಬರುವಂತಾದವು. ಅವರಿಗೆ ನೆಮ್ಮದಿಯೇ ದೊರೆಯದಾಯಿತು. "ನೀಳ ಮೂಗಿನವನ ರಬ್ಬರ್ ಮೂಗನ್ನು ಕೀಳಿರಿ ! ನೀಳ ಮೂಗಿನವನ ಪಕ್ಷ ಕೆಳಗಿಳಿಯಲಿ ! ಹೋರಾಟ ಚಿರಾಯುವಾಗಲಿ."

ನೀಳ ಮೂಗಿನ ವಿರೋಧ ಪಕ್ಷ ಯಾವಾಗ ಈ ಹೇಳಿಕೆ ನೀಡಿತೋ, ವಿರೋಧ ಪಕ್ಷ ಮತ್ತೊಬ್ಬ ಕಾರ್ಯದರ್ಶಿಯನ್ನು ನೇಮಕ ಮಾಡಿಕೊಂಡಿತು. ಅವನು ಪ್ರತಿ ಹೇಳಿಕೆ ನೀಡುತ್ತಾ "ಆತ್ಮೀಯ ದೇಶ ಬಾಂಧವರೆ, ಪ್ರಜೆಗಳೇ ! ಆಕೆ ಹೇಳಿರುವುದು ಸತ್ಯಕ್ಕೆ ದೂರವಾದುದು. ನಾಯಕ ನೀಳ ಮೂಗಿನವನು ಅವಳನ್ನು ಪ್ರೇಮಿಸದೆ ಹೋದ, ಇದು ಅವಳ ಸೇಡಿನ ಹೇಳಿಕೆಯಷ್ಟೇ. ಆಕೆಯು ನೀಳ ಮೂಗಿನವನ ಪ್ರಚಾರ ಹಾಗೂ ಐಶ್ವರ್ಯವನ್ನು ತನ್ನದಾಗಿಸಿಕೊಳ್ಳುವ ಯತ್ನ ಮಾಡಿದಳು. ಅವಳ ಸಹೋದರನೊಬ್ಬ ವಿರೋಧ ಪಕ್ಷವಲ್ಲಿದ್ದಾನೆ. ಬೇರೆ ಪಕ್ಷದವರಿಗೆ ನಿಜವಾದ ಸಂಗತಿಯ ತಿಳಿಯಪಡಿಸುವೆ. ನಾನೇ ನಾಯಕ ನೀಳ ಮೂಗಿನವನ ನಂಬುಗೆಯ ಕಾರ್ಯದರ್ಶಿ. ನೀಳ ಮೂಗಿನವನ ಮೂಗು ರಬ್ಬರಿನಿಂದ ಮಾಡಿದ್ದಲ್ಲ. ನನ್ನ ಹೃದಯ ಸಾಕ್ಷಿಯಾಗಿ ಅದು ಸಹಜವಾದುದು. ಈ ಸಂಧಿಗ್ದ ಪರಿಸ್ಥಿತಿಯಲ್ಲಿ ನೀಳ ಮೂಗಿನವನನ್ನು ಬೆಂಬಲಿಸುವಂಥವರು ಚಿರಾಯುವಾಗಲಿ, ಅವರಿಗೆ ಜನತೆಯ ಅಭಿವೃದ್ಧಿ ಹೊರತು ಬೇರೇನೂ ಅಪೇಕ್ಷೆ ಇಲ್ಲ. ಹೋರಾಟ ಚಿರಾಯುವಾಗಲಿ !"

ಏನು ಮಾಡುವುದು? ಜನತೆಯ ಮನದಲ್ಲಿ ಕಳವಳ ಹುಟ್ಟಿತು. ನೀಳ ಮೂಗಿನವನ ವಿರೋಧ ಪಕ್ಷದ ನಾಯಕ ಸರ್ಕಾರ ಮತ್ತು ಅಧ್ಯಕ್ಷರಲ್ಲಿನ ನ್ಯೂನತೆಯನ್ನು ಹುಡುಕ ತೊಡಗಿದ! ಅವಿವೇಕಿ ಸರ್ಕಾರ! ಅವರು "ನೀಳ ಮೂಗಿನವರಲ್ಲೇ ಪ್ರಧಾನ ಎಂಬ ಬಿರುದು ಬೇರೆ ಕೊಟ್ಟಿದೆ." ಜನತೆಯನ್ನು ತಪ್ಪು ದಾರಿಗೆ ಎಳೆದವನು. ಅವರು ಅವನಿಗೆ ಚಿನ್ನದ ಪದಕದ ಸರವನ್ನೇ ನೀಡಿದರು. ಅಧ್ಯಕ್ಷರೂ ಕೂಡ ಈ ವಂಚನೆಯಲ್ಲಿ ಭಾಗಿಯಾಗಿದ್ದಾರೆ. ರಾಷ್ಟ್ರೀಯತೆಯ ನಂಬಿಕೆಗೆ ದ್ರೋಹ ಉಂಟು ಮಾಡಿದ್ದಾರೆ. ಅಧ್ಯಕ್ಷರು ರಾಜೀನಾಮೆ ನೀಡಬೇಕು. ಮಂತ್ರಿ ಮಂಡಲವೂ ರಾಜೀನಾಮೆ ನೀಡಬೇಕು. ನೀಳ ಮೂಗಿನವನನ್ನು ಕೊಲ್ಲಬೇಕು !'

ಅಧ್ಯಕ್ಷರು ಕೋಪವನ್ನು ವ್ಯಕ್ತಪಡಿಸಿದರು. ಒಂದು ಬೆಳಿಗ್ಗೆ ಸೈನಿಕರು ಹಾಗೂ ಅವರ ಟ್ಯಾಂಕುಗಳು ಆ ಬಡ ನೀಳ ಮೂಗಿನವನ ಮನೆಯನ್ನು ಮುತ್ತಿಗೆ ಹಾಕಿದರು. ಅವನನ್ನು ಬಂಧಿಸಿ ಕರೆದೊಯ್ದರು.

ಕೆಲವು ದಿನಗಳ ಕಾಲ ನೀಳ ಮೂಗಿನವನ ಸುದ್ದಿಯೇ ಇಲ್ಲವಾಯಿತು. ಜನರು ಅವನ ಇರುವಿಕೆಯನ್ನೇ ಮರೆತರು. ತರುವಾಯ ಅಣುಬಾಂಬಿನ ಪರಿಣಾಮದ ಹೊಸ ಸುದ್ದಿಯು ಬಂತು! ಏನಾಯಿತೆಂದು ನೀವು ಬಲ್ಲಿರೆ! ಜನರು ಎಲ್ಲವನ್ನು ಮರೆತಿರುವಾಗ ಅಧ್ಯಕ್ಷರಿಂದ ಸಂಕ್ಷಿಪ್ತ ಪ್ರಕಟಣೆಯೊಂದು ಹೊರಬಿತ್ತು. “ಮಾರ್ಚಿ ೯ ರಂದು ನೀಳ ಮೂಗಿನವನ ವಿಚಾರಣೆ ನಡೆಯುತ್ತದೆ. ಪ್ರತಿನಿಧಿಗಳಾಗಿ ೪೮ ರಾಷ್ಟ್ರಗಳಿಂದ ಬರಲಿರುವ ನುರಿತ ವೈದ್ಯರು ಅವನನ್ನು ಪರೀಕ್ಷಿಸುವರು. ವಿಶ್ವದ ಎಲ್ಲಾ ಪತ್ರಿಕೆಗಳು ತಮ್ಮ ವರದಿಗಾರರನ್ನು ಪ್ರತಿನಿಧಿಸಲಿವೆ. ವಿಶ್ವಾದ್ಯಂತ ನೋಡಲು ಅನುಕೂಲವಾಗುವಂತೆ ಸಭಾಕಾರ್ಯಕ್ರಮವನ್ನು ಚಿತ್ರೀಕರಿಸಲಾಗುವುದು; ಜನತೆ ನಿಶ್ಯಬ್ದತೆಯನ್ನು ಕಾಯ್ದುಕೊಂಡಿರಬೇಕು.”

ಎಷ್ಟಿದ್ದರೂ ಜನರು ಜನರೇ. ಅವರು ನಿಶ್ಯಬ್ದರಾಗಿರಲಿಲ್ಲ. ಹೆಚ್ಚಿನ ಸಂಖ್ಯೆಯಲ್ಲಿ ರಾಜಧಾನಿಗೆ ಆಗಮಿಸಿದರು. ಹೋಟೆಲುಗಳನ್ನು ಮುತ್ತಿದರು. ಸಾರ್ವಜನಿಕ ವಾಹನಗಳನ್ನು ಸುಟ್ಟರು. ಪೋಲಿಸ್ ಠಾಣೆಗಳಿಗೂ ಬೆಂಕಿ ಇಟ್ಟರು. ಸರ್ಕಾರಿ ಭವನಗಳನ್ನು ನಾಶಪಡಿಸಿದರು. ಅಲ್ಲಲ್ಲೆ ಕೋಮು ಗಲಭೆಯೂ ನಡೆಯಿತು. ನೀಳ ಮೂಗಿನವನಿಗಾಗಿ ಈ ಹೋರಾಟದಲ್ಲಿ ಬಹಳಷ್ಟು ಸಂಖ್ಯೆಯಲ್ಲಿ ಸ್ತ್ರೀ ಪುರುಷರು ಆಹುತಿಯಾದರು.

ಮಾರ್ಚ್ ೯, ೧೧ ಘಂಟೆ ಅಧ್ಯಕ್ಷರ ಭವನದ ಮುಂದಿನ ವೃತ್ತದಲ್ಲಿ ಜನಸಾಗರವೇ ಸೇರಿತ್ತು. “ಪರೀಕ್ಷೆ ಪ್ರಾರಂಭವಾಗುತ್ತಿದೆ! ಜನರು ಶಾಂತರಾಗಿರಬೇಕು” ಎಂದು ಧ್ವನಿವರ್ಧಕಗಳು ಗುಡುಗಿದವು.

ಅಧ್ಯಕ್ಷರು ಮತ್ತು ಸಚಿವರ ಸಮ್ಮುಖದಲ್ಲೇ ವೈದ್ಯರು ನೀಳ ಮೂಗಿನವನನ್ನು ಸುತ್ತುವರಿದರು. ಒಬ್ಬ ವೈದ್ಯರಂತೂ ನೀಳ ಮೂಗಿನವನ ಮೂಗಿನ ಹೊಳ್ಳೆಯನ್ನು ಒಡಿದರು. ತಕ್ಷಣವಲ್ಲಿ ಅವನು ತನ್ನ ಬಾಯನ್ನು ವಿಶಾಲವಾಗಿ ತೆರೆದನು. ಮತ್ತೊಬ್ಬ ವೈದ್ಯ ಸೂಜಿಯಿಂದ ಮೂಗಿನ ತುದಿಯನ್ನು ಚುಚ್ಚಿದ. ಅವನಿಗೆ ಆಶ್ಚರ್ಯವಾಗುವಂತೆ ಅವನ ಮೂಗಿನ ಹೊಳ್ಳೆಯಿಂದ ಒಂದು ತೊಟ್ಟು ರಕ್ತ ಸ್ರವಿಸಿತು.

“ಮೂಗು ವಾಸ್ತವವಾದುದು, ರಬ್ಬರಿನ ಕೃತಕ ಮೂಗಲ್ಲ” ಎಂದು ವೈದ್ಯರು ಒಟ್ಟಭಿಪ್ರಾಯ ನೀಡಿದರು.

ಒಬ್ಬಾಕೆ ಕಾರ್ಯದರ್ಶಿನಿಯು ನೀಳ ಮೂಗಿನವನ ಮೂಗಿನ ಹೊಳ್ಳೆಯನ್ನು ಮುತ್ತಿಟ್ಟಳು.

“ನೀಳ ಮೂಗಿನವನು ಚಿರಾಯುವಾಗಲಿ, ನೀಳ ಮೂಗು ಹೊಂದಿರುವವನೇ ಚಿರಾಯು! ಪ್ರಗತಿಶೀಲ ಜನತೆಯ ಪಕ್ಷ ನೀಳ ಮೂಗಿನವನದು ಇದು ಚಿರಾಯುವಾಗಲಿ!”

ಈ ಕೂಗಾಟ ಮತ್ತು ಪರಿದಾಡುವಿಕೆ ಮುಗಿಯಿತು. ಅಧ್ಯಕ್ಷರು ಇನ್ನೊಂದು

ಯೋಜನೆ ಹಾಕಿದರು. ನೀಳ ಮೂಗಿನವನನ್ನು ಸಂಸತ್ತಿಗೆ ಸದಸ್ಯನನ್ನಾಗಿ ನಾಮಕರಣ ಮಾಡಿದರು. ಅದು ಇದೆಲ್ಲಕ್ಕೂ ತೆರೆ ಎಳೆಯಿತು.

ಆದರೆ ನೀಳ ಮೂಗಿನವನನ್ನು ವಿರೋಧ ಪಕ್ಷಗಳು ಒಂದಾಗಿ ಮುಂದೆ ಬಂದು, "ಮಂತ್ರಿ ಮಂಡಲ ರಾಜೀನಾಮೆ ನೀಡಲಿ! ಇದು ಜನತೆಯನ್ನು ವಂಚಿಸುವ ತಂತ್ರವಾಗಿದೆ! ಅದು ರಬ್ಬರಿನ ಮೂಗು!" ಎಂದು ಕೂಗತೊಡಗಿದವು.

ಸತತವಾಗಿ ಸುಳ್ಳಿನ ಸರಮಾಲೆಯನ್ನೇ ಹೇಳುತ್ತಾ ಬಂದರು. ಇದು ತಪ್ಪು ಕಲ್ಪನೆಗೆ ಮಾರ್ಗವಲ್ಲವೆ. ಈಗ ಬಡ ಪ್ರಜ್ಞಾವಂತರು ಏನು ಮಾಡಿಯಾರು?

ಅನುವಾದ: ಪರಮಶಿವ ನಡುಬೆಟ್ಟ

ಗಾಳಿ ಗೋಪುರಕ್ಕೆ ಶಿಲ್ಪನಿಯಮಗಳಿಲ್ಲ.

ಜಿ. ಕೆ. ಚೆಸ್ಟರ್‌ಟನ್

ಸಾಮಾಜಿಕ ನ್ಯಾಯದಿಂದ ಹೊರತಾದ ಆರ್ಥಿಕ ಬೆಳವಣಿಗೆ ಅಮಾನವೀಯ, ಆದರೆ ಆರ್ಥಿಕ ಬೆಳವಣಿಗೆಯಿಲ್ಲದ ಸಾಮಾಜಿಕ ನ್ಯಾಯ ಅಸಾಧ್ಯ.

ನಾನಿ ಪಾಲ್ಖೀವಾಲಾ

ಶ್ರೀಸಾಮಾನ್ಯ ಉವಾಚ—ಸಂಜೆಗಣ್ಣಿನ ಹಿನ್ನೋಟ

ಎ. ಎಸ್. ಮೂರ್ತಿರಾವ್

ಮುಂದುವರಿದದ್ದು

೪. ಹಳ್ಳಿಯಿಂದ ಶಹರಿಗೆ

ಹಳ್ಳಿಗೂ ಷಹರಿಗೂ ವಿಧಿನಿಷೇಧಗಳ ವಿಷಯದಲ್ಲಿ ಅಷ್ಟೇನೂ ವ್ಯತ್ಯಾಸವಿರಲಿಲ್ಲ. ಆದ್ದರಿಂದ ಹಿಂದಿನ ಅಧ್ಯಾಯ ಅಕ್ಕಿಹೆಬ್ಬಾಳಿನ ಕಥೆಗೂ ನಮ್ಮ ಮೈಸೂರು ವಾಸದ ಕಥೆಗೂ ನಡುವೆ ಕಟ್ಟಿದ ಸೇತುವೆ ಎನ್ನಬಹುದು. ನಾನು ಮೊದಲು ಮೈಸೂರಿಗೆ ಬಂದದ್ದು ೧೯೧೨ರಲ್ಲಿ—ನನ್ನ ತಂದೆ ತಾಯಿಯರು ಮತ್ತು ಒಬ್ಬ ತಮ್ಮನೊಡನೆ. ನಮ್ಮ ಅಜ್ಜ ಅಕ್ಕಿಹೆಬ್ಬಾಳಿನಲ್ಲೇ ಇದ್ದರೆಂದು ನೆನಪು. ನಾವು ಮೈಸೂರಿಗೆ ಬಂದದ್ದು ಅಲ್ಲೇ ನೆಲಸುವ ಉದ್ದೇಶದಿಂದಲ್ಲ. ನನ್ನ ತಂದೆಗೆ ವಾಯು ಬರುವುದು ಕಡಮೆಯಾಗಿತ್ತಾದರೂ ನಿಂತಿರಲಿಲ್ಲ. ನಂಜುಂಡೇಶ್ವರನ ಸೇವೆ ಮಾಡಿದರೆ ವಾಸಿಯಾಗಬಹುದು ಎಂದು ಕೆಲವರು ಸಲಹೆ ಕೊಟ್ಟರು. ನಂಜುಂಡೇಶ್ವರ ಭವರೋಗ ವೈದ್ಯನಷ್ಟೇ. (ಖಾಯಿಲೆ ವಾಸಿಮಾಡಿಕೊಂಡು ಬದುಕಬೇಕೆಂಬ ಆಸೆಯಿರುವವರು "ಭವ" ರೋಗ ವೈದ್ಯನ ನೆರವು ಬೇಡಬಹುದೆ! ಎಂಥ ಐರನಿ!) ಆ ಸೇವೆಗೋಸ್ಕರ ನಾವು ಮೈಸೂರಿಗೆ ಬಂದು ಗಿರಿಭಟ್ಟರ ತಮ್ಮಯ್ಯನವರ ಮನೆಯಲ್ಲಿ ಇಳಿದುಕೊಂಡೆವು. ಒಂದು ವಾರ ಅವರೊಡನೆಯೇ ಇದ್ದು ಅನಂತರ ಅವರ ಮನೆಯ ಒಂದು ಭಾಗದಲ್ಲೇ ತಾತ್ಕಾಲಿಕವಾಗಿ ಸಂಸಾರ ಹೂಡಿದೆವು. ತಮ್ಮಯ್ಯನವರು ನಮ್ಮ ನಾರಾಯಣ ಚಿಕ್ಕಪ್ಪನಿಗೆ ಹೆಣ್ಣು ಕೊಟ್ಟ ಮಾವ. ಸಂಗೀತದ ಮತ್ತು ನಾಟಕದ ಪ್ರಪಂಚದಲ್ಲಿ ಅವರು ಪ್ರಸಿದ್ಧರು. ಬಿಡಾರಂ ಕೃಷ್ಣಪ್ಪನವರೂ ಬೆಂಗಳೂರು ನಾಗರತ್ನಮ್ಮನವರೂ ಸ್ವಲ್ಪ ಕಾಲ ಅವರಲ್ಲಿ ಶಿಷ್ಯವೃತ್ತಿ ನಡೆಸಿದರೆಂದು ಸಂಗೀತಕಲಾನಿಧಿ ವಾಸುದೇವಾಚಾರ್ಯರು ತಮ್ಮ 'ನಾ ಕಂಡ ಕಲಾವಿದರು' ಎಂಬ ಪುಸ್ತಕದಲ್ಲಿ ಬರೆದಿದ್ದಾರೆ.

ತಮ್ಮಯ್ಯನವರಿಗೆ ಅರಮನೆಯಲ್ಲೂ ಬಳಕೆಯಿತ್ತು. ಗೌರೀಹಬ್ಬದ ದಿನ ಅರಮನೆಯಿಂ ಅವರ ಮನೆಗೆ ಮೊರದ ಬಾಗಿನ ಬಂದದ್ದು ನೆನಪಿದೆ. ಅವರು ಅರಮನೆ ನಾಟಕ ಕಂಪೆನಿಯ ಗಣ್ಯ ಸದಸ್ಯರು. ಆ ಕಂಪೆನಿಗಾಗಿ 'ಗಯಚರಿತ್ರೆ' ಎಂಬ ನಾಟಕವನ್ನು ಬರೆ ಸಾಹಿತ್ಯ ಪ್ರಪಂಚದಲ್ಲೂ ಖ್ಯಾತಿ ಗಳಿಸಿದ್ದರು. ಆ ನಾಟಕ ರಂಗಸ್ಥಳದಲ್ಲಿ ಪ್ರದರ್ಶಿ ವಾಯಿತಾದರೂ ನನಗೆ ಅದನ್ನು ನೋಡುವ ಅವಕಾಶ ಸಿಕ್ಕಲಿಲ್ಲ. ಅದು ಅಚ್ಚಾಗಿತ್ತೋ ಇಲ್ಲವೋ—ಅದೂ ತಿಳಿಯದು.

ಗಿರಿಭಟ್ಟರ ತಮ್ಮಯ್ಯನವರನ್ನು ನಾನು ಮೊದಲು ಕಂಡಾಗಲೇ ಅವರು ಹಣ್ಣು ಹಣ್ಣು ಮುದುಕರು—ಅಥವಾ ನನ್ನ ಕಣ್ಣಿಗೆ ಹಾಗೆ ಕಂಡರು. ಅವರು ವಾಸವಾ ದ್ದದ್ದು ಕೋಟೆಯ ಒಳಗೆ, 'ತ್ರಿಣೇಶ್ವರನ' (ತ್ರಿನಯನೇಶ್ವರನ) ಗುಡಿಯ ಉತ್ತರಪಕ್ಕ ಇದ್ದ ಬೀದಿಯಲ್ಲಿ. ಆಗ ಕೋಟೆಯಲ್ಲಿ ಅರಮನೆಯ ಸುತ್ತ ಈಗಿರುವಂತೆ ವಿಶಾಲವಾ ಬಯಲೂ ಉಪವನಗಳೂ ಇರಲಿಲ್ಲ. ಅರಮನೆಯ ಎದುರಿಗೆ ನಗಾರಿಖಾನೆ, ಅದ ಉತ್ತರಕ್ಕೆ ಸದಾ ಹಬೆಯನ್ನು ಉಗಿಯುತ್ತಿದ್ದ, ಅರಮನೆಗೆ ಬೇಕಾಗುವಷ್ಟು ವಿದ್ಯುತ್ತನ್ನು ಉತ್ಪಾದಿಸುವ ಯಂತ್ರಾಗಾರ. ಆ ವೇಳೆಗೆ ಮೈಸೂರಿಗೆ ವಿದ್ಯುಚ್ಛಕ್ತಿ ಬಂದಿತ್ತು. ಯಾ ದಾದರೂ ಕಾರಣದಿಂದ ವಿದ್ಯುತ್ ಇಲಾಖೆಯ ಸರಬರಾಜು ನಿಂತರೆ ತಮ್ಮದೇ ಒಂದು ಯಂತ್ರವಿರಲಿ ಎಂದುಕೊಂಡು ಅರಮನೆಯವರು ಅದನ್ನು ಸ್ಥಾಪಿಸಿದ್ದಿರಬಹುದು. ಕೋಟೆಯಲ್ಲಿ ಈಗ ಇರುವ ದೇವಾಲಯಗಳೆಲ್ಲವೂ ಆಗಲೂ ಇದ್ದವು. ಜೊತೆಗೆ ಕೋಟೆ ತುಂಬ ಮನೆಗಳು—ಸುಮಾರು ೭೦೦-೮೦೦ ಮನೆಗಳಿದ್ದಿರಬಹುದು. ಯುವರಾಜರು ಕಾಂತರಾಜೇ ಅರಸರು (ಅವರ ಅರಮನೆಯೂ ಸುತ್ತಿನ ೩೦೦-೪೦೦ ಎಕರೆ ಜಮೀನೂ ಈಗ ಮಾನಸಗಂಗೋತ್ರಿಗೆ ಸೇರಿವೆ), ಲಕ್ಷ್ಮೀಕಾಂತರಾಜೇ ಅರಸರು—ಇಂಥ ನಾಲ್ಕೈದು ಅರಸರು ಹೊರತಾಗಿ ಹೆಚ್ಚುಕಡಮೆ ಅರಸು ಕುಲದವರೆಲ್ಲ ಕೋಟೆಯೊಳಗೇ ವಾಸಿಸುತ್ತಿದ್ದರು. ಅರಮನೆಯ ಆಶ್ರಯದಲ್ಲಿ ಜೀವನ ನಡೆಸುತ್ತಿದ್ದವರು—ಅರಮನೆಯ ಅಧಿಕಾರಿಗಳು, ಆಸ್ಥಾನ ವಿದ್ವಾಂಸರು, ಪುರೋಹಿತರು, ಮೊದಲಾದವರೆಲ್ಲ ವಾಸಿಸುತ್ತಿದ್ದದ್ದು ಕೋಟೆಯೊಳಗೇ. ಉತ್ತರದ ಹೆಬ್ಬಾಗಿಲನ್ನು ದಾಟಿ ಒಳಕ್ಕೆ ಹೋದೊಡನೆಯೇ ಪರಿಮಳದಿಂದ ದಟ್ಟವಾದ ವಾತಾವರಣದ ಅನುಭವವಾಗುತ್ತಿತ್ತು. ಆ ಬೀದಿಗೆ ಹೂವಿನ ಅಂಗಡಿ ಬೀದಿ ಎಂದೇ ಹೆಸರು. ಕೋಟೆ ಜನರಿಂದ ತುಂಬಿ ತುಳುಕುತ್ತಿತ್ತು.

ಸುಮಾರು ೧೯೧೪-೧೫ರಲ್ಲೇ ಕೋಟೆಯಲ್ಲಿದ್ದವರಿಗೆಲ್ಲ ಬೇರೆ ಕಡೆ ನಿವೇಶನಗಳನ್ನು ಕೊಟ್ಟು ಒಳಗಿದ್ದ ಮನೆಗಳನ್ನು ಒಡೆಯಲಾರಂಭಿಸಿದರು ಎಂದು ನೆನಪು. ಗಿರಿಭಟ್ಟರ ತಮ್ಮಯ್ಯನವರು ಕೋಟೆಯ ಮನೆಯನ್ನು ಬಿಟ್ಟು ಮೇಲೆ ಮಂಡಿಪೇಟೆಗೆ ಸೇರಿದ ಕಾಳಮ್ಮನ ಗುಡಿ ಬೀದಿಯಲ್ಲಿ ವಾಸಿಸುತ್ತಿದ್ದರು. ಅವರೊಡನೆ ನನಗೆ ಹೆಚ್ಚು ಬಳಕೆಯಿರಲಿಲ್ಲವಾದರೂ ನನ್ನ ಚಿಕ್ಕಪ್ಪ ಚಿಕ್ಕಮ್ಮ (ತಮ್ಮಯ್ಯನವರ ಮಗಳು) ನನ್ನನ್ನು ಬಹಳ ಆದರದಿಂದ ಕಾಣುತ್ತಿದ್ದರು; ಅಲ್ಲದೆ ಅವರ ಹಿರಿಯ ಮಗ ನನ್ನ ಸಹಪಾಠಿ ಮತ್ತು ಗೆಳೆಯ. ಆದ್ದರಿಂದ ನಾನು ಅವರ ಮಂಡಿಪೇಟೆ ಮನೆಗೂ ಎಷ್ಟೋ ಸಾರಿ ಹೋಗುತ್ತಿದ್ದೆ—ನಾನು ಹೈಸ್ಕೂಲು ವಿದ್ಯಾರ್ಥಿಯಾಗಿದ್ದ ಕಾಲದಲ್ಲಿ. ಅವರು ಕೋಟೆಯ ಮನೆಯಲ್ಲಿದ್ದಾಗ ನಾನಿನ್ನೂ ಶಾಲೆಗೆ ಸೇರಿಯೇ ಇರಲಿಲ್ಲ.

ಮೈಸೂರನ್ನೇ ಬಿಡಾರ ಮಾಡಿಕೊಂಡು ನನ್ನ ತಾಯಿತಂದೆ ನಂಜನಗೂಡಿಗೆ ಹೋಗಿ ದೇವರ ಸೇವೆ ಮಾಡಿಕೊಂಡು ಬರುತ್ತಿದ್ದರು. ಆ ಸೇವೆ ಹಲವು ವಿಧವಾದದ್ದು. ಮಡೆ ಹೊರಳುವುದು, ಹೆಜ್ಜೆ ನಮಸ್ಕಾರ, ದೇವರಿಗೆ ಅಷ್ಟೋತ್ತರ, ಸಹಸ್ರನಾಮ, ದೇವಿಗೆ ಕುಂಕುಮಾರ್ಚನೆ, ನಂಜುಂಡೇಶ್ವರನಿಗೆ ಶಾಲ್ಯನ್ನದ ಅಭಿಷೇಕ ಇತ್ಯಾದಿ. ಇವುಗಳಲ್ಲಿ ಮೊದಲ ಎರಡರ ಪರಿಚಯ ಇಂದಿನ ಯುವಕರಿಗೆ ಇರಲಾರದು. ಹೊಳೆಯಲ್ಲಿ ಸ್ನಾನ ಮಾಡಿಕೊಂಡು ಒದ್ದೆಬಟ್ಟೆಗಳನ್ನು ಉಟ್ಟೇ ನೆಲದ ಮೇಲೆ (ಬೀದಿಯ ನೆಲದ ಮೇಲೆ) ಹೊರಳುತ್ತ ಹೊರಳುತ್ತಲೇ ದೇವಸ್ಥಾನದೊಳಕ್ಕೆ ಬರುವುದು—ಇದು ಮಡೆ ಹೊರಳುವುದು. ಈ ಸೇವೆಯಲ್ಲೇ ಶ್ರೇಷ್ಠವಾದ ಪ್ರಭೇದವೆಂದರೆ: ಶಿವಕೂಟದಲ್ಲಿ ಭಕ್ತರ (ಅಲ್ಲಿ ಊಟ ಮಾಡಿದವರೆಲ್ಲ ಭಕ್ತರೆಂದೇ ಪರಿಗಣಿಸಬೇಕು) ಊಟವಾದ ಮೇಲೆ ಅವರ ಎಂಜಲೆಲೆಯ ಮೇಲೆ ಹೊರಳುವುದು. ಇದಾದ ಮೇಲೆ ಮತ್ತೆ ಹೊಳೆಗೆ ಹೋಗಿ ಸ್ನಾನ ಮಾಡಿ ಹಿಂದಿರುಗುವಾಗ ಒಂದೊಂದು ಹೆಜ್ಜೆಗೂ ಒಂದೊಂದು ಸಾಷ್ಟಾಂಗ ನಮಸ್ಕಾರ ಮಾಡುತ್ತ ದೇವಸ್ಥಾನಕ್ಕೆ ಹೋಗುವುದು—ಇದು ಹೆಜ್ಜೆ ನಮಸ್ಕಾರ. ಈ ಬಗೆಯ ದೇವರ ಸೇವೆಯ ಪ್ರಸ್ತಾಪ ಬೇರೊಂದು ಕಡೆ ಬರಲಿದೆ. ನನಗೆ ಆಗಿನ ಚಿಕ್ಕವಯಸ್ಸಿನಲ್ಲಿ ಕೂಡ ಇದು ಅಸಹ್ಯವೆನ್ನಿಸಿತು ಎಂದು ಮಾತ್ರ ಇಲ್ಲಿ ಹೇಳುತ್ತೇನೆ. ನನ್ನ ತಂದೆ ಹೊಳೆಯಿಂದ ದೇವಸ್ಥಾನದ ವರೆಗೇನೊ ಮಡೆ ಹೊರಳಿದರು, ಹೆಜ್ಜೆ ನಮಸ್ಕಾರವನ್ನೂ ಹಾಕಿದರು; ಶಿವಕೂಟದಲ್ಲಿ ಮಡೆ ಹೊರಳುವ ಗೋಜಿಗೆ ಹೋಗಲಿಲ್ಲ. ಈ ಸೇವೆ ಒಂದು ವಾರವೋ ಹತ್ತು ದಿನವೋ ನಡೆದಿರಬೇಕು. ಆಗ ನನ್ನ ತಂದೆಗೆ ಕನಸಾಯಿತಂತೆ: ವಿಭೂತಿ ಇಟ್ಟ ಬ್ರಾಹ್ಮಣನೊಬ್ಬ ಬಂದು "ಹಿಂದಿನ ಜನ್ಮದಲ್ಲಿ ಕರ್ಮ ಮಾಡಿದ್ದೀಯೆ. ಅದರ ಫಲ ಮಾತ್ರ ಬೇಡ ಅಂತೀಯಲ್ಲ?" ಎಂದು ನಕ್ಕನಂತೆ. ಸೇವೆ ಅಲ್ಲಿಗೇ ಮುಗಿಯಿತು. ನಾವೆಲ್ಲ ಮೈಸೂರಿಗೆ ಬಂದು ಅಲ್ಲಿಂದ ಅಕ್ಕಿಹೆಬ್ಬಾಳಿಗೆ ಪ್ರಯಾಣಮಾಡಿದೆವು.

ಗಿರಿಭಟ್ಟರ ತಮ್ಮಯ್ಯನವರ ಮನೆಯಲ್ಲಿದ್ದಾಗ ಎಂ. ಸುಬ್ಬಯ್ಯನವರು ನಮ್ಮ ತಂದೆಯನ್ನು ನೋಡಲು ಬಂದರು. ಅವರ ನಮ್ಮ ಸಂಬಂಧ ಅಷ್ಟೇನೂ ಹತ್ತಿರದ್ದಲ್ಲ. ಹತ್ತು ತಲೆಮಾರಿನ ಹಿಂದೆ ಅವರ ಪೂರ್ವಜರೂ ನಮ್ಮ ಪೂರ್ವಜರೂ ಅಣ್ಣತಮ್ಮಂದಿರಾಗಿದ್ದರಂತೆ. ಸಂಬಂಧ ದೂರವಾದರೂ ಅಯ್ಯ (ಸುಬ್ಬಯ್ಯನವರನ್ನು ಎಲ್ಲರೂ 'ಅಯ್ಯ' ಎಂದೇ ಕರೆಯುತ್ತಿದ್ದರು) ನಮ್ಮೊಡನೆ ಮತ್ತು ನಮ್ಮ ದೊಡ್ಡಪ್ಪ ಚಿಕ್ಕಪ್ಪಂದಿರೊಡನೆ ಬಳಕೆಯಿಟ್ಟುಕೊಂಡಿದ್ದರು. ಅವರು ಕೊಟ್ಟ ಭೇಟಿ ನನ್ನ ಜೀವನ ಪಥ ಯಾವುದು ಎಂಬುದನ್ನು ನಿರ್ಣಯಿಸಿತು. ಆ ವೇಳೆಗೆ ಪಿತ್ರಾರ್ಜಿತ ಆಸ್ತಿಯಲ್ಲಿ ನಮಗೆ ಬರಬೇಕಾದ ಪಾಲು ಬಂದಿತ್ತಷ್ಟೆ. ಅದನ್ನು ನೋಡಿಕೊಳ್ಳುವುದಕ್ಕೆ, ರೂಢಿಸುವುದಕ್ಕೆ ಊರಿನಲ್ಲಿ ಒಬ್ಬರು ನೆಲಸಬೇಕು. ಹಿರಿಯ ಮಗನಾದ ನನ್ನನ್ನು ಆ ಕೆಲಸಕ್ಕೆ ಹಾಕಿಕೊಳ್ಳಬಹುದು ಎಂಬ ಯೋಚನೆಯಿತ್ತು. ಅಯ್ಯ ಭೇಟಿ ಕೊಟ್ಟ ದಿನ ನನ್ನನ್ನು ಕಂಡು "ಯಾವ ಕ್ಲಾಸಿನಲ್ಲಿ ಓದುತ್ತಿದ್ದಿ?" ಎಂದು ಕೇಳಿದರು. ನಮ್ಮ ತಂದೆ "ನಾಗಮಂಗಲ ಬಿಟ್ಟಮೇಲೆ ಅವನನ್ನು ಸ್ಕೂಲಿಗೆ ಕಳಿಸುವುದಕ್ಕೇ ಆಗಿಲ್ಲ. ಓದು ಬರಾವು ಬರುತ್ತೆ. ಲೋವರ್ ಸೆಕೆಂಡರಿ ಪ್ಯಾಸು ಮಾಡಲಿ. ಜಮೀನು ನೋಡಿಕೊಳ್ಳುವುದಕ್ಕೆ ಇನ್ನೇನು ವಿದ್ಯೆ ಬೇಕು!" ಎಂದರು ಆಗ ಅಯ್ಯ ಬಹಳ ಗಂಭೀರ

ವಾಗಿ ಹೇಳಿದರು "ಸುಬ್ರಾಯ, ನೀನು ದೊಡ್ಡ ತಪ್ಪು ಮಾಡುತ್ತಿದ್ದೀಯೆ ಅಥವಾ ಹಾಗನ್ನಬಾರದೇನೊ. ನೀನೇನು ಮಾಡ್ತೀಯೆ. ನಿನಗೆ ಬಂದ ವಿಪತ್ತಿನಲ್ಲಿ ನೀನು ಉಳಿದದ್ದೇ ಹೆಚ್ಚು. ಅಲ್ಲದೆ ಹುಡುಗನ್ನ ಸ್ಕೂಲಿಗೆ ಹಾಕಬೇಕು ಅಂದರೆ ಅಕ್ಕಿಹೆಬ್ಬಾಳಿನಲ್ಲಿ ಸ್ಕೂಲೇ ಇಲ್ಲವಲ್ಲ!....ಈ ವರ್ಷ ಸ್ಕೂಲಿಗೆ ಸೇರುವ ಕಾಲ ಆಗಿಹೋಯಿತು. ಮುಂದಿನ ವರ್ಷ ಇವನನ್ನ ಮೈಸೂರಿಗೆ ಕಳಿಸಿಬಿಡು. ನಮ್ಮ ಮನೇಲೇ ಇದ್ದುಕೊಳ್ಳಲಿ. ನನಗೇನು ಈ ಚೋಟುದ್ದದ ಹುಡುಗ ಹೊರೆಯಲ್ಲ. ಅಂಬಲಿಯೋ ತುಂಬೆಸೊಪ್ಪೋ ನಮಗಾದದ್ದು ಅವನಿಗೂ ಆಗುತ್ತೆ" ಎಂದರು.

ನಮ್ಮ ತಂದೆಗೆ ಅವರ ದಾಕ್ಷಿಣ್ಯಕ್ಕೆ ಒಳಗಾಗಲು ಇಷ್ಟವಿಲ್ಲ. ಸ್ವಲ್ಪ ಹೊತ್ತು ಇವರೊಂದು ಕಡೆ ಅವರೊಂದು ಕಡೆ ಎಳೆದಾಡುವಂಥ ಮಾತು ನಡೆಯಿತು. ಕೊನೆಗೆ ಅಯ್ಯನೇ ಗೆದ್ದರು. "ನಿನಗೆ ಅಷ್ಟು ಸಂಕೋಚವಾದರೆ ಒಂದೆರಡು ಖಂಡುಗ ಭತ್ತ ಕಳಿಸು. ಅಂತೂ ಹುಡುಗನ್ನ ಹಳ್ಳೀಲಿ ಇಟ್ಟುಕೊಳ್ಳಬೇಡ; ಕೆಟ್ಟುಹೋಗುತ್ತಾನೆ" ಎಂದರು. ನಮ್ಮ ತಂದೆ ಒಪ್ಪಿದರು. ಆದರೆ ಅಕ್ಕಿಹೆಬ್ಬಾಳಿಗೆ ಹೋದಮೇಲೂ ಅವರ ಮನಸ್ಸು ಹೊಯ್ದಾಡುತ್ತಲೇ ಇತ್ತು. "ಹುಡುಗನ್ನ ಅವರ ಮನೆಗೆ ಕಳಿಸುವುದು ಸರಿಯಲ್ಲ. ಅಯ್ಯನದ್ದು ದೊಡ್ಡ ಮನಸ್ಸು, ನಿಜ. ಆದರೆ ಪಟ್ಟಣವಾಸದ ಜೀವನ, ಅವರವರ ಕಷ್ಟ ಅವರವರಿಗಿರುತ್ತೆ" ಎನ್ನುತ್ತಲೇ ಇದ್ದರು. ಅಯ್ಯ ಸುಗ್ಗಿಯ ಕಾಲದಲ್ಲಿ ತಮ್ಮ ಜಮೀನಿನ ಭತ್ತ ತೆಗೆದುಕೊಂಡು ಹೋಗಲು ಬಂದಾಗ ಹಿಂದೆ ಹೇಳಿದ್ದನ್ನೇ ಒತ್ತಿ ಹೇಳಿದರು. ಬೇಸಗೆಯ ರಜ ಕಳೆದ ಮೇಲೆ ನನ್ನನ್ನು ಮೈಸೂರಿಗೆ ಕಳಿಸುವುದು ಖಚಿತವಾಯಿತು.

ಆ ಬೇಸಗೆಯಲ್ಲೇ ನನಗೆ ಮುಂಜಿ (ಉಪನಯನ, ಗಾಯತ್ರೀ ಮಂತ್ರವನ್ನು ಉಪದೇಶಿಸುವ ಸಮಾರಂಭ) ಮಾಡಿದರು. ನಾಲ್ಕು ದಿನ ನನಗೆ ಎಂದೂ ಇಲ್ಲದ ಪ್ರಾಶಸ್ತ್ಯ. ಹೊಸ ಪಂಚೆಗಳು, ಹಸೆಯ ಮೇಲೆ ಕೂತು ಆರತಿ ಎತ್ತಿಸಿಕೊಳ್ಳುವುದು, ಬಂಧುಗಳ ಮನೆಯ ಮಹಿಳೆಯರೆಲ್ಲ ನನ್ನಿಂದ 'ಭವತಿ ಭಿಕ್ಷಾಂ ದೇಹಿ' ಹೇಳಿಸಿ ಭಿಕ್ಷೆ ಹಾಕುವುದು, ನಾಲ್ಕು ದಿನವೂ ಹಬ್ಬದ ಊಟ–ಇದನ್ನೆಲ್ಲ ಚಪ್ಪರಿಸುತ್ತ ಸವಿದೆ. ಜನಿವಾರ ಒಂದು ದೊಡ್ಡಸ್ತಿಕೆಯ ಚಿಹ್ನೆ ಎಂಬ ಭಾವನೆಯೂ ಬಂತು. ಅದು ಎಲ್ಲರಿಗೂ ಕಾಣಲೆಂದು ನಾಲ್ಕಾರು ದಿನ (ತಂದೆ 'ನಿನಗೊಂದು ಷರಟು ಗತಿಯಿಲ್ಲವೇನೊ ?' ಎಂದು ಗದರಿಸುವ ತನಕ) ಮನೆಯಲ್ಲೆಲ್ಲ ಎದೆ ಬಿಟ್ಟುಕೊಂಡು ಓಡಾಡಿದ್ದನ್ನು ನೆನೆದರೆ ಈಗಲೂ ನಗು ಬರುತ್ತದೆ.

ಮುಂಜಿಯಾದ ಮೊದಲ ನಾಲ್ಕಾರು ದಿನ ಸಂಧ್ಯಾವಂದನೆ, ಅಗ್ನಿಕಾರ್ಯ, ಮಾಧ್ಯಾಹ್ನಿಕ ಎಲ್ಲವನ್ನೂ ಪುರೋಹಿತರೇ ಸ್ವತಃ ನನ್ನೊಡನೆ ಕುಳಿತು ಮಾಡಿಸುತ್ತಿದ್ದು ಅನಂತರ ಮತ್ತೊಬ್ಬರಿಗೆ ಆ ಕೆಲಸವನ್ನು ವಹಿಸಿಕೊಟ್ಟರು. ಆತನಿಗೆ ಮಂತ್ರಗಳನ್ನು ಉಚ್ಚರಿಸುವ ರೀತಿ ತಿಳಿಯದು, ಅವುಗಳ ಅರ್ಥವೂ ತಿಳಿಯದು. "ಯೋ ವಶ್ಶಿವತಮೋ ರಸಃ" ಎಂಬುದನ್ನು ತಪ್ಪಾಗಿ ಪದವಿಭಾಗಮಾಡಿ "ಯೋವಶ್ಶಿವತ/ಮೋರಸಃ" ಎಂದು ಹೇಳಿಕೊಟ್ಟದ್ದು ನೆನಪಿದೆ. (ಅದು ತಪ್ಪೆಂದು ನನಗೆ ತಿಳಿದದ್ದು ಮೂವತ್ತು ವರ್ಷ ಕಳೆದ ಮೇಲೆ) ಮಂತ್ರಗಳನ್ನು ಬೇಗಲೇ ಕಲಿತೆ. ವೇದಮಂತ್ರಗಳ ಲಯ, ಸಂಸ್ಕೃತ

ಭಾಷೆಯ ಗಂಭೀರ 'ನಾದ'—ಇವುಗಳ ಪರಿಚಯವಾದದ್ದು ಅದೇ ಮೊದಲು. ರಥೋತ್ಸವದ ಸಮಯದಲ್ಲಿ ಬ್ರಾಹ್ಮಣರು ಎರಡು ತಂಡ ಮಾಡಿಕೊಂಡು ವೇದ ಮಂತ್ರಗಳನ್ನು 'ಹಾಡು'ತ್ತಿದ್ದದ್ದು ಕಿವಿಗೆ ಬಿದ್ದಿತ್ತಾದರೂ ಅವುಗಳ ಮಾಧುರ್ಯ ಮನ ಮುಟ್ಟಿರಲಿಲ್ಲ. ಸಂಧ್ಯಾವಂದನೆಯ ಮಂತ್ರಗಳನ್ನು ಪಠಿಸುವಾಗ ಅದರ ಗಾಂಭೀರ್ಯ ಮಾಧುರ್ಯಗಳ ಅರಿವಾಯಿತು. ಒಂದೆರಡು ತಿಂಗಳು ನನ್ನ ಮಂತ್ರ ಪಠನ ಯಾವಾಗಲೂ ಮನೆಯಲ್ಲಿ ಮೊಳಗುತ್ತಿತ್ತು—"ಮೈಲಿಗೆಯಲ್ಲಿ ಮಂತ್ರ ಹೇಳುತ್ತೀಯ" ಎಂದು ತಂದೆ ಗದರಿಸಿದಮೇಲೆ ಕೂಡ!

ಮಂತ್ರವನ್ನು ಹೇಳುವ, ಕೇಳುವ, ಆಸಕ್ತಿ ಈಗಲೂ ಉಳಿದಿದೆ. ಬೆಂಗಳೂರಿನಲ್ಲಿದ್ದಾಗ ಗೋಖಲೆ ಸಾರ್ವಜನಿಕ ಸಂಸ್ಥೆ ವ್ಯಾಸಪೂಜೆಯ ದಿನ ಏರ್ಪಡಿಸುತ್ತಿದ್ದ ಮಂತ್ರ ಪಠನವನ್ನು ಕೇಳಲು ತಪ್ಪದೆ ಹೋಗುತ್ತಿದ್ದೆ. ನನ್ನಮಟ್ಟಿಗೆ ಹೇಳುವುದಾದರೆ ಅದು ಒಳ್ಳೆಯ ಸಂಗೀತ ಕೊಡುವ ಉದಾತ್ತ ಆನಂದವನ್ನೇ ಕೊಡುತ್ತದೆ. ನಾನು ಮನೆಯಲ್ಲಿರುವಾಗ ಒಂದೊಂದು ವೇಳೆ ಉಲ್ಲಾಸದಿಂದ ನನ್ನ ಅರಿವಿಲ್ಲದೆಯೇ ತ್ಯಾಗರಾಜರ ಅಥವಾ ದೀಕ್ಷಿತರ ಕೃತಿಯ ತುಣುಕು ಕಂಠದಿಂದ ಹೊರಹೊರಡುವಂತೆ "ಆ ಕೃಷ್ಣೇನ ರಜಸಾ ವರ್ತಮಾನೋ ನಿವೇಶಯನ್" ಅಥವಾ "ವಾಮದೇವಾಯ ನಮೋ ಜ್ಯೇಷ್ಠಾಯ ನಮಃ" ಹೊರಹೊರಡುತ್ತದೆ–ನನ್ನ ಪಠನ ರೀತಿ ದೋಷರಹಿತವಾದದ್ದಲ್ಲ ಎಂಬುದರ ಅರಿವು ನನಗಿದ್ದರೂ ಕೂಡ!

ವೇದ ಅಪೌರುಷೇಯ, ವಿಶ್ವದ ಜ್ಞಾನವೆಲ್ಲ ಅದರಲ್ಲಿ ಅಡಗಿದೆ, ಅದನ್ನು ತಿಳಿದ ಮೇಲೆ ತಿಳಿಯಬೇಕಾದದ್ದು ಮತ್ತೇನೂ ಇಲ್ಲ, ಅದರಲ್ಲಿ ಪರಸ್ಪರ ವಿರುದ್ಧವಾದದ್ದೇನೂ ಇಲ್ಲ—ಇತ್ಯಾದಿ ಅತಿಶ್ರದ್ಧೆಯ ಮಾತನ್ನು ನಾನು ನಂಬಿದವನಲ್ಲ. ಆದರೆ ನಾದಮಾಧುರ್ಯದಿಂದಾಗಿ, ಅನೇಕ ವೇಳೆ ಸಾಹಿತ್ಯ ಸೌಂದರ್ಯದಿಂದಾಗಿ, ಕೆಲವು ಘನವಾದ ಕಲ್ಪನೆಗಳಿಂದಾಗಿ ಮಂತ್ರಗಳು ನನಗೆ ಪ್ರಿಯ. ಅವು ಭಾರತೀಯರಲ್ಲದವರನ್ನು ಆಕರ್ಷಿಸಿವೆ. ಮಹಾರಾಜರ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾದ ಸಿ. ಆರ್. ನರಸಿಂಹಶಾಸ್ತ್ರಿಗಳು ಒಂದು ದಿನ ಪಾಠ ಹೇಳುತ್ತಿದ್ದಾಗ ಮಂತ್ರವೊಂದನ್ನು ಉದಾಹರಿಸಬೇಕಾಗಿ ಬಂತು. ಅವರ ಕಂಠ ಮಧುರವಾದದ್ದು. ಕಾರಿಡರಿನಲ್ಲಿ ಹೋಗುತ್ತಿದ್ದ ಪ್ರಿನ್ಸಿಪಲ್ ರಾಲೋ ಅದರಿಂದ ಆಕರ್ಷಿತರಾಗಿ ಬಾಗಿಲ ಹೊರಗೇ ನಿಂತು ಅದು ಮುಗಿಯುವವರೆಗೂ ಕೇಳಿ ಆನಂದಪಟ್ಟರು.

ಈ ಆನಂದ ಎಲ್ಲರಿಗೂ ಲಭ್ಯವಾಗಲೆಂದು ನಾನು 'ಆಕಾಶವಾಣಿ'ಯಲ್ಲಿದ್ದಾಗ ವೇದ ಮಂತ್ರಪ್ರಸಾರ ಮಾಡುವ ಪ್ರಯತ್ನ ಮಾಡಿದೆ. ಅದು ಆಗ ಫಲಿಸಿತೋ ಇಲ್ಲವೋ ನೆನಪಿಲ್ಲ. ಗೌರಿಗಣಪತಿ ಪೂಜೆಗಳ ಮಂತ್ರಗಳನ್ನೇನೊ ಪ್ರಸಾರಮಾಡಿಸಿದ್ದೂ ಅದನ್ನು ಹೊಗಳಿ ಜನ ಕಾಗದ ಬರೆದದ್ದೂ ನೆನಪಿದೆ.

ಮಂತ್ರ ನನ್ನನ್ನು ಆಕರ್ಷಿಸಿತಾದರೂ ಇಡೀ ಸಂಧ್ಯಾವಂದನೆಯ ಆಚರಣೆ ಬೇಸರ ತಂದಿತು. ಮತ್ತೆ ಮತ್ತೆ ಆಚಮನ ಮಾಡುವುದು, ಕಿವಿ, ಕಣ್ಣುಗಳು, ಎದೆ, ತಲೆ ಇತ್ಯಾದಿಗಳನ್ನು ಮಂತ್ರಕ್ಕೆ ಅನುಸಾರವಾಗಿ ಮುಟ್ಟಿಕೊಳ್ಳುವುದು ಮುಂತಾದ ಕೈಕರಣ, ಲೋಪದೋಷ ಪ್ರಾಯಶ್ಚಿತ್ತಾರ್ಥವಾಗಿ ನಾಮತ್ರಯ ಮಂತ್ರಪಠನ, ಜೊತೆಗೆ

ನೂರೆಂಟು. ಸಲ ಗಾಯತ್ರಿಯನ್ನು ಜಪಿಸುವುದು–ಇವೆಲ್ಲ ಯಾಂತ್ರಿಕ ಎನ್ನಿಸಿ ಬೇಸರ ವಾಯಿತು. ಗಾಯತ್ರೀ ಮಂತ್ರವು ಧನ ಕನಕ ವಸ್ತ್ರಾದಿಗಳೇನನ್ನೂ ಬೇಡುವುದಿಲ್ಲ; ಬುದ್ಧಿ ಯಶಸ್ವಿಯಾಗಿ ಕೆಲಸ ಮಾಡಲು ಅದಕ್ಕೆ ಪ್ರಚೋದನೆ ದೊರೆಯಲಿ ಎಂದು ಮಾತ್ರ ಬೇಡುತ್ತದೆ. ಆದ್ದರಿಂದ ನನಗೆ ತಿಳಿವ ಎಲ್ಲ ಸ್ತೋತ್ರಗಳಿಗಿಂತ ಅದು ಶ್ರೇಷ್ಠ ವಾದದ್ದು ಎಂದು ನನ್ನ ಈಗಿನ ನಂಬಿಕೆ. ಆಗ ನನಗೆ ಮಂತ್ರ ಎಂದರೆ ಕೇವಲ ಪದಗಳ ಸಮೂಹ. ಅದಕ್ಕೆ ಏನೋ ಅರ್ಥವಿರಬೇಕು ಎಂಬ ಯೋಚನೆ ಸಹ ಇರಲಿಲ್ಲ. ಹುಚ್ಚು ತೋರಿದಾಗ ಖುಷಿಗೆ ನಾಲ್ಕು ಸಾರಿ ಹೇಳಿಕೊಳ್ಳಬಹುದು, ಸರಿಯೆ. ಆದರೆ ಜಿತವಾಗಿ ಕೂತು ದಿನಕ್ಕೆ ಮೂರು ಸಲ ಗೊತ್ತಾದ ಹೊತ್ತಿನಲ್ಲಿ ನೂರೆಂಟು ಸಾರಿ ಜಪಿಸು ಎಂದರೆ! ಜೋಯಿಸರು ಎದುರಿಗೇ ಕೂತು ಹೇಳಿಕೊಡುತ್ತಿದ್ದ ದಿನಗಳಲ್ಲಿ ಸಂಧ್ಯಾ ವಂದನೆಯನ್ನು ವಿಧ್ಯುಕ್ತವಾಗಿ ಆಚರಿಸಲೇಬೇಕಾಗಿತ್ತು. ಆಮೇಲೆ ಕೆಲವು ದಿನ ಹಾಗೂ ಹೀಗೂ ತಳ್ಳಿ, ಪಂಚಪಾತ್ರೆ ಉದ್ಧರಣೆ ಅರ್ಘ್ಯ ಪಾತ್ರೆಗಳನ್ನು ತೆಗೆದುಕೊಂಡು ಹೊರ ಜಗಲಿಯ ಮೇಲೆ ಕೂತು ಮನಸ್ಸನ್ನು ಅದು ಹೋದಕಡೆ ಹರಿಯಬಿಡುವ ಪರಿಪಾಠ ಮಾಡಿಕೊಂಡೆ. ೪–೫ ನಿಮಿಷಕ್ಕೊಂದು ಸಾರಿ ಉದ್ಧರಣೆಯನ್ನು ಪಂಚಪಾತ್ರೆಯಲ್ಲಿ ಅದ್ದಿ ಟಣಟಣ ಸದ್ದು ಮಾಡಿದರೆ ಸರಿ, ಸಂಧ್ಯಾವಂದನೆ ಮಾಡುತ್ತಿದ್ದಾನೆ ಎಂಬ ಭ್ರಮೆಯನ್ನು ಕಲ್ಪಿಸಿದಂತಾಯಿತು! ಈ ಮೋಸ ಬಹುಕಾಲ ನಡೆಯಿತು. ನಾನು ೧೯ನೇ ವರ್ಷದಲ್ಲಿ ಕಾಲೇಜಿಗೆ ಸೇರಿದ ಮೇಲೆ ಈ ನಟನೆಯೂ ನಿಂತಿತು. ಮೊದ ಮೊದಲು ಕೋಪಿಸಿಕೊಳ್ಳುತ್ತಿದ್ದ ತಂದೆ "ಇವನನ್ನು ಸರಿಪಡಿಸುವುದು ಸಾಧ್ಯವಲ್ಲ" ಎಂದುಕೊಂಡು ಸುಮ್ಮನಾದರು.

ನಾನು ಸ್ಕೂಲಿಗೆ ಸೇರಲು ಅಯ್ಯನ ಮನೆಗೆ ಬಂದದ್ದು ೧೨೧೩ರಲ್ಲಿ. ಅಯ್ಯನ ಸಂಸಾರ ದೊಡ್ಡದು. ಮೂರು ಜನ ಗಂಡುಮಕ್ಕಳು, ಮೂರು ಜನ ಹೆಣ್ಣುಮಕ್ಕಳು. ಅವರೆಲ್ಲ ನನಗಿಂತ ಹಿರಿಯರು. ಹೆಣ್ಣುಮಕ್ಕಳಲ್ಲಿ ಮೊದಲ ಇಬ್ಬರು ಪುಟ್ಟು ಮತ್ತು ಕಾವೇರಿ ಪ್ರಾಯದಲ್ಲೇ ವಿಧವೆಯರಾಗಿ ತಂದೆಯ ಮನೆಯಲ್ಲೇ ಇದ್ದರು; ಕೊನೆಯ ಮಗಳು, ಸಾವಿತ್ರಿ ಗಂಡನ ಮನೆಯಲ್ಲಿದ್ದಳು. ದೊಡ್ಡಮಗ ಶಾಮಣ್ಣ ಬೆಂಗಳೂರಿನಲ್ಲಿ ಕೆಲಸದಲ್ಲಿದ್ದರು; ಎರಡನೆಯ ಮಗ ಸುಬ್ಬರಾವ್ ಇಂಟರ್‌ಮೀಡಿಯೆಟ್‌ನಲ್ಲಿ ಓದು ತ್ತಿದ್ದರು. ನಾನು ಅವರ ಮನೆ ಸೇರಿದ ತರುಣದಲ್ಲೇ ಅವರಿಗೆ ಮದುವೆಯಾಯಿತು. ಕೊನೆಯ ಮಗ ಕಿಟ್ಟು ನನಗಿಂತ ೩–೪ ವರ್ಷ ದೊಡ್ಡವನು; ಲೋವರ್ ಸೆಕೆಂಡರಿ ಪರೀಕ್ಷೆ ಪ್ಯಾಸು ಮಾಡಿ ಓದನ್ನು ಅಲ್ಲಿಗೇ ಬಿಟ್ಟು ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನಲ್ಲಿ ಮರಗೆಲಸ ಕಲಿಯುತ್ತಿದ್ದ. ಅಯ್ಯ ಮುನಿಸಿಪಲ್ ನೌಕರ ರಾಗಿದ್ದು ಇಷ್ಟು ದೊಡ್ಡ ಸಂಸಾರವನ್ನು ನಿರ್ವಹಿಸಬೇಕಾಗಿತ್ತು. ಅವರ ಮನೆಯಲ್ಲಿ ಮೂರು ಯೂನಿಟ್ಟುಗಳು. ಹಿಂದಿನದನ್ನೂ ಮುಂದಿನದನ್ನೂ ಬಾಡಿಗೆಗೆ ಕೊಟ್ಟು (ಎರಡರಿಂದಲೂ ಒಟ್ಟು ಬರುತ್ತಿದ್ದ ಬಾಡಿಗೆ ಮೂರು ರೂಪಾಯಿ!) ತಾವು ಮಧ್ಯದ ಯೂನಿಟ್ಟಿನಲ್ಲಿ ವಾಸಿಸುತ್ತಿದ್ದರು. ವರ್ಷಕ್ಕಾಗುವಷ್ಟು ಭತ್ತವೇನೋ ಬರುತ್ತಿತ್ತು. ಆದರೂ ಬಡತನದ ಜೀವನ. ಹೀಗಿದ್ದೂ ತಾವಾಗಿ ನನ್ನನ್ನು ಆಹ್ವಾನಿಸಿ ಮನೆಯಲ್ಲಿಟ್ಟು ಕೊಂಡದ್ದು ಹೊಗಳಿಕೆಗೆ ಮೀರಿದ ದೊಡ್ಡತನ.

ಮೊದಲ ಒಂದೆರಡು ತಿಂಗಳು ನಾನು ಸುಖವಾಗಿದ್ದೆನೆಂದು ಹೇಳಲಾರೆ. ನಾನು ಹದಿಮೂರು ವರ್ಷದ ಹುಡುಗ, ಹಳ್ಳಿಯಿಂದ ಬಂದವನು ; ಯಾರೊಡನೆಯೂ ಸಲಿಗೆಯಿಂದ ಮಾತಾಡುವಂತಿಲ್ಲ. ಮನೆಯಲ್ಲಿದ್ದವರಲ್ಲಿ ಕಿಟ್ಟು ಒಬ್ಬ ಹೊರತು ಉಳಿದವರೆಲ್ಲ ನನಗಿಂತ ಎಷ್ಟೋ ದೊಡ್ಡವರು. ೫೫ ವರ್ಷದ ಅಯ್ಯನ ಮಾತು ಸ್ವಲ್ಪ ಗಡುಸು. ಅವರ ಹೆಂಡತಿ ಲಕ್ಷಮ್ಮ—ಅವರನ್ನು ಎಲ್ಲರೂ 'ಅಚ್ಚಕ್ಕಿ' ಎಂದೇ ಕರೆಯುತ್ತಿದ್ದರು—ಬೆಳಗಿಂದ ಸಂಜೆಯವರೆಗೂ ದುಡಿಯುತ್ತಲೇ ಇರುವವರು. ನನಗೆ ಏನು ಕೇಳುವುದಕ್ಕೂ ಸಂಕೋಚ. ಯಾವ ಮಾತಾಡಿದರೆ ಏನು ತಪ್ಪಾಗುತ್ತದೆಯೋ ಎಂಬ ಶಂಕೆ. ಓದೂ ಬೇಡ, ಏನೂ ಬೇಡ, ಊರಿಗೆ ಹೊರಟುಹೋಗೋಣ ಎಂಬ ಯೋಚನೆ ಹತ್ತಾರು ಸಾರಿ ಬಂತು. ಎಲ್ಲರೂ ನನ್ನೊಡನೆ ಮೃದುವಾಗಿಯೇ ವರ್ತಿಸುತ್ತಿದ್ದರಾದರೂ ನನಗೆ ಧೈರ್ಯ ಬರಲಿಲ್ಲ. ಈ ಪರಿಸ್ಥಿತಿಯಿಂದ ನನ್ನನ್ನು ಪಾರುಮಾಡಿದವರೆಂದರೆ ಮೊದಲು ಅಚ್ಚಕ್ಕಿ, ಆಮೇಲೆ ಪುಟ್ಟು ಮತ್ತು ಕಾವೇರಿ. ಅವರೆಲ್ಲ ನನ್ನ ಕಷ್ಟವನ್ನು ಅರ್ಥಮಾಡಿಕೊಂಡಿರಬೇಕು. ನಾನು ಮೂಲೆಯೊಂದನ್ನು ಬಿಟ್ಟು ಕದಲದೆ ಇದ್ದದ್ದನ್ನು ಕಂಡು ಅಚ್ಚಕ್ಕಿ—ಮೊದಮೊದಲು "ಓದುವ ಹುಡುಗ, ಊರಿಂದೂರಿಗೆ ಬಂದಿದ್ದಾನೆ, ಅವನಿಗೆ ಏನು ಕೆಲಸವನ್ನೂ ಹೇಳಬೇಡಿ" ಎನ್ನುತ್ತಿದ್ದವರು—"ಲೋ ಮೂರ್ತಿ, ಇಲ್ಲಿ ಬಾಪ್ಪ ಈ ಹುರಳಿಕಾಯಿ ಸ್ವಲ್ಪ ಬಿಡಿಸಿಕೊಟ್ಟುಬಿಡು" ಎನ್ನುವರು, ನಮಗೆ ಪಠ್ಯ ವಿಷಯವಾಗಿದ್ದ ಕನ್ನಡ ಪದ್ಯಗಳನ್ನು ನಾನು ಸಣ್ಣ ದನಿಯಲ್ಲಿ ಗಟ್ಟಿಮಾಡುತ್ತಿದ್ದಾಗ "ಇಲ್ಲೇ ಬಂದು ಓದೊ, ಮೂರ್ತಿ, ನನ್ನ ಕಿವಿಗೂ ಅಷ್ಟು ಬೀಳಲಿ" ಎನ್ನುವರು.

ಪುಟ್ಟು, ಕಾವೇರಿ, ಇಬ್ಬರೊಡನೆಯೂ ನಾನು ಮಾತಾಡುವಾಗ ಬಹುವಚನವನ್ನೇ ಬಳಸುತ್ತಿದ್ದೆನಾದರೂ ಅವರನ್ನು ಪುಟ್ಟಮ್ಮ ಕಾವೇರಮ್ಮ ಎಂದು ಸಂಬೋಧಿಸುವ ಪರಿಪಾಠವಿರಲಿಲ್ಲ. ಪುಟ್ಟುವಿಗೆ ಆಗ ಸುಮಾರು ೩೦ ವರ್ಷ. ಅವರಿಗಿದ್ದ ಒಬ್ಬಳೇ ಮಗಳು ಚಿಕ್ಕಂದಿನಲ್ಲೇ ಸತ್ತು ಹೋಗಿದ್ದಳು. ಗಂಡ ಸತ್ತದ್ದನ್ನೂ ಮಗಳು ಸತ್ತದ್ದನ್ನೂ ನೆನೆದು ಅವರು ಆಗಾಗ ಕಣ್ಣೀರು ಕರೆದಿರಬೇಕು. ಆದರೆ ಎಂದೂ ಅವರ ಮಾತಿನಲ್ಲಿ ಕಹಿ ಕಾಣುತ್ತಿರಲಿಲ್ಲ. ನಗನಗುತ್ತಲೇ ಮಾತಾಡುತ್ತಿದ್ದರು. ಗೌರವರ್ಣದ ಲಕ್ಷಣವಾದ ರೂಪ. ಮನೆಯವರೆಲ್ಲರಿಗೂ ಅವರನ್ನು ಕಂಡರೆ ಬಹುಪ್ರೀತಿ. "ಸಂಕೋಚಪಟ್ಟುಕೋಬೇಡ ಕಣೊ, ಮೂರ್ತಿ. ನನಗೆ ಇಟ್ಟಿರೋದು ನಿಮ್ಮಮ್ಮನ ಹೆಸರೇ. (ನಮ್ಮ ತಾಯಿಯ ಹೆಸರು ವೆಂಕಟಲಕ್ಷ್ಮಿ; ಆದರೆ ಆ ಹೆಸರನ್ನು ಯಾರೂ ಬಳಸುತ್ತಿರಲಿಲ್ಲ. ಎಲ್ಲರಿಗೂ ಅವರು 'ಪುಟ್ಟು') ಬಾ ಇಲ್ಲಿ, ತಲೆ ಬಾಚುತ್ತೀನಿ" ಎಂದು ನನ್ನ ತಲೆಯ ಜುಂಜುಟ್ಟಿನ ಯೋಗಕ್ಷೇಮವನ್ನು ವಹಿಸಿಕೊಂಡರು. ಕ್ರಾಪು ಅಪರೂಪವಾಗಿ ಜುಂಜುಟ್ಟು ಸರ್ವಸಾಮಾನ್ಯವಾಗಿದ್ದ ಕಾಲ. ನನ್ನ ಜುಂಜುಟ್ಟು ನೀಳವಾಗಿ ಬೆಳೆದು ಜಡೆ ಹೆಣೆಯುವುದಕ್ಕೆ ಅನುಕೂಲವಾಗಿತ್ತು. ಆಗ ಮಾಧ್ಯಮಿಕ ಶಾಲೆಯ ಹುಡುಗರು ಜಡೆ ಹೆಣೆಸಿಕೊಂಡು ಬರುವುದು ಸಾಧಾರಣ. ಆದರೂ ನನಗೆ ಪುಟ್ಟು ವಿಶ್ವಾಸದಿಂದ ವಹಿಸಿಕೊಂಡ ಕೆಲಸ ಹಿತವೆನ್ನಿಸಲಿಲ್ಲ. ಎಳೆ ಮಗುವಿನಂತೆ ಹೆಂಗಸರ ಮುಂದೆ ಕೂತು ಜಡೆಹೆಣೆಸಿಕೊಂಡರೆ ಆತ್ಮಗೌರವ ಉಳಿದೀತೆ! ನಾನು ತಲೆ ತಪ್ಪಿಸಿಕೊಂಡು ತಿರುಗುತ್ತಿದ್ದದ್ದನ್ನು ಕಂಡು ಪುಟ್ಟು "ಜಡೆ ಬೇಡವಾದರೆ ಬಿಡು" ಎಂದು ಹೇಳಿ 'ಬೊಂಬಾಯಿ ಗಂಟು' (ಅದಕ್ಕೆ ಆ

ಹೆಸರೇಕೆ ಬಂತೋ ಕಾಣೆ!) ಹಾಕಿಕೊಳ್ಳುವುದನ್ನು ಹೇಳಿಕೊಟ್ಟರು. ನಾನು ಎಂ.
ಕ್ಲಾಸಿಗೆ ಸೇರುವವರೆಗೂ ನನ್ನ ತಲೆಯಲ್ಲಿ ಈ ಬೊಂಬಾಯಿಗಂಟು ಶೋಭಿಸುತ್ತಿತ್ತು!

ಜಡೆ ಕತ್ತರವಾಗಲಿ ಬಿಡಲಿ, ಪುಟ್ಟುವಿನ ವಿಶ್ವಾಸ ನನ್ನ ಸಂಕೋಚವನ್ನು ಹೋ
ಲಾಡಿಸಿ ನನಗೆ ಧೈರ್ಯ ಕೊಟ್ಟಿತು. ಕಾವೇರಿಯ ಸ್ವಭಾವ ಪುಟ್ಟುವಿನದ್ದಕ್ಕಿಂತ ಸ್ವಲ್ಪ—
ಎಲ್ಲೋ ಸ್ವಲ್ಪ—ಬಿರುಸು. ಅದು ನನಗೇನೂ ತಪ್ಪೆನಿಸಲಿಲ್ಲ. ಅವರು ಸ್ವಲ್ಪ ಕಾಲ ತಂದೆಯ
ಮನೆಯಲ್ಲೂ ಸ್ವಲ್ಪಕಾಲ ತಮ್ಮ ಮಗಳು ನಂಜುವಿನ ಮನೆಯಲ್ಲೂ ಇರುತ್ತಿದ್ದರು.
ನಂಜುವಿನ ಮಗ ಸೂರ್ಯನಾರಾಯಣಶಾಸ್ತ್ರಿ ಗಣಿತಶಾಸ್ತ್ರದ ಪ್ರಾಧ್ಯಾಪಕರಾಗಿದ್ದು
ನಿವೃತ್ತರಾಗಿ ಬೆಂಗಳೂರಿನಲ್ಲಿ ನೆಲಸಿದ್ದಾರೆ. ನಾನು ಒಂದೊಂದು ವೇಳೆ ಅವರ ಮನೆ
ಹೋಗಿ ಹಳೆಯ ಕಾಲವನ್ನು ನೆನಪಿಗೆ ತಂದುಕೊಳ್ಳುವುದುಂಟು. ಕಾವೇರಿ ಭಕ್ತಿಯಿಂದ
ಪುರಂದರದಾಸರ, ಕನಕದಾಸರ ಪದಗಳನ್ನು ಹಾಡಿಕೊಳ್ಳುತ್ತಿದ್ದರು. ನಾನು ಕನ್ನಡ
ಪದ್ಯಗಳನ್ನು ರಾಗವಾಗಿ ಓದುತ್ತಿದ್ದದ್ದನ್ನು ಕೇಳಿ "ನಿನ್ನ ದನಿ ಚೆನ್ನಾಗಿದೆ, ಹಾಡು ಹೇ
ಕೊಡುತೀನಿ, ಕಲಿತುಕೊ" ಎಂದು ನನಗೆ ಕೆಲವು ದೇವರ ನಾಮಗಳನ್ನು ಹೇಳಿಕೊಟ್ಟರು
ಅವರು ಮೊದಲು ಹೇಳಿಕೊಟ್ಟ "ಅಮ್ಮ ಎನ್ನ ಕೂಡಾಡುವ ಮಕ್ಕಳಣಕಿಸುವರೆ" ಎಂಬ
ಹಾಡನ್ನು ನಾನು ಮತ್ತೆ ಯಾರಿಂದಲೂ ಕೇಳಿಲ್ಲ. ಅದರ ರಾಗ ಧನ್ಯಾಸಿ ಎಂದು ಈಗ
ಗುರುತಿಸಬಲ್ಲೆ. ಹಾಡಿನ ಕೊನೆಯ ಎರಡು ನುಡಿ ನೆನಪಿನಲ್ಲಿ ನಿಂತಿವೆ:

> ಮಾತೆ ನೀನಲ್ಲವಂತೆ, ಅಮ್ಮಯ್ಯ, ಪಿತನು ಇಲ್ಲಿಲ್ಲವಂತೆ
> ಮಾತುಲನ ಬಾಧೆಗೆ ಮಧುರೆಯಿಂದಲಿ ತಂದು
> ಖತಿಗೆ (?) ಮಾರಿದರಂತೆ—ಅಮ್ಮಯ್ಯ (ಅಮ್ಮಾ ಎನ್ನ)
> ದೇವಕಿ ತಾಯಿಯಂತೆ, ಅಮ್ಮಯ್ಯ, ವಸುದೇವ ತಂದೆಯಂತೆ
> ಕಾವ ಶ್ರೀ ಪುರಂದರ ವಿಠಲರಾಯನ ಗೋತ್ರ ಕಾಯುವನೆಂಬರೆ ಯಶೋದೆ
>
> (ಅಮ್ಮಾ ಎನ್ನ)

ಕಾವೇರಿ ಹೇಳಿಕೊಟ್ಟ ಇನ್ನೆರಡು ಹಾಡುಗಳು ಈಗಲೂ ಚಾಲತಿಯಲ್ಲಿವೆ—
ತೋಡಿರಾಗದ "ಕಂಗಳಿದ್ಯಾತಕೊ ಕಾವೇರಿರಂಗನ ನೋಡದ" ಮತ್ತು ಭೈರವಿ ರಾಗದ
"ನನ್ನಿಂದ ನಾನೇ ಜನಿಸಿ ಬಂದೆನೆ ದೇವ, ನಿನ್ನ ಪ್ರೇರಣೆಯಂತೆ ನಡೆವೆನು ನುಡಿವೆನೋ...."

ಹದಿವಯಸ್ಸಿನ ಹುಡುಗರಲ್ಲಿ ಕ್ರೌರ್ಯದ ಎಳೆಯೊಂದು ತಾತ್ಕಾಲಿಕವಾಗಿ ಮನೆ
ಮಾಡಿಕೊಂಡಿರುತ್ತದೆಯೋ ಏನೊ, ಅಥವಾ ತಮ್ಮಲ್ಲಿರುವ ಶಕ್ತಿಯನ್ನು, ಚಾತುರ್ಯ
ವನ್ನು, ಬಳಸಬೇಕೆಂಬ ಉತ್ಸಾಹ "ನಮ್ಮ ಮಾತಿನಿಂದಲೂ ನಡವಳಿಕೆಯಿಂದಲೂ ಇತರ
ರಿಗೆ ನೋವಾದೀತು" ಎಂಬ ಯೋಚನೆಯನ್ನು ಹೊರದೂಡುತ್ತದೆಯೋ ಏನೊ. ನಾನು
ದೂರದ ಸಂಬಂಧಿಗಳ ಮನೆಯಲ್ಲಿದ್ದೆ—ಆದ್ದರಿಂದ ಯಾರ ವಿಷಯದಲ್ಲೂ ಧೂರ್ತನಾಗಿ
ನಡೆದುಕೊಳ್ಳುವಂತಿಲ್ಲ. ಅಯ್ಯನ ಮಗ ಕಿಟ್ಟುವಿಗೆ ಅಂಥ ತಡೆ ಏನೂ ಇಲ್ಲ. ನನ್ನದು
ಇಂಟ್ರೊವರ್ಟ್ (introvert) ಸ್ವಭಾವ, ಅಂದರೆ ನನ್ನಲ್ಲಿ ನಾನು ಹುದುಗಿಕೊಳ್ಳುವ
ಒಳಮುಖದ ಸ್ವಭಾವ. ನಾನಾಗಿ ಮುಂದೊಡೆಗಿ ಇತರರ ಸ್ನೇಹವನ್ನು ಸಂಪಾದಿಸುವುದು
ಕಷ್ಟ; ಈ ಸ್ವಭಾವದ ಇನ್ನೊಂದು ಮುಖ: ಇತರರ ದ್ವೇಷವನ್ನು ಸಂಪಾದಿಸುವುದೂ
ಕಷ್ಟ! ಇತರರೊಡನೆ ಜಗಳ ವಾಡಬೇಕಾಗಲಿ ಇತರರನ್ನು ಕೆಣಕಿ ಮಾತಾಡಬೇಕಾಗಲಿ

ನನಗೆ ಆ ಇತರರಿಂದಲೇ ಪ್ರೇರಣೆ ಬರಬೇಕು; ಅವರೇ ಮುಂದೊದಗಿ ಬರಬೇಕು. ಕಿಟ್ಟುವಿನ ಸ್ವಭಾವ ತದ್ವಿರುದ್ಧ. ಮೇಲೆ ಬಿದ್ದು ಸ್ನೇಹವನ್ನು ಸಂಪಾದಿಸುವುದು, ಕೀಟಲೆ ಮಾಡುವುದು, ಅಣಕಿಸುವುದು, ಗೇಲಿ ಮಾಡುವುದು, ಹುಚ್ಚುಹುಚ್ಚಾಗಿ ಹಾಡುಕಟ್ಟಿ ಹಾಡುವುದು (ತನ್ನನ್ನು ಯಾರಾದರೂ ಹಾಸ್ಯಮಾಡಿದರೆ ರೇಗುವುದು!)—ಇದೆಲ್ಲ ಅವನ ಸ್ವಭಾವಕ್ಕೆ ಹುಟ್ಟುಗುಣವಾಗಿ ಬಂದಿರಬೇಕು. ಅವನದ್ದು ನಿಷ್ಕಲ್ಮಷವಾದ ಮನಸ್ಸು. ಆದರೂ ಮೇಲೆ ಹೇಳಿದ ಪ್ರವೃತ್ತಿಯಿಂದಾಗಿ ಅವನು ನಾಲಗೆಯನ್ನು ಹರಿಯಬಿಟ್ಟು ಎಷ್ಟೋ ವೇಳೆ ಇತರರನ್ನು ನೋಯಿಸುತ್ತಿದ್ದ (ನಾನು ಅವನೊಡನೆ ಸಲಿಗೆಯಿಂದಿರುವುದು ಸಾಧ್ಯವಾದದ್ದು ಆ ಪ್ರವೃತ್ತಿಯಿಂದಲೇ!). ಇಂಥ ಪ್ರಸಂಗವೊಂದು—ಅವನಿಗಾಗಲಿ ನನಗಾಗಲಿ ಕೀರ್ತಿ ತರುವಂಥ ಪ್ರಸಂಗವಲ್ಲ!—ನೆನಪಿಗೆ ಬರುತ್ತಿದೆ.

ಅಯ್ಯನ ಕೊನೆಯ ಮಗಳು ಸಾವಿತ್ರಿ—ಕಿಟ್ಟುವಿನ ಅಕ್ಕ—ತನ್ನ ಎಂಟು ವರ್ಷದ ಮಗ ಗುಂಡನೊಡನೆ ಬಂದು ಕೆಲವು ದಿನ ತಾಯಿಯೊಡನೆ ಇದ್ದಳು. ಗುಂಡನಿಗೆ ಎಳೆ ವಯಸ್ಸಿನಲ್ಲೇ ಸಿಡುಬು ತಗಲಿ ಎರಡು ಕಣ್ಣು ಹೋಗಿದ್ದವು. ಮುಖವೆಲ್ಲ ಸಿಡುಬಿನ ಕಲೆ. ಅವನು ತಡವರಿಸಿಕೊಂಡು ತಿರುಗಾಡುವುದನ್ನು ಕಂಡರೆ ಕಿಟ್ಟುವಿಗೆ ಹಾಸ್ಯ. ಒಂದು ದಿನ ಗುಂಡ ಕೊಚ್ಚೆಗುಂಡಿಯಲ್ಲಿ ಕಾಲಿಟ್ಟು ಬಟ್ಟೆಯನ್ನೆಲ್ಲ ಕೊಳೆಮಾಡಿಕೊಂಡದ್ದನ್ನು ನೋಡಿ ಅವನಿಗೆ ಸಮಯಸ್ಫೂರ್ತಿಬಂತು. 'ಭಾಗ್ಯದ ಲಕ್ಷ್ಮಿ ಬಾರಮ್ಮ' ಎಂಬ ಹಾಡನ್ನು ಅನುಕರಿಸಿ ಅಣಕವಾಡೊಂದನ್ನು ಕಟ್ಟಿದ:

ನಡೆದಾನಾ ಗುಂಡ ತಿಪ್ಪೆಗುಂಡಿಯಲಿ
ಹೆಜ್ಜೆಯ ಮೇಲೆ ಹೆಜ್ಜೆಯನಿಕ್ಕುತ
ಕೊಚ್ಚೆಯ ಕಾಣದೆ ಅಚ್ಚಿಯ ಮೊಮ್ಮಗ
ನಡೆದಾನಾ......

ಇದನ್ನು ಕೇಳಿ ಗುಂಡನ ತಾಯಿ ಸಾವಿತ್ರಿ ಕಣ್ಣೀರು ಕರೆದದ್ದೂ ಅಯ್ಯ ಕಿಟ್ಟುವನ್ನು ಥಳಿಸಿದ್ದೂ ಚೆನ್ನಾಗಿ ನೆನಪಿದೆ. ವಾಸ್ತವವಾಗಿ ಆ ಸಂದರ್ಭದಲ್ಲಿ ನನಗೂ ಪೆಟ್ಟು ಬೀಳಬೇಕಾಗಿತ್ತು. ಏಕೆಂದರೆ ಆ ಪದದ ಹಾಡಿಕೆ ಯುಗಳ ಬಂದಿಯಾಯಿತು. ಕಿಟ್ಟು 'ನಡೆದಾನಾ ಗುಂಡ' ಎಂದ ಮೇಲೆ ನಾನು 'ತಿಪ್ಪೆ ಗುಂಡಿಯಲಿ' ಎಂದು ಅವನ ದನಿಯ ಜೊತೆಗೆ ನನ್ನದನ್ನೂ ಸೇರಿಸುತ್ತಿದ್ದೆ. ಆದರೆ 'ಕಂಡವರ ಮಕ್ಕಳನ್ನು' ಥಳಿಸಬಾರದಷ್ಟೆ. ಆದ್ದರಿಂದ ನನಗೆ ಸಲ್ಲಬೇಕಾಗಿದ್ದ ಶಿಕ್ಷೆ ತಪ್ಪಿತು.

ಕುರುಡ ಹುಡುಗನನ್ನು ಹಾಗೆ ಹಾಸ್ಯಕ್ಕೆ ಗುರಿಮಾಡಿ ನೋಯಿಸಬಾರದೆಂದು ನನಗಾಗಲಿ ನನಗಿಂತ ಹಿರಿಯನಾದ ಕಿಟ್ಟುವಿಗಾಗಲಿ ತೋರಲಿಲ್ಲವೇಕೆ? ಮಾನವ ಪ್ರಾಣಿಯ ದೇಹ ಪೂರ್ಣವಿಕಾಸ ಪಡೆದದ್ದಾಗಿದೆ ಎಂದು ಶಾಸ್ತ್ರಜ್ಞರು ಹೇಳುತ್ತಾರೆ. ಆದರೆ ಮಾನವನ ಮನಸ್ಸೂ ಹೃದಯವೂ ಇನ್ನೂ ಅಪಕ್ವವೇ—ಪಶುಗಳ ಮಟ್ಟದಿಂದ ಎಲ್ಲೋ ಸ್ವಲ್ಪ ಮೇಲಕ್ಕೇರಿರಬಹುದೇನೊ. ಆ ಪ್ರಸಂಗವನ್ನು ನೆನೆದರೆ ನನಗೆ ಈಗಲೂ ತಲೆತಗ್ಗಿಸುವಂತಾಗುತ್ತದೆ. ಕಿಟ್ಟು ಹದಿವಯಸ್ಸಿನಲ್ಲಿ ಹೇಗೇ ಇದ್ದಿರಲಿ, ಆ ಮೇಲೆ ತನ್ನ ಬದುಕಿನಲ್ಲಿ ಹಂತದಿಂದ ಹಂತಕ್ಕೆ ಏರಿ ಬೆರಗುಗೊಳಿಸುವಂಥ ಪರಿಪಕ್ವತೆಯನ್ನು ಸಾಧಿಸಿದ. ಅದರ ಮಾತು ಮುಂದೆ ಬರುತ್ತದೆ.

(ಮುಂದುವರಿಯುವುದು)

ನನ್ನಣ್ಣ ಗಂಗಾಧರ ಚಿತ್ತಾಲ

ಯಶವಂತ ಚಿತ್ತಾಲ

ಗಂಗಾಧರ ಅಣ್ಣನನ್ನು 'ಗಂಗಣ್ಣ' ಎಂದು ಕರೆದ ಮೊಟ್ಟ ಮೊದಲಿನ ಮಗು ನಾನೇ ಇರಬೇಕು. ಅವನ ಬೆನ್ನಲ್ಲೇ ಹುಟ್ಟಿದವ ನಾದ್ದರಿಂದ ಮುಗ್ಧ ಮಗುವಿನ ತೊದಲು ನುಡಿಯಲ್ಲಿ ಹುಟ್ಟಿ ಕೊಂಡ ಈ ಹೆಸರಿಗೆ ಆಪ್ತವಲಯಗಳಲ್ಲಿ ಪ್ರೀತಿ–ವಾತ್ಸಲ್ಯಗಳ ಪ್ರತಿಭೆ ಧೀಶಕ್ತಿಗಳ ಅಪೂರ್ವ ಸಂಗಮವೆಂದು ಅರ್ಥ.

'ಗಂಗಣ್ಣ ಇನ್ನಿಲ್ಲ' ಈ ವಾಕ್ಯ ನನ್ನ ಮಟ್ಟಿಗೆ ಅಸಹಜ, ಅಸಾಧ್ಯ, ಹಾಗೆ ನೋಡಿದರೆ ಈ ಸಾವು ಅನಿರೀಕ್ಷಿತವಾಗಿರಲಿಲ್ಲ. 'ತುಸು ಹೊತ್ತು ಮಲಗುತ್ತೇನೆ' ಎಂದು ಹೇಳಿ ಅಡ್ಡವಾಗಿ ಕೆಲವೇ ಕ್ಷಣಗಳಲ್ಲಿ ಸಾವನ್ನಪ್ಪಿದ ರೀತಿ ನೋಡಿದರಂತೂ ಅದು ಅವನು ಇಚ್ಛಿಸಿದಂತಹದೇ ಆಗಿರಬಹುದೆಂಬ ಅನಿಸಿಕೆ :

"ನೆಲ-ಬಾನುಗಳ ನಿರರ್ಥಕದ ತೆಕ್ಕೆಯಲಿಲ್ಲಿ
ಸಿಕ್ಕು ಬಿದ್ದಿದ್ದೇನೆ: ಕೊನೆಯು ಎಂದು ?
ಮೈದಡವಿ ಮುಂಪರಿಸಿ ಮ್ಲಾನಗ್ಲಾನಿಯ ತಂದು
ಎಚ್ಚರವೆ ಬರದ ಸುಖನಿದ್ದೆ ಬಂದು"

೨೫ ವರ್ಷಗಳಷ್ಟು ಹಿಂದೆಯೇ ಬಾಧಿಸಿದ 'ಪಾರ್ಕಿನ್ಸ್‌ನ್ ಡಿಸೀಜ್' ಎಂಬ ಇಲಾಜೇ ಇಲ್ಲದ ಒಂದು ವ್ಯಾಧಿ ಇತ್ತೀಚಿನ ವರ್ಷಗಳಲ್ಲಿ ತೆಗೆದುಕೊಂಡ ಭೀಕರ ತಿರುವಿನಿಂದಾಗಿ ಅವನು ಪಡುತ್ತಿದ್ದ ಯಾತನೆಯನ್ನು ನೆನೆದರೆ ಇದೊಂದು 'ವಿಮೋಚನೆ' ಯೆಂದು ಬುದ್ಧಿಗೆ ಹೊಳೆಯುತ್ತಿರುವಾಗಲೂ ಆರು ದಶಕಗಳ ಜೀವಂತ ಒಡನಾಟವಾದದ್ದು ಈಗ ಕೇವಲ ನೆನಪಾಗಿ ಉಳಿಯುವ ದುರ್ಧರ ವಾಸ್ತವಕ್ಕೆ ಇನ್ನೂ ಸಿದ್ಧವಾಗದ ಅಂತಃಕರಣ ಅನಾಥ ಭಾವದಿಂದ ಬಿಕ್ಕಳಿಸುತ್ತದೆ.

ಮನೆಯ ಹಾಲ್‌ನಲ್ಲಿ ಮುಂದಿನ ಬಾಗಿಲಿಗೆ ಹತ್ತಿರವಾಗಿ ಹಾಕಿದ ದಿವಾಣದಲ್ಲಿ ನಿಡಿದಾಗಿ ಮೈಚಾಚಿದವನ ಮೋರೆಯ

ಮೇಲೆ ಗಾಢ ನಿದ್ದೆ ಹೋದವನ ಶಾಂತಭಾವ ನೆಲಸಿತ್ತು. ಫ್ಯಾನಿನ ಗಾಳಿಗೆ ಆಗೊಮ್ಮೆ ಈಗೊಮ್ಮೆ ಅಲುಗಾಡುತ್ತಿದ್ದ ವೈರ್ವೋಲಿನ ತೆಳುವಾದ ಹೊದಿಗೆ ಈಗೇನು ಏಳುವುದರಲ್ಲಿದ್ದಾನೆ ಎಂಬ ಭ್ರಮೆ ಹುಟ್ಟಿಸುತ್ತಿತ್ತು. ಹೊತ್ತು ಸರಿದಂತೆ ಮಾತ್ರ 'ಈ ಜಗತ್ತಿನಲ್ಲಿ ಅಣ್ಣನಂಥ ಮೌಲಿಕ ವಸ್ತು ಇನ್ನೊಂದಿಲ್ಲ' ಎಂದುಕೊಳ್ಳಲು ಕಾರಣವಾದವನ ಸುತ್ತಲೂ ಬೆಳೆದುಕೊಂಡ ನನ್ನ ಆತ್ಮೀಯ ವಿಶ್ವದ ಒಂದು ಜಾಗಕ್ಕೆ ಇದ್ದಕ್ಕಿದ್ದಂತೆ ಅಮಾನುಷತೆಯ ಕಳೆ ಬರುತ್ತ ಮಾತಿಗೆ ನಿಲುಕದ, ಬುದ್ಧಿಗೆ ಪುರಾಣವೊಂದು ಕಣ್ಣ ಇದಿರಿಗೇ ಹುಟ್ಟಿಕೊಳ್ಳುತ್ತಿದ್ದ ಪರಿಗೆ ಜೀವ ತತ್ತರಿಸಿತ್ತು.

ಹೀಗಿದ್ದೂ, ವ್ಯಾವಹಾರಿಕ ಭಾಷೆ ಈ ವ್ಯಾಪಾರದ ಕೆಲವು ವಿವರಗಳನ್ನು ಹೀಗೆ ಹಿಡಿದಿತ್ತು;

ಮುನ್ನಾದಿನ ರಾತ್ರಿ (ಮಂಗಳವಾರ, ಜನವರಿ ೨೭ ರಂದು) ತುಸು ಹೊತ್ತು ನಿದ್ದೆಗೇಡಾದ್ದರಿಂದ ಬೆಳಿಗ್ಗೆ (ಬುಧವಾರ, ಜನವರಿ ೨೮ ರಂದು) ದಿನಕ್ಕಿಂತ ತುಸು ತಡವಾಗಿ ಎಚ್ಚರವಾಯಿತು. ಹೀಗಾಗಿ ಉಪಹಾರಕ್ಕೂ ತಡವಾಯಿತು. ದಿನದ ಕ್ರಮದಂತೆ, ಹೆಂಡತಿ ೧೦-೩೦ಕ್ಕೆ ಊಟಕ್ಕೆ ಕರೆದಾಗ, "ನಾಸ್ತಾ ತಡವಾಗಿ ಮಾಡಿದ್ದೆ. ಈಗ ತುಸು ಹೊತ್ತು ಮಲಗುತ್ತೇನೆ. ಆಮೇಲೆ ಊಟ ಮಾಡುತ್ತೇನೆ" ಎಂದು ದಿವಾಣದಲ್ಲಿ ಒರಗಿದೊಡನೆಯೇ ಹತ್ತಿದ ನಿದ್ದೆ ಅವನು ತನ್ನ ಕವನದಲ್ಲಿ ಕನವರಿಸಿದ 'ಎಚ್ಚರವೇ ಬರದ ನಿದ್ದೆ' ಯಾಗಿರಬಹುದೇ ಎಂದು ಕಂಗಾಲಾದ ಮನೆಯವರು ಕರೆಸಿದ ಕೂಡಲೇ ಓಡೋಡಿ ಬಂದಂತೆ ಬಂದು ಪರೀಕ್ಷಿಸಿದ ಕುಟುಂಬದ ಡಾಕ್ಟರ್ ಈ ನಿದ್ದೆಯ ವೈದ್ಯಕೀಯ ಹೆಸರನ್ನು ಉಸುರಿದ್ದ: 'ಕಾರ್ಡಿಯಾಕ್ ಅರೆಸ್ಟ್".

ಆ ಇಡಿಯ ದಿನ, ಸಂತಾಪ ಸೂಚಿಸಲು ಬಂದವರ ಮುಂದೆ ವ್ಯಕ್ತಗೊಂಡ ಮನೆಯವರ ಶೋಕದ ಒಂದು ಎಳೆಗೆ–ಸಿದ್ಧವಾದ ಊಟವನ್ನು ಉಣ್ಣುವ ಮೊದಲೇ ಹೊರಟು ಹೋದ ಸಂಗತಿಯೇ ವಿಷಯವಾಯ್ತು. ಕೇಳುತ್ತಿದ್ದಂತೆ, ನಿನ್ನೆಯಿಂದಲೂ ನಾನೇ ಅನುಭವಿಸಿದ್ದಕ್ಕೆ ಈಗ ಬೇರೆಯೇ ಅರ್ಥ ಹೊಳೆಯ ಹತ್ತಿದಾಗ ಕರುಳುಗಳು ಕುಲುಕುಲಿಸಿದವು.

ದಿನವೂ ರಾತ್ರಿ ಮಲಗುವ ಮೊದಲು ಹಾಸಿಗೆಯಲ್ಲಿ ಕೂತು ಕೆಲ ಹೊತ್ತು ಪ್ರಾರ್ಥಿಸುವುದು ನನ್ನ ಇತ್ತೀಚಿನ ಪರಿಪಾಠ. ಆ ದಿನ (ಮಂಗಳವಾರ ರಾತ್ರಿ) ಮಲಗುವ ಹೊತ್ತಿಗೇ ಅರ್ಥವಾಗದ ಕಳವಳ, ಆತಂಕ, ಎಂದಿಗಿಂತ ಹೆಚ್ಚು ಹೊತ್ತು ಪ್ರಾರ್ಥಿಸಿದ್ದೆನಷ್ಟೆ: ಅಲ್ಲ, ರಾತ್ರಿ ಎಚ್ಚರವಾದ ಎರಡು ಬಾರಿಯೂ ಮತ್ತೆ ಪ್ರಾರ್ಥಿಸಿದ್ದೆ. ಮರುದಿನ ಬೆಳಿಗ್ಗೆ ನಾಸ್ತಾದ ನಂತರ ಗೆಳೆಯರೊಬ್ಬರಿಗೆ ಪತ್ರ ಬರೆಯಲು ಕೂತಾಗ ಕೈ ನಡುಗುತ್ತಿತ್ತು. ಮೂರು ಸಾರೆ ತಿದ್ದಿದರೂ ಪತ್ರ ಅಂದಗೆಡುತ್ತಿದ್ದುದನ್ನು ನೋಡಿ ಮನಸ್ಸು ರೋಸಿಹೋಗಿ ಬರೆಯುವುದನ್ನೇ ಬಿಟ್ಟುಕೊಟ್ಟೆ. ಕೊನೆಗೆ ೯-೪೦ರ ಸುಮಾರಿಗೆ ಧಡಕ್ಕನೆ ಕೂತಲ್ಲಿಂದ ಎದ್ದು ಯಾವ ಪೂರ್ವ ಯೋಚನೆಯೂ ಇಲ್ಲದೇ ಅಣ್ಣನ ನೆರೆಮನೆಯವರ ಟೆಲಿಫೋನ್ ಮೇಲೆ ಅತ್ತಿಗೆಯನ್ನು ಕರೆಯಿಸಿದೆ. ನನ್ನ ಕಿರಿಯ ಮಗ ವಿಲಿಂಪನ ಮದುವೆಯ ಆಮಂತ್ರಣ ಪತ್ರಿಕೆಯನ್ನು ಅಣ್ಣ ಅತ್ತಿಗೆಯರಿಗೆ ಮೊದಲು ಕೊಟ್ಟು ಅವರ ಆಶೀರ್ವಾದ ಪಡೆಯಲು ನಾನು ಮತ್ತು ನನ್ನ ಹೆಂಡತಿ ಬರುವ ಶನಿವಾರ

(ಫೆಬ್ರವರಿ ೨ ರಂದು) ಬೋರಿವ್ಲಿಗೆ ಬರುತ್ತೇವೆಂದು ತಿಳಿಸಲು ಫೋನ್ ಮಾಡುವವನೇ ಇದ್ದೆ. ಆದರೆ ಇಂದೇ ಮಾಡುವ ವಿಚಾರವಿರಲಿಲ್ಲ.

ಮಿಲಿಂದನ ಮದುವೆ ಫೆಬ್ರವರಿ ೨೫ ರಂದು, ರವಿವಾರ ಅಣ್ಣನ ಮನೆಗೆ ಹೋಗುವುದೆಂದು, ಆಮಂತ್ರಣ ಪತ್ರಿಕೆಗಳು ಮುದ್ರಣಗೊಂಡು ಬಂದ ದಿನವೇ, ನಿಶ್ಚಿತವಾಗಿತ್ತು. ಆದರೆ ಬೋರಿವ್ಲಿಗೆ ಹೋಗುವಾಗ ಪ್ರತಿಸಾರೆ ಫೋನ್ ಮೇಲೆ ತಿಳಿಸುತ್ತಿದ್ದುದು ಒಂದೋ ನಾವು ಹೋಗುವ ದಿನದ ಬೆಳಿಗ್ಗೆ ಇಲ್ಲವೇ ಒಂದು ದಿನ ಮೊದಲಾಗಿತ್ತು. ಹೀಗೆ ಐದು ದಿನಗಳ ಮೊದಲೇ ಫೋನ್ ಮಾಡಿದ್ದು ನೆನಪಿಲ್ಲ. ಫೋನ್ ಮಾಡಿ ತಿಳಿಸುವ ಉದ್ದೇಶ ನಾವು ಬರುವಹೊತ್ತಿಗೆ ಅವನು ಮನೆಯಲ್ಲಿರುತ್ತಾನೆ ಎಂಬುದನ್ನು ಖಾತ್ರಿ ಮಾಡಿಕೊಳ್ಳಲು ಅಲ್ಲವೇ ಅಲ್ಲವಾಗಿತ್ತು. ಅವನು ಮನೆಯಲ್ಲಿ ಇದ್ದೇ ಇರುತ್ತಾನೆ ಎಂಬುದರ ಬಗ್ಗೆ ಯಾವ ಅನುಮಾನವೂ ಇರಲಿಲ್ಲ. ಕಳೆದ ಮೂರು ವರ್ಷಗಳಲ್ಲಿ ಅವನು ಮನೆ ಬಿಟ್ಟು ಎಲ್ಲೂ ಹೋದುದೇ ಇಲ್ಲ. ಒಂದು ಕಾಲಕ್ಕೆ ಆರೋಗ್ಯಕ್ಕೆ ಇನ್ನೊಂದು ಹೆಸರು ಎಂಬಂತಿದ್ದ, ದೃಢಕಾಯದ ಭವ್ಯ ವ್ಯಕ್ತಿತ್ವದ ತರುಣನಾಗಿದ್ದಾಗ ವಿಶ್ವಪರ್ಯಟನ ಮಾಡಿದ ಧೀರೋದಾತ್ತ ಜೀವ ಈಗ ಬೋರಿವ್ಲಿಯ ತನ್ನ ಮನೆಯ ನಾಲ್ಕು ಗೋಡೆಗಳ ಒಳಗೇ ಬಂಧಿತನಾಗಿದ್ದ. ಮಲಗುವ ಮಂಚಕ್ಕೆ, ವಿರಮಿಸುವ ದಿವಾಣಕ್ಕೆ, ಕೂರುವ ಕುರ್ಚಿಗೇ ಕಟ್ಟಿಬಿದ್ದವನ ಹಾಗೇ ಕಾಲ ಕಳೆಯುತ್ತಿದ್ದ. ಫೋನ್ ಮಾಡಿ ನಾವು ಇಂಥ ದಿನ, ಇಂಥ ಹೊತ್ತಿಗೆ ಬರುತ್ತೇವೆಂದು ತಿಳಿಸುವುದರ ಉದ್ದೇಶ ಬೇರೆಯೇ: ಹಾಗೆ ಮಾಡುವುದರಿಂದ, ತಂತಾನೇ ಬಿಗಿದುಕೊಳ್ಳುತ್ತ ನಡುಗುವ ಮೈಯ ನಡುಕವನ್ನು, ಟೆನ್ಷನ್ ಅನ್ನು ಕಡಿಮೆ ಮಾಡಲು ದಿನವೂ ಸೇವಿಸುತ್ತಿದ್ದ ಔಷಧಿಗಳ 'ಡೋಜ್'ನ ವೇಳೆಯನ್ನು ನಾವು ಬರುವ ಸಮಯಕ್ಕೆ ಸರಿ ಹೋಗುವಂತೆ ಬದಲಿಸಿಕೊಳ್ಳಲು, ನಮ್ಮ ಭೇಟಿಯಂಥ ಉತ್ತೇಜನಕಾರಿಯಾದ ಘಟನೆಗೆ ಮನಸ್ಸನ್ನು ಸಿದ್ಧಗೊಳಿಸಿಕೊಳ್ಳಲು ಸಾಕಷ್ಟು ಅವಕಾಶ ಸಿಗುತ್ತಿತ್ತು. ನಾವು ಬರುತ್ತೇವೆಂದು ತಿಳಿಸಿದ ಗಳಿಗೆ ಹತ್ತಿರವಾದಂತೆ ತುಂಬಾ ಉತ್ಸಾಹಿತನಾಗಿ ನಮ್ಮ ಹಾದಿ ಕಾಯುತ್ತಾ ಕುಳಿತಿರುತ್ತಿದ್ದ.

ಈ ಸಾರೆ, ರವಿವಾರ ಮಾಡಲಿರುವ ಭೇಟಿಯ ಬಗ್ಗೆ ಬುಧವಾರವೇ ಫೋನ್ ಮಾಡುವ ಆತುರದ ಅರ್ಥ ಆ ಗಳಿಗೆಯಲ್ಲಿ ನನಗೆ ಹೊಳೆದಿರಲಿಲ್ಲ. ಅಡುಗೆ ಮನೆಯಲ್ಲಿಂದಲೇ ಹೆಂಡತಿ ಕೂಡ, "ಶನಿವಾರ ಮಾಡಿದರಾಗುತ್ತಿತ್ತು. ಇವತ್ತೇ ಮಾಡುವ ಉತಾವಳಿಯಾಕೆ? ಪಾಪ, ಈಗಿನಿಂದಲೇ ಹಾದಿ ಕಾಯುತ್ತ ಕೂರಬಹುದು", ಎಂದಳು. ಆಗಲೇ ಟೆಲಿಫೋನ್ ಮೇಲೆ ಬಂದ ಅತ್ತಿಗೆಗೆ ನಾವು ಬರುವ ಸುದ್ದಿ ತಿಳಿಸಿದ್ದೇ ತುಂಬ ಖುಶಿಯಿಂದಲೇ, "ಬನ್ನಿ, ಊಟಕ್ಕೆ ಬನ್ನಿ, ಇವರೂ ಮಿಲಿಂದನ ಮದುವೆ ಬಗ್ಗೆ ಮಾತನಾಡುತ್ತ ಖುಶಿಯಲ್ಲಿದ್ದಾರೆ. ಮದುವೆ ಇದೇ ತಿಂಗಳ (ಜನವರಿ) ೨೫ಕ್ಕೆ ಎಂದು ತಿಳಕೊಂಡವರಂತೆ ಎರಡು ಮೂರು ಸಾರಿಯಾದರೂ ಕೇಳಿರಬೇಕು ಎಂದಳು. "ಊಟಕ್ಕೆ ಬೇಡ, ಊಟ ಮುಗಿಸಿಯೇ ಬರುತ್ತೇವೆ", ಎಂದು ಹೇಳುವಷ್ಟರಲ್ಲಿ ಅಣ್ಣನ ಐದು ವರ್ಷದ ಮೊಮ್ಮಗ ಸಂದೀಪನೂ ಫೋನ್ ಮೇಲೆ ತನ್ನ ಬಗ್ಗೆ, ತನ್ನ ಅಜ್ಜನ ಕುಶಾಲಿಯ ಬಗ್ಗೆ ಹೇಳಿ ಕುಣಿದಾಡುವವನಂತೆ ಕೇಕೇ ಹಾಕಿದ. ನನ್ನ ಮನಸ್ಸನ್ನು ಕವಿದ ಕಾತರ

ಇದ್ದಕ್ಕಿದ್ದಂತೆ ಮಾಯವಾಗಿತ್ತು. ಬೆಳಿಗ್ಗೆ ಸರಿಯಾಗಿ ಓದಲು ಆಗಿರದ ದಿನ ಪತ್ರಿಕೆಯನ್ನು ಓದುತ್ತ ಸೋಫಾದಲ್ಲಿ ಒರಗಿದೆ. ೧೦-೩೦ ಗಂಟೆಯ ಸುಮಾರಿಗೆ ನಾನಿನ್ನೂ ಸ್ನಾನ ಮಾಡಿರದ ಬಗ್ಗೆ ಹೆಂಡತಿ ಎಚ್ಚರಿಸಿದಾಗ ಎದ್ದು ದಾಡಿ-ಸ್ನಾನಗಳನ್ನು ಮುಗಿಸಲೆಂದು ಬಚ್ಚಲು ಮನೆಗೆ ಹೋಗಿ ಕದ ಮುಚ್ಚಿಕೊಂಡ ಕೆಲ ಹೊತ್ತಿನಲ್ಲೇ ಹೊರಗಿನಿಂದ ಹೆಂಡತಿಯ ಕಾತರದ ಕರೆ "ಬೇಗ ಹೊರಗೆ ಬನ್ನಿ, ಗಂಗಣ್ಣನಿಗೆ ಏನೋ ಆಗಿದೆಯಂತೆ. ಪ್ರಭಾಳ ಫೋನ್ ಬಂದಿದೆ". ಹೊರಗೆ ಬಂದಾಗ ಭಯಭೀತಳಾದ ಹೆಂಡತಿ, "ಏನೆಂದು ಕೇಳಬೇಡಿ, ಕೂಡಲೇ ಹೊರಟು ಬನ್ನಿ. ಬರುವಾಗ ರವಿಯನ್ನೂ ಜತೆಗೆ ತನ್ನಿ", ಎನ್ನುವಾಗ ಪ್ರಭಾ ಅಳುತ್ತಿದ್ದಳು. ಹೆಚ್ಚಿನದೇನನ್ನೂ ಹೇಳಲು ಸಾಧ್ಯವಾಗದೇ ರಿಸೀವರ್ ಕೆಳಗಿಟ್ಟು ಬಿಟ್ಟಳು" ಎಂದಳು. ಪ್ರಭಾ ಗಂಗಣ್ಣನ ಸೊಸೆ, ನಿನ್ನೆ ರಾತ್ರಿಯ, ಇವತ್ತು ಬೆಳಗಿನ ಅನುಭವಗಳು ನೆನಪಿಗೆ ಬಂದು ಮನಸ್ಸು ಅಲ್ಲೋಲಕಲ್ಲೋಲವಾಯಿತು. ಸ್ನಾನ ಮಾಡುವ ಮೊದಲೇ ಉಡುಪು ಮಾಡಿ ಹೆಂಡತಿಯ ಜೊತೆಗೆ ಬೋರಿವ್ಲಿಗೆ ಹೊರಟು ನಿಂತಾಗ ರವಿಯನ್ನೂ ಕರೆತರಲು ಮಾಡಿದ ಪ್ರಾರ್ಥನೆಯೊಂದೇ ಆಶೆಯ ಕಿರಣ ಹೊಳೆಯಿಸಿತ್ತು. ರವಿ ನನ್ನ ಹಿರಿಯ ಮಗ-ಡಾಕ್ಟರ್. ಬಹುಶಃ ವೈದ್ಯಕೀಯ ನೆರವು ಬೇಕಾದ ಸನ್ನಿವೇಶ ಹುಟ್ಟಿಕೊಂಡಿರಬಹುದೆಂದುಕೊಂಡು ಧೈರ್ಯ ತಂದುಕೊಳ್ಳಲು ಯತ್ನಿಸಿದೆ. ಒಂದೇ ತಾಸಿನ ಮೊದಲು ಖುಶಿಯಲ್ಲಿದ್ದವನಿಗೆ, 'ಅಂತಹದೇನೂ ಆಗಿರಲಾರದು. ದೇವರೇ ಆಗಿರದಿರಲಿ: ರವಿಯ ಕ್ಲಿನಿಕ್‌ನಿಂದ ಬೋರಿವ್ಲಿ ಕಾರ್‌ನಿಂದ ೪೫ ಮಿನಿಟುಗಳ ಹಾದಿ. ನಾನು ಹೆಂಡತಿ-ರವಿ ದಾರಿಯಲ್ಲಿ ತುಟಿ ಪಿಟ್ಟೆನ್ನಲಿಲ್ಲ. ರವಿಯೇ ಕಾರನ್ನು ಓಡಿಸುತ್ತಿದ್ದ.

ಅಣ್ಣನ ಮನೆಗೆ ಹೋಗುವಾಗ ಪ್ರತಿಸಾರೆ ಖುಶಿಯಿಂದ ಬೆಳಗಿ ನಿಲ್ಲುತ್ತಿದ್ದ ನಿತ್ಯ ಪರಿಚಯದ ದಾರಿ ಬಿಕ್ಕಳಿಕೆಯನ್ನು ತಡೆದುಕೊಳ್ಳುವ ಪ್ರಯತ್ನದಲ್ಲಿ ಬಿಮ್ಮನೆ ಬಿಗಿದುಕೊಂಡಂತೆ ಭಾಸವಾಯಿತು. ನಾನು ಸೀಟಿಗೆ ತಲೆಯಾನಿಸಿ, ಗಟ್ಟಿಯಾಗಿ ಕಣ್ಣು ಮುಚ್ಚಿಕೊಂಡು ಬಾಲ್ಯದಲ್ಲಿ ನಾನು ಅಣ್ಣ ಜೊತೆಗೂಡಿ ಅನುಭವಿಸಿದ ಹನೇಹಳ್ಳಿಯೊಳಗಿನ ಹಲವು ಜಾಗಗಳನ್ನು ನೆನೆಯಲು ಪ್ರಯತ್ನಿಸಿದೆ. ಸಾಧ್ಯವಾಗಲಿಲ್ಲ. ಹೆಸರುಗಳು ನೆನಪಾಗುತ್ತಿದ್ದವು; ಚಿತ್ರಕಟ್ಟುತ್ತಿರಲಿಲ್ಲ. "ಅಪ್ಪಾ, ನೀನು ಸರಿಯಾಗಿದ್ದೀಯಲ್ಲಾ ?" ಎಂದು ಕೇಳಿ ರವಿ ನನ್ನನ್ನು ಎಚ್ಚರಿಸುವ ಹೊತ್ತಿಗೆ ಬೋರಿವ್ಲಿಯ ರೇಲ್ವೇ ಕ್ರಾಸಿಂಗ್‌ಗೆ ಬಂದು ಮುಟ್ಟಿದ್ದೆವು. ಗೇಟು ತೆರೆದೇ ಇತ್ತು. ಮುಂದಿನ ಐದೇ ಮಿನಿಟುಗಳಲ್ಲಿ ಅಣ್ಣನ ಮನೆಯನ್ನೂ ತಲುಪಿದ್ದೆವು. ಅಂಗಳದಲ್ಲಿ ಜನ ನೆರೆದಿರಲಿಲ್ಲ! ಆದರೆ ಒಬ್ಬನೇ ಕೂತು ಆಡುತ್ತಿದ್ದ ಸಂದೀಪನೇ ಮುಗ್ಧ ಬೇಫಕೀರತೆಯಿಂದ, ತೊದಲು ನುಡಿಯಲ್ಲಿ ತಿಳಿಸಿದ ಸಮಾಚಾರದಿಂದ ಮಾತ್ರ ನನ್ನ ಬೆನ್ನಹುರಿಯಲ್ಲಿ ಬರ್ಫ್ ಹರಿದ ಅನುಭವವಾಯ್ತು. ಮುಂದೆ ಹೋದಾಗ, ಮನೆಯ ಕದ ತೆರೆದೇ ಇದ್ದುದು ಕಣ್ಣಿಗೆ ಬೀಳುತ್ತಲೇ ಎದೆ ಧಸ್ ಎಂದಿತು: ಕರೆಗಂಟೆ ಬಾರಿಸಿದ ಮೇಲೆಯೇ ತೆರೆದುಕೊಳ್ಳುವ ಬಾಗಿಲಿಂದ ಒಳಗೆ ಬಂದ ನನ್ನ ಧನಿ ಕಿವಿಯ ಮೇಲೆ ಬೀಳುತ್ತಲೇ, ಆಗದಿದ್ದರೂ, ಕಾಲೆಳೆಯುತ್ತಲೇ ಮಲಗುವ ಕೋಣೆಯಿಂದ ಹೊರಗೆ ಬಂದು, "ಬಂದೆಯಾ ?" ಎಂದು ಕೇಳುವ ತರ ಸುಂದರವಾಗಿ ಮುಗುಳ್ನಕ್ಕು ಬರಮಾಡಿಕೊಳ್ಳುತ್ತಿದ್ದ ಪ್ರೀತಿಯ ಜೀವ ಇವತ್ತು ಎದ್ದು

ಬರಲಿಲ್ಲ. ಬಾಗಿಲ ಬಳಿಯೇ ಇದ್ದೂ ಬರಮಾಡಿಕೊಳ್ಳಲಿಲ್ಲ. 'ಅಣ್ಣ ಕೇಂದ್ರಿತ'ವಾದ ನನ್ನ ಜಗತ್ತು ನಿಂತಲ್ಲೇ ಕುಸಿದು ಬಿದ್ದು ನಾನು ತಬ್ಬಲಿಯಾದುದರ ಅರಿವು ದೊಡ್ಡ ಆಘಾತದ ಬಲದಿಂದ ಮೂಡಿದಾಗ—'ಇದು ನಿಜವಲ್ಲ' ಎಂದು ಚೀರಿದ್ದೆ:

ಅಣ್ಣನ ಒಬ್ಬನೇ ಮಗ ಉದಯ ಊರಲ್ಲಿರಲಿಲ್ಲ. ಆಫೀಸಿನ ಕೆಲಸದ ಮೇಲೆ ಬೆಂಗಳೂರಿಗೆ ಹೋಗಿದ್ದ. ಹುಡುಗಿಯರಿಬ್ಬರೂ ಅಮೆರಿಕೆಯಲ್ಲಿ, ಉದಯನಿಗೆ ಸುದ್ದಿ ಮುಟ್ಟಿ ಅವನು ಮನೆ ತಲುಪುವುದಕ್ಕೆ ರಾತ್ರಿ ಒಂಬತ್ತು. ಅಗ್ನಿಸಂಸ್ಕಾರ ಮುಗಿಯುವ ಹೊತ್ತಿಗೆ ರಾತ್ರಿ ೧೧–೩೦. ಈವರೆಗಿನ ಹನ್ನೆರಡು ತಾಸುಗಳಲ್ಲಿಯ ಯಾವ ಒಂದು ವಿದ್ಯಮಾನವೂ ಗಂಗಣ್ಣನಿಂದ ಕಲಿತ ಜೀವಂತಿಕೆಯ ಭಾಷೆಗೆ ಒಗ್ಗುವಂತಹದಲ್ಲ. ಅವನ ಹೆಸರಿನೊಂದಿಗೆ ಸಹಚರ್ಯ ಹೊಂದುವಂತಹದಲ್ಲ. ಕಿವಿಯಲ್ಲಿ ಶಬ್ದವಾಗುತ್ತಿತ್ತು. ಕಣ್ಣಿನಲ್ಲಿ ಪ್ರತಿಬಿಂಬವಾಗುತ್ತಿತ್ತು. ಪ್ರಜ್ಞೆಯಾಗುತ್ತಿರಲಿಲ್ಲ. ಅರ್ಥವಾಗುತ್ತಿರಲಿಲ್ಲ. ಅರ್ಥ ಹೊಳೆಯಿಸಬೇಕಾದ ಅವಯವವೇ ಮರಗಟ್ಟಿದಂತಿತ್ತು. ಅಗ್ನಿ ಸಂಸ್ಕಾರ ಮುಗಿಸಿಕೊಂಡು ಯಾಂತ್ರಿಕವಾಗಿಯೇ ಮತ್ತೆ ಅಣ್ಣನ ಮನೆಗೆ ವಾಪಸ್ಸಾಗುವಷ್ಟರಲ್ಲಿ ಅಂಗಳದಲ್ಲಿ ಕಾಲು ತೊಳೆದುಕೊಳ್ಳಲು ನೀರು ಸಿದ್ಧವಾಗಿತ್ತು. ಕಾಲು ತೊಳೆದು ಕೊಂಡು ಹಾಲ್‌ನೊಳಗೆ ಕಾಲಿಡುತ್ತಲೇ ಕಣ್ಣಿಗೆ ಬಿದ್ದಿದ್ದುವು ಖಾಲಿ ದಿವಾಣದ ಬಳಿಯ ಸ್ಟೂಲಿನಮೇಲೆ ಬೆಳಗಿಕೊಂಡ ಗಿಡ್ಡ ಕಾಲಿನ ಸಮಯ ದೀಪ, ಸ್ಟೇನ್‌ಲೆಸ್ ಸ್ಟೀಲ್ ವಾಟೆಯಲ್ಲಿ ತುಂಬಿದ ಅಕ್ಕಿ ಕಾಳುಗಳಲ್ಲಿ ಕಾಲು ಹುಗಿದುಕೊಂಡು ಗಂಧ ಸೂಸುವ ಹೊಗೆ ಕಾರುತ್ತ ನಿಂತ ಊದಿನ ಕಡ್ಡಿಗಳು ಈ ದೃಶ್ಯ ನನಗೆ ಇದಿರಾದದ್ದು ಬದುಕಿನಲ್ಲಿ ಇದೇ ಮೊದಲ ಬಾರಿಯಲ್ಲ. ಆದರೆ ಈ ಮೊದಲು ಅಣ್ಣನಿದ್ದ ತಾಳಿ ಕೊಳ್ಳುವ ಧೈರ್ಯ ತುಂಬಲು, ಅಣ್ಣ 'ಇದ್ದಾನೆ' ಎನ್ನುವುದೇ ಧೈರ್ಯಕ್ಕೆ, ಭದ್ರತೆಯ ಭಾವನೆ ಮೂಲವಾಗಿತ್ತು: ನೋಡುನೋಡುತ್ತಿದ್ದಂತೆಯೇ, ಬೆಳಗಿನಿಂದಲೂ ಹೊರ ಬರಲು ನಿರಾಕರಿಸುತ್ತಿದ್ದ ಕಂಬನಿಗಳು ಈಗ ಚಿಮ್ಮಿ ಬಂದಿದ್ದುವು ಬೋರಿವ್ಲಿಯ ಈ ಮನೆ ಈಗ ಅಣ್ಣಂದಿರಿಲ್ಲದ ಜಗತ್ತಿಗೆ ಸಂಕೇತವಾಗಿದೆಯೆಂದು ಭಾಸವಾದಾಗ:

'ಪಾರ್ಕಿನ್‌ಸನ್ ಡಿಸೀಜ್' ಎಂದೂ ತಾನಾಗಿ ಕೊಲ್ಲುವುದಿಲ್ಲವಂತೆ. ಅಡ್ಡ ಕೆಡವ ಬಹುದು. ಚಿತ್ರಹಿಂಸೆ ಕೊಡಬಹುದು. ಆದರೆ ಕೊಲ್ಲುವುದಿಲ್ಲ: ಹೀಗೆ ಹೇಳಿದ ವೈದ್ಯಕೀಯ ತಜ್ಞರಿಗೆ ನನ್ನ ಗಂಗಣ್ಣನ ಪರಿಚಯವಿದ್ದಿದ್ದರೆ: ಅವನ ಕಾವ್ಯದ ಪರಿಚಯವಿದ್ದಿದ್ದರೆ: ಈ ವ್ಯಾಧಿಯನ್ನು ಕುರಿತು ವೈದ್ಯಶಾಸ್ತ್ರ ಈವರೆಗೆ ಒಟ್ಟುಗೂಡಿ ಸದ ರಾಶಿಗಟ್ಟಲೆ ಮಾಹಿತಿಯಲ್ಲಿ ಅದು ನೇರವಾಗಿ ಕೊಲ್ಲಬಹುದಾದ ಕಾವ್ಯದ ಉಲ್ಲೇಖವೇ ಇಲ್ಲ: ಕಾವ್ಯವನ್ನು ಸೃಷ್ಟಿಸುವ ಅವಯವದ ಅಭ್ಯಾಸ ಅವರ ಆಸ್ಥೆಗೆ ಸೇರಿದ್ದೇ ಅಲ್ಲವಂತೆ; ಈ ವ್ಯಾಧಿಯಿಂದ ತುಂಬು ತಾರುಣ್ಯದಲ್ಲೇ ಅಕಾಲಮೃತ್ಯುವಿಗೆ ಈಡಾದದ್ದು. ಅವನಿಂದ ಇನ್ನೂ ಹುಟ್ಟಲಿದ್ದ ಕಾವ್ಯ? 'ಹರಿವ ನೀರಿದು' ಪ್ರಕಟ ವಾದಾಗ ಅವನಿಗೆ ಬರಿಯ ೪೭ ವರ್ಷ ಪ್ರಾಯ.

ಅವನು ಸೃಷ್ಟಿಸಿದ್ದು ಕನ್ನಡದ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯುತ್ತದೆ. ನಿಸ್ಸಂಶಯ ಆದರೆ ಈ ವ್ಯಾಧಿ ಅವನನ್ನು ತಟ್ಟದಿದ್ದರೆ....

'ಇವನಂಥ ಇನ್ನೊಬ್ಬನನ್ನು ನಾನು ಕಂಡಿಲ್ಲ. ಇವನು ನನಗೆ ಉಣಿಸಿದ್ದು ಪ್ರೀತಿ

ವಾತ್ಸಲ್ಯಗಳನ್ನು ಮಾತ್ರವಲ್ಲ. ನನ್ನ ಮನಸ್ಸನ್ನು ರೂಪಿಸಿದ ರೂವಾರಿ ಈತನೇ. ಸಾಹಿತ್ಯದಲ್ಲಿ ಆಸ್ಥೆ ಹುಟ್ಟಿಸಿದವನು, ನಾನೇ ಸೃಷ್ಟಿಸುವಂತೆ ಪ್ರೇರಣೆ ಇತ್ತವನು. ನನ್ನ ವ್ಯಕ್ತಿತ್ವದಂತೆಯೇ ನನ್ನ ಸಾಹಿತ್ಯದ ಅಂಗುಲ ಅಂಗುಲವನ್ನು ವ್ಯಾಪಿಸಿಕೊಂಡ ಇವನಿಗೇ ನನ್ನ ಇಡೀ ಸಾಹಿತ್ಯ ಮುಡಿಪಾದದ್ದು.

ನನ್ನ ಇತ್ತೀಚಿನ ಕೃತಿಗಳಲ್ಲಿ ಕಳೆದು ಹೋದವನ ಬಗೆಗಿನ 'ಹುಡುಕಾಟ'ವಾಗಿ ರೂಪುಗೊಳ್ಳುತ್ತಿದ್ದುದರಲ್ಲಿ ಇವನನ್ನು ಕಳಕೊಳ್ಳುವ ದುರ್ಧರ ವಾಸ್ತವಕ್ಕೆ ಮನಸ್ಸನ್ನು ಸಿದ್ಧಗೊಳಿಸುವ ಪ್ರಯತ್ನ ಅಡಗಿರಬಹುದೇ? ಮಲಗುವ ಮೊದಲು ಪ್ರಾರ್ಥಿಸುವ ಪರಿಪಾಠದಲ್ಲಿ ಕೂಡ?

ಹುಡುಕಿದರೂ ಸಿಗಲಾರ; ಇವನಂಥ ಇನ್ನೊಬ್ಬ.

ಯೋಚನೆ ಮಾಡದೆ ಮಾತಾಡುವುದು ಗುರಿ ಹಿಡಿಯದೆ ತುಪಾಕಿ ಹೊಡೆಯುವುದಕ್ಕೆ ಸಮಾನ.

ರೀಡರ್ಸ್ ಡೈಜೆಸ್ಟ್

ಪೆಟ್ರೋಲ್ ಪಂಪಿನಲ್ಲಿ ಬರೆದ "ನೀವಿಲ್ಲಿ ಧೂಮಪಾನ ಮಾಡಲು ಬಯಸಿದರೆ ನಿಮ್ಮ ಚಿತಾಭಸ್ಮವನ್ನು ಎಲ್ಲಿಗೆ ರವಾನಿಸಬೇಕೆಂಬುದರ ಬಗ್ಗೆ ವಿಳಾಸ ನೀಡಿ."

ಅಜಿತ್ ಕೇಸರಿ

ಗಂಗಾಧರ ಚಿತ್ತಾಲ (ಒಂದು ನೆನಪು)

ಡಾ|| ಶಾಂತಿನಾಥ ದೇಸಾಯಿ

ಜೂನ್ ೧೯೪೦. ಮುಂಬಯಿ ವಿಶ್ವವಿದ್ಯಾಲಯದ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯ ಫಲಿತಾಂಶ. ಇಡಿಯ ಮುಂಬಯಿ ಇಲಾಖೆಗೇ (ಸಿಂಧ್, ಗುಜರಾತ್, ಮಹಾರಾಷ್ಟ್ರ, ಉತ್ತರ ಕರ್ನಾಟಕ ಇವುಗಳನ್ನೊಳಗೊಂಡ ಹಳೇ ಮುಂಬಯಿ ಪ್ರಾಂತ್ಯಕ್ಕೆ:) ರೆಕಾರ್ಡ್ ಬ್ರೇಕ್ ಮಾಡಿ ಫಸ್ಟ್ ರ್‍ಯಾಂಕ್ ಪಡೆದಂಥ ಅಸಾಮಾನ್ಯ ಹುಡುಗ ನಮ್ಮ ಜಿಲ್ಲೆಯವ. ನನ್ನ ಮನಸ್ಸಿನಲ್ಲಿ (ನಾನಾಗ ಅದೇ ಉತ್ತರಕನ್ನಡ ಜಿಲ್ಲೆಯ ಹಳಿಯಾಳದಲ್ಲಿ ಇಂಗ್ಲಿಷ್ ಮೂರನೆಯ ಇಯತ್ತೆಯ ವಿದ್ಯಾರ್ಥಿ) ಒಂದು ಆದರ್ಶವಾಗಿ, ಒಂದು ಸಂಕೇತವಾಗಿ ಮೂಡಿದಂಥ ವ್ಯಕ್ತಿ ಗಂಗಾಧರ ಚಿತ್ತಾಲರು.

ಮುಂದೆ ೧೯೪೨ರ ಸ್ವಾತಂತ್ರ್ಯ ಸಂಗ್ರಾಮದ ಕಾಲಕ್ಕೆ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ ಗುನ್ಹೆಗಾಗಿ ಕರ್ನಾಟಕ ಕಾಲೇಜಿನಿಂದ ಡಿಬಾರ್ ಆದಂಥ ಗಂಗಾಧರ ಚಿತ್ತಾಲರ ಹೆಸರು ನನ್ನ ಮನಸ್ಸಿನಲ್ಲಿ ಇನ್ನಷ್ಟು ಅಚ್ಚೊತ್ತಿ ನಿಂತಿತ್ತು. ೧೯೪೩ರಲ್ಲಿ ಅವರು ಯಾವ ಧಾರವಾಡದ ಹಾಯಸ್ಕೂಲಿನಲ್ಲಿ ಕಲಿತಿದ್ದರೋ ಅದೇ ಕರ್ನಾಟಕದ ಹಾಯಸ್ಕೂಲಿಗೆ ನಾನೂ ಹೋದೆ. ಯೋಗಾಯೋಗದಿಂದ ಅವರ ಬಂಧುಗಳಾದ ಯಶವಂತ, ನರಹರಿ, ಮೋಹನ ಇವರೂ ಅದೇ ಹಾಯಸ್ಕೂಲಿನಲ್ಲಿದ್ದರಲ್ಲದೆ ನಾವಿದ್ದ ಚಾಳಿನಲ್ಲಿಯೇ ಅವರ ವಾಸ್ತವ್ಯವಿತ್ತು. ಸಾಂಗಲಿಯಿಂದ ದೀಪಾವಳಿ ಸೂಟಿಗೆ ಗಂಗಾಧರ ಧಾರವಾಡಕ್ಕೆ ಬಂದ ದಿನ 'ಆ ಅವರೇ' ಎಂದು ಬಾಯಿ ಬಿಟ್ಟು ಕಣ್ಣು ತುಂಬಿ ನೋಡಿದ ಸಂದರ್ಭ ಇನ್ನೂ ನೆನಪಿದೆ.

ನಂತರ ರಾಮಣ್ಣ ಚಿತ್ತಾಲರ ಬಂಧು-ಪ್ರೀತಿಯ ಛತ್ರದ ಕೆಳಗೆ ಚಿತ್ತಾಲರ ಬಂಧುಗಳಲ್ಲಿ ನಾನೂ ಅನಾಯಾಸವಾಗಿಯೇ ಸೇರಿ ಬಿಟ್ಟಿದ್ದೆ. ಮುಂದೆ ನಮ್ಮ ನಮ್ಮ ಅಸ್ಮಿತೆಯ ಪ್ರಕಾರ ಬೆಳವಣಿಗೆ, ಶೈಕ್ಷಣಿಕ ಹಾಗೂ ಸಾಹಿತ್ಯ ಸಾಧನೆ....ಗಂಗಾಧರ

ಚಿತ್ತಾಲರ ಕಾವ್ಯ ಅಷ್ಟರಲ್ಲಿಯೇ ಒಂದು ನಿಟ್ಟಿನಲ್ಲಿ ಹರಿಯುತ್ತಿತ್ತು. ಅದು ನಮ್ಮೆಲ್ಲರ ಅಂತರಂಗದ ಪ್ರವಾಹವೂ ಆಯಿತು. ನಮ್ಮ ಸಂವೇದನೆಯಲ್ಲಿ ಬೇರೆ ಬೇರೆ ಎಷ್ಟೋ ತೊರೆಗಳು ಸೇರಿದರೂ, ಇವರ ಕಾವ್ಯಧಾರೆ ಮಾತ್ರ ಆಪ್ತವಾಗಿ, ಆತ್ಮೀಯವಾಗಿ ನಮ್ಮ ಅಂತರಂಗದ ಭಾಗವಾಗಿಯೇ ಉಳಿದಿದೆ. ಅದರ ಅರ್ಥ ನಾವು ಅದರ ಬಗ್ಗೆ ವಸ್ತುನಿಷ್ಠ ವಾಗಿ ನೋಡುವ ಶಕ್ತಿ ಕಳೆದುಕೊಂಡೆವೆಂದಲ್ಲ; ಆದರೆ ಅವರ ಕಾವ್ಯಕ್ಕೆ ನಾವು ಸ್ಪಂದಿಸುವ ರೀತಿಯಲ್ಲಿ ರಸಾಸ್ವಾದದ ಅಂಶ ಹೆಚ್ಚೆಂದು ಒಪ್ಪಬೇಕು....

ಗಂಗಾಧರರ ಕಾವ್ಯ ರಚನೆಯೆಂದರೆ ಹೆಚ್ಚಾಗಿ ಅವರ ಮನಸ್ಸಿನಲ್ಲಿಯೇ ಅವರ ಅಂತರಂಗದ ಒಳಪಟಲದ ಮೇಲೆ ನಡೆಯುವಂಥ ಕ್ರಿಯೆ. ಕವಿತೆ ಒಳಗೇ ಸಂಪೂರ್ಣವಾಗಿ ರೈ ತಳೆದ ನಂತರ ಮುಂದೆಂದೋ ಕಾಗದದ ಮೇಲೆ ಮೈದೋರುತ್ತಿತ್ತು. ಹೀಗಾಗಿ ಇಡಿಯ ಕವಿತೆಗೆ ಕವಿತೆಯೇ ಅವರ ಕಂಠದಲ್ಲಿ ವಾಸ್ತವ್ಯ ಮಾಡುತ್ತಿತ್ತು. ಅವರು ಕವಿತೆ ಅಂದು ತೋರಿಸುವಾಗ ಅವರಿಗೆ ಕೈಯಲ್ಲಿ ತಮ್ಮ ನೋಟು ಬುಕ್ಕಾಗಲಿ ಅಥವಾ ಪುಸ್ತಕ ವಾಗಲಿ ಎಂದೂ ಬೇಕಾಗುತ್ತಿರಲಿಲ್ಲ. ಬೇಕಾದಾಗ, ಬೇಕಾದಲ್ಲಿ ಅಂದರೆ ರಸಿಕತೆ, ಸ್ನೇಹ, ಬಂಧುತ್ವದ ವಾತಾವರಣವಿದ್ದಲ್ಲಿ ಅವರು ತಮ್ಮ ಕಾವ್ಯ ಅಂದು ತೋರಿಸುತ್ತಿದ್ದರು. ಅವರ ಕಾವ್ಯವನ್ನು ಅವರ ಬಾಯಿಯಿಂದಲೇ ಅವರ ಧ್ವನಿಯಲ್ಲಿಯೇ ಕೇಳಬೇಕು— ಅಂದಾಗಲೇ ಅವರ ವಿಶಿಷ್ಟ 'ರಿಟರಿಕ್ಕಿನ' ನಿಜವಾದ 'ಇನ್‌ಸ್ಪೈರೇ' ಗೊತ್ತಾಗುತ್ತದೆ.

ಅವರ ಪಾರ್ಕಿನ್ಸನ್ ವ್ಯಾಧಿಯಿಂದ ಕನ್ನಡಕ್ಕಾದ ಹಾನಿ ಅಷ್ಟಿಷ್ಟಲ್ಲ. ಹಲವಾರು ರೀತಿಯ ದುರಂತಗಳಲ್ಲಿ ಅವರ ಕಾವ್ಯಧ್ವನಿಯೂ ನಿಂತು ಹೋದದ್ದು ಒಂದು. ಸದ್ಯ ಅದು ಅವರ ಬಂಧು ಜನರ ಹಾಗೂ ಸ್ನೇಹಿತರ ಸ್ಮೃತಿಯಲ್ಲಿ ಮಾತ್ರ ಮೊಳಗುವ ಧ್ವನಿ ಯಾಗಿ ಉಳಿದಿದೆ. 'ಸಂಪರ್ಕ'ದಲ್ಲಿಯ ಅವರ ವ್ಯಾಧಿಯ ಬಗೆಗಿನ ಕವನಗಳನ್ನು ಓದು ವಾಗ ಯಾರಿಗೆ ಕಂಠ ಬಿಗಿದು ಬರುವುದಿಲ್ಲ?

ಮುಂಬಯಿಯಲ್ಲಿಯ ಏಕಮುಖ ಸಂಚಾರ ಗಲ್ಲಿಯ ಹೆಸರು 'ಆಶಾ ಮಾರ್ಗ' (Hope street). ಅದರ ಅಡಿಯಲ್ಲೇ ಗುರುತು (No entry).

ಕೆ. ರಾಮಕೃಷ್ಣಪ್ಪ

ಗಂಗಾಧರ ಚಿತ್ತಾಲರ ಕವನಗಳು

ಡಾ|| ಯು. ಆರ್. ಅನಂತಮೂರ್ತಿ

ಪ್ರಸ್ತುತ ಕನ್ನಡ ಕಾವ್ಯಸನ್ನಿವೇಶದಲ್ಲಿ ಗಂಗಾಧರ ಚಿತ್ತಾಲರ ಕವನಗಳು ಅಪೂರ್ವವಾದ ಕೃತಿಗಳು. ಅಡಿಗರ ಕಾವ್ಯಭಾಷೆಗಿರುವ ಕ್ರಾಂತಿಶಕ್ತಿ–ಒಂದು ಇಡಿಯ ಜನಾಂಗದ ಸಂವೇದನಾಕ್ರಮವನ್ನೇ ಬದಲಿಸುವ ಹೊಸ ಕಾವ್ಯಮಾರ್ಗವನ್ನು ಸೃಷ್ಟಿಸುವ ಶಕ್ತಿ–ಚಿತ್ತಾಲರ ಕಾವ್ಯ ಭಾಷೆಗಿಲ್ಲವೆನ್ನುವುದು ನಿಜ. ಆದರೆ ಅಡಿಗರ ಸಮಕಾಲೀನರಲ್ಲಿ ಜೀವನಾನುಭವವನ್ನು ಚಿತ್ತಾಲರಷ್ಟು ಸಂಪೂರ್ಣವಾಗಿ, ಮೂಲಭೂತವಾಗಿ ಪರೀಕ್ಷಿಸಿ, ಅಭಿವ್ಯಕ್ತಿಸಲು ಪ್ರಯತ್ನಿಸಿದ ಕವಿಗಳಿಲ್ಲವೆನ್ನುವುದೂ ನಿಜವೇ. ನವೋದಯ ನವ್ಯಮಾರ್ಗಗಳ ತಿಕ್ಕಾಟದಲ್ಲಿ ಎದೆಗೆಡದೆ, ಹೊಸ ಕಾವ್ಯ ಪ್ರಯೋಗಗಳಿಂದ ಕಲಿಯಬೇಕಾದ್ದನ್ನು ಕಲಿತು, ಸ್ವಂತದ್ದೇ ಆದ ದೃಷ್ಟಿಕೋನ, ತಾತ್ವಿಕ ನಿಲುವು, ಧಾಟಿಗಳನ್ನು ಪಡೆದು ಸಾರ್ವಕಾಲಿಕ ಸಾರ್ವತ್ರಿಕ ಸಮಸ್ಯೆಗಳನ್ನು ಅತ್ಯಂತ ವೈಯಕ್ತಿಕವಾದ ಜರೂರಿನಿಂದ ಅಭಿವ್ಯಕ್ತಿಸುವ ಚಿತ್ತಾಲರ ಪ್ರತಿಭೆ ಅನನ್ಯವಾದುದು.

ಸುಮಾರು ಹತ್ತು ವರ್ಷಗಳ ಕೆಳಗೆ ಚಿತ್ತಾಲರ ಮನುಕುಲದ ಹಾಡು ಪ್ರಕಟವಾದಾಗ ಆ ಸಂಕಲನದ ಅನುಭವನಿಷ್ಠ ಕವನಗಳು ನನ್ನ ಮನಸ್ಸನ್ನು ಆಳವಾಗಿ ಕಲಕಿದಾಗಲೂ ಚಿತ್ತಾಲರ ಕಾವ್ಯ ಮಾರ್ಗ ನನ್ನ ಮನಸ್ಸನ್ನು ಅಷ್ಟಾಗಿ ಆಕರ್ಷಿಸಿರಲಿಲ್ಲ. ಇವರ ಅತ್ಯಂತ ಗಂಭೀರ ಪ್ರಯತ್ನವಾದ ದುಃಖ ಗೀತೆಗಿಂತ ಹೆಚ್ಚಾಗಿ ನನಗೆ ಹಿಡಿಸಿದ್ದ ಕವನಗಳೆಂದರೆ–'ಖುಷಿ', 'ಕನಸು ತಲೆಯಲಿ ತುಂಬಿದಂಥ ಹುಡುಗ, ಮತ್ತು 'ಫೈಲು.'

ಚಿತ್ತಾಲರು ಗ್ರಾಂಥಿಕವಾದ ಭಾಷೆಯನ್ನೂ ಸಹ ಸ್ಪಷ್ಟವಾದ ಪರಿಣಾಮಕ್ಕೋಸ್ಕರ ಹೇಗೆ ಉಪಯೋಗಿಸಿಕೊಳ್ಳಬಲ್ಲರು, ಆಡುಮಾತಿನ ಲಯ ಧಾಟಿಗಳ ಜೊತೆ ಹೆಣೆಯಬಲ್ಲರು ಎಂಬುದನ್ನು ನಾನು ಕಂಡಿರಲಿಲ್ಲ. ಬೇಂದ್ರೆ ಮತ್ತು ಅಡಿಗರ ಕಾವ್ಯದಿಂದ ಪ್ರಭಾವಿತರಾದವರಿಗೆ ಅನ್ಯ ರೀತಿಯ ಭಾಷಾ ಪ್ರಯೋಗ ರುಚಿಸುವುದು ಕಷ್ಟ; ಆದರೆ ಇದು ವಿಮರ್ಶಕನ ಆಸ್ವಾದನಾ ಶಕ್ತಿಯನ್ನು ತೀವ್ರಗೊಳಿಸಿದಂತೆ ಅನಿವಾರ್ಯವಾಗಿ ಮಿತವಾಗಿಸುತ್ತದೆಂಬುದು, ನಿಜ.

ಅಂದರೆ, ಚಿತ್ತಾಲರು ಅನುಭವದ ಸಂಪೂರ್ಣ ಆಘಾತಕ್ಕೆ ತಮ್ಮನ್ನು ಒಡ್ಡಿಕೊಂಡ ಕವನಗಳಿಗಿಂತ, ವಸ್ತುನಿಷ್ಠ ನಿರ್ಲಿಪ್ತತೆಯಲ್ಲಿ ಹಗುರವಾಗಿ ಹಿಡಿದು ಕೊಡುವ ಕಣಗಳೇ ನನಗೆ ಹೆಚ್ಚು ಹಿಡಿಸಿದ್ದುವು. ಆ ಕಾಲಕ್ಕೆ ಚಿತ್ತಾಲರ ಕಾವ್ಯ ಕುರಿತು ನನ್ನಲ್ಲಿ ರೂಪಗೊಂಡ ಅಭಿಪ್ರಾಯಗಳನ್ನು ಸ್ಥೂಲವಾಗಿ ಹೀಗೆ ಮಂಡಿಸಬಹುದು: “ಬೇಂದ್ರೆ ಮತ್ತು ಅಡಿಗರು ಭಾಷೆಯ ಜೊತೆ ಆಟವಾಡಬಲ್ಲವರು; ಈ ಆಟವನ್ನು ನಮಗೆ ಮಹತ್ವಪೂರ್ಣ ಮಾಡಬಲ್ಲ ಕವಿಗಳು, ಶಬ್ದಗಳು ಸ್ವಯಂ ಜೀವಶಕ್ತಿ ಪಡೆದ ವಸ್ತುಗಳಂತೆ ಅರ್ಥ ಮತ್ತು ನಾದದ ಸಾದೃಶ್ಯ ವೈದೃಶ್ಯಗಳಲ್ಲಿ ಪರಸ್ಪರ ಸೇರಿಕೊಂಡು ಪದಗುಚ್ಛಗಳಾಗಿ, ನಮ್ಮಿಂದ ಅನಿವಾರ್ಯವಾಗಿ ಓದಿಸಿಕೊಳ್ಳುವ ಕ್ರಮದಲ್ಲಿ ಆಡಿದ್ದನ್ನು ಅಗಿಸುತ್ತ ನಾಟಕ ಕ್ರಿಯೆಯಾಗುವುದು ಅಡಿಗರ ಕಾವ್ಯದ ವೈಶಿಷ್ಟ್ಯವೆನ್ನಬಹುದು. ಚಿತ್ತಾಲರ ಗ್ರಾಂಥಿಕ ನುಡಿಕಟ್ಟು ವಾಕ್ಸರಣಿಗಳಲ್ಲಿ ಈ ವೈವಿಧ್ಯ ಸಮೃದ್ಧಿಗಳಿಲ್ಲ. ಗಂಭೀರವಾದ ವ್ಯಕ್ತಿತ್ವವೊಂದರ ಉದಾತ್ತ ನುಡಿಗಳಂತೆ ಇರುತ್ತದೆ. ಚಿತ್ತಾಲರ ಕಾವ್ಯ. ವ್ಯಂಗ್ಯ, ವಕ್ರತೆ, ಕಟುತ್ವ, ಪರವಶತೆ—ಹೀಗೆ ಹಲವಾರು ಮೂಡುಗಳ ನಾಟಕದಲ್ಲಿ ಏರಿಳಿಯುತ್ತ ಸಾಗುವ ಲಯಕ್ಕೆ ಬದಲಾಗಿ, ಚಿತ್ತಾಲರು ಅತ್ಯಂತ ಗಂಭೀರರಾದಾಗ ಘೋಷದ ಲಯವೊಂದೆ ನಮ್ಮ ಕಿವಿ ತುಂಬ ನಿಲ್ಲುತ್ತದೆ. ಆಡುತ್ತಿರುವ ಮಾತುಗಳ ಅರ್ಥಗಳನ್ನು ನೂರೊಂದು ಅಂಗಭಂಗಿಗಳ ಮೂಲಕ ಪ್ರಕಟಿಸಿ ಪೂರೈಸಿಕೊಳ್ಳಲು ಪ್ರಯತ್ನಿಸುವವನೊಬ್ಬನ ಅವಸರ, ಉದ್ವಿಗ್ನತೆ, ಖುಷಿಗಳಾಗಲಿ, ಆಡುಮಾತಿನ ಆಪ್ತತೆಯ ತಿರುವುಮುರುವುಗಳಾಗಲಿ ಇವರ ಭಾಷೆ ಲಯಗಳಿಗಿಲ್ಲ. ಘೋಷದ ಲಯದಲ್ಲಿ ತುಂಬಿ ನಿಲ್ಲುವ ಇವರ ಮಾತಿನ ಧಾಟಿ ಧ್ಯಾನಸ್ಥ ಸ್ಥಿತಿಯೊಂದನ್ನು ಸೃಷ್ಟಿಸುತ್ತದೆ—ಇತ್ಯಾದಿ.

ಎರವಲು ತಂದ ವಿಚಾರಗಳನ್ನು ಗಂಭೀರವಾದ ವಾಕ್ಸರಣಿಯಲ್ಲಿ ಪದ್ಯಕ್ಕಿಳಿಸಿ ಬಿಡುತ್ತಿದ್ದ ನವೋದಯ ಕಾವ್ಯದ ವೈಪರೀತ್ಯಗಳಿಂದ ರೋಸಿಹೋದ ಹೊಸ ಜನಾಂಗ, ಚಿತ್ತಾಲರು ಭಾಷೆಯನ್ನು ಉಪಯೋಗಿಸುವ ಕ್ರಮವನ್ನು ಅನುಮಾನದಿಂದ ನೋಡಿದ್ದು ಆಶ್ಚರ್ಯವಲ್ಲ. ಐರನಿ, ವ್ಯಂಗ್ಯಗಳಿಲ್ಲದೆ ಆಡಿದ ಮಾತು ಪ್ರಾಮಾಣಿಕವಾಗಲಾರದು, ಭಾವಾತಿರೇಕತೆಯ ಅಪಾಯದಿಂದ ಮುಕ್ತವಾಗಲಾರದು. ನಾಟದು ಎಂಬುದೇ ನಮ್ಮೆಲ್ಲರ ಮುಖ್ಯ ನಿಲುವಾಗಿತ್ತು. ಅಲ್ಲದೆ ಗ್ರಾಂಥಿಕಭಾಷೆಯ ಶ್ರೀಮದ್ಗಾಂಭೀರ್ಯದಲ್ಲಿ ಅನ್ನಿಸದೆ ಇದ್ದುದನ್ನೂ ಹೇಳಿಬಿಡಬಹುದಲ್ಲವೆ? ಅತ್ಯಂತ ಆಳವಾದ ಭಾವನೆಗಳನ್ನು ಹೊಂದಿದ ಕಾರ್ಡೀಲಿಯಾ ಅತ್ಯಂತ ಕಡಿಮೆ ಮಾತನಾಡುವವರು. ವಾಚಾಳಿಯಾದವನ ಭಾವನೆಗಳು ಒಂದೋ ತೆಳುವಾಗಿರುತ್ತವೆ; ಇಲ್ಲವೇ ಕೃತಕವಾಗಿರುತ್ತವೆ. ಅದರಲ್ಲೂ ಓದುಗರ ಕಡೆ ಮುಖಮಾಡಿ ನಿಂತು ಗಂಭೀರವಾಗಿ ಮಾತಾಡುವವನನ್ನು ಕಂಡೊಡನೆ ನಮಗೆಲ್ಲರಿಗೂ ಅನುಮಾನ.

ಕಾವ್ಯದಲ್ಲಿರುವ ಭಾವನೆಗಳು ಅಥೆಂಟಿಕ್ ಆಗುವುದು ನೇರವಾಗಿ ಅವುಗಳನ್ನು ಹೇಳಿಕೊಂಡಾಗಲಲ್ಲ, ಪ್ರತೀಕಗಳ ಮುಖಾಂತರ ಅವುಗಳನ್ನು ಓದುಗನಲ್ಲಿ ಉಂಟುಮಾಡಿದಾಗ ಎಂಬ ಕಾವ್ಯಸಿದ್ಧಾಂತಕ್ಕೆ ಮೇಲಿನ ಧೋರಣೆ ದಾರಿಮಾಡಿತು. ಆದ್ದರಿಂದ ಎಲ್ಲ ವಿಧದ ರ್ಹೆಟರಿಕ್‌ಗಳನ್ನು ಸಂದೇಹದಿಂದ ನೋಡುವುದು ನಮ್ಮ ವಿಮರ್ಶೆಯ ಮುಖ್ಯ ಗುಣವಾಯಿತು. ಇವತ್ತಿಗೂ ಈ ಧೋರಣೆಯ ಹಿಂದಿರುವ ನಿಷ್ಠುರತೆ ನನಗೆ ಸರಿಯೆನಿಸು

ತ್ತದೆ; ಯಾಕೆಂದರೆ ಗೇಯತೆ ಅಥವಾ ಉದ್ವೇಗಪೂರ್ಣ ಮಾತುಗಳ ಮೂಲಕ ಭಾವಗಳನ್ನು ಪ್ರಕಟಿಸುವುದು ನಮಗೆ ಅತಿ ಸಲೀಸಾಗಿಬಿಟ್ಟಿತ್ತು.

ಆದರೆ ರ್‍ಹೆಟರಿಕ್‌ನ್ನು ಸಂಪೂರ್ಣ ಬಿಟ್ಟುಕೊಟ್ಟು ಯಾರು ಬರೆದಿದ್ದಾರೆ? ಪ್ರಾಯಶಃ ರಾಮಾನುಜನ್ ಒಬ್ಬರೇ. ಆದರೆ ಇವರ ಭಾವನೆಗಳ ವ್ಯಾಪ್ತಿ ಸಂಕುಚಿತವಾದದ್ದು. ಆದ್ದರಿಂದ ರ್‍ಹೆಟರಿಕ್‌ನ್ನೇ ಸಂದೇಹದಿಂದ ನೋಡುವುದು ತಪ್ಪು. ಬದಲಾಗಿ ಅನುಭವದ ಪ್ರಾಮಾಣಿಕತೆಗೆ ಪೂರಕವಾಗುವ ಮಾತಿನ ಆಡಂಬರವನ್ನೂ ಭಾವಗಳನ್ನೂ ಅವಶ್ಯವಿದ್ದಲ್ಲಿ ನೇರವಾಗಿಯೇ ತೀವ್ರವಾಗಿ ಅಭಿವ್ಯಕ್ತಿಸುವ ಭಾಷೆಯನ್ನೂ ವಿಂಗಡಿಸಿ ನೋಡುವುದು ಅಗತ್ಯ. ಯಾಕೆಂದರೆ ವಾಚಾಳಿಯ ಭಾವಾತಿರೇಕತೆ ಹೇಗೆ ಒಂದು ಮೋಸವೋ, ಹಾಗೆಯೇ ನಿಜವಾದ ತೀವ್ರಭಾವನೆಗಳಿಗೆ ಮನಸ್ಸನ್ನು ಒಡ್ಡಿಕೊಳ್ಳಲಾರದ ಸಂಕೋಚವೂ ಕಾವ್ಯವನ್ನು ದುರ್ಬಲಗೊಳಿಸಿಬಿಡಬಹುದು. ನಾವು ಎಚ್ಚರ ವಹಿಸದಿದ್ದಲ್ಲಿ, ನವ್ಯ ಕಾವ್ಯಪಂಥ ಕ್ರಮೇಣವಾಗಿ ಸಂಚಾರೀಭಾವಗಳನ್ನು ಮಾತ್ರ ಪ್ರಕಟಿಸುವ ನಯ ನಾಜೂಕಿನ ಭಾಷೆಗೋ ಅಥವಾ ಸಾರ್ವತ್ರಿಕ ಮೂಲಭೂತ ಭಾವನೆಗಳೆಂದರೆ ಸಂಕೋಚ ಪಡುವ ಅಲ್ಪದೃಷ್ಟಿಗೋ ಎಡೆಮಾಡಿಕೊಡಬಹುದು. ಈ ದೃಷ್ಟಿಯಿಂದ ನೋಡಿದಾಗ, ಮುಕ್ತಸಂವೇದನೆಯ ಚಿತ್ತಾಲರ ಕಾವ್ಯ ಸಂಕೋಚದಿಂದ ಮುರುಟಿಕೊಂಡಿರುವ ನವ್ಯ ಕಾವ್ಯಕ್ಕೆ ಒಂದು ಅವಶ್ಯ ಚಿಕಿತ್ಸೆಯಾಗಬಹುದು ಎನ್ನಿಸುತ್ತದೆ.

ಮತ್ತೊಮ್ಮೆ 'ದುಃಖಗೀತೆ' ಓದುತ್ತಿದ್ದಂತೆ ಮೇಲಿನ ಮಾತುಗಳನ್ನು ಬರೆಯಬೇಕೆನ್ನಿಸಿತು. ನನ್ನವು ಆತ್ಮವಿಮರ್ಶೆಯಿಂದ ಉತ್ಪನ್ನವಾದ ಮಾತುಗಳು ಎನ್ನುವುದು ಓದುಗರಿಗೆ ಸ್ಪಷ್ಟವಾಗಿರಬಹುದು. 'ದುಃಖಗೀತೆ' ಸಂಪೂರ್ಣ ಯಶಸ್ವಿಯಾಗಿದೆ ಎಂದು ನನಗಾಗಲೂ ಅನ್ನಿಸುವುದಿಲ್ಲ. ಆದರೆ ಅಡಿಗರನ್ನು ಬಿಟ್ಟರೆ ಈ ಕಾಲದ ಕವಿಗಳಲ್ಲಿ ಬೇರೆ ಯಾರಿಗೆ ದುಃಖಗೀತೆಯಲ್ಲಿಯಂತೆ ತೀವ್ರವಾದ ಭಾವನೆಗಳ ಆಘಾತಕ್ಕೆ ತಮ್ಮನ್ನು ಒಡ್ಡಿಕೊಂಡು ಬರೆಯುವ ಧೈರ್ಯವಿದೆ ಎನ್ನಿಸುತ್ತದೆ. ಚಿತ್ತಾಲರ ಭಾಷೆ ಗ್ರಾಂಥಿಕವಾದದ್ದು ಎಂಬುದಷ್ಟನ್ನು ಮಾತ್ರ ನಾನು ಹಿಂದೆ ಕಂಡಿದ್ದೆ; ಆದರೆ ಈಗ ಅಷ್ಟೊಂದು ಗ್ರಾಂಥಿಕವಾದ ಭಾಷೆಯನ್ನು ಸಹ ಅತ್ಯಂತ ವೈಯಕ್ತಿಕವಾದ ಜರೂರಿನಲ್ಲಿ—ಭಾವವೈವಿಧ್ಯಕ್ಕೆ ಅವಶ್ಯವಾದ ಲಯದ ವೈವಿಧ್ಯದಲ್ಲಿ—ಚಿತ್ತಾಲರು ಉಪಯೋಗಿಸಿಕೊಳ್ಳುವ ಕ್ರಮ ಅದ್ಭುತವೆನಿಸುತ್ತದೆ :

"ಆಹಾ ದಾರಿಯ ನಡೆದೆ ಭರವಸೆಯನೇ ನಂಬಿ
ಜಗಕೆ ಜಗ ನಕ್ಕರೂ ಭರವಸೆಯನೇ ನಂಬಿ
ಬಂಧು ಹಿಯಾಳಿಸಿದ, ಬಳಗ ಕಡೆಗಣಿಸಿದರೂ
ಭರವಸೆಯನೇ ನಂಬಿ

ಮೊಣಕಾಲವರೆಗು ಸುಕು, ಬಾಯಿಗು ಉಸುಕು, ಕಣ್ಣಿಗು
ಉಸುಕು—ಆದರೂ ಭರವಸೆಯನೇ ನಂಬಿ
ಜೀರ್ಣವಾದರೂ ದೇಹ, ಶೀರ್ಣವಾದರೂ ಮನಸು
ಭರವಸೆಯನೇ ನಂಬಿ"

(ದುಃಖಗೀತೆ)

ನವ್ಯಕಾವ್ಯದಲ್ಲಿ ಎಷ್ಟೆಷ್ಟೊ ಕುತೂಹಲಕಾರಿಯಾದ ಪ್ರಯೋಗಗಳನ್ನು ಮಾಡಿದವರು ಯಥೇಷ್ಟ ಸಿಗುತ್ತಾರೆ; ಹಿಂದಿನ ಕವಿಗಳು ತಮ್ಮ ಮಾತಿನ ಗಾಂಭೀರ್ಯಕ್ಕೆ ತಾವೇ ತಲೆದೂಗುತ್ತಿದ್ದವರಾದರೆ, ಈಗಿನವರು ತಮ್ಮ ಜಾಣತನಕ್ಕೆ ತಾವೇ ಮನಸೋತವರು; ಅನುಭವದ ಸೆರಗಿನಲ್ಲೇ ನಾಜೂಕಾಗಿ ಸುಳಿದಾಡುವವರೇ ಹೊರತು ಚಿತ್ತಾಲರಂತೆ ರಿಸ್ಕ್ ತೆಗೆದುಕೊಂಡು ಬರೆಯುವವರಲ್ಲ.

ಪ್ರಾಯಶಃ 'ಕಣ್ಣು' ಕವನ ಇಷ್ಟು ಬೆಳೆದಿರುವುದಕ್ಕೆ, 'ದುಃಖಗೀತೆ'ಯಂತಹ ಮಹತ್ವಪೂರ್ಣ ಕವನದ ಒಳಗೂ ನಮ್ಮ ಗಮನ ಕೆಲವೆಡೆಗಳಲ್ಲಿ ಕುಗ್ಗುರುವುದಕ್ಕೆ ಚಿತ್ತಾಲರ ವಾಚಾಳಿತನ ಕಾರಣವೆಂದು ಈಗಲೂ ನನಗನ್ನಿಸುತ್ತದೆ. ಆದರೆ ಈ ದೋಷವಿದ್ದೂ ಅವರ ಸಾಧನೆ ಅಪೂರ್ವವಾದುದೆಂದು ನಾನು ತಿಳಿದಿದ್ದೇನೆ. 'ದುಃಖಗೀತೆ' ಯಲ್ಲಿ ಮಾತಿನ ಸುರಿಮಳೆ ಕರೆದು ನೋವನ್ನು ಮರೆಯಲು ಚಿತ್ತಾಲರು ಯತ್ನಿಸುತ್ತಾರೆ. ವಾಚ್ಯಾತೀತವಾದ, ಅಗನ್ಯವಾದ, ಅಚಿಂತ್ಯವಾದ ನೋವನ್ನು ಮಾತುಗಳ ಮೂಲಕ, ತತ್ವಗಳ ಮೂಲಕ ಗೆಲ್ಲಲು ಹೋಗಿ ವಿಫಲವಾಗುವುದೇ 'ದುಃಖಗೀತೆ' ಕವನದ ವಸ್ತು. ಹೀಗೆ ನೋಡಿದರೆ ಕವನದಲ್ಲಿರುವ ಮಾತುಗಾರಿಕೆಯೂ ಕವನದ ಒಟ್ಟು ದುರಂತ ವಿಫಲತೆಯ ಸೃಷ್ಟಿಗೆ ಅವಶ್ಯ ಸಾಧನವಾಗುತ್ತದೆ.

ಮಾತು ಒಲಿಯುವುದು, ಒಲಿದು ಮಂತ್ರಶಕ್ತಿ ಪಡೆಯುವುದು ಮಾತಿನ ಲೋಕವನ್ನು ನಂಬದ ಕವಿಗಳಿಗೆ ಮಾತ್ರ. ಇದೊಂದು ವಿಪರ್ಯಾಸ: ಚಿತ್ತಾಲರಂತಹ ಮಾತಿನ ಲೋಕವನ್ನು ನೆಚ್ಚುವ ಮಾನವತಾವಾದಿಗಳು ಮಾತನ್ನು ಹುಡುಕಿಕೊಂಡು ಹೋಗುತ್ತಾರೆ; ಮಾತು ಇವರನ್ನು ಹುಡುಕಾಡುತ್ತದೆ ಎಂದು ನಮಗನ್ನಿಸುವುದಿಲ್ಲ. ಯಾಕೆಂದರೆ ಇವರು ಸುಲಭವಾಗಿ ತಮ್ಮ ಸಂಕಲ್ಪ ಶಕ್ತಿಯನ್ನು ಸಡಿಲಿಸುವವರಲ್ಲ; ಸ್ಥಿತಿಯಲ್ಲಿ ಕಂಡುದಷ್ಟೆ ಪಡೆದುದಷ್ಟೆ ಇವರ ಪಾಲಿನ ನಿಜ. ಆದರೆ ಇಂತಹ ಮಾನವತಾವಾದಿಯೊಬ್ಬ ವಿಧಿಯನ್ನು ಎದುರಿಸಿ ನಿಂತಾಗ, ತನ್ನ ವಿಚಾರನಿಷ್ಠ ಮಾನವೀಯ ಪ್ರಜ್ಞೆಯ ಮಿತಿಯಲ್ಲೆ ಸೃಷ್ಟಿಯ ರಹಸ್ಯವನ್ನು ತಿಳಿಯುತ್ತೇನೆಂದು ಹೊರಟಾಗ, ಇಂತಹ ತಿಳುವಳಿಕೆಯನ್ನು ಮಾತಿನಲ್ಲಿ ಮೂಡಿಸಲು ಪ್ರಯತ್ನಿಸಿದಾಗ ವಿಚಿತ್ರವಾದ ಒಂದು ರೀತಿಯ ತರ್ತನ್ನು, ಕಾವನ್ನು ನಾವು ಅನುಭವಿಸುತ್ತೇವೆ. ಮಾತಿನಿಂದ ಸಮಾಧಾನ ಪಡೆಯಲು ಚಿತ್ತಾಲರು ಹೆಣಗುತ್ತಾರೆ. ಆದರೆ ಅದು ಅವರಿಗೆ ಸಿಗುವುದಿಲ್ಲ. ಅಂದ ಮಾತ್ರಕ್ಕೆ ಅವರು ಎದೆಗುಂದುವುದೂ ಇಲ್ಲ. ಸಭ್ಯ ಉದಾತ್ತ, ಧೀರ ವ್ಯಕ್ತಿತ್ವವೊಂದು ತನ್ನ ಸ್ವಭಾವಕ್ಕೆ ಅನ್ಯವಾದ, ಮಾನವೀಯ ಮೌಲ್ಯಗಳಿಗೂ ಅನ್ಯವಾದ, ಸೃಷ್ಟಿಯ ಜೊತೆ ಸಿನಿಕತನವಿಲ್ಲದೆ, ಮೋಹವಶವಾಗದೆ ಮುಖಾಮುಖಿಯಾಗುವುದೇ ಚಿತ್ತಾಲರ ಕಾವ್ಯದ ಮುಖ್ಯ ಗುಣ.

೨

ಚಿತ್ತಾಲರ ಅತ್ಯಂತ ಗಂಭೀರವಾದ ಪದ್ಯಗಳಲ್ಲಿ (ಉದಾಹರಣೆ: ದುಃಖಗೀತೆ) ಭಾಷೆ, ಧಾಟಿ, ಮತ್ತು ಲಯಗಳ ನೆಳಲು, ಬೆಳಕಿನಾಟ ಕಡಿಮೆಯೆಂದು ನಮಗನ್ನಿಸಬಹುದಾದರೂ ಅವರ ಕಿರುಗವನಗಳು ಮಾತ್ರ ತುಂಬಿಕೊಂಡ ಜೀವದ ಎಲ್ಲಾ

ಸೊಗಸುಗಳನ್ನು ಪಡೆದಿರುತ್ತವೆ. ಈ ದೃಷ್ಟಿಯಿಂದ ಚಿತ್ತಾಲರ ಕಾವ್ಯಭಾಷೆ ಗ್ರಾಂಥಿಕ ವಾದುದು ಎಂದು ನಾನು ಮೊದಲು ಹೇಳಿದ್ದು ಪರೀಕ್ಷೆಗೆ ಒಳಪಡಬೇಕು. ಮನುಕುಲದ ಹಾಡು ಸಂಕಲನಕ್ಕಿಂತ ಹೆಚ್ಚಾಗಿ ಈ ಸಂಕಲನದಲ್ಲಿ ಚಿತ್ತಾಲರು ಗ್ರಾಂಥಿಕ ಭಾಷೆಯನ್ನೂ ಸಹ ಒಂದು ಉದ್ದೇಶ ಪೂರ್ವಕವಾದ ಸಾಧನವಾಗಿ, ಯಶಸ್ವಿಯಾಗಿ ಬಳಸಿಕೊಳ್ಳಲು ಕಲಿತ್ತಿದ್ದಾರೆಂಬುದನ್ನು ಗಮನಿಸಬೇಕು. ಅಷ್ಟೇ ಅಲ್ಲ; ಪದ್ಯದಿಂದ ಪದ್ಯಕ್ಕೆ ಅರ್ಥಕ್ಕೆ ತಕ್ಕ ಹಾಗೆ ಇವರ ಭಾಷೆ ಬದಲಾಗುವುದನ್ನೂ ನಾವು ಇಲ್ಲಿ ನೋಡಬಹುದು. ಉದಾಹರಣೆಗೆ ಮಣ್ಣನ್ನು ಸಂಕೇತಿಸುವ 'ತಾಯಿ' ಕವನದ ಭಾಷೆ ಆಡುಮಾತಿನ ಅಚ್ಚ ಕನ್ನಡ ಶಬ್ದಗಳಿಂದ ತುಂಬಿದೆ;

"ಕೆಸರ ಕಸುವಿಗೆ ಹಿಗ್ಗಿ ಗೊನೆ ಹಿಡಿದ ಹೊಂಬಾಳೆ
ಬಚ್ಚಲ ರೊಚ್ಚಿಯಲ್ಲಿ ಕರ್ರಗೆ ಸೊಕ್ಕಿ ಹಬ್ಬಿದ ಬಸಲೆ
ಗರಿಚವರ ಬೀಸಿ, ಹಿಂದಿಗೆ ಜೋತು, ಎತ್ತರಕೆ
ತೂಗಿ ತೊನೆಯುವ ತೆಂಗು
ಸುತ್ತಲೂ
ಬೆಳೆವ ಗಿಡಬಳ್ಳಿಗಳ ವೈರಸದ ಸರಭರ
ಸದ್ದು ಸೊಗಸು
ಮಧ್ಯದಲ್ಲೇ ತಾಯಿ!"

"ಮಧ್ಯದಲ್ಲೇ ತಾಯಿ." ಎಷ್ಟು ಸೊಗಸಾದ ಚಿತ್ರ! ಆಡುಮಾತಿನ ಸರಣಿಯಲ್ಲೇ ಕವನ ನಡೆಯುತ್ತಿರುವಾಗ ಇದ್ದಕ್ಕಿದ್ದಂತೆಯೇ ಚಿತ್ತಾಲರು ಸಂಸ್ಕೃತವನ್ನು ಉಪಯೋಗಿಸಿ ಭಾವನೆಯ ಸ್ತರ ಏರುವಂತೆ ಮಾಡಬಲ್ಲರು. ಉದಾಹರಣೆಗೆ 'ಕವನ' ಪದ್ಯದಲ್ಲಿ ಮೊದಲ ಮೂರು ಭಾಗಗಳಲ್ಲಿ ಆಡುಮಾತಿನ ಎಲ್ಲ ಸೊಗಸುಗಳನ್ನೂ ಉಪಯೋಗಿಸಿದ ನಂತರ ಥಟ್ಟನೆ ಬರುವ ಈ ಸಂಸ್ಕೃತ ಶಬ್ದಗಳು ಅತ್ಯಂತ ಪರಿಣಾಮಕಾರಿಯಾಗಿವೆ:

"ಈ ಮುಖೋದ್ಗತ ನಿನ್ನ ಹೃದ್ಗತವೆ ಆದ ದಿನ
ಸುದಿನ
ಆ ವರೆಗು ಇದು
ತಕ್ಕಮಣ್ಣಿನ ತೇವಕಾಗಿ ಕಾದೇ ಇರುವ
ಬೀಜ"

ತಮ್ಮ ಉದ್ದೇಶಸಾಧನೆಗೆ ಆವಶ್ಯವಾದ ಹಿಡಿತವನ್ನು ಭಾಷೆಯ ಮೇಲೆ ಚಿತ್ತಾಲರು ಪಡೆದಿದ್ದಾರೆ. ಎಂಬುದನ್ನು ಈ ಸಂಗ್ರಹದುದ್ದಕ್ಕೂ ಕಾಣಬಹುದು. 'ಹರಿವ ನೀರಿದು' ಕವನದ ಮೂರನೆಯ ಭಾಗದಲ್ಲಿ ಮಗು ಬೆಳೆಯುವ ಕ್ರಿಯೆಯನ್ನು ಇವರು ವರ್ಣಿಸುವುದನ್ನು ನೋಡಬೇಕು. 'ಕವನ' ಪದ್ಯದಲ್ಲಿ ಪದ್ಯ ಹುಟ್ಟುವ ಕ್ರಿಯೆಯನ್ನು ಹೇಗೆ ಪದ್ಯದ ಲಯದಲ್ಲೇ ನಾಟಕೀಯವಾಗಿ ಮೂಡಿಸಿದ್ದಾರೋ

ಹಾಗೆಯೇ ಇಲ್ಲಿ ಕೂಡ ಮಾತುಗಳು ಚಿತ್ತಾಲರ ಮನಸ್ಸಿನಲ್ಲಿರುವುದನ್ನು ಯಥಾರ್ಥವಾಗಿ ಸೃಷ್ಟಿಸುತ್ತವೆ:

"ಮುಸುಗಿ ಮುಗ್ಗುಲು ತಿರುವಿ ಕಮ್ರುಚಿ ಉಬ್ಬಸಬಟ್ಟು ಹೊಸೆದು
ರಟ್ಟೆಯನ್ನೂರಿ ಅಂಗಾಲೊತ್ತಿ ಮೈಭಾರವನ್ನೆತ್ತಿ
ಹಿಡಿದು ತೂಗಿಸಿ ಒಂದಪೂರ್ವ ಸಾಹಸದಿ ಅಂಗಾತ ತಬ್ಬಲಿತನವ-
ನೆಸೆದು, ನಿಲ್ಲಲುಬೇಕು
ಸಮ್ಮುಖಿಸಿ ಸುಖಿಸಿ
ಹವಣಿಸುತ ಅನುಸಂಧಾನ"

ಇವರ ಲಯ ಮತ್ತು ಮಾತುಗಳ ವೈವಿಧ್ಯಗಳಿಗೆ, ತಾಂತ್ರಿಕ ಪರಿಣತೆಗೆ, ಹೀಗೆ ಎಷ್ಟೋ ಉದಾಹರಣೆಗಳನ್ನು ಕೊಡುತ್ತ ಹೋಗಬಹುದು. ಗ್ರಂಥಸ್ಥ ಭಾಷೆಯ ಗಾಂಭೀರ್ಯ ಬೆಚ್ಚಿಸಿಬಿಡುವ ಕ್ರಮವನ್ನು 'ಹರಿವ ನೀರಿದು' ಪದ್ಯದ ನಾಲ್ಕನೆಯ ಭಾಗದಲ್ಲಿ ಕಾಣಬಹುದು. ಪ್ರಾರಂಭದಲ್ಲಿ, ಹೇಳುತ್ತಿರುವ ವಿಷಯ ಕಟುಸತ್ಯವಾದರೂ ಹೇಳುವ ಕ್ರಮದಲ್ಲಿರುವ ಉತ್ಕರ್ಷ, ಛಂದಸ್ಸಿನ ಸಂಗೀತ ಈ ಕಹಿಯನ್ನೂ ನಮಗೆ ಸಹನೀಯವಾಗಿ ಮಾಡುತ್ತದೆ!

"ತಡೆಯುದೋ ಋತುಮಾನ
ತಡೆಯುದೋ ಪ್ರಾಣಗತಿ
ತಡೆಯದವ್ಯಾಹತವು ಸರಿವ ಕಾಲ
ಏರಿ ತೀರಿದ ಮೇಲೆ ಬಹುದು ಬರಿ ಇಳಿಜಾರೆ
ಕವಿದು ಬಹ ನೆರಳುಗಳೆ ಸುತ್ತಲೆಲ್ಲ"

ಹೀಗೆ ಲಯದ ಗೇಯಕ ಶಕ್ತಿಯಲ್ಲಿ ಸಹ್ಯವಾಗುವ ದುರಂತ ಅನುಭವ, ಈ ಭಾಗದ ಕೊನೆಯ ಮಾತುಗಳಲ್ಲಿ ಹೇಗೆ ವ್ಯಕ್ತವಾಗಿದೆ ನೋಡಿ. ಮಾತಿನ ಮೂಲಕ ಸಮಾಧಾನ ಪಡುವ ಪ್ರಯತ್ನ ಮತ್ತು ಅದರ ವಿಫಲತೆ, ಎರಡೂ ಒಟ್ಟಾಗಿ ನಮಗೆ ಅನುಭವವಾಗುತ್ತದೆ:

"ಜೀವದೊಡಲಲ್ಲೆ ನಿರ್ಜೀವಗೊಳಿಸುವ ಬಿರುಕು
ಸೋರುವುದು ನೆರೆಗೆಂಪು ಬಿಳಿಚಿ ಗಲ್ಲ.
ಕೊನೆಗುಳಿವುದೊಂದೆ ಬೆಕ್ಕಸಗೊಂಡ ತಲೆಬುರುಡೆ
ಎದೆಯು ಝುಲ್ಲೆನ್ನುವಂತೆ
ಕಿರಿದು ಹಲ್ಲ"

ಹೀಗೆ ಮನಸ್ಸಿನಲ್ಲಿ ಹಿತವಾದ ಗುಂಗನ್ನುಂಟುಮಾಡುವ ಘೋಷದ ಲಯದಿಂದ ಪ್ರಾರಂಭವಾದದ್ದು, ಆ ಗುಂಗಿನಿಂದ ಹರಿದುಕೊಂಡು, ಕೊನೆಯಲ್ಲಿ ಕರ್ಕಶವಾದ ಶಬ್ದಗಳಾಗಿ ಬೆಚ್ಚಿಸಿಬಿಡುವ ಈ ಭಾಗದ ರಚನಾತಂತ್ರ ಚಿತ್ತಾಲರ ಕಾವ್ಯಕೌಶಲ

ಅದ್ಭುತವಾದುದು ಎಂಬುದಕ್ಕೆ ನಿದರ್ಶನ. ಇವರ ಭಾಷೆಗೆ ಮಾಯಕಶಕ್ತಿ ಇಲ್ಲವೆಂದ ನಾನು ಮೊದಲು ಹೇಳಿದೆ. ಆದರೆ ತನ್ನ ಮನಸ್ಸಿನಲ್ಲಿರುವುದನ್ನು ಯಥಾರ್ಥವಾ ಹೊರಪಡಿಸುವ ಕೌಶಲ್ಯ ಇವರಿಗೆ ಸಂಪೂರ್ಣವಾಗಿ ಸಾಧಿಸಿದೆ. ಹೀಗೆಯೆ ಚಿತ್ತಾಲರಿ ಸಾಧಿಸಿದ ವಾಗರ್ಥ ಪ್ರತಿಪತ್ತಿಗೆ ಅನೇಕ ಉದಾಹರಣೆಗಳನ್ನು ಕೊಡುತ್ತ ಹೋ ಬಹುದು. 'ನ್ಯೂಯಾರ್ಕ್' ಪದ್ಯದಲ್ಲಿ ಬರುವ ಈ ಸಾಲುಗಳನ್ನು ನೋಡಿ:

"ಹುಟ್ಟು ಕೊಟ್ಟವನನ್ನೆ ಎದೆಮೆಟ್ಟುತ್ತಿದೆ ಇಂದು
ಈ ಬೃಹದ್ಭೂಭಾರ: ಅಡಿಗಲೆವ ಲಘು ನಾನು"

"ಅಡಿಗಲೆವ ಲಘು ನಾನು"—ಈ ಮಾತುಗಳು ಉಳಿದ ಮಾತುಗಳಿಗಿಂ ನಾದದಲ್ಲಿ ಬೇರೆಯಾಗಿರುವುದರಿಂದ, ಮನುಷ್ಯನ ಲಘುತ್ವದ ಕಲ್ಪನೆ ಮಾತಿನಲ್ಲೆ ಮೂ ಬಿಡುತ್ತದೆ. ಮುಖ್ಯವಾಗಿ ಹೇಳಬೇಕಾದ ಮಾತೆಂದರೆ, ಚಿತ್ತಾಲರ ಕಾವ್ಯತಂತ್ರ ಮೇಲ್ನೋಟಕ್ಕೆ ಎದ್ದು ಕಾಣುವಂಥದಲ್ಲವಾದರೂ, ನಾವಿನ್ಯತೆಯು ಆಕರ್ಷಣೆ ಮುಗಿ ಮೇಲೆ ಹಳಸಿಬಿಡುವಂಥದೂ ಅಲ್ಲ. ಮನಸ್ಸಿನಲ್ಲಿರುವಷ್ಟನ್ನೂ ಪದ್ಯದಲ್ಲಿ ಮೂಡಿಸಲ ಅವಶ್ಯವಾದಷ್ಟು ತಾಂತ್ರಿಕ ಕೌಶಲ ಚಿತ್ತಾಲರಿಗೆ ಹೇರಳವಾಗಿ ಇದೆ.

ಮಾಯಕಶಕ್ತಿ ಪಡೆದ ಭಾಷೆ ಚಿತ್ತಾಲರಿಗೆ ಒಲಿದಿದ್ದರೆ ಇವರ ದೃಷ್ಟಿ, ನಿಲುವ ಧಾಟಿ ಎಲ್ಲವೂ ಬದಲಾಗಿಬಿಡುತ್ತಿತ್ತೇನೋ: ಸುಖ–ದುಃಖದ ಜೀವನಸಂದರ್ಭದ ಹೇಗೋ, ಹಾಗೆಯೇ ಭಾಷೆಯನ್ನು ಕಾವ್ಯಕ್ಕೆ ಬಳಸುವ ಸನ್ನಿವೇಶದಲ್ಲೂ ಇವರು ತ ನೈತಿಕ ಜವಾಬ್ದಾರಿಯನ್ನು ಮರೆಯದ ಮಾನವತಾವಾದಿಗಳಾದ್ದರಿಂದ; ಯಾವತ್ತೂ ಅರ್ಥಪೂರ್ಣತೆಗಾಗಿ, ತಿಳಿಯಾದ ದೃಷ್ಟಿಗಾಗಿ ಪ್ರಯತ್ನಿಸುವವರಾದ್ದರಿಂದ; ಉಳಿದವ ಜೊತೆ ಸಂವಾದ ಬಯಸಿ ಕವನ ಬರೆಯುವವರಾದ್ದರಿಂದ ಚಿತ್ತಾಲರು ನಮ್ಮ ಕವಿಗ ನಡುವೆ ಅನನ್ಯ ವ್ಯಕ್ತಿತ್ವವಾಗಿ ನಿಲ್ಲುತ್ತಾರೆ. ಮನುಷ್ಯ ಸಂಕಲ್ಪದಲ್ಲಿ ಊರಿ, ಬೆಳೆದು ಫಲ ಬಿಡುವ ಕಾವ್ಯ ಚಿತ್ತಾಲರದು. ಆಧ್ಯಾತ್ಮವಾದ ದ್ರಷ್ಟಾರರಂತೆ ಮನುಷ್ಯ ಸಂಕಲ್ಪ ದಾಚೆ ಇವರು ಕೈಯೊಡ್ಡುವುದಿಲ್ಲ: ಮಾಯಕಶಕ್ತಿ ಪಡೆದ ಮಾತುಗಳಲ್ಲಿ ಸಿಕ್ಕುಬಿದ್ದು ಮಂತ್ರಮುಗ್ಧರಾಗಿ ನಿಲ್ಲುವುದಿಲ್ಲ. ಈ ಧೈರ್ಯ ದೊಡ್ಡದು.

೩

ಈ ಸಂಕಲನದ ಮೊದಲನೆಯ ಮತ್ತು ಕೊನೆಯ ಪದ್ಯಗಳು ಚಿತ್ತಾಲ ಕಾವ್ಯೋದ್ಯೋಗ ಯಾವ ಬಗೆಯದೆಂಬುದನ್ನು ಹೇಳುತ್ತವೆ. 'ಕವನ' ಪದ್ಯದ ಚಿತ್ತಾಲರು ಬಳಸುವ ಶಾರೀರಿಕ, ನೈಸರ್ಗಿಕ ಪ್ರತೀಕಗಳು ಅವರ ಕವನಕ್ಕೊಂದ ಜರೂರನ್ನು ತರುವುದಲ್ಲದೆ ಕಾವ್ಯಕ್ಕೂ ಜೀವನಕ್ಕೂ ನಡುವೆ ಯಾವ ಅಗತ್ಯವಾ ಸಂಬಂಧವನ್ನು ಇವರು ಬಯಸುತ್ತಾರೆಂಬುದನ್ನು ಸೂಚಿಸುತ್ತದೆ. "ಕಂಡದ್ದು ಉಂಡವ ಅನಿಸಿದ್ದು ಕನಸಿದ್ದು ಮೂಡಿ ಮೈಗೂಡಿದ್ದು" ಎಲ್ಲವೂ ಕೂಡಿ ಕವನವಾಗುತ್ತ ಎನ್ನುವಾಗ ಚಿತ್ತಾಲರ ಸೃಷ್ಟಿಕ್ರಿಯೆ ಯಾವ ಬಗೆಯದೆಂಬುದರ ಮೇಲೆ ಪ್ರತಿ ಮಾತ

ಬೆಳಕು ಚೆಲ್ಲುತ್ತದೆ. ಚಿತ್ತಾಲರಿಗೆ ಕಾವ್ಯ ಕವಿಯ ಅಭಿವ್ಯಕ್ತಿ ಮಾತ್ರವಲ್ಲ; ಅದು ಸಹೃದಯದಲ್ಲಿ ಪುನಃ ಸೃಷ್ಟಿತವಾಗಬೇಕಾದ್ದು ಎಂದು ಈ ಪದ್ಯದ ಕೊನೆಯ ಭಾಗ ಹೇಳುತ್ತದೆ. ಚಿತ್ತಾಲರ ಈ ಧೋರಣೆ ಅವರ ಕಾವ್ಯದ ಒಟ್ಟು ಧಾಟಿಯನ್ನು ಉಳಿದವರ ನವ್ಯಕಾವ್ಯಕ್ಕಿಂತ ಅರ್ಥಪೂರ್ಣವಾಗಿ ಬೇರೆಯಾಗಿಸುತ್ತದೆಂದು ನನಗನ್ನಿಸುತ್ತದೆ. ಎಷ್ಟೋ ನವ್ಯಕವನಗಳಲ್ಲಿ ಸ್ವತಃ ಕೃತಿಕಾರನಿಗೇ ವಿವರಿಸಲು ತಿಳಿಯದ ಪ್ರತೀಕಗಳು, ಮಾತುಗಳು ನುಸುಳಿಕೊಂಡುಬಿಡುವ ಬೇಜವಾಬ್ದಾರಿತನ ಬೆಳೆಯುತ್ತಿರುವ ಸಂದರ್ಭ ದಲ್ಲಿ ಚಿತ್ತಾಲರ ಈ ಧೋರಣೆ ಆರೋಗ್ಯಕರವಾದುದು. ಯಾಕೆಂದರೆ ನವ್ಯಕವಿಗಳಲ್ಲಿ ಗುಪ್ತವಾಗಿ ಮಾತಾಡುವ ರೀತಿ ಅನಾವಶ್ಯಕವಾದ ಅಸ್ಪಷ್ಟತೆಗೆ, ಜಿಗುಟುತನಕ್ಕೆ, ಸ್ವಂತದ ಅನುಭವವನ್ನು ಮುಖಾಮುಖಿ ನೋಡಲಾರದ ಸಂಕೋಚಕ್ಕೆ ಎಡೆಮಾಡಿ ಕೊಟ್ಟಿದೆ. ಇಂಥವರ ಬಗ್ಗೆ ಚಿತ್ತಾಲರು ತಮ್ಮ ಕೊನೆಯ ಪದ್ಯದಲ್ಲಿ ಬಲು ಸೊಗಸಾಗಿ ಬರೆದಿದ್ದಾರೆ;

> "ತಿರುಳೆ ಇಲ್ಲದ್ದ ಹುರುಳಾಗಿ ಹೇಳಲು ಕಲಿತು
> ಮಾತಿನ ಚಮತ್ಕೃತಿಗೆ ಮಾರುಹೋದವನೊಬ್ಬ
> ಇನ್ನೊಬ್ಬಗೋ ನೇರವಾದ ಮಾತೇ ವರ್ಜ್ಯ
> ಏನು ಹೇಳಲೂಬೇಕು ಬಳಸು ಸುತ್ತು
> ....
> ಇನ್ನೋರ್ವ ಸರ್ವರಲು ನಿಪುಣ, ಅವಗೆಲ್ಲವನು
> ಅಪೂರ್ವವಾಗಿಯೇ ಹೇಳಬೇಕೆಂಬ ಪಣ
> ಹಟದಟ್ಟಹಾಸವಲ್ಲಿ ಪೂರ್ವಾಪರವನಳಿಸಿ
> ತನ್ನೊಡನೆಯೇ ಕೊನೆಗೆ ಮಾತು ಬೆಳೆಸುವ ಜಾಣ"
>
> (ಇಂಥ ಹಾಡು)

ಚಿತ್ತಾಲರ ಪ್ರತಿಭೆ ಜೀವನದ ವಿವಿಧ ಮುಖಗಳನ್ನು ನಿರ್ಲಿಪ್ತವಾಗಿ ನೋಡಬಲ್ಲ ಹದವನ್ನು ಪಡೆದದ್ದು, ಪ್ರಾಯಶಃ ಇವರಿಗಲ್ಲದೆ ಕನ್ನಡದ ಇನ್ನು ಯಾವ ಕವಿಗೂ 'ಕಾಮಸೂತ್ರ' ದಂತಹ ಕವನವನ್ನು ಬರೆಯುವುದು ಸಾಧ್ಯವಿಲ್ಲವೆನಿಸುತ್ತದೆ. 'ಕಾಮ ಸೂತ್ರ' ಪದ್ಯದ ಮೊದಲನೆಯ ಭಾಗವಾದ 'ಕನಸು ತಲೆಯಲಿ ತುಂಬಿದಂಥ ಹುಡುಗ'ದ ಜೊತೆ ಚಂದ್ರಶೇಖರ ಕಂಬಾರರ 'ಹೋರಿ' ಕವನವನ್ನು ಹೋಲಿಸಿದರೆ ಚಿತ್ತಾಲರ ವೈಶಿಷ್ಟ್ಯವೇನೆಂಬುದು ಮನದಟ್ಟಾಗುತ್ತದೆ. ನಮ್ಮ ಈಚಿನ ಕವಿಗಳಲ್ಲಿ ಪ್ರಾಯಶಃ ಕಂಬಾರರೊಬ್ಬರೇ ಬೇಂದ್ರೆ ಮತ್ತು ಅಡಿಗರಂತೆ ಭಾಷೆಯ ಜೊತೆ ಆಟವಾಡಬಲ್ಲವರು. ಯೌವನದ ಹುಮ್ಮಸ್ಸನ್ನೆಲ್ಲಾ ಕಂಬಾರರು ತಮ್ಮ ಪದ್ಯದಲ್ಲಿ ಮೂಡಿಸಿಬಿಟ್ಟಿದ್ದಾರೆ. ಆದರೆ ಚಿತ್ತಾಲರು ಭಾಷೆಯನ್ನು ಹೀಗೆ ಭಾವಾಭಿನಯಕ್ಕಾಗಿ ಬಳಸುವವರಲ್ಲ; ಯಾಕೆಂದರೆ ಸಹಾನುಭೂತಿ ಮತ್ತು ಮೃದುಹಾಸ್ಯ ಎರಡೂ ಕೂಡಿಕೊಂಡ ಇವರ ನಿರ್ಲಿಪ್ತವಾದ ಪ್ರಬುದ್ಧ ದೃಷ್ಟಿಗೆ ಭಾವೋದ್ದೀಪಕವಾದ ನಾಟಕಶಕ್ತಿ ಪಡೆದ ಭಾಷೆಯ ಅಗತ್ಯವಿಲ್ಲ. ವೈಯಕ್ತಿಕ ತುರ್ತಿನಲ್ಲಿ ಭಾವವನ್ನು ಪ್ರಕಟಿಸುವ ಭಾಷೆಯನ್ನು ಚಿತ್ತಾಲರು

ಉಪಯೋಗಿಸದೆ ಇರುವುದರಿಂದಲೇ 'ಕಾಮಸೂತ್ರ'ದ ಹದ, ನಿಸ್ಸಂಕೋಚ ಸಾಧ್ಯವಾಯಿತೆಂಬುದನ್ನು ನಾವು ಗಮನಿಸಬೇಕು.

ಹೀಗೆ ಅಡಿಗ* ಮತ್ತು ಕಂಬಾರರಲ್ಲಿ ಕಾಣುವ ಭಾಷೆ ಲಯಗಳ ಉದ್ರಿಕ್ತ ನಾಟಕ ಚಿತ್ತಾಲರಿಗೆ ಯಾಕೆ ಬೇಕಾಗಿಲ್ಲ ಎಂಬುದನ್ನು ಗಮನಿಸಿದಾಗ, ನವ್ಯ ವಿಮರ್ಶೆ ಭಾಷೆಯ ಒಂದು ಬಗೆಯ ಉಪಯೋಗ ಮಾತ್ರ ಅತ್ಯುತ್ತಮವಾದದ್ದು ಎನ್ನುವ ನಿರ್ಧಾರಕ್ಕೆ ಬರಲಾರದು. ಚಿತ್ತಾಲರಿಗೆ ಭಾಷೆಯ ಮೇಲೆ ಮತ್ತು ತಮ್ಮ ಮಾತಿನ ಧಾಟಿಯ ಮೇಲೆ ಈ ಹತೋಟಿ ಇರುವುದರಿಂದಲೇ 'ಕಾಮಸೂತ್ರ'ದಂತಹ ಯಶಸ್ವಿ ಕವನವೊಂದನ್ನು ಬರೆಯುವುದು ಸಾಧ್ಯವಾಯಿತು. ನವ್ಯಕಾವ್ಯದಲ್ಲಿ ಎಷ್ಟೋಂದು ಕಾಮದ ಬಗ್ಗೆ ಕವನಗಳು ಬಂದಿದ್ದಾವೆ: ಆದರೆ 'ಕಾಮಸೂತ್ರ' ದಷ್ಟು ನಿಸ್ಸಂಕೋಚವಾದ, ನಿರ್ಲಿಪ್ತವಾದ, ಸುಂದರವಾದ ಕವನ ಇನ್ನೊಂದಿಲ್ಲವೆನ್ನಬಹುದು.

'ಹೆಂಡತಿಗೆ', 'ಸುಧೀರ'; 'ತಾಯಿ' ಮತ್ತು 'ಅಣ್ಣ' ಅತ್ಯಂತ ಆಪ್ತವಾದ ಪದ್ಯಗಳು: ಚಿತ್ತಾಲರ ಅಮೂರ್ತವಾದ ವಿಚಾರಗಳನ್ನೆಲ್ಲ ಅತ್ಯಂತ ಮೂರ್ತವಾಗಿ ಚಿತ್ರಿಸುವ ಕವನಗಳು. ಹೆಂಡತಿ; "ನೆಲಕೇ ಸದಾ ಅಂಗಾಲನೂರಿ ಸಂತಸಪಡುವ ಪರಿಪಾಠ"ದವಳು. ಸುಧೀರ: "ಆಕಾಶಪರವಶ ಜೀವ" ಮಣ್ಣಿನ ತಂಪನ್ನು ನೆನಪಿಗೆ ತರುವವಳು, ತಾಯಿ. ಅಣ್ಣ: ಬೆಂಕಿಯಂತೆ ಉರಿದು ನಿಂತವನು. ಮಣ್ಣು, ಬೆಂಕಿ, ಗಾಳಿ—ಹೀಗೆ ಈ ಪದ್ಯಗಳಲ್ಲಿ ಸಾಂಕೇತಿಕವಾಗಿದೆ. 'ಸುಧೀರ', 'ತಾಯಿ' ಮತ್ತು 'ಅಣ್ಣ'—ಈ ಮೂರು ಪದ್ಯಗಳ ಅಂತರಂಗದಲ್ಲೂ ಸಾವಿನ ಬಗ್ಗೆ ಚಿಂತನೆಯಿದೆ. ಸುಧೀರನ ಸಾವು, "ಈ ಆಕಾಶಪರವಶ ಜೀವ ಬಂತೆಲ್ಲಿಂದ ಹೋಯಿತೆಲ್ಲಿ" ಎಂಬ ಉದ್ಗಾರವನ್ನು ಕವಿಯಿಂದ ಹೊರಡಿಸುತ್ತದೆ. 'ತಾಯಿ' ಪದ್ಯದಲ್ಲಿ ತಾತಿ ಸತ್ತಿದ್ದರೂ ಅವರ ಸ್ಮೃತಿ ಇನ್ನೂ ಉಳಿದಿರುವುದರಿಂದ, "ಹೇಗೆ ಒಪ್ಪಲಿ ಈ ಏನೂ ಉಳಿದಿಲ್ಲವೆಂಬ ದೂರು?" ಎನ್ನುವ ಸಾಲಿನಿಂದ ಕವನ ಕೊನೆಯಾಗುತ್ತದೆ. 'ಅಣ್ಣ' ಪದ್ಯದ ಕೊನೆಯಲ್ಲಿ

"ನೆರಳೆದ್ದು ಬರುವುದನು ಕಂಡಿದ್ದನೇ?
ಹೊರಡಬೇಕಾದವನು ಒಬ್ಬಂಟಿ ಎನಿಸಿ ಎದೆಗುಂದಿದ್ದನೇ?"

ಎಂಬ ಪ್ರಶ್ನೆಯನ್ನು ಕವಿ ಹಾಕುತ್ತಾರೆ. ಮನಸ್ಸನ್ನು ಆಳವಾಗಿ ಕಲಕುವ ಈ ಮೂರು ಪದ್ಯಗಳಲ್ಲೂ ಮೃತ್ಯುವಿನ ರಹಸ್ಯ ಗೂಢವಾಗಿಯೇ ಉಳಿಯುತ್ತದೆ. ಆದರೆ ಕವಿ ಈ ಮೂವರನ್ನೂ ತನ್ನ ಮಾನವೀಯ ಸ್ಮೃತಿಯಲ್ಲಿ ಮತ್ತೆ ಸೃಷ್ಟಿಸಿಕೊಂಡು ನಮ್ಮೆದುರು ಜೀವಂತವನ್ನುವಂತೆ ನಿಲ್ಲಿಸುವುದರ ಮೂಲಕ ಮೃತ್ಯುವನ್ನು ತಿರಸ್ಕಾರದಿಂದ ಧಿಕ್ಕರಿಸಲು ಪ್ರಯತ್ನಿಸುತ್ತದೆ. ಇಡೀ ಲೋಕವನ್ನೇ ತನ್ನದೆಂದು ಬಗೆದ ಅಣ್ಣ, ಯೌವನದ ಸಾಹಸದಲ್ಲಿ ಏನನ್ನೂ ಲೆಕ್ಕಿಸದ ಸುಧೀರ, ಮಮತೆಯಲ್ಲಿ ತನ್ನನ್ನು ಸಂಪೂರ್ಣ ಮಕ್ಕಳಿಗೆಂದು ತೇಯ್ದು ಬಾಳಿದ ತಾಯಿ—ಈ ಮೂವರು ತಮ್ಮ ಜೀವಂತಿಕೆ

* ಅಡಿಗರ 'ಭೂಮಿಗೀತ'ದಲ್ಲಿ ಕಾಣುವ ಭಾವನೆಗಳ ನಾಟಕ—ಮನಸ್ಸಿನಲ್ಲಿ ಆಗುವುದೆಲ್ಲವನ್ನೂ ಆಡಿತೋರಿಸುವ ನಾಟಕ—ಅವರ ಈಚಿನ ಕವನವಾದ ಶ್ರೀ ರಾಮನವಮಿಯ ದಿವಸದಲ್ಲಿ ಇಲ್ಲ (ಅವಶ್ಯವೂ ಇಲ್ಲ) ಎಂಬುದನ್ನು ಗಮನಿಸಬೇಕು.

ಯಲ್ಲಿ ಸಾವನ್ನು ಮೆಟ್ಟಿನಿಂತವರು ಎಂದು ಕವಿ ಹೇಳಲು ಪ್ರಯತ್ನಿಸುತ್ತಾರೆ. ಆದರೆ ಮೂರು ಪದ್ಯದಲ್ಲೂ ಯಾವ ಸಮಾಧಾನದಿಂದಲೂ ತೃಪ್ತಿವಾಗಲಾರದ ವ್ಯಾಕುಲತೆಯೂ ಕಾಣಿಸಿಕೊಳ್ಳುತ್ತದೆ. 'ಅಣ್ಣ' ಪದ್ಯದಲ್ಲಿ ಓದುಗರಿಗೆ ಹಠಾತ್ತನೆ ಎದುರಾಗುವ ಭೀಕರ ಚಿತ್ರವನ್ನು ನೋಡಿ:

"ಅಂಗಾತ ಬಿದ್ದಿತ್ತು ದೇಹ ಗೊರಗೊರಿಸುತ್ತ,
ನೋಟವಿಲ್ಲದ ಗಾಜುಗಣ್ಣು, ಬಿಸಿ ಕಳಕೊಂಡು
ಊದಿ ನೆಟ್ಟಗೆ ಸೆಟೆದ ಕೈಕಾಲು, ಉಸಿರ ತಿದಿ ಮಾತ್ರ
ಆತಂತ್ರ ಒತ್ತುತ್ತಿತ್ತು ಕೊನೆಯ ಉಬ್ಬಸ ಹತ್ತಿ"

ಮಾನವೀಯ ಶಕ್ತಿಗಳಾದ ಪ್ರೇಮ, ಅನುಕಂಪ, ಸ್ಮೃತಿಗಳಲ್ಲಿ ನಂಬಿಕೆಯಿಟ್ಟು ಸಾವನ್ನು ತಿರಸ್ಕರಿಸಲು, ಹೀಗೆ ತಿರಸ್ಕರಿಸುವುದರ ಮೂಲಕವಾದರೂ ಸಾವನ್ನು ಗೆಲ್ಲಲು, ಚಿತ್ತಾಲರು ನಡೆಸುವ ಪ್ರಯತ್ನ ನಮ್ಮ ಮನಸ್ಸನ್ನು ಆಳವಾಗಿ ಈ ಪದ್ಯಗಳಲ್ಲಿ ಕಲಕುತ್ತದೆ. ಬದುಕು ಮತ್ತು ಸಾವು ಎರಡೂ ಅಭೇದ್ಯ ರಹಸ್ಯಗಳಾಗಿಯೇ ಉಳಿದರೂ, ಚಿತ್ತಾಲರು ಈ ರಹಸ್ಯವನ್ನು ಭೇದಿಸಲು ಮತ್ತೆ ಮತ್ತೆ ಪ್ರಯತ್ನಿಸುತ್ತಾರೆ. ಈ ಪ್ರಯತ್ನ ಕೂಡ ಒಂದು ಅರ್ಥ ಪೂರ್ಣ 'ಜೆಸ್ಚರ್' ಎನ್ನಿಸುತ್ತದೆ.

ಚಿತ್ತಾಲರ ಸರ್ವಶಕ್ತಿಗಳೂ ಒದಗಿಬಂದಿರುವ ಪದ್ಯವೆಂದರೆ "ಹರಿವ ನೀರಿದು" ವರ್ಡ್ಸ್‌ವರ್ಥನ 'ODE : Intimations of Immortality'ಯನ್ನು ತನ್ನ ಬೀಸಿನಲ್ಲಿ, ಉದಾತ್ತ ಧಾಟಿಯಲ್ಲಿ ನೆನಪಿಗೆ ತರುವ ಈ ಕವನ ವರ್ಡ್ಸ್‌ವರ್ಥನ ಕವನ ದಂತೆಯೇ ವ್ಯಾಕುಲತೆಯನ್ನು ತನ್ನ ಅಂತರಂಗದಲ್ಲಿ ಹುದುಗಿಸಿಕೊಂಡಿದೆ. ಜೀವನಾನು ಭವವನ್ನು ತಾತ್ವಿಕ ವಿಚಾರದ ಮಟ್ಟದಲ್ಲೂ ಪರೀಕ್ಷಿಸಿ, ದಾರ್ಶನಿಕವಾಗಿ ಒಡಮೂಡಿಸುವ ಪ್ರಯತ್ನ ಈ ಕವನದಲ್ಲಿದೆಯೆನ್ನಬಹುದು. ಪದ್ಯದ ಮೊದಲನೆಯ ಭಾಗದಲ್ಲಿ ಕಾಲ ವನ್ನು ಮತ್ತು ಜೀವನವನ್ನು ಹರಿವ ನೀರೆಂದು ಕವಿ ಕಾಣುತ್ತಾರೆ. ಹರಿವ ನೀರಿನ ಪ್ರತಿಮೆ ಸಾಂಪ್ರದಾಯಿಕವಾದದ್ದು. ಆದರೆ ಉದ್ದೇಶಪೂರ್ವಕವಾಗಿ ಕವಿ ಇಲ್ಲಿ ಸಾಂಪ್ರದಾಯಿಕ ಪ್ರತಿಮೆಯನ್ನು ಉಪಯೋಗಿಸಿಕೊಳ್ಳುತ್ತಾರೆ. ಗ್ರಾಂಥಿಕ ವಾಕ್ಸರಣಿ ಯಲ್ಲಿರುವ ಈ ಪ್ರತಿಮೆ ಕವಿಯ ಚಿಂತನೆಗೊಂದು ನಿರ್ಲಿಪ್ತತೆಯನ್ನು, ದೂರವನ್ನು, ತಾತ್ವಿಕ ಗಾಂಭೀರ್ಯವನ್ನು ತರುತ್ತದೆ:

"ಹರಿದಷ್ಟು
    ಮರೆಯೊಳಡಗುವ ನಿರಂತರ ಪಾತ್ರ
ಹರಿದಷ್ಟು
    ಸುತ್ತು ಪರಿವುದು
ಇದೀಗ ಈ ಕ್ಷಣವಾಗಿಯೇ ಮಾತ್ರ"

ಮೊದಲನೆಯ ಭಾಗದಲ್ಲಿ ಕಾಣುವ ಘೋಷ, ಲಯ ಧ್ಯಾನದ ಸ್ಥಿತಿಯಲ್ಲಿರುವ ಮನಸ್ಸೊಂದನ್ನು ಸೃಷ್ಟಿಸುತ್ತದೆ. ಕವನದ ಎರಡನೆಯ ಭಾಗದಲ್ಲಿ ಜೀವನದ ಕಲ್ಪನೆ

ಬದಲಾಗುತ್ತದೆ. ಜೀವನ ಬರಿಯ ಪ್ರವಾಹವಲ್ಲ; ಕಾಲದ ಪ್ರತಿಕ್ಷಣವೂ ಕ್ಷಣಿಕತೆ ಯನ್ನೂ, ಶಾಶ್ವತತೆಯನ್ನೂ ಒಟ್ಟಾಗಿ ಗರ್ಭಿಸಿಕೊಂಡ ಮುಹೂರ್ತ. ಆದ್ದರಿಂದ ಈ ಭಾಗದಲ್ಲಿ ಜೀವನವನ್ನು ಬರೀ ಪ್ರವಾಹವೆಂದು ಕಾಣದೆ ಸದಾ ಪಕ್ವವಾಗುತ್ತಿರುವ ಕ್ರಿಯೆಯಾಗಿ ಕಾಣುತ್ತಾರೆ:

"ಎಂದು ಕಂಡರು
ವರ್ತಮಾನದಂಗಳದಲ್ಲಿ
ಒಕ್ಕಿದಷ್ಟೂ ಬೆಳೆವ ಭವಿತವ್ಯತೆಯ ಪೈರು"

ಮೂರನೆಯ ಭಾಗದಲ್ಲಿ ಈ ತನಕ ಅಮೂರ್ತ ತತ್ತ್ವಗಳಲ್ಲಿ ಹೇಳಿದ ವಿಚಾರವನ್ನು ಮೂರ್ತ ಪ್ರತೀಕಗಳ ಮುಖಾಂತರ ಕವಿ ಮಂಡಿಸುತ್ತಾರೆ. ಕಾಲದ ಎಗ್ಗಿಲ್ಲದೆ ಕಾಲದಲ್ಲಿ ಬೆಳೆಯುತ್ತಿರುವ ಮಗು, ಮತ್ತು ಮೃತ್ಯುಪ್ರಜ್ಞೆಯಿಂದ ಅಬಾಧಿತವಾದ ಯುವಕನ ಜೀವನೋತ್ಸಾಹದ ಚಿತ್ರಗಳು ಇಲ್ಲಿ ಬರುತ್ತವೆ.

ಈ ಮೂರು ಭಾಗಗಳಲ್ಲೂ ಭಾಷೆ ಅಮೂರ್ತತೆಯಿಂದ ಮೂರ್ತತೆಗೆ, ಸಂಸ್ಕೃತ ದಿಂದ ಕನ್ನಡಕ್ಕೆ, ತಾತ್ವಿಕ ಚಿಂತನೆಯಿಂದ ಜೀವನದ ಪರೀಕ್ಷೆಗೆ, ಘೋಷದ ಲಯದಿಂದ ಆಡುಮಾತಿನ ಲಯಕ್ಕೆ ಸೂಕ್ಷ್ಮವಾಗಿ ಬದಲಾಗುತ್ತ ಹೋಗುವುದನ್ನು ನೋಡಬೇಕು. ನಾಲ್ಕನೆಯ ಭಾಗ ಯಾವ ರೀತಿಯಲ್ಲಿ ನಮ್ಮ ಮನಸ್ಸಿನಲ್ಲೊಂದು ಗುಂಗನ್ನು ಸೃಷ್ಟಿ ಮಾಡಿ ಕೊನೆಯಲ್ಲಿ ಅದನ್ನು ಒಡೆದು ನಿಲ್ಲುತ್ತದೆ ಎಂಬುದನ್ನು ನಾನು ಈ ಮೊದಲೇ ವಿವರಿಸಿದ್ದೇನೆ. ಐದನೆಯ ಭಾಗದಲ್ಲಿ ಈ ಜೀವನದ ಅರ್ಥವೇನೆಂಬುದನ್ನು ತಿಳಿಯುವ ಪ್ರಯತ್ನವಿದೆ:

"ಈ ಜೀವಕ್ಷೇತ್ರದಲ್ಲಿ
ಹೊಡೆತುಂಬಿ ನಿಂತಷ್ಟೆ
ಉಡಿತುಂಬಿ ಬಂದಷ್ಟೆ
ದಾರಿಯ ಫಲ"

ಮನುಷ್ಯ ತನ್ನನ್ನು ತಾನು ರೂಪಿಸಿಕೊಳ್ಳಬೇಕಾದ ಹೊಣೆ ಹೊತ್ತವನು: ಏರಿಕೆ ಯಲ್ಲಿ ಬರುವ ಈ ಮಾತುಗಳನ್ನು ನೋಡಿ:

"ಗೈ, ಆಗು, ಆಕಾರ ತಾಳು, ಹದವಡೆದು ಬಾ"

ಮನುಷ್ಯನಿಗೆ ಹೋರಾಟದಿಂದ ಪಲಾಯನ ಸಾಧ್ಯವಿಲ್ಲ. ಆರನೆಯ ಭಾಗದಲ್ಲಿ ಮನುಷ್ಯನ ಮರ್ತ್ಯತೆ ಕವಿಯನ್ನು ಮತ್ತೆ ಕಾಡುತ್ತದೆ:

"ಒಂದೆ ಆಯುಷ್ಕಾಲ......
ನಿನ್ನ ಮೃತ್ತಿಕೆಯ ರುಚಿ ನಾಲಗೆಯ ಮೇಲೆ ಹೊತ್ತು
ನಡೆಯುವೀ ನಾನು ಕಾಡಿ ಕಾಡಿ ಕೇಳುತ್ತೇನೆ
ಯಾವುದೀ ಗತಿಯು ಗತ್ಸ್ತ?"

ಸಾಂಪ್ರದಾಯಿಕವಾದ ಭಾಷೆ ಮತ್ತು ಲಯಗಳ ಸೊಗಸುಗಳಿಂದಾಗಿ ಈ ಭಾಗದಲ್ಲಿ ಕವಿ ಎತ್ತುವ ಪ್ರಶ್ನೆಗಳಾಗಲಿ ಕೊಡುವ ಉತ್ತರಗಳಾಗಲಿ ಅಷ್ಟು ಕಠೋರವಾಗಿ ನಮಗೆ ತಟ್ಟುವುದಿಲ್ಲ. (ಕವಿ ಉದ್ದೇಶಪೂರ್ವಕವಾಗಿ ಹೀಗೆ ಮಾಡಿರಬಹುದು.) ಆದರೆ ನಾಲ್ಕನೆಯ ಭಾಗದಲ್ಲಿಯಂತೆ ಈ ಭಾಗದಲ್ಲಿ ಕೂಡ ನಾನು ಮೆಚ್ಚಿಕೊಂಡಿರುವ ವಿಷಯವೆಂದರೆ, ಸಲೀಸಾಗಿ ಬರುವ ಮಾತುಗಳ ಸರಣಿಯಲ್ಲಿ ಕೊನೆಗೆ ಭೀಕರವಾದ, ಯಾವ ಸಾಮಾಧಾನಕ್ಕೂ ಬಗ್ಗದ, ಮೃತ್ಯುವಿನ ಚಿತ್ರ ನಮಗೆ ಎದುರಾಗುವ ಕ್ರಮ:

"ಸೆಳೆಯ ಬಂದಾಗ ಕೊನೆಯ ಬಿಕ್ಕು
ತುಟಿಯ ಭೀತೋದ್ಗಾರ ತುಟಿಯ ಮೇಲೆ ಉಳಿದು
ತೆರಳುವೆವು
ಮಡಿಲೊಳಿಕ್ಕು"

ಯಾವ ನೆಮ್ಮದಿಯನ್ನೂ ಒಲ್ಲದ ಈ ಮೃತ್ಯು ಪ್ರಜ್ಞೆ ಕವಿಯ ಧ್ಯಾನವನ್ನು ಇನ್ನಷ್ಟು ಆಳಕ್ಕೆ ತಳ್ಳುತ್ತದೆ. ಏಳನೆಯ ಭಾಗದಲ್ಲಿ "ಮೈಯ ಹಿಂದೆ ಮನದ ಹಿಂದೆ ಅನಾಮಿಕರಾಗಿ" ಅಡಗಿರುವ ಪಿತೃಗಳ ಮಾತು ಬರುತ್ತದೆ:

"ಕಣಜಗಳಲೆಲ್ಲ ಅವರೊಕ್ಕಿ ಒಟ್ಟಿಹ ಕಾಳು"

ಅವರೂ ಕೂಡ "ಮರಳಿ ಬಾರದ ತೆರದಿ" ಮಣ್ಣ ಸೇರಿದವರು. ಪಿತೃಗಳಂತೆಯೆ "ಮಣ್ಣಿನೊಳಗಡೆಯಿಂದ ಕಿಕ್ಕಿರಿದು ನೆರೆವ ಮಕ್ಕಳ ಕೇಕೆ ಗಡಚಿಕ್ಕಿ"ನ ಚಿತ್ರ ಈ ಭಾಗದ ಕೊನೆಯಲ್ಲಿ ಬರುತ್ತದೆ. ನಮ್ಮಲ್ಲಿ ಸ್ಮೃತಿಯಾಗಿ ಚಿರಂತನರಾದ ಪಿತೃಗಳು, ಸದಾ ಹುಟ್ಟುತ್ತಿರುವ ಮಕ್ಕಳು—ಜೀವನದ ಅನಂತತೆಗೆ ದ್ಯೋತಕ. ಇದು ಎಲ್ಲರೂ ತಿಳಿದಿರುವ ಸಾಧಾರಣ ತತ್ತ್ವವಾದರೂ ಕವನದ ವಿಶಿಷ್ಟತೆಯಿರುವುದು ಪ್ರತಿ ವ್ಯಕ್ತಿಯೂ ತನ್ನ ಸಾವನ್ನು ಮಾತ್ರ ಅಭೇದ್ಯ ರಹಸ್ಯವಾಗಿ ಎದುರಿಸಬೇಕೆನ್ನುವ ಪ್ರಜ್ಞೆ ಈ ತಾತ್ವಿಕ ಅರಿವಿನಲ್ಲೂ ಅಂತರ್ಗತವಾಗಿ ಹರಿಯುವುದರಿಂದ.

ಮುಂದಿನ ಭಾಗದಲ್ಲಿ ಈ ಜೀವನ ರಹಸ್ಯವನ್ನು ಕೃತಜ್ಞತೆಯಿಂದ ಸ್ವೀಕರಿಸುವ ಧೀರವಾದ ನಿಲುವಿಗೆ ಕವಿ ಮಾಡುವ ಪ್ರಯತ್ನವನ್ನು ಕಾಣುತ್ತೇವೆ:

"ಇಲ್ಲಿ
ಕಾಲಾತೀತದಲ್ಲಿ
ಕಾಲಾಧೀನರಾಗಿ ಚರಿಸುವುದೊಂದೆ
ಚಿರೆಗಿನರ್ಭಕ ದೃಷ್ಟಿ ಚಾಚಿ ಅಭ್ಯಾಗತರ ತೆರದಿ ನೆಲಸುವುದೊಂದೆ
ನಶ್ವರತೆಯನೆ ಫಲಿಸಿ ಕುಡಿಯೊಡೆಯು ಬಿಟ್ಟು
ಶಾಶ್ವತಿಯ ನಿಲಿಸುವುದೊಂದೆ.

ಈ ಮಹಾದ್ಭುತದಿ ಉದ್ಭವಿಸಿ ಬಂದಿಹೆವಲ್ಲ
ಅದೆ ಒಂದು ಹಿಗ್ಗು, ಎಚ್ಚತ್ತು ನಿಂತಿಹೆವಲ್ಲ
ಅದೆ ಒಂದು ನೆತ್ತರಲಿ ದಿನರಾತ್ರಿ ಹರಿವ ಸುಖ"

ಹೀಗೆ ಉದಾತ್ತವಾದ ಕೃತಜ್ಞತೆಯ ಧಾಟಿಯಲ್ಲಿ ಕವನ ಮುಕ್ತಾಯಗೊಂಡರೂ ಸಹಾ ಬದುಕು ರಹಸ್ಯಪೂರ್ವವಾದುದು ಎಂಬ ಭಾವನೆ ನಮ್ಮಲ್ಲಿ ಕೊನೆಗೂ ಉಳಿದಿರುತ್ತದೆ. "ಕಾಲಾತೀತದಲ್ಲಿ ಕಾಲಾಧೀನರಾಗಿ" ಚರಿಸಬೇಕಾದ, "ನಶ್ವರತೆಯನೆ ಫಲಿಸಿ ಕುಡಿಯೊಡೆಯಬಿಟ್ಟು ಶಾಶ್ವತೀಯ" ನಿಲ್ಲಿಸಬೇಕಾದ ದ್ವಂದ್ವವನ್ನು ಕವಿ ಸ್ವೀಕರಿಸುವ ಧಾಟಿಯಲ್ಲಿ—ವಿರೋಧಗಳನ್ನು ಕೃತಕವಾಗಿ ಸಮನ್ವಯಿಸದೆ ಎದುರಿಸುವ ಕ್ರಮದಲ್ಲಿ —ಚಿತ್ತಾಲರು ಜೀವನಾನುಭವದ ಆಘಾತಕ್ಕೆ ಎಷ್ಟು ಸತ್ವಪೂರ್ಣವಾಗಿ ತಮ್ಮನ್ನು ಒಡ್ಡಿಕೊಳ್ಳುತ್ತಾರೆ ಎಂಬುದನ್ನು ಕಾಣಬಹುದು. ಮಾನವೀಯ ಸ್ತರವನ್ನು ಮೀರಿದ ಸ್ತರ ಚಿತ್ತಾಲರಿಗೆ ನಿಜವಲ್ಲದಿರುವುದರಿಂದಲೇ ಈ ಕವನದಲ್ಲಿ ಮನುಷ್ಯನಿಗಿರುವ ಸಹಿಸುವ ಶಕ್ತಿಯ ಮೇಲೆ ಹೆಚ್ಚು ಮಹತ್ವ ಬೀಳುತ್ತದೆ. ಮನುಷ್ಯ ಸಂಕಲ್ಪದ ಅತ್ಯಂತ ಉದಾತ್ತವಾದ ಚಿತ್ರಣವೆಂದು ಈ ಕವನವನ್ನು ನಾವು ಭಾವಿಸಬಹುದು.

ಚಿತ್ತಾಲರ ಹುಡುಕಾಟ ಸುಲಭವಾಗಿ ಕೊನೆಯಾಗುವಂತಹದಲ್ಲ. ಇವರ ಔದಾರ್ಯದ ಧೋರಣೆ, ಮಾನವತಾವಾದದ ನಿಲುವು, ಮೃತ್ಯುವನ್ನು ಕಣ್ಣಿಟ್ಟು ನೋಡಿಯೂ ಹುಟ್ಟಿದ ಜೀವನಶ್ರದ್ಧೆ ಆಧುನಿಕ ಕಾವ್ಯದಲ್ಲಿ ಒಂದು ಧೀಪರೋದಾತ್ತ ವ್ಯಕ್ತಿತ್ವವನ್ನು ಸೃಷ್ಟಿಸಿದೆ. ಎಲ್ಲ ಹೀರೊಗಳೂ ಪೊಳ್ಳಾಗಿ ಕಾಣುತ್ತಿರುವ ನಮ್ಮ ಕಾಲದಲ್ಲಿ ಒಬ್ಬ ನಿಜವಾದ ಉದಾತ್ತ ನಾಯಕನನ್ನು ಸೃಷ್ಟಿಸುವ ಸಾಹಸವನ್ನು ಮಾಡಿರುವ ಚಿತ್ತಾಲರ ಪ್ರತಿಭೆಗೆ ನಾವು ಕೃತಜ್ಞರಾಗಿರಬೇಕು.

ಕೋಪ? ನಿಯಂತ್ರಿಸಲ್ಪಡದಿದ್ದರೆ ವ್ಯಕ್ತಿಯನ್ನೇ ನಿಯಂತ್ರಿಸುತ್ತದೆ.

ಅಂತೋಣಿ ಶಾಫ್ಟೆಸ್‌ಬರಿ

ಯೋಧರು ಕಾದಾಡುತ್ತಾರೆ, ರಾಜರು ವೀರರಾಗುತ್ತಾರೆ.

ಜ್ಯೂ ಜನರ ಗಾದೆ

ದಕ್ಷಿಣ ಆಫ್ರಿಕಾದ ಕವಿತೆಗಳು

ಚೆನ್ನವೀರ ಕಣವಿ

ಕಳೆದ ದಶಕದ ದಕ್ಷಿಣ ಆಫ್ರಿಕಾದ ಲೇಖಕರ (ಬಿಳಿ ಹಾಗೂ ಕಪ್ಪು ಜನಾಂಗದವರನ್ನೊಳಗೊಂಡು) ಗದ್ಯಪದ್ಯಗಳ ಗಮನಾರ್ಹ ಬರವಣಿಗೆಯನ್ನು ಅಲ್ಲಿಯ ಇಬ್ಬರು ಪ್ರಮುಖ ಲೇಖಕರಾದ ಆಂಡ್ರೆ ಬ್ರಿಂಕ್ ಮತ್ತು ಜೆ. ಎಂ. ಕೊಯೆಟ್ಜಿ ಅವರು, A land A part–A south African reader ಎಂಬ ಗ್ರಂಥದಲ್ಲಿ ಸಂಗ್ರಹಿಸಿ ಕೊಟ್ಟಿದ್ದಾರೆ. ಅದರಲ್ಲಿನ ಮೂರು ಕವಿತೆಗಳ ಭಾವಾನುವಾದ ಈ ಕೆಳಗಿನ ಪದ್ಯಗಳು :

Mazisi Kunene : ಜನ್ಮ ೧೯೩೦. ಸಮತಾವಾದ ನಿಗ್ರಹ ಕಾಯದೆಯ ಮೇರೆಗೆ ದಕ್ಷಿಣ ಆಫ್ರಿಕಾದಲ್ಲಿ ಬಹಿಷ್ಕಾರಕ್ಕೊಳಗಾದ ಲೇಖಕ. ಇವನು ನಾಲ್ಕು ಕವನ ಸಂಗ್ರಹಗಳನ್ನು ಪ್ರಕಟಿಸಿದ್ದು, ಸದ್ಯ ಲಾಸ್‌ಆ್ಯಂಜೆಲೀಸ್‌ನ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಆಫ್ರಿಕೆಯ ಭಾಷೆ ಮತ್ತು ಸಾಹಿತ್ಯ ವಿಷಯದ ಪ್ರಾಧ್ಯಾಪಕನಾಗಿದ್ದಾನೆ.

ಕೆರಳಿದ ಪೀಳಿಗೆ

(The rise of the angry generation)

ಕನಸಿನಿಂದೆಚ್ಚೆತ್ತು ರೆಕ್ಕೆ ಬೀಸಿದೆ ಮಹಾ ಗರುಡ,
ಚೆದರಿ ಬಿದ್ದಿವೆ ಶೈಶವದ ಚಿಪ್ಪು,
ಅರುಣೋದಯದ ಮೇಲೆ ಉಗ್ರದೃಷ್ಟಿಯನಿಟ್ಟು
ಕತ್ತಲೆಯಿಂದ ಭೂಮಿಯನು ಮುಚ್ಚಿಬಿಡುವಂತೆ.
ಗೂಡು ಕಟ್ಟುತಿದೆ ಸುಂದರ ಪಕ್ಷಿ ಹಣ್ಣೆಲೆಗಳಿಂದ
ಸಜ್ಜುಗೊಳಿಸುತ ಮೂಲ ಸಸ್ಯದ ಟೊಂಗೆ ಟಿಸಿಲುಗಳ—
ಅದನು ಪುರೆ ಮಾಡಿಸುದು ಕೆಂಪುಗರಿಗಳಿಂದ,
ತನ್ನ ಕೋಪತಾಪದ ಬಗೆಗೆ ಭೂಮಿಗೆಚ್ಚರಿಕೆ ನೀಡುವಂತೆ.

ಭಯದಿಂದ ಒಮ್ಮೆ ಹೆಮ್ಮೆಯ ಗ್ರಹವು ಚೀತ್ಕರಿಸಿ
ನಿಗೂಢ ತರುಣ ಪಕ್ಷಿಗೆ ತೆರೆದು ವಿಸ್ತಾರದಾಕಾಶ
ಹೊಸ ಪೀಳಿಗೆಯ ನಿಷ್ಕರುಣ ಮೊನೆಯುಗುರುಗಳಿಗೆ
ಮೋಸದಲಿ ಕರೆವ ಕಣ್ಣೀರಿಗವರು ಹಿಂಜರಿಯುವವರು
ಕಬ್ಬಿಣದ ಮಕ್ಕಳವರು
ಇರುಳ ನಿರ್ಭಯದ ಜೇನುಗಳು
ಜ್ವಾಲಾಮುಖಿ ಪರ್ವತದ ಕ್ರೋಧಕೇತನಗಳು
ಅವರೆ ಪ್ರಾಚೀನ ಪಿತೃಗಳ ಕೊನೆಬಾಳುವ ರೋಷ ಭೀಷಣರು.

Mike Nicol : ಜನ್ಮ : ೧೯೫೧. ವಿಟ್‌ವಾಟರಸ್ಟ್ಯಾಂಡ್ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆದ ಇವನು ಪತ್ರಿಕೋದ್ಯೋಗಿ. African wild life ದ ಸಂಪಾದಕ. ತನ್ನ ಕವನ ಸಂಗ್ರಹಕ್ಕೆ ಬಹುಮಾನ ಪಡೆದ ಕವಿ.

ಗುಡಿಸಲಿನ ಆಯ್ಕೆ

(Choosing a cottage)

ರೋಷದ ನಗರಗಳಿಂದ ಶೀತಲ ಗ್ರಾಮಗಳಿಗೆ ಬರುವವರೆ
ನಿಮ್ಮ ಗುಡಿಸಲವ ನೋಡಿ ಚೆನ್ನಾಗಿ ಆಯ್ಕೆ ಮಾಡಿ.
ಮಳೆಗಾಲದಲ್ಲಿ ನಿಮ್ಮನದು ಬೆಚ್ಚಗಿಡಬೇಕು
ಮೋಡಗಳೇರಿ ಬಂದು ನಿರಂತರ ನೀರು ಸುರಿದಾಗ
ಕೆಲವರಿಗೆ ಇದು ಮನೆಯಾಗಬಹುದು.
ಬೇಲಿಯ ಪೊದೆಯ ಸಾಲು, ಬಡಕಲು ಗಿಡಗಳು
ಕಪ್ಪು ಮಣ್ಣು, ನಿಮಗೆ ಉತ್ತರದ ದಕ್ಷಿಣದಿಂದ ಭೇದಿಸುವವು :
ಬೀಳು ಬಯಲಿಂದ ಈ ಬೆಟ್ಟಗಳ ಪ್ರತ್ಯೇಕಿಸುವವು.

ಸೀಸದ ಚೌಕಟ್ಟಿನ ಕಿಡಕಿಗಳಿಂದ ಹಳ್ಳಿಬೀದಿಗೆ ಇಣುಕಿ ನೋಡಿ:
ಬೆರಿ ಹಣ್ಣುಗಳ ಕುಕ್ಕುವ ಪಕ್ಷಿಗಳ ಹೆಸರು ಗುರುತಿಸದ
ಇರುಳು ಚಿತ್ರಹಿಂಸೆಗೀಡಾದ ಅಸಹಾಯ ಅರಚುಗಳ
ಶಮನಗೊಳಿಸಲಾರದ, ಕೋಣೆಯಿಂದ ಕೋಣೆಗೆ
ಕದಲುವ ಅಮೃತಶಿಲೆಯಂಥ ಮುಖ.
ಬತ್ತಿದುಸಿರಿಂದ ಮಂಜಾದ ಕಿಟಕಿ ಗಾಜನ್ನೊರಸಿ,
ಬೇರೆ ಕಡೆ ಎಲ್ಲಾ ಯಥಾಪ್ರಕಾರವೆಂದು ಭಾವಿಸಿ—
ವಿಧಿವತ್ತಾಗಿ ಪ್ರಶ್ನಿಸುವವನ ಬಿಳಿಯರ ಕನಸು
ಮುಂದುವರಿದಿದೆಯೆಂದು.

ಹೊಳೆಬದಿಗೆ ಸ್ಥಳದ ಕಲ್ಲುಗಳಿಂದ ಕಟ್ಟಿ, ಹುಲ್ಲು
ಹೊಚ್ಚಿದ ಚಾವಣಿಯ, ಬಿಸುಗಿನ, ಸಸ್ಯಮೂಲಿಕೆ ನಡುವೆ
ಹಾಯ್ದು, ಬಾಗಿಲವರೆಗೆ ನೇರದಾರಿಯ ಗುಂಡುಕಲ್ಲು,

ಚಳಿಗಾಲದ ತಣವಾದ ಸೂರ್ಯನ ನಸುಗೆಂಪು ತಳೆದು—
ಪ್ರಿಟಾಳಿನ ಚಿತ್ರಕಾಣುವದು—ಅನುರೂಪದ ಚಿತ್ರದಂಚಿಯು
ಕಾರ್ಡ್ :
ಆನುವಂಶೀಯನವರು, ಎತ್ತರದ ಗೋಡೆಯ ಹಿಂದೆ, ಸಮುದ್ರ
ಸುತ್ತುವರಿದವರು, ಅವರ ಗತಿಯೇನು—ಪರಿಭಾವಿಸು.

ಇದು ಗೊತ್ತಿರಲಿ, ಯಾವ ಕಾಟ್ಸ್‌ವೋಲ್ಡ್ ಗುಡಿಸಲೂ
ಮುಕ್ತಗೊಳಿಸದು ನಿನ್ನ ಗತಕಾಲದಿಂದ. ಥಂಡಿಗೆ ಹೊದ್ದು,
ಮಳೆಗಾಲವೆನುರಿಸಿ, ನಾಯಿತಿರುಗಾಟಕೊಯ್ಯಾಗ ಗಡಿಯಲ್ಲಿ
ಸಾವು, ಊರಚೌಕದಲಿ ಸಾವು ಹಿಡಿದುಕೊಂಡಿದೆ
ನಮ್ಮನ್ನು ಚಹಕುಡಿದು ಬೆಚ್ಚಗೆನಿಸಿದಾಗಲು
ಮರೆಯುವೆವು ನಾವು ಅವನನ್ನು ಅಥವಾ ಅವಳನ್ನು.
ಗುಡಿಸಲುಗಳಲ್ಲಿ ಬಂದು ನೆಲಸುವ ನೀವು ಸರಿಯಾಗಿ
ಆಯ್ಕೆ ಮಾಡಿ. ಯಾರಿಗೂ ದ್ರೋಹ ಬಗೆಯದಿರಿ,
ಸ್ವೀಕರಿಸಿ ಕಪ್ಪಲ್ಲದ ಬಿಳಿಯಲ್ಲದ ಬೂದುಬಣ್ಣ.

Oupa Thando Mthimkulu: ದಕ್ಷಿಣ ಆಫ್ರಿಕಾದಲ್ಲಿ ಹುಟ್ಟಿದ ತನ ಬಗ್ಗೆ ಹೆಚ್ಚು ತಿಳಿದು ಬಂದಿಲ್ಲ. ಮಾರ್ಚ್ ೧೯೭೮ರ 'Staffrider' ದಿಂದ ಕವಿತೆಯನ್ನು ತೆಗೆದುಕೊಳ್ಳಲಾಗಿದೆ.

ಚಕ್ರದಂತೆ
(Like a wheel)

ಇದು ನೋಡು ಚಕ್ರದಂತೆ
ಇದು ತಿರುಗುತ್ತದೆ
ಇಂದು ನಾನು
ನಾಳೆ ನೀನು.

ಇಂದು ಹಸಿದವ ನಾನು
ನಾಳೆ ನೀನು,
ಮನೆಯಿಲ್ಲವಿಂದು ನನಗೆ
ನಾಳೆ ನಿನಗೆ.

ಇಂದು ಜೈಲಿನಲಿ ನಾನು
ನಾಳೆ ನೀನು
ಇದು ನೋಡು, ಚಕ್ರದಂತೆ.

ನನ್ನ ನೋವಿನ ಸಂಪುಟದಿಂದ

ಎಂ. ಟಿ. ವಾಸುದೇವನ್ ನಾಯರ್

"ಒಬ್ಬ ಪುಟ್ಟ ಹುಡುಗಿ ಬರೆದ ಪತ್ರದಿಂದಾಗಿ ಅಬ್ರಹಾಂಲಿಂಕನ್
ಗಡ್ಡ ಬಿಟ್ಟರಂತೆ ಎಂದು ನಾನು ಕೇಳಿದ್ದೇನೆ. ಯಥಾವತ್ ಅದೇ
ರೀತಿಯಲ್ಲದಿದ್ದರೂ ನಾನೂ ಸಹ ಈ ಪತ್ರ ಬರೆಯುತ್ತಿದ್ದೇನೆ.
ನೀವು ಯಾವಾಗಲೂ ದುಃಖ ಹಾಗೂ ವಿಚ್ಛಿದ್ರತೆಯ ಕತೆಗಳನ್ನೇ
ಬರೆಯುತ್ತೀರಿ. ನೀವು ಬರೆದ ಕತೆಗಳನ್ನು ಓದದಿರಲು ನನ್ನಿಂದ
ಸಾಧ್ಯವಾಗುವುದಿಲ್ಲ. ಆದರೆ ಅವನ್ನು ಓದಿ ಮುಗಿಸಿದ ಮೇಲೆ
ಮನಸ್ಸು ಉದಾಸವಾಗುತ್ತದೆ. ಮುಂದೆ ನೀವು ಬರೆಯುವಾಗ
ಈ ಅಂಶವನ್ನೂ ನೆನಪಿನಲ್ಲಿಟ್ಟುಕೊಂಡು ಈ ಬಗೆಗೆ ಗಮನಹರಿಸು
ರೇನು?" ಈ ಪತ್ರ ಕೇರಳದ ರಾಜಧಾನಿ ತಿರುವನಂತಪುರದ
ಒಬ್ಬ ಓದುಗಳು ಬರೆದದ್ದು. ಈ ದೀರ್ಘಪತ್ರದಲ್ಲಿ ಮೊದಲಿಂದ
ಕೊನೆಯುವರೆಗೂ ಎಂಥ ಒಂದು ಗಂಭೀರ ಧ್ವನಿ ಇತ್ತೆಂದರೆ
ಅದನ್ನು 'ಫ್ಯಾನ್ ಮೇಲ್' ಎಂದು ಹಗುರಾಗಿ ಪರಿಗಣಿಸಿ
ಅಲಕ್ಷಿಸುವಂತಿರಲಿಲ್ಲ.

ನಾನು ದುಃಖ ಮತ್ತು ವಿಚ್ಛಿದ್ರತೆಯ ಕತೆಗಳನ್ನೇ ಏಕೆ
ಬರೆಯುತ್ತೇನೆ? (ನಾನು ದುಃಖ ಎಂದು ಹೇಳಿದರೆ, ವಿಫಲ
ಪ್ರೇಮದಿಂದ ಉಂಟಾಗುವ ದುಃಖವನ್ನು ಇಡೀ ಪ್ರಪಂಚದ
ದುಃಖವೆಂದು ಪರಿಭಾವಿಸುವುದು ಎಂದು ನನ್ನ ಅರ್ಥವಲ್ಲ) ಇದ
ನನ್ನೊಬ್ಬನ ಸಮಸ್ಯೆಯಲ್ಲ. ಈ ಯುಗದ ಪ್ರತಿಯೊಬ್ಬ ಲೇಖಕ
ಸಮಸ್ಯೆ. ಇಂದು ನಮ್ಮಲ್ಲಿರುವ ಒಂದೇ ಒಂದು ಸಂವೇದ
ಎಂದರೆ ತಿರಸ್ಕಾರ. ಅಂತೆಯೇ ನಮ್ಮನ್ನು ತೀವ್ರವಾಗಿ ಕಾ
ಘಾಸಿಗೊಳಿಸುವ ಒಂದೇ ಒಂದು ಮಾನಸಿಕ ಸ್ಥಿತಿ ಎಂದ
ಕುದಿಯುವುದು.

ನಾವು ಎಂದೂ ರಂಗು-ರಂಗಿನ ಯುಗವೊಂದರ ಮೂಲ
ಹಾಯ್ದು ಬಂದವರಲ್ಲವಾದರೂ ಇಂಥ ಒಂದು ಯುಗದ ಬಗೆ
ಸಣ್ಣ-ಪುಟ್ಟ ಕನಸುಗಳನ್ನು ಖಂಡಿತ ಕಾಣುತ್ತಿದ್ದೆವು. ಈ

ಅವನ್ನೂ ಕಳೆದುಕೊಂಡಿದ್ದೇವೆ. ನಾವು ಇಂದು ಬದುಕೆಂಬ ಬಂಜರು ಭೂಮಿಯಲ್ಲಿ ಅಂಡಲೆಯುತ್ತಿದ್ದೇವೆ. ಇಂದು ಬದುಕು ತನ್ನ ಸಂಕುಚಿತ ಹಾಗೂ ವ್ಯಾಪಕ ಅರ್ಥಗಳಲ್ಲಿ ಮೈ ಮುರಿದು ಪಡುವ ಪರಿಪಾಟಲೆಯಾಗಿದೆ. ನಮಗರಿವಿಲ್ಲದಂತೆಯೇ ಹುರುಳಿಬೀಜದ ಮೊಳಕೆಗಳಂತೆ ಸವ್ಸಿಸೃಷ್ಟಿ ಮತ್ತು ಪ್ರವೃತ್ತಿ ಕುಡಿಯೊಡೆದು ಬೆಳೆಯುವ ಬದಲು ಒಳಗೊಳಗೆ ಕಮರಿಹೋಗುತ್ತಿವೆ.

ಸಮಕಾಲೀನ ಕಾದಂಬರಿಗಳನ್ನೇ ತೆಗೆದುಕೊಳ್ಳಿ. ಈ ಕಾದಂಬರಿಗಳಲ್ಲಿನ ಬಹಳಷ್ಟು ಜನ–ನಾಯಕರು ಬದುಕಿನ ಚೌಕಟ್ಟಿನ ಹೊರಗೆ ಗುರಿಹೀನರಾಗಿ ಅಲೆಯುವ ಮತ್ತು ದುಃಖವನ್ನನುಭವಿಸುವ ಜೋಲು ಮುಖದವರಾಗಿದ್ದಾರೆ (ಫ್ರೀಕ್ಸ್). ಶಾರೀರಿಕ–ಮಾನಸಿಕ ವಿಕೃತಿಗಳ ಒಡೆಯರು ಇವರು. ಗುಂತರ್ ಗ್ರಾಸ್‌ನ 'ಟಿನ್ ಡ್ರಮ್', 'ಕ್ಯಾಟ್ ಅಂಡ್ ದಿ ಮೌಸ್', ಜಾನ್ ಫಾಲ್ಸ್‌ನ 'ಕಲೆಕ್ಟರ್', ಕಾರ್ಸ್ಸನ್ ಮೈಕಿ ಕ್ಯಾಲ್ಲಿಸರ್‌ನ 'ಮಾರ್ನಿಂಗ್ ಅಂಡ್ ಈವನಿಂಗ್' ಮುಂತಾದ ಕೃತಿಗಳನ್ನು ಕೊಂಚ ನೆನಪು ಮಾಡಿಕೊಳ್ಳಿ. ಈ ಕಾದಂಬರಿಗಳಲ್ಲಿ ನಾವು ಭೇಟಿಮಾಡುವ ಪಾತ್ರ ಗಳಲ್ಲಿ ಶೇಕಡ ತೊಂಬತ್ತು ಪಾತ್ರಗಳು ಫ್ರೀಕ್ಸ್‌ಗಳಾಗಿರುತ್ತಾರೆ, ಇಲ್ಲ ಆತ್ಮವೆಂಬ ಒಂಟಿತನದಲ್ಲಿ ಬಂಧಿಗಳಾಗಿದ್ದಾರೆ.

ಗತಿಸಿಹೋದ ಯಾವುದೋ ಒಂದು ಸುಂದರ ಗತಕಾಲದ ಒಡೆಯರಲ್ಲ ನಾವು, ಆ ಕಾಲದ ಸುಂದರವಾದ ಅಂಶಗಳನ್ನು ಮೆಲುಕು ಹಾಕುತ್ತ ನಿಟ್ಟುಸಿರು ಬಿಡುವಂತಿಲ್ಲ. ಆಗಿಹೋಗಿರುವ (ದಿ ಲಾಸ್ಟ್ ಜನರೇಷನ್) ಪೀಳಿಗೆಯ ಭಗ್ನ ಆಸೆಆಕಾಂಕ್ಷೆಗಳು ಸಮ ಕಾಲೀನ ಕೃತಿಗಳಲ್ಲಿ ಲಭ್ಯವಾಗುತ್ತಿವೆ. ಮುಂಬರುವ ಯಾವುದೇ ಸ್ವರ್ಣಯುಗದ ರೂಪರೇಷಗಳ ಕನಸು ಕಾಣಲು ಸಹ ನಮ್ಮಲ್ಲಿ ಯಾವುದೇ ಆಧಾರವಿಲ್ಲ. ನೆನಪಿನಲ್ಲಿಟ್ಟು ಕೊಳ್ಳಲು ನಮ್ಮ ಬಳಿ ವೈಯಕ್ತಿಕ ಬದುಕಿನ ಪ್ರಭಾವದಿಂದ ಮೂಡಿರುವ ಅಲ್ಪಸ್ವಲ್ಪ ಸುಖ ಹಾಗೂ ಪುಟಾಣಿಗಳಂಥ ಕೆಲವು ಆಹ್ಲಾದಕರ ಪ್ರಸಂಗಗಳು ಮಾತ್ರ ಉಳಿದಿವೆ.

ನನ್ನ ಮೊಟ್ಟಮೊದಲ ಕತೆ (ದೇವರ ದಯೆಯಿಂದ ಅದು ಬೆಳಕು ಕಾಣಲಿಲ್ಲ) ಓರ್ವ ಅಂಗವಿಕಲ ಭಿಕ್ಷುಕನಿಂದ ಪ್ರೇರಿತಗೊಂಡು ಬರೆದುದಾಗಿತ್ತು. ಆ ಅಂಗಹೀನ ವ್ಯಕ್ತಿಯನ್ನು ಹಲಗೆಯಮೇಲೆ ಕೂಡಿಸಿ ಹೆಗಲ ಮೇಲೆ ಇಬ್ಬರು ಹೊತ್ತುಹೋಗು ತ್ತಿದ್ದರು. ರಸ್ತೆಯಲ್ಲಿ ಕಂಡ ಆ ದೃಶ್ಯ ನನ್ನಲ್ಲಿ ಕ್ರೋಧವನ್ನುಂಟುಮಾಡಿದ್ದಿರಬಹುದು. ಈ ಸಮಾಜದಲ್ಲಿನ ಶ್ರೀಮಂತರು ಸುಖಸೌಲಭ್ಯ ಅನುಭವಿಸುತ್ತ ಬದುಕುತ್ತಿದ್ದಾರಲ್ಲ ಎಂದು ನಾನು ಯೋಚಿಸಿರಬಹುದು.

ಈಗಂತೂ ಭಿಕ್ಷುಕರು, ಕುರುಡರು, ಕುಂಟರು, ಯಾವ ಆಸರೆಯೂ ಇಲ್ಲದ ಅನಾಥರು ಪ್ರತಿ ಗಲ್ಲಿ–ಗುಂಡಿಗಳಲ್ಲಿ ಕಾಣಬರುತ್ತಿದ್ದಾರೆ. ನಾನು ಅವರನ್ನು ನೋಡು ತ್ತಿದ್ದೇನೆ, ನನ್ನಲ್ಲಿರುವ ಕಥೆಗಾರನಲ್ಲ. ಅವರಿಗೆ ಜನ್ಮಕೊಡುವ ಸಾಮಾಜಿಕ ವ್ಯವಸ್ಥೆ ಯನ್ನು ನಾನು ಖಂಡಿತ ಎಂದೂ ನೆನಪು ಮಾಡಿಕೊಳ್ಳುವುದಿಲ್ಲ. ಏಕೆಂದರೆ ನಗರದ ಬೀದಿಗಳ ಜನಜಂಗುಳಿಯ ಗುಂಪುಗಳನ್ನು ಸೀಳಿಕೊಂಡು ತಲುಪಬೇಕೆಂದಿರುವ ಸ್ಥಳಕ್ಕೆ ತಲುಪಬೇಕೆಂದಿರುವಾಗ ನನ್ನ ಮನಸ್ಸಿನಲ್ಲಿರುವುದು ಸಾವನ್ನು ತನ್ನ ಜತೆಯಲ್ಲಿ ಹೊತ್ತು ಓಡಾಡುವ ಬಸ್ಸುಗಳ ಕೆಳಗೆ ಸಿಕ್ಕಿ ಒಜ್ಜಿಯಾದೇನು, ಬೆವರಿನಿಂದ ತೊಯ್ದು

ಏದುಸಿರು ಬಿಡುತ್ತ ಮುಂದೆ ಮುಂದೆ ಸರಿಯಲು ಆತುರದಿಂದಿರುವ ಮಂದಿಯ ಕಾಲುಗಳ ಕೆಳಗೆ ಸಿಕ್ಕಿ ಅಪ್ಪಚ್ಚಿಯಾದೇನು, ಮೋರಿಗಳಲ್ಲಿ ಹರಿಯುವ ನೀರಿನಿಂದ ಅಭಿಷಿಕ್ತನಾದೇನು ಎಂಬ ಆತಂಕವೇ ಕಾರಣ. ಹೀಗಾಗಿ ಇಪ್ಪರಲ್ಲಿ ಯಾವುದಾದರೊಂದು ಕಥೆ ಪಾತ್ರವಾಗಲಾರದೇನು ? ಖಂಡಿತ ಆಗಬಲ್ಲದು. ಈಗಲೂ ಒಂದು ಕಥಾವಸ್ತು ನನ್ನ ಮನಸ್ಸಿನಲ್ಲಿದೆ. ಆ ಕಥಾ ಪಾತ್ರ ನಗರದ ವಿಭಿನ್ನ ಭಾಗಗಳಿಗೆ ಜೀವಂತ ವ್ಯಕ್ತಿ ಗಳನ್ನು ಹಂಚುತ್ತದೆ. ಸಂಜೆ ಅವರನ್ನೆಲ್ಲ ಒಗ್ಗೂಡಿಸಿ ಅವರು ದಿನವಿಡಿ ಮಾಡಿದ ದುಡಿಮೆಯನ್ನೂ ಕಸಿದುಕೊಳ್ಳುತ್ತದೆ ಹಾಗೂ ಅವರನ್ನು ಚಾಟಿ ಏಟಿನಿಂದ ನಿಯಂತ್ರಿಸುತ್ತದೆ. ಆದರೆ ಈಗ ಎಲ್ಲರೂ ಸಮಾಜದ ಬಗ್ಗೆ ಯೋಚಿಸುವುದನ್ನು ನಿಲ್ಲಿಸಿಬಿಟ್ಟಿದ್ದಾರೆ :

೧೯೪೭ ರಲ್ಲಿ ನಾನು ಮೊದಲಬಾರಿ ಕಲ್ಲಿಕೋಟೆ ನಗರಕ್ಕೆ ಬಂದೆ. ಆಗ ನಾನು ಆರನೆಯತರಗತಿಯ ವಿದ್ಯಾರ್ಥಿ. ತಂದೆಯ ಹಿಂದೆ ಹಿಂದೆ ಸುತ್ತುತ್ತ ನಗರವೆಂಬ ಆ ಮಹಾದ್ಭುತ ವಸ್ತುವನ್ನು ನೋಡಿ ನಾನು ದಂಗಾಗಿದ್ದೆ. ಈಗಾದರೊ ನಗರಗಳು ಯಾತನಾಮಯ ಅಸ್ತಿತ್ವದ ಕಷ್ಟ ಕೋಟಲೆಗಳನ್ನು ನೆನಪಿಸುವ ಕಹಿ ಸತ್ಯಗಳಾಗಿವೆ.

ಈ ನಗರದ ಭಾಗ ಈಗ ಜಗತ್ತಿನ ಅಥವಾ ಸಮಾಜದ ಭಾಗವಾಗಿದೆ. ಅದರ ಒಂದು ದಡದಲ್ಲಿ ನಿಂತಿರುವ ಲೇಖಕ ಇಲ್ಲಿ ತಾನೆಲ್ಲಿ ಅಪ್ಪಚ್ಚಿಯಾಗಿ ಬಿಡುವೆನೋ, ಹಾದಿಯ ಲದ್ದಿ ತನ್ನ ಮೇಲೆಲ್ಲಿ ಎಗರಿಬಿಡುವುದೋ, ತಾನೆಲ್ಲಿ ಅಸ್ತಿತ್ವಹೀನನಾಗಿ ಬಿಡುವೆನೋ ಹಾಗೂ ತನ್ನ ಗೂಡಿಗೆ ತಾನೂ ಸುರಕ್ಷಿತನಾಗಿ ಸೇರಬೇಕೆಂಬುದರ ಬಗೆಗೆ ಜಾಗರೂಕನಾಗಿರುತ್ತಾನೆ. ಲೇಖಕ ಸದಾ ದುಃಖಿತನಾಗಿ ಅಳುತ್ತ-ಬಿಕ್ಕಳಿಸುತ್ತ ಇರಬೇಕೇನು ? ನಗುವ ಹಕ್ಕು ಅವನಿಗಿಲ್ಲವೇನು ? ಖಂಡಿತ ನಗುವ ಹಕ್ಕು ಆತನಿಗಿದೆ. ಎಷ್ಟೋ ಜನ ನಕ್ಕೂನಗುತ್ತಾರೆ. ಸಾಲ್‌ವೆಲೋನ ನಗು ನಮ್ಮನ್ನು ಘಾಸಿಗೊಳಿಸು ತ್ತದೆ. ಗುಂತರ್‌ಗ್ರಾಸ್‌ನ ನಗು ನಮ್ಮ ನರನಾಡಿಗಳನ್ನು ಜುಂ ಅನ್ನುವಂತೆ ಮಾಡು ತ್ತದೆ. ಅಂತೆಯೇ ಎಷ್ಟೋ ಜನರು ನಗು ಎಂಬುದಿದೆ ಎಂಬುದನ್ನೇ ಮರೆತಿದ್ದಾರೆ.

ನಾನು ಹೇಳುವುದು ಇತ್ತು, ಆದ್ದರಿಂದ ನಾನು ಕತೆ ಬರೆಯಲಾರಂಭಿಸಿದೆ ಎಂದು ಎಷ್ಟೋ ಜನ ಹೇಳುವುದನ್ನು ನಾನು ಕೇಳಿದ್ದೇನೆ. ಆದರೆ ನನ್ನ ಮಟ್ಟಿಗೆ ಹೀಗಾಗಿಲ್ಲ. ಹಾರೂನ್ ಅಲ್ ರಶೀದ್‌ರ ಅರಮನೆಯಲ್ಲಿ ಕತೆಗಾರರು ನೇಮಕಗೊಳ್ಳು ತ್ತಿದ್ದರು. ರಾಜದರ್ಬಾರಿನಲ್ಲಿ ಕತೆಗಳನ್ನು ಹೇಳಿ ಅವರ ಮನಸ್ಸನ್ನು ಸಂತೋಷಪಡಿಸು ವುದು ಅವರ ಕೆಲಸವಾಗಿತ್ತು. ಆ ಖಲೀಫರು ಕೊನೆಗೊಳ್ಳುತ್ತಿದ್ದಂತೆ ಈ ಕತೆಗಾರರ ಸುವರ್ಣಯುಗವೂ ಸಂದುಹೋಯಿತು. ನಮ್ಮಲ್ಲಿ ಮನೋರಂಜಕ ಕತೆಗಳ ಭಂಡಾರ ವಿದ್ದು ಅವುಗಳನ್ನು ಜನರಿಗೆ ಕೇಳಿಸಬೇಕು ಎಂಬ ಉದ್ದೇಶದಿಂದ ಇಂದು ನಾವು ಕತೆಗಳನ್ನು ಬರೆಯುತ್ತಿಲ್ಲ ಹಾಗೂ ಕತೆಗಳನ್ನು ಬರೆಯುವುದು ಒಂದು ಲಾಭದಾಯಕ ದಂಧೆ ಎಂದು ಭಾವಿಸಿಯೂ ನಾವು ಕತೆಗಳನ್ನು ಬರೆಯುತ್ತಿಲ್ಲ. ಹಾಗೆ ನೋಡಿದರೆ ಮಲೆಯಾಳಂ ಲೇಖಕರಿಗೆ ಸಿಗುವ ಸಂಭಾವನೆಯೂ ನಗಣ್ಯವಾದುದೇ. ಲೈಬ್ರರಿ ಸೀಸನಲ್ ಲೇಖಕರು ಪ್ರತಿವರ್ಷ ಹೇಗಾದರೂ ಮಾಡಿ ನಾಲ್ಕಾರು ಪುಸ್ತಕಗಳನ್ನು ಪ್ರಕಟಿಸಿದ್ದಾದರೆ ಮಾತ್ರ ಇಲ್ಲಿನ ಲೇಖಕ ಬದುಕಬಲ್ಲ. ಲೇಖಕ ಹುದ್ದೆಗೆ ಯಾವ

ಗ್ಲಾಮರ್ ಸಹ ಇಲ್ಲ. ಹಾಗೆ ನೋಡಿದರೆ ನಗರದ ಅತಿ ದೊಡ್ಡ ಕಾದಂಬರಿಕಾರನಿಗಿಂತ ಇಲ್ಲಿನ ಯಾವನೋ ಒಬ್ಬ ಉದ್ಯಮಿ ಅಥವಾ ಫುಟ್‌ಬಾಲ್ ಆಟಗಾರನನ್ನು ಜನ ಹೆಚ್ಚು ಅರಿತಿರುತ್ತಾರೆ.

ಆದರೆ ಲೇಖಕ ತನ್ನನ್ನು ತಾನು ಪ್ರಶ್ನಿಸಿಕೊಂಡಾಗ ಇವೆಲ್ಲ ಅತ್ಯಾವಶ್ಯಕವೇನಲ್ಲ ಎಂದೇ ಅವನಿಗನ್ನಿಸುತ್ತದೆ. ಬದುಕಿನ ಗಲಾಟೆಗಳಿಂದ ದೂರವಾಗಿ ಯಾವುದೋ ಒಂದು ನದಿ ದಡದಲ್ಲಿ ಗುಡಿಸಲು ಕಟ್ಟಿಕೊಂಡು ಅವನು ವಾಸಿಸುತ್ತಿದ್ದಾನೆ. ಗುಂಪಿನಲ್ಲಿ ಅವನು ಒಂಟಿಯಾಗಿದ್ದಾನೆ. ತನ್ನ ಕಿಟಕಿಯಿಂದ ಹೊರಗೆ ನೋಡಿದರೆ ಅವನಿಗೆ ಯುಗದ ಅನಂತಪಥದಲ್ಲಿ ಒಂದು ಮಾರ್ಗ ದೀಪದಿಂದ ಇನ್ನೊಂದು ಮಾರ್ಗ ದೀಪದವರೆಗಿನ ಒಾದು ಕಾಲು ಹಾದಿ ಕಂಡುಬರುತ್ತದೆ. ಅದೆಷ್ಟೋ ಯುಗಗಳಿಂದ ಅದೆಷ್ಟೋ ಸಹಸ್ರಾರು ದೀರ್ಘರಾತ್ರಿಗಳಲ್ಲಿ ಅವನು ಆ ಕಡೆ ಕಿವಿಗೊಟ್ಟು ಮಲಗಿರುತ್ತಾನೆ. ಮಲಗಿ ಆ ಕಡೆಯಿಂದ ಹಾದುಹೋಗುವ ಪುರುಷರ, ಸ್ತ್ರೀಯರ ಧ್ವನಿಗಳನ್ನು, ನಗುವನ್ನು ಮತ್ತು ನಿಟ್ಟುಸಿರನ್ನು ಕೇಳಿಕೊಳ್ಳುತ್ತಿರುತ್ತಾನೆ. ಅವರ ಕಾಲು ಸಪ್ಪಳಗಳನ್ನು ನೋವು –ವೇದನೆಯನ್ನು ಅವರು ಬಿಕ್ಕಳಿಸಿ ಅಳುವುದನ್ನು ಅವನು ತನ್ನ ಹೃದಯ ಬಟ್ಟಲು ಗಳಲ್ಲಿ ಗ್ರಹಿಸಿಟ್ಟುಕೊಳ್ಳುತ್ತಾನೆ.

ಮೊದಲು ಕತೆ ಬರೆಯಲಾರಂಭಿಸಿದಾಗ, ಜನಗಳು ಇಷ್ಟಪಡುವ, ಬಯಸುವ ಕತೆಗಳು ನನ್ನ ಮೂಸೆಯಲ್ಲಿವೆಯೋ ಇಲ್ಲವೊ, ಎಂಬುದರ ಬಗ್ಗೆ ನಾನು ಯೋಚಿಸಿರಲಿಲ್ಲ. ನನ್ನ ಮನಸ್ಸು ಸದಾ ಅಶಾಂತವಾಗಿರುತ್ತಿತ್ತು. ಆ ಅಶಾಂತತೆಯನ್ನು ಅದೆಷ್ಟೋ ವರ್ಷ ಗಳಿಂದ ಹೊರುತ್ತಲೇ ಬಂದಿದ್ದೇನೆ. ಅದಕ್ಕೊಂದು ಮೂರ್ತ ರೂಪ ಕೊಡುವುದು ಸಾಧ್ಯವೆ ಎಂಬುದರ ಬಗ್ಗೆ ವಿಶ್ಲೇಷಿಸುವುದು ಅಥವಾ ಅದನ್ನು ವ್ಯಾಖ್ಯಾನಿಸುವುದು ಕಷ್ಟ. ಬೂದಿಯಿಂದಾವೃತ್ತವಾದ ಕೆಂಡದಂತೆ ಒಳಗೊಳಗೇ ಉರಿಯುತ್ತಿರುವ ಈ ತೀವ್ರ ಅಶಾಂತತೆಯ ಮಧ್ಯೆ ಬರೆಯುವ ಸಿದ್ಧತೆ ನಡೆಸುತ್ತೇನೆ. ಬದುಕು ಈ ಅಶಾಂತತೆಯಿಂದ ಮುಖ ತಿರುಗಿಸಿಕೊಂಡು ಹೋಗುವ ಪ್ರಯತ್ನ. ಕತೆ ಬರೆಯುವಾಗ ಈ ಅಶಾಂತತೆ ತನ್ನ ಉತ್ತುಂಗ ಸ್ಥಿತಿಗೆ ತಲುಪುತ್ತದೆ. ಕತೆ ಕೊನೆಗೊಂಡಾಗ ಆಹ್ಲಾದದ ಅನುಭವವಾಗು ತ್ತದೆ; ಆಗ ಪ್ರಪಂಚ ಅಷ್ಟು ಕೆಟ್ಟದ್ದೇನಲ್ಲ ಅಂಪನ್ನಿಸುತ್ತದೆ. ಕತೆ ಬರೆದಾದನಂತರ, ಲಭ್ಯವಾದುದಕ್ಕೆ ಏಕೆ ಖುಷಿಯನ್ನಾಚರಿಸಬಾರದು ಎಂದು ಒಮ್ಮೊಮ್ಮೆ ಅನ್ನಿಸುವುದು ಉಂಟು. ಆ ದಿನ ಸಂಜೆ ಗಾಳಿಯಲ್ಲಿ ಹಾಗೂ ಹತ್ತಿಯಂತೆ ಅಲ್ಲಿ–ಇಲ್ಲಿ ಸುತ್ತಬಹುದು, ಸ್ನೇಹಿತರೊಡನೆ ಸೇರಿ ಚೆನ್ನಾಗಿ ನಗಬಹುದು. ಯಾವುದಾದರೂ ಪ್ರಸಂಗವನ್ನು ತೆಗೆದು ಕೊಂಡು ಗಂಟೆಗಟ್ಟಲೆ ಮಾತನಾಡಬಹುದು.

ಚಿಕ್ಕಂದಿನಿಂದಲೂ ನಾನು ಒಬ್ಬೊಂಟಿಯೇ, ನಾಲ್ವರು ಅಣ್ಣತಮ್ಮಂದಿರಲ್ಲಿ ನಾನು ಎಲ್ಲರಿಗಿಂತ ಕಿರಿಯವ, ತಂದೆ ದೂರದ ಶ್ರೀಲಂಕಾದಲ್ಲಿ ನೌಕರಿ ಮಾಡುತ್ತಿದ್ದರು. ತಾಯಿ ನಮ್ಮ ದೊಡ್ಡ ಕುಟುಂಬದ ಭಾರವನ್ನು ತನ್ನ ಹೆಗಲಮೇಲೆತ್ತಿಕೊಂಡು ನಗುವನ್ನು, ಸಂತೋಷವನ್ನು ಮರೆತೇ ಬಿಟ್ಟಿದ್ದರು. ಆಡುತ್ತ, ನಗುತ್ತ ಕುಣಿದಾಡುವ ಯಾವುದಾದ ರೊಂದು ಮನೆಗೆ ಹೋಗಿ ನಾನು ಹಿಂತಿರುಗಿ ಬಂದಾಗ ಮನಸ್ಸು ತುಂಬಾ ಭಾರವಾಗಿರು ತ್ತಿತ್ತು. ನನ್ನ ಮನೆಯ ವಾತಾವರಣ ಯಾತನಾಮಯವಾಗಿತ್ತು. ಖಾಲಿ ಉಗ್ರಾಣ;

ಸಾಲ ಪತ್ರಗಳು ಸಾಹುಕಾರರು ಇವೆಲ್ಲದರ ಮಧ್ಯೆ ನಾನು. ನನ್ನಂತ ಚಿಕ್ಕಹುಡುಗನ ಕಣ್ಣಿನಿಂದಲೂ ಮನೆಯ ಪರಿಸ್ಥಿತಿ ಮುಚ್ಚಿಟ್ಟಿದ್ದೇನಾಗಿರಲಿಲ್ಲ.

ಜೀವನದಲ್ಲಿ ಎಂದೂ ನಾನೂ ಹುಟ್ಟಿದ ಹಬ್ಬವನ್ನು ಆಚರಿಸಿಲ್ಲ. ಏಕೆಂದರೆ ನಾನು ಕರ್ಕಾಟಕ ತಿಂಗಳಲ್ಲಿ ಹುಟ್ಟಿದ್ದೆ (ಕೇರಳಿಯರ ಪ್ರಕಾರ ಈ ತಿಂಗಳು ತುಂಬ ಅಶುಭದಾಯಕವಾದದ್ದು. ಹೀಗಾಗಿ ಖಾದ್ಯಾನ್ನಗಳ ವಿಚಾರದಲ್ಲಿ ಕೇರಳ ಸ್ವಾವಲಂಬಿಯಲ್ಲ. ಇಲ್ಲಿನ ವ್ಯವಸಾಯದಿಂದ ಎಂಟು ಒಂಬತ್ತು ತಿಂಗಳ ಕಾಲವನ್ನು ಬಹಳ ಕಷ್ಟದಿಂದ ಕಳೆಯಬಹುದು, ಅಷ್ಟೆ). ಸಮಾರಂಭಗಳ ಬಗೆಗೆ ಆಕರ್ಷಣೆ ಇದ್ದಿರಬಹುದಾದ ವಯಸ್ಸಿನಲ್ಲಿ ಮನೆಯಲ್ಲಿ ಔಷಧಿಗೆ ಬೇಕೆಂದರೆ ಅಕ್ಕಿಕಾಳು ಇರುತ್ತಿರಲಿಲ್ಲ. ಕುಯಿಲಿನ ಮಹಾಸುದಿನ ಬರುವುದನ್ನೇ ಕಾಯುತ್ತ ಒಂದೊಂದು ದಿನ ಕಳೆಯುವುದೂ ಅತ್ಯಂತ ದುಸ್ತರವಾಗಿತ್ತು. ನನ್ನ ಒಂದು ಹುಟ್ಟಿದ ಹಬ್ಬ ಈಗಲೂ ನನ್ನ ನೆನಪಿನಲ್ಲಿ ಹಸಿರಾಗಿ ಉಳಿದಿದೆ. ಮೂರು ರೂಪಾಯಿಕೊಟ್ಟು ಯಾರಿಂದಲೊ ಭತ್ತ ತೆಗೆದುಕೊಂಡು ಬಂದು, ಕುಟ್ಟಿ ಅನ್ನ ಮಾಡಿದ್ದಳು. ಅಮ್ಮ ಅನ್ನ ಸಿದ್ಧಪಡಿಸುವ ಹೊತ್ತಿಗೆ ಮಧ್ಯಾಹ್ನ ೩ ಗಂಟೆಯಾಗಿತ್ತು. ಅಷ್ಟು ಹೊತ್ತಿಗೆ ನನ್ನ ಹಸಿವು ತನಗೆ ತಾನೆ ಹಿಂಗಿ ಹೋಗಿತ್ತು. ದೊಡ್ಡವನಾದ ಮೇಲೆ ಬಹಳ ವೈಭವದಿಂದಲೇ ನಾನು ಹುಟ್ಟಿದ ಹಬ್ಬವನ್ನು ಆಚರಿಸಿಕೊಳ್ಳಬಹುದಿತ್ತು. ಆದರೆ ಈಗ ಆ ಬಗೆಗಿನ ಎಲ್ಲ ಆಸೆ ಆಕಾಂಕ್ಷೆಗಳು ತಣ್ಣಗಾಗಿವೆ.

ಆ ದಿನಗಳಲ್ಲಿ ಸಾಹಿತ್ಯ–ಸೃಷ್ಟಿ ಎಂದರೆ ಬದುಕಿನಿಂದ ಪಲಾಯನವೆಂದು ಭಾವಿಸಿದ್ದೆ. ರಾತ್ರಿ ಹೊತ್ತು ಮಂಕು ದೀಪದ ಮುಂದೆ ಕುಳಿತು ಏನಾದರೂ ಬರೆಯುತ್ತಿರುವಾಗ, ಹಗಲು ಹೊತ್ತಿನಲ್ಲಿ ಬೆಟ್ಟಗಳ ಇಳಿಜಾರುಗಳಲ್ಲಿ ಹಾಗೂ ಮೈದಾನದಲ್ಲಿ ಸುತ್ತುತ್ತ ಮನಸ್ಸಿನಲ್ಲೇ ಕತೆ ಕವಿತೆಗಳನ್ನು ರಚಿಸಿಕೊಳ್ಳುತ್ತಿರುವಾಗ ಬದುಕಿನಿಂದ ದೂರ ಹೋಗುತ್ತಿರುವುದರ ಬಗ್ಗೆ ಒಂದು ಬಗೆಯ ತೃಪ್ತಿ ಸಿಗುತ್ತಿತ್ತು. ನಾನು ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೂ ಸಾಹಿತ್ಯ ಇಂಥಾದ್ದೇ ಒಂದು ರಹಸ್ಯಲೋಕವಾಗಿತ್ತು. ಈ ಗುಹೆಯಲ್ಲಿ ಯಾವಾಗೆಂದರೆ ಆವಾಗ ಹೋಗಿ ಬಚ್ಚಿಟ್ಟುಕೊಳ್ಳಬಹುದೇನೋ ಎಂದಿನ್ನಿಸುತ್ತಿತ್ತು.

ಕತೆಗಳನ್ನು, ಕವಿತೆಗಳನ್ನು ಪತ್ರಿಕೆಗಳಿಗೆ ಕಳಿಸುತ್ತಿದ್ದೆ. ಅವುಗಳಲ್ಲಿ ಎಷ್ಟೋ ವಾಪಸ್ಸು ಬರುತ್ತಿದ್ದವು. ವಾಪಸ್ಸು ಬಾರದಿದ್ದ ರಚನೆಗಳನ್ನು ಸಂಪಾದಕರು ಪ್ರಕಟಣೆಗೆಂದು ತಮ್ಮಲ್ಲೇ ಇಟ್ಟುಕೊಂಡಿರಬಹುದೆಂದು ಭಾವಿಸಿ ಬುಕ್–ಸ್ಟಾಲ್‌ಗಳ ಬಳಿ ಹೋಗಿ ಪತ್ರಿಕೆಗಳ ಪುಟಗಳನ್ನು ತಿರುವಿ ಹಾಕುತ್ತಿದ್ದೆ. ಎಷ್ಟೋ ವಾರಗಳು ಕಳೆದರೂ ನನ್ನ ಬರಹಗಳು ಮಾತ್ರ ಎಲ್ಲೂ ಗೋಚರಿಸುತ್ತಿರಲಿಲ್ಲ.

ರಜೆ ದಿನಗಳಲ್ಲಿ ನನ್ನ ಕಷ್ಟ ಇನ್ನೂ ಹೆಚ್ಚಾಗುತ್ತಿತ್ತು. ಮೂರು ಮೈಲಿಗಳ ದೂರದಲ್ಲಿದ್ದ ಅಂಚೆ ಕಛೇರಿಗೆ ದಿನವೂ ಹೋಗಬೇಕಾಗುತ್ತಿತ್ತು—ವಾಪಸ್ ಆಗುತ್ತಿದ್ದ ಬರಹಗಳು ಬೇರೆಯವರ ಕೈಗೆ ಸಿಗದಿದ್ದಂತೆ ನೋಡಿಕೊಳ್ಳಲು. ಹೀಗೆ ನಿತ್ಯವೂ ಅಂಚೆ ಕಛೇರಿಗೆ ಹೋಗುವುದು, ಬರಿ ವಾಪಸ್ ಬರುವುದು—ಇದು ನನಗೆ ನಾಚಿಕೆ ಎನ್ನಿಸತೊಡಗಿತು. ಹೀಗಾಗಿ ಉಚಿತವಾಗಿ ಪುಸ್ತಕ ಸೂಚಿಯನ್ನು ಕಳುಹಿಸುತ್ತಿದ್ದ ಪುಸ್ತಕ ಪ್ರಕಾಶಕರಿಗೆ ಕಾರ್ಡ್ ಬರೆಯುತ್ತಿದ್ದೆ. ಮೊದಮೊದಲು ಪ್ರತಿ ಭಾನುವಾರ ಹನ್ನೆರಡು ಮೈಲಿ ದೂರ ನಡೆದು ಹೋಗಿ ಓದಲು ಪುಸ್ತಕಗಳನ್ನು ಕೊಂಡು ತರುತ್ತಿದ್ದೆ.

ಯಾವಾಗಲಾದರೂ ಅಲ್ಲೊಂದು ಇಲ್ಲೊಂದು ಬರಹ ಪ್ರಕಟವಾದರೂ ಯಾವುದೇ ಸಂಭಾವನೆ ಇಲ್ಲ. ಆ ಸಂಚಿಕೆಯ ಒಂದು ಪ್ರತಿಯೂ ಬರುತ್ತಿರಲಿಲ್ಲ. ಆದರೂ ಮುದ್ರಿತ ಅಕ್ಷರಗಳಲ್ಲಿ ನನ್ನ ಬರಹಗಳನ್ನು ಕಂಡಾಗ ಒಂದು ಬಗೆಯ ಪ್ರೇರಣೆ ಪಡೆದುಕೊಳ್ಳು ತ್ತಿದ್ದೆ. ಆದರೆ ಮನೆಯ ಮಂದಿಗೆ ನನ್ನ ಬರವಣಿಗೆಯ ಬಗೆಗೆ ಯಾವುದೇ ಆಸಕ್ತಿ ಇರಲಿಲ್ಲ.

ಬಿ.ಎಸ್.ಸಿ.ಪಾಸ್ ಮಾಡಿ ನಿರುದ್ಯೋಗಿಯಾಗಿ ಖಾಲಿ ಜೇಬಿನಲ್ಲಿ ಮನೆಯಿಂದ ಹೊರ ಬಿದ್ದೆ. ಒಂದು ದಿನ ಮನೆಯವರೆಲ್ಲರ ಮುಂದೆ ತಂದೆ ಏನೆಂದು ಹೇಳಿದರು ಗೊತ್ತೆ 'ಇವನು ನನ್ನ ಚಿಕ್ಕಮಗ, ಶ್ರದ್ಧೆ–ಭಕ್ತಿ ಏನೊಂದೂ ಇಲ್ಲ. ಯಾವುದೇ ಕೆಲಸಕ್ಕೂ ಇಲ್ಲ. ಒಂದು ಕೆಲಸ ಇವನು ಮಾಡುತ್ತಾನೆ ಹಾದಿ ಬೀದಿಯಲ್ಲಿ ತಿರುಗಾಡುವವರ ತಲೆ–ಬುಡ ವಿಲ್ಲದ ಕತೆಗಳನ್ನು ಬರೆಯುವುದು, ಬಿಳಿಕಾಗದವನ್ನು ಕಪ್ಪು ಮಾಡುವುದು. ಹೊರಗಿ ನಿಂದ ಬಂದ ಕೆಲವು ನೆಂಟರು ಸಹ ಅಲ್ಲಿದ್ದರು. ತಟ್ಟೆಗೆ ಬಡಿಸಿದ್ದ ಊಟವನ್ನು ಅರ್ಧ ದಲ್ಲೇ ಬಿಟ್ಟು ಎದ್ದಿದ್ದೆ ಅಂದು. ಮಾರನೆ ದಿನ ಅರ್ಧಂಬರ್ಧ ಬಣ್ಣ ಎದ್ದಿದ್ದ ಟ್ರಂಕ್ ಅನ್ನು ತೆಗೆದುಕೊಂಡು ಬಸ್‌ಸ್ಟ್ಯಾಂಡ್ ಕಡೆ ಹೊರಟಿದ್ದೆ. ಬಸ್‌ಸ್ಟ್ಯಾಂಡ್‌ನಲ್ಲಿ ನನಗೆ ಪರಿಚಿತನಾಗಿದ್ದ ಕೂಲಿಯೊಬ್ಬನಿಂದ ಎರಡು ರೂಪಾಯಿ ಸಾಲ ತೆಗೆದುಕೊಂಡು ನನ್ನ ಯಾತ್ರೆಯನ್ನಾರಂಭಿಸಿದ್ದೆ.

ಯಾವುದೇ ಖಾಯಂ ನೌಕರಿ ಇಲ್ಲ. ಯಾವುದೋ ಒಂದು ಟ್ಯುಟೋರಿಯಲ್ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದೆ, ಮೂರು ದಿನ ಗ್ರಾಮ ಸೇವಕನ ಕೆಲಸವನ್ನೂ ನಿರ್ವಹಿ ಸಿದೆ. ಕೆಲವು ತಿಂಗಳುಗಳಿಗಷ್ಟೇ ಸೀಮಿತವಾಗಿದ್ದ ಈ ಕೆಲಸಗಳನ್ನು ಮಾಡುತ್ತಲೇ ಬರವಣಿಗೆಯನ್ನೂ ಮುಂದುವರಿಸಿದೆ. ಇದರಿಂದ ಸ್ವಲ್ಪ ಸಮಯಕ್ಕಾದರೂ ಸರಿ, ಬದುಕಿನ ಕಹಿಯಿಂದ ಬಿಡುಗಡೆ ಪಡೆಯುತ್ತಿದ್ದೆ.

ಇಂದು ಪುಸ್ತಕಗಳಿಂದ ಹಣ ಬರುತ್ತಿದೆ. ನಾನು ಇಷ್ಟಪಟ್ಟಂಥ ಕೆಲಸ ಸಿಕ್ಕಿದೆ. ಆದರೂ ನಾನು ಸಂತೋಷದಿಂದ ಇದ್ದೀನೇನು? ಇಲ್ಲ, ನನ್ನ ಅಂತರ್ಯದಲ್ಲಿ ಸಾವಿರಾರು ಕಹಿಗಳಿವೆ. ಪ್ರಪಂಚದ ಕಹಿಗಳು, ನೋವುಗಳು ನನ್ನ ಮನಸ್ಸಿನಲ್ಲಿ ಹೆಪ್ಪುಗಟ್ಟಿವೆ. ನನ್ನ ಕೋಪತಾಪ, ವಿರೋಧದಿಂದ ಏನೂ ಆಗುವುದಿಲ್ಲ ಎಂಬುದು ನನಗೆ ಗೊತ್ತಿದೆ. ನನ್ನ ಪೀಳಿಗೆಯವರಿಗೂ ಇದು ಗೊತ್ತಿದೆ. ಅಲ್ಸರ್‌ನಿಂದ, ಲಿವರ್ ಡಿಸೀಸ್‌ನಿಂದ ಕೆಲವು ಜನ ಆತ್ಮಾಹುತಿ ಮಾಡಿಕೊಳ್ಳುತ್ತಾರೆ. ಬದುಕಬೇಕೆಂಬ ಆಸೆ ಹೊತ್ತಿರುವ ನಾನು ಆತ್ಮಹತ್ಯೆ ಮಾಡಿಕೊಳ್ಳಲಾರೆ. ನನ್ನ ಕಹಿ ಮತ್ತು ಅಲ್ಸರ್ ಅನ್ನು ಹೊತ್ತು ಸಾಹಿತ್ಯವೆಂಬ ನನ್ನ ಚಿಕ್ಕ ಪ್ರಪಂಚದಲ್ಲಿ ನಾನು ಕಾಲದ ಕೈದಿಯಂತೆ ಬದುಕುತ್ತಿದ್ದೇನೆ.

ಸಂಕ್ಷೇಪವಾಗಿ ಹೇಳುವುದಾದರೆ ನನ್ನ ಅಂತರ್ಲೋಕವನ್ನು ರೂಪಿಸಿಕೊಳ್ಳುವ ಕೆಲಸವನ್ನು ನನ್ನ ಕಥಾಲೇಖನದಿಂದ ಮಾಡುತ್ತ ಬಂದಿದ್ದೇನೆ. ಅವಿತುಕೊಳ್ಳಲು, ಅಳಲು. ನಗಲು ಹಾಗೂ ಕನಸು ಕಾಣಲು ಈ ಬಗ್ಗೆಯ ಒಂದು ಪುಟ್ಟ ಲೋಕದ ತೀವ್ರ ಅಗತ್ಯವಿದೆ. ಬದುಕಿನಲ್ಲಿ ಆಘಾತಗಳಾದಾಗಲೆಲ್ಲ ಅವನ್ನ ಸಹಿಸಿಕೊಳ್ಳುವ ಶಕ್ತಿ ಇಲ್ಲದಂತಾ ದಾಗ ಇಂಥ ಒಂದು ಗುಹೆಯ ಅವಶ್ಯಕತೆ ಬೀಳುತ್ತದೆ. ಇಲ್ಲಿ ನಾವು ಸುಲಭವಾಗಿ ತೂರಿ ಕೊಳ್ಳಬಹುದು. ಫುಟ್‌ಪಾತ್ ಮೇಲೆ, ಇಲ್ಲ, ರೈಲ್ವೇಸ್ಟೇಷನ್‌ನಲ್ಲಿ ಜನ ಅಟೋಗ್ರಾಫ್

ಗಾಗಿ ಲೇಖಕನ ಸುತ್ತಲೂ ಘೇರಾಯಿಸುವುದಿಲ್ಲ. ಲೇಖಕ ಇದನ್ನೆಲ್ಲ ಇಷ್ಟ ಪಡುವುದಿ
ಕೂಡ. ಅವನು ತನಗಾಗಿ ಬರೆದುಕೊಳ್ಳುತ್ತಾನೆ. ತನ್ನ ಚಿಕ್ಕಪ್ರಪಂಚವನ್ನು ಸಮೃದ
ಗೊಳಿಸಿಕೊಳ್ಳಲು. ಬದುಕಿನ ದಾಸ್ಯತೆಯಿಂದ ಮುಕ್ತನಾಗಿ ತಾನು ಕಟ್ಟಿದ ರಾಜ್ಯ
ಸ್ವಾಮಿಯಾಗಿರಲು ಅವನು ಬರೆಯುತ್ತಾನೆ.

ಇತ್ತೀಚೆಗೆ ಒಂದಷ್ಟು ಜನ ಪಂಡಿತರು ಇಂದಿನ ಪರಿಸ್ಥಿತಿಯಲ್ಲಿ ಲೇಖಕರ ಕರ್ತವ್
ವೇನು ಎಂಬುದರ ಬಗೆಗೆ ಚರ್ಚಿಸಿದ್ದರು. ಸಮಾಜದ ಬಗೆಗೆ ಲೇಖಕರ ಜವಾಬ್ದಾ
ಯನ್ನು ಕುರಿತು ಗಹನವಾದ ವಿಶ್ಲೇಷಣೆ ನಡೆಸಲಾಗಿತ್ತು. ನಾಲ್ಕು ಔನ್ಸ್ ಅಕ್ಕಿ
ನೌಕರಶಾಹಿ, ಕೆಂಪುಪಟ್ಟಿ ಇವೆಲ್ಲ ಇಂದಿನ ಸಮಾಜದ ಸಮಸ್ಯೆಗಳು. ಸಮಾಜದಲ್ಲಿ
ಬದುಕುತ್ತಿರುವ ಲೇಖಕ ಎಂಬ ಮನುಷ್ಯನೊಂದಿಗೆ ಮೇಲೆ ಹೇಳಿದ ಯಾವ ಅಂಶಗಳ
ಸಂಬಂಧಗಳಿಲ್ಲವೇನು ? ಖಂಡಿತ ಇದೆ. ಹಸಿದ ಮಕ್ಕಳನ್ನು ನೆನಪು ಮಾಡಿಕೊಂಡು ಹಣ
ಸಾಲ ತೆಗೆದುಕೊಂಡು ಕಳ್ಳಸಂತೆಯಲ್ಲಿ ಅವರನ್ನು ಸಹ ಅಕ್ಕಿಯನ್ನು ಹುಡುಕಿಕೊಂಡ
ಪರದಾಡುತ್ತಿದ್ದಾನೆ. ಅವನೂ ಸಹ ಸರ್ಕಾರಿ ಕಛೇರಿಗಳಲ್ಲಿರುವ ದೇವತೆಗಳಿಂದ ನಿಂ
ಮತ್ತು ಕಿರುಕುಳಗಳಿಗೆ ಗುರಿಯಾಗುತ್ತಿದ್ದಾನೆ. ಈ ಎಲ್ಲದರಿಂದ ರೂಪುಗೊಂಡ ಅವ
ಮನಸ್ಸು ಒಂದಲ್ಲ ಒಂದು ದಿನ ಅವನ್ನೆಲ್ಲ ತನ್ನ ಬರವಣಿಗೆಯಲ್ಲಿ ತಂದರೂ ತರಬಹುದು
ಲೇಖಕನಾಗಿರುವುದೇ ಲೇಖಕನ ಕರ್ತವ್ಯ ಎಂಬುದು ನನ್ನ ಅನಿಸಿಕೆ. ಇದೇ ಅವನ
ಸಮಾಜ ಹಾಗೂ ರಾಷ್ಟ್ರಕ್ಕೆ ಮಾಡಬಹುದಾದ ಎಲ್ಲಕ್ಕಿಂತ ಮಿಗಿಲಾದ ಸೇವೆ.

ನನಗನ್ನಿಸುವಂತೆ ತನ್ನ ಬಗ್ಗೆ ಮಾಡಲಾಗುವ ಯಾವುದೇ ವಿಮರ್ಶೆ ಅಥವ
ವಿವಾದಗಳಿಗ ಉತ್ತರ ಕೊಡುವುದರಲ್ಲಿ ಲೇಖಕ ತನ್ನ ಸಮಯವನ್ನೂ ಹಾಳುಮಾ
ಕೊಳ್ಳಬಾರದು. ಆದರೆ ನಮ್ಮಲ್ಲಿ ಈ ರೀತಿ ಇರುವುದು ಅಸಂಭವವೆಂದು ತೋರುತ್ತದೆ
ಆದರೂ ಸಾಹಿತ್ಯಕ ಸಿದ್ಧಾಂತಗಳಿಗೆ ಸಂಬಂಧಿಸಿದ ಚರ್ಚೆಗಳಲ್ಲಿ ಭಾಗವಹಿಸದಿರುವುದೆ
ಒಳ್ಳೆಯದು ಎಂದನ್ನಿಸುತ್ತಿದೆ. ಸೃಜನಶೀಲ ಲೇಖಕ ತನ್ನ ಹೃದಯದಲ್ಲಿನ ಜೆಂಕಿಯನ
ಪ್ರಜ್ವಲಿಸಿಟ್ಟುಕೊಂಡಿರಬೇಕು. ಚರ್ಚೆ ಹರಟೆಗಳಿಂದ ಈ ಬೆಂಕಿಯ ಕಾವು ಕಮ
ಯಾಗುತ್ತದೆ.

ಸಮಾಜದ ಬಗೆಗೆ ಲೇಖಕನ ಜವಾಬ್ದಾರಿ ಪ್ರತ್ಯಕ್ಷವಾದುದಲ್ಲ. ಪರೋಕ್ಷವಾದದ
ಎಂದು ನಾನು ನಂಬಿದ್ದೇನೆ. ಏಕೆಂದರೆ ಸಮಾಜದಲ್ಲಿ ಲೇಖಕನ ಅಸ್ತಿತ್ವವೇನು ಎಂಬು
ದನ್ನು ನಮ್ಮ ಸಮಾಜ ತಿಳಿದುಕೊಂಡೇ ಇಲ್ಲ. ಚಿಕ್ಕ ತರಗತಿಗಳಲ್ಲಿ ಪ್ರಬಂಧಗಳನ
ಬರೆಸುವಾಗ ಮಾತ್ರ ಹಳೆಯ ಸವೆದ ಖಡ್ಗಕ್ಕಿಂತ ಲೇಖನಿ ಶಕ್ತಿಶಾಲಿಯಾದುದು
ಫ್ರಾನ್ಸ್ ಕ್ರಾಂತಿಗೆ ಮೂಲ ಕಾರಣ ಪುರುಷರು, ವಾಲ್ಟೇರ್ ಮತ್ತು ರೂಸೋ ಇತ್ಯಾ
ವಾಕ್ಯಲಗಳನ್ನು ಬರೆಸುತ್ತೇವೆ. ಆದರೆ ಇಂದು ಸತ್ಯಸ್ಥಿತಿ ಏನು ಎಂಬುವರ ಬಗ್ಗೆ ತೀವ್
ಪರಿಶೋಧನೆ ನಡೆಸಬೇಕಾಗಿದೆ. ಸಮಾಜ ಹಾಗೂ ರಾಷ್ಟ್ರವನ್ನು ನಿಯಂತ್ರಿಸು
ಜವಾಬ್ದಾರಿಯನ್ನೂ ಹೊತ್ತಿರುವ ಶಾಸಕವರ್ಗ ಹಾಗೂ ನಾಯಕರು ಸಾಹಿತ್ಯವೆಂ
ಚಿಕ್ಕಲೋಕದ ಗಡಿಗಳಿಂದ ಎಷ್ಟು ದೂರ ನಿಂತಿದ್ದಾರೆ ಅಂದರೆ ಸಾಹಿತ್ಯ ಅವರ ಅಂತರಾ
ದಲ್ಲಿ ಯಾವುದೇ ಬಗೆಯ ಆಂದೋಲನವನ್ನು ಉಂಟು ಮಾಡುತ್ತಿಲ್ಲ. ಸಮಾಜದ ಬಹ
ಕಡಿಮೆ ಜನ ಈ ಚಿಕ್ಕ ಪ್ರಪಂಚದ ಚಟುವಟಿಕೆಗಳತ್ತ ಗಮನ ಹರಿಸುತ್ತಾರೆ.

ಚೀನಾ ಭಾರತದ ಮೇಲೆ ಆಕ್ರಮಣ ನಡೆಸಿದ್ದನ್ನು ಭಾರತದ ಓರ್ವ ನಾಗರೀಕನಾಗಿ ನಾನು ವಿರೋಧಿಸುತ್ತೇನೆ. ಆದರೆ ಆದರ ಬಗ್ಗೆ ಯಾವನೋ ಒಬ್ಬ ವೀರಸೈನಿಕನನ್ನು ನಾಯಕನನ್ನಾಗಿ ಮಾಡಿ ನನ್ನಿಂದ ಕಾದಂಬರಿ ಬರೆಯಲಾಗುವುದಿಲ್ಲ. ಏಕೆಂದರೆ ನನಗೆ ಅದು ಮೇಟೆರಿಯಲ್ ಆಗುವುದಿಲ್ಲ. ಯಾವುದು ನನ್ನನ್ನು ತೀವ್ರವಾಗಿ ಆಘಾತಗೊಳಿಸಿದೆಯೋ ಅದನ್ನು ಮಾತ್ರ ನಾನು ಕಥಾವಸ್ತುವನ್ನಾಗಿ ಸ್ವೀಕರಿಸಬಲ್ಲೆ. ಭಾರತ, ಚೀನಾ, ಭಾರತ–ಪಾಕಿಸ್ಥಾನ, ಪಂಚವಾರ್ಷಿಕ ಯೋಜನೆಗಳು, ಅಣುಬಾಂಬು—ಇವುಗಳಲ್ಲಿ ಯಾವುದೂ ಸಹ ನನ್ನಲ್ಲಿನ ಕಥೆಗಾರನ ಮೇಲೆ ಯಾವುದೇ ಬಗೆಯ ಪ್ರಭಾವ ಬೀರುವಲ್ಲಿ ಯಶಸ್ವಿಯಾಗಿಲ್ಲ.

ಮಾನವ ಮನಸ್ಸಿನ ಎಷ್ಟೋ ಪದರಗಳಲ್ಲಿ ಉಂಟಾಗುವ ಕ್ರಿಯೆ–ಪ್ರತಿಕ್ರಿಯೆಗಳಿಂದ ಲೇಖಕ ತನ್ನ ಸೃಷ್ಟಿ—ಕ್ರಿಯೆಯನ್ನು ಆರಂಭಿಸುತ್ತಾನೆ. ಕತೆಗಳಲ್ಲಿನ ಮನೋವಿಶ್ಲೇಷಣಾತ್ಮಾಕ ಇದ್ದಾಕ್ಷಣಕ್ಕೆ ಕತೆಗಾರನಲ್ಲಿ ಸಾಮಾಜಿಕ ಪ್ರಜ್ಞೆಯೇ ಇಲ್ಲ ಎಂದು ಭಾವಿಸುವುದು ಮೂರ್ಖತನವಾಗುತ್ತದೆ. ಆತ ವೈಯಕ್ತಿಕ ಅನುಭೂತಿಗಳನ್ನು ತನ್ನ ಕತೆಗಳಿಗೆ ಗ್ರಾಸವನ್ನಾಗಿ ಮಾಡಿಕೊಳ್ಳುತ್ತಾನೆ. ಹೀಗೆ ಗ್ರಾಸವಾದ ವ್ಯಕ್ತಿಗಳ ಅಸ್ತಿತ್ವ ಸಮಾಜದಲ್ಲಿದೆ. ಸಮಾಜ ಲೇಖಕನಿಂದ ಇದನ್ನು ಅಪೇಕ್ಷಿಸದಿದ್ದರೂ ವ್ಯಕ್ತಿಯ ಅಸ್ತಿತ್ವ ಸಮಾಜವೇ ಆಗಿರುವುದರಿಂದ, ಅದರಿಂದ ತಪ್ಪಿಸಿಕೊಳ್ಳುವ ಪ್ರಶ್ನೆಯೇ ಏಳುವುದಿಲ್ಲ.

ತಾನು ಬರೆಯುವ ಸಾಹಿತ್ಯದಿಂದ ಸಮಾಜ ಮತ್ತು ರಾಷ್ಟ್ರವನ್ನು ಸರಿಯಾದ ಹಾದಿಯಲ್ಲಿ ನಡೆಸಬಲ್ಲೆ ಎಂಬ ನಂಬಿಕೆಯಿಂದ ಇಂದು ನಮ್ಮ ಲೇಖಕರು ಬರೆಯುತ್ತಿದ್ದಾರೆ ಎಂಬುದರ ಬಗ್ಗೆ ನನಗೆ ದೊಡ್ಡ ಅನುಮಾನವಿದೆ. ಆದರೆ ಒಮ್ಮೊಮ್ಮೆ ತನ್ನ ಹಾಗೂ ತನ್ನ ನೆರೆಹೊರೆಯವರ, ಅಂತೆಯೇ ಸಮಾಜದಿಂದ ನಾನು ಅನುಭವಿಸಿದ ಸತ್ಯಗಳನ್ನು ಅಭಿವ್ಯಕ್ತಿಸುತ್ತಾನೆ. ಈ ಸತ್ಯಗಳು ಬದುಕಿನೊಡಲಿನಿಂದ ಆತನ ಅಂತರ್ಯದಲ್ಲಿ ಪ್ರವೇಶಿಸಿರುತ್ತವೆ. ಅವನ್ನು ಅಭಿವ್ಯಕ್ತಿಸಿರುವುದರಿಂದ ಎಂಥ ಪರಿಣಾಮವಾಗುತ್ತದೆ ಅಂದರೆ ಬದುಕಿನ ಅನೇಕ ತಿರುವುಗಳಲ್ಲಿ ಆತನ ಓದುಗರು ವೈವಿಧ್ಯತೆಗಳು ಹಾಗೂ ವಿರೋಧಗಳ ಸಂಪೂರ್ಣ ಅನುಭೂತಿಗಳನ್ನು ಪಡೆದಾಗ, ದುಃಖ ಕೇವಲ ತನಗಷ್ಟೇ ಅಲ್ಲ ಪಾಶವೀಯತೆ ಇರುವುದು ತನ್ನ ಮಟ್ಟಿಗಷ್ಟೆ: ಅಲ್ಲ ಎಂಬ ಅನುಭವವಾಗುತ್ತದೆ. ಇದರಿಂದ ಜೀವನದ ಸತ್ಯವನ್ನು ಅದರ ಎಲ್ಲ ರಂಗಗಳು ಹಾಗೂ ವಿಕೃತಿಗಳೊಂದಿಗೆ ಸ್ನೇಹ ಅಥವಾ ತಿರಸ್ಕಾರಗಳಿದ್ದಾಗ್ಯೂ ರಾಜಿ ಮಾಡಿಕೊಳ್ಳುವ ಪ್ರವೃತ್ತಿ ಮೂಡಲು ಸಹಾಯವಾಗುತ್ತದೆ. ವ್ಯಕ್ತಿಗಳ ಅನುಭೂತಿಗಳು ಆಧುನಿಕ ಯುಗದ ಕೊಡುಗೆಗಳಲ್ಲ. ಅದೆಷ್ಟೋ ಕಾಲದಿಂದ ಹರಿದು ಬರುತ್ತಿರುವ ಬದುಕಿನ ಪ್ರವಾಸದ ಒಂದು ಬಿಂದು ಮಾತ್ರ ಎಂಬುದು ಅವನಿಗೆ ಗೊತ್ತಾಗುತ್ತದೆ.

ಕೊನೆಯ ಘಟ್ಟದ ವಿಶ್ಲೇಷಣೆ ಮಾಡಿದಾಗ ನನಗನ್ನಿಸುತ್ತದೆ ನನ್ನ ಕತೆಗಳು ಬಗೆಗೆ ಏನೇ ಪ್ರತಿಕ್ರಿಯೆಗಳಿರಲಿ, ನಾನು ನನ್ನ ಮಾನಸಿಕ ಸ್ವಚ್ಛಂದಕ್ಕಾಗಿ, ಆದರ್ಶ ಮೂಲ ಅಸ್ತಿತ್ವಕ್ಕಾಗಿ ಬರೆಯುತ್ತೇನೆ. ನನಗೆ ಮತ್ತು ತಮಗೆಲ್ಲರಿಗೂ ಪರಿಚಿತನಾಗಿರುವ ಈ ಯುಗದ ಮನುಷ್ಯ ನನ್ನ ಹೆಚ್ಚುಚ್ಚು ತಿಳಿದುಕೊಳ್ಳಬೇಕೆಂಬ ಇಚ್ಛೆ ನನಗಿದೆ. ತನ್ನ ಕಾಲುಗಳ ಕೆಳಗೇ ಸಿಕ್ಕಿ ತಾನು ನುಚ್ಚುನೂರಾಗುತ್ತಿದ್ದೇನೆ ಎಂಬುದನ್ನು ತಿಳಿಯೂ ಆ

ಭೀರು, ಅಸಹಾಯಕ ಮನುಷ್ಯ ಬೇರೆಯವರ ಜೊತೆಗೂಡಿ ಕೆಲವು ಮೌಲ್ಯಗಳನ್ನು ತಾನು ಆರಾಧಿಸುತ್ತಾನೆ. ತಾನು ಮುಂದುವರಿಯಬೇಕೆಂಬ ಆಸೆಯಿಂದ ಅವನ್ನು ಮತ್ತೆ ಮತ್ತೆ ಕಾಲುಗಳಿಂದ ಒಸಕುತ್ತಾನೆ. ನಗುವಾಗ ಅವನು ಅಳುತ್ತಾನೆ. ಅಳುವಿನ ಸಮಯದಲ್ಲಿ ಒಳಗೊಳಗೇ ನಗುತ್ತಾನೆ. ಅವನಿಗೆ ಅನೇಕ ಮುಖವಾಡಗಳು ಅವನ ಒಳಗಿನ ಮುಚ್ಚಿದ ಕೋಣೆಗಳೊಳಗೆ ಹೋಗುವಾಗ ಈವರೆಗೆ ಹೊರಗೆ ಕಾಣಿಸಿಕೊಳ್ಳದಿದ್ದ ಅದು ಕಾಣಿಸಿಕೊಳ್ಳುತ್ತದೆ. ಅದರ ಬದುಕಿನ ಸಾರವನ್ನು ಅನಾವರಣಗೊಳಿಸುವ ಕ್ಷಣಗಳಲ್ಲಿ 'ನಾನು' ಸಹ ಬದುಕುತ್ತಿದ್ದೇನೆ ಎಂಬ ಅನುಭವವಾಗುತ್ತದೆ. ಇಂಥ ಅನುಭವವನ್ನು ನೀಡುವ ಕ್ಷಣವನ್ನು ತಾನೂ ಬದುಕಬೇಕೆಂದು ಪ್ರತಿಯೊಬ್ಬನೂ ಬಯಸುತ್ತಾನೆ. ಮರುಭೂಮಿಯ ಮಧ್ಯದ ಮರೀಚಿಕೆಯನ್ನು ರಾಜ, ಮಂತ್ರಿಯಿಂದ ಹಿಡಿದು ಗುಮಾಸ್ತ, ಉದ್ಯಮಪತಿ ಹೀಗೆ ಎಲ್ಲರೂ ನೋಡಿರಬಹುದು.

ಗುಂತರ್‌ಗ್ರಾಸ್‌ನ ಕಾದಂಬರಿಯ ನಾಯಕನ ಶಾರೀರಿಕ ವಿಕಾಸ ಆತನ ಬಾಲ್ಯದಲ್ಲಿಯೇ ಕುಂಠಿತವಾಗಿರುವುದರಿಂದ ಆತನ ಕೊರಳಿಗೆ ಒಂದು ತಗಡಿನ ಡಬ್ಬಿಯನ್ನು ನೇತುಹಾಕಿದೆ. ನೋವಿನ ಅಥವಾ ಸಂತೋಷವಾದಾಗ ಆಗ ಅದನ್ನು ಬಾರಿಸುತ್ತಾನೆ. ಬದುಕಿನ ಉಲ್ಲಾಸ ಕಮರಿಹೋದಾಗ ಕ್ಷುಬ್ಧ ಮನಸ್ಸಿನ ಪ್ರತಿಕ್ರಿಯೆಯನ್ನು ಅಭಿವ್ಯಕ್ತಿಸಲು ನಮ್ಮಲ್ಲಿನ ಪ್ರತಿಯೊಬ್ಬನೂ ಒಂದೊಂದು ತಗಡಿನ ಡಬ್ಬಿಯನ್ನು ಹುಡುಕಿಕೊಳ್ಳುತ್ತಾನೆ.

ಕತೆಗಾರನಿಗೆ ಅದು ತನ್ನ ಅಧ್ಯಯನ ಕೋಣೆಯಲ್ಲಿ ಲಭ್ಯವಾಗುತ್ತದೆ.

ಅನುವಾದ: ತಿಪ್ಪೇಸ್ವಾಮಿ

ನಿನ್ನ ಹಿರಿಯರಿಂದ ನೀನು ಏನನ್ನು ಪಡೆದಿರುವೆಯೋ ಅದ ನೀ ಮಗದೊಮ್ಮೆ ಸಂಪಾದಿಸು. ಇಲ್ಲವಾದರೆ ಅದೆಂದೂ ನಿನ್ನದಾಗದು.

ಗ್ಯಥೇ

'ಅಣ್ಣ' ಹಜಾರೆಯನ್ನು ದೇವರು ಏಕೆ ರಕ್ಷಿಸಿದ!

ಮೋಹನ್ ಶಿವಾನಂದ

[೧೯೬೫ ನೇ ಇಸವಿಯಲ್ಲಿ ಭಾರತ-ಪಾಕಿಸ್ತಾನದ ನಡುವೆ ಯುದ್ಧ ನಡೆಯುತ್ತಿದ್ದಾಗ ಗಡಿ ಪ್ರದೇಶಕ್ಕೆ ಸೈನಿಕರನ್ನು ಒಯ್ಯುತ್ತಿದ್ದ ಟ್ರಕ್ ಒಂದರ ಮೇಲೆ ಪಾಕಿಸ್ತಾನದ ಕಡೆಯಿಂದ ಸ್ಯಾಬ್ರೆಜೆಟ್ ಬಾಂಬ್ ಬಿದ್ದವು. ಈ ಬಾಂಬ್‌ನ ದೆಸೆಯಿಂದ ಸೈನಿಕರನ್ನು ಒಯ್ಯುತ್ತಿದ್ದ ಟ್ರಕ್ ನುಚ್ಚುನೂರಾಗಿ ಡ್ರೈವರ್ ಬಾಬುರಾವ್ ಹಜಾರೆ ಜೊತೆ ಕೆಲವೇ ಕೆಲವು ಸೈನಿಕರು ಹೊರಗೆಳೆಯಲ್ಪಟ್ಟರು. ಉಳಿದವರು ಸಾವನ್ನಪ್ಪಿದ್ದರು. ಬದುಕುಳಿದ ಹಜಾರೆ ದೇವರನ್ನು ಸದಾ ಪ್ರಾರ್ಥಿಸುತ್ತಿರುತ್ತಾರೆ. ದೇವರು ಹಜಾರೆಯನ್ನು ಏಕೆ ರಕ್ಷಿಸಿದ ಎಂಬುದು ಕುತೂಹಲಕಾರಿ ವಿಷಯವಾಗಿದೆ.]

ಇತ್ತೀಚೆಗೆ ನಾನು ರಾಲೆಗಾಂವ್ ಶಿಂಧಿಗೆ ಭೇಟಿಕೊಟ್ಟಾಗ ಅಲ್ಲಿಯ ಪ್ರಮುಖ ಸಮಾಜ ಸುಧಾರಕ ಬಾಬುರಾವ್ ಹಜಾರೆಯವರನ್ನು ಹಿಂದೆ ೧೯೬೫ರಲ್ಲಿ ದೇವರು ಏಕೆ ಅವರನ್ನು ಸಾವಿನಿಂದ ಪಾರು ಮಾಡಿದ ಎಂಬುದನ್ನು ಅರಿತೆ. ಹನ್ನೊಂದು ವರ್ಷದ ಹಿಂದೆ ರಾಲೆಗಾಂವ್ ಶಿಂಧಿ ಮಹಾರಾಷ್ಟ್ರದ ಬೆಂಗಾಡು ಪ್ರದೇಶದಲ್ಲಿರುವ ಅನೇಕ ಹಳ್ಳಿಗಳಿಗಿಂತ ಭಿನ್ನವಾಗಿರಲಿಲ್ಲ. ಮಳೆಗಾಲದಲ್ಲಿ ತುಸುವೇ ಮಳೆಯಾಗಿ ಸ್ವಲ್ಪ ನೀರು ಬಂದು ಕೇವಲ ಒಂದೇ ಬೆಳೆ ತೆಗೆದು ದವಸ ಧಾನ್ಯ ಸಾಕಾಗದೆ ಆ ಊರಿನ ೩೧೫ ಸಂಸಾರದಲ್ಲಿ ಸುಮಾರು ಮುಕ್ಕಾಲು ಭಾಗ ಬಡತನದ ಬೇಗೆಯಿಂದ ಜೀವನ ಸಾಗಿಸುತ್ತಿದ್ದವು. ಆ ಊರಿನ ವಿಶೇಷ ಸುದ್ದಿಯೆಂದರೆ ೪೦ ಅಕ್ರಮ ಕಳ್ಳಭಟ್ಟಿ ಕೇಂದ್ರಗಳನ್ನು ಹೊಂದಿದ್ದು ಎಲ್ಲಾ ಕುಡುಕರ, ಕಳ್ಳಕಾಕರ, ಜೂಜಾಟಗಾರರ ಮತ್ತು ಜಗಳಗಂಟಿಗಳ ಕೇಂದ್ರವಾಗಿತ್ತು.

೧೯೮೬ ರ ನವೆಂಬರ್ ತಿಂಗಳಿನ ರೀಡರ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಮೋಹನ್ ಶಿವಾನಂದ ಅವರ "ವೈ ಗಾಡ್ ಸೇವ್ಡ್ ಅಣ್ಣಾ ಹಜಾರೆ" ಲೇಖನದ ಅನುವಾದ.

೧೯೭೫ರಲ್ಲಿ ಹಜಾರೆ ಸೈನ್ಯದಿಂದ ಹಿಂದಿರುಗಿದ ಮೇಲೆ ಒಂದು ರೀತಿಯ ಆಂದೋಳನವೇ ನಡೆಯಿತು. ಇಂದು ರಾಲೆಗಾಂವ್ ಶಿಂಧಿ ಒಂದು ಕ್ರಿಯಾಶೀಲವೂ ಸಮೃದ್ಧವೂ ಆಗಿ ಆಧುನಿಕ ಪ್ರಗತಿಯನ್ನು ಮೈಗೂಡಿಸಿಕೊಂಡಿರುವ ಮಾದರಿ ಗ್ರಾಮ ವೆನಿಸಿದೆ. ಹೊಲಗಳಲ್ಲಿ ಸಮೃದ್ಧವಾಗಿ ಬೆಳೆದ ಬೆಳೆಯಿಂದ ಕಣಜಗಳು ತುಂಬಿವೆ ಬ್ಯಾಂಕಿದೆ, ಬೋರ್ಡಿಂಗ್ ಶಾಲೆ ಇದೆ, ಜೈವಿಕ ಅನಿಲ ಸ್ಥಾವರಗಳು ಸ್ಥಾಪನೆಯಾಗಿವೆ. ಕೆಲವು ರೈತರು ಪೆಟ್ರೋಲ್‌ನ ದ್ವಿಚಕ್ರ ವಾಹನಗಳಲ್ಲಿ ಓಡಾಡುತ್ತಿದ್ದಾರೆ. ಎಲ್ಲಕ್ಕೂ ಮಿಗಿಲಾದ ಸಾಮಾಜಿಕ ಸುಧಾರಣೆಯೆಂದರೆ ರಾಲೆಗಾಂವ್ ಶಿಂಧಿಯಲ್ಲಿ ಯಾರೂ ಕುಡಿಯದಂತೆ ಮಾಡಿದ್ದು. ಕೇವಲ ಬೆರಳೆಣಿಸುವಷ್ಟು ಮಂದಿ ಮಾತ್ರ ಧೂಮಪಾನ ಮಾಡುತ್ತಾರೆ. ಒಂಬತ್ತು ವರ್ಷದಿಂದ ಆ ಊರಿನಲ್ಲಿ ಯಾವುದೇ ಗುಂಪು ಘರ್ಷಣೆ ಯಾಗಿಲ್ಲ. ಅಸ್ಪೃಶ್ಯತೆಯ ಭಾವನೆ ಬಹಳ ಕಡಿಮೆಯಾಗಿದೆ. ಅಹಮದ್‌ನಗರದ ಹಿಂದಿನ ಡೆಪ್ಯೂಟಿ ಕಮಿಷನರ್ ರಾಜೀವ್ ಅಗರವಾಲ್‌ರವರು ಹೇಳಿದ ಮಾತೆಂದರೆ "ಇಂದು ಹಜಾರೆಗೆ ನಾವು ವಂದನೆ ಸಲ್ಲಿಸಬೇಕು, ಏಕೆಂದರೆ ಆತ ತನ್ನ ಅಕ್ಕಪಕ್ಕದ ಊರಿಗಲ್ಲದೆ ಅಕ್ಕ ಪಕ್ಕದ ಜಿಲ್ಲೆಗಳಿಗೂ ತನ್ನ ಸುಧಾರಣೆಯ ಪ್ರಭಾವ ಬೀರಿದ್ದಾನೆ."

ಇಷ್ಟೆಲ್ಲ ಸುಧಾರಣೆಗೂ ಹಜಾರೆಯೇ ಕಾರಣ ಎಂಬುದು ನಂಬಲು ಸಾಧ್ಯವಾದರೂ ಅದು ಸತ್ಯ. ಹಜಾರೆ ಬಹಳ ಚಿಕ್ಕವನಂತೆ ತೆಳ್ಳಗೆ, ತೀಕ್ಷ್ಣ ನೋಟವಿಲ್ಲದೆ ಮತ್ತು ಬೇರೆಲ್ಲೂ ಸಿಗದ ವ್ಯಕ್ತಿ. ನಮ್ಮ ಅನೇಕ ನಾಯಕರುಗಳಂತೆ ತಂದೆ ತಾಯಿಗಳ ಬಲದಿಂದ ಮೇಲೇರಿದವನಲ್ಲ. ಏಳನೇ ತರಗತಿಯನ್ನೂ ಮುಗಿಸದ ಬಡರೈತನ ಮಗ. ತನ್ನ ಮುಂಗೋಪದಿಂದ ಅನೇಕ ಸಾರಿ ತೊಂದರೆ ಅನುಭವಿಸಿದ ವ್ಯಕ್ತಿ. ಒಂದು ಸಾರಿ ಮುಂಬಯಿಯ ಓರ್ವ ಪೋಲೀಸ್ ಪೇದೆ ದಾರಿ ಹೋಕರಿಗೆ ಕಿರುಕುಳ ಕೊಡುತ್ತಿದ್ದಾಗ ಸಹಿಸಲಾಗದೆ ಹಜಾರೆ ಪೇದೆಗೆ ಸಾಕಷ್ಟು ಬಡಿದು ಮುಂಬಯಿಯ ಪೋಲೀಸರ ಆತಿಥ್ಯ ಪಡೆದಿದ್ದ. ಸೈನ್ಯದಲ್ಲಿದ್ದಾಗಲೂ ಈತ ಅಧಿಕಾರಿಗಳಿಗೆ ಸಮಸ್ಯೆಯಾಗಿದ್ದ. ತನ್ನ ಹಿರಿಯ ಅಧಿಕಾರಿಯೋರ್ವ ಮೆಸ್ ಹಣ ದುರುಪಯೋಗ ಮಾಡಿಕೊಂಡಿದ್ದಾನೆ ಎಂದು ತಿಳಿದು ನೇರವಾಗಿ, ಖುದ್ದಾಗಿ ಎಲ್ಲರೆದುರಿಗೂ ಪ್ರಶ್ನಿಸಿದ. ಅನಂತರ ಅತೀ ದೂರದ ನೇಫಾ ಗಡಿ ಪ್ರದೇಶಕ್ಕೆ ವರ್ಗ ಮಾಡಲ್ಪಟ್ಟು ಶಿಕ್ಷೆ ಅನುಭವಿಸಿದ.

ಸಂಪೂರ್ಣ ಬದಲಾವಣೆ: ಹಜಾರೆಯ ಪರಿವರ್ತನೆಯ ಕಥೆ ೧೯೬೪ರಿಂದ ಪ್ರಾರಂಭವಾಗುತ್ತದೆ. ದೆಹಲಿ ರೈಲ್ವೆ ನಿಲ್ದಾಣದ ಒಂದು ಪುಸ್ತಕದ ಮಳಿಗೆಯಲ್ಲಿ ಸ್ವಾಮಿ ವಿವೇಕಾನಂದರ ಒಂದು ಪುಸ್ತಕ ಕೊಂಡುಕೊಳ್ಳುತ್ತಾನೆ. ಆ ಮಹಾ ಸಂನ್ಯಾಸಿಯ ಜೀವನ ವೃತ್ತಾಂತ ಓದುವಾಗ ಅಲ್ಲಿದ್ದ ಒಂದು ವಾಕ್ಯ 'ಇತರರಿಗೆ ಮಾಡುವ ಉಪಕಾರವೇ ಮಾನವ ಮಾಡಬಹುದಾದ ಉತ್ಕೃಷ್ಟ ಕೆಲಸ' ಬಹಳ ಪರಿಣಾಮ ಬೀರುತ್ತದೆ. ಇದಾದನಂತರ ಅನೇಕ ಸಂತರ, ಧಾರ್ಮಿಕ ಮುಖಂಡರ ಮತ್ತು ಸಮಾಜ ಸುಧಾರಕರ ಜೀವನ ಚರಿತ್ರೆಗಳನ್ನು ಓದುತ್ತಾನೆ. ಸಾಬ್ರೆಜಿಟನ ಹೊಡೆತದಿಂದ ಪಾರಾದ ಮೇಲೆ ಸಂಪೂರ್ಣ ಸಸ್ಯಾಹಾರಿಯಾಗಿ, ಧೂಮಪಾನ ಮಾಡುವುದನ್ನು ನಿಲ್ಲಿಸಿ, ಬ್ರಹ್ಮ ಚಾರಿಯಾಗಿರಲು ನಿರ್ಧರಿಸುತ್ತಾನೆ. ಅವನ ಮುಂದಿದ್ದ ಮುಖ್ಯ ಧ್ಯೇಯವೆಂದರೆ ತನ್ನ

ಗ್ರಾಮಾಭಿವೃದ್ಧಿ. ಸೈನ್ಯದಲ್ಲಿದ್ದಾಗ ವರ್ಷಕ್ಕೊಂದುಬಾರಿ ರಜಾಕ್ಕೆ ಊರಿಗೆ ಬರುತ್ತಿದ್ದಾಗ ತನ್ನ ಊರು ತೀವ್ರ ಅಧೋಗತಿಗೆ ಇಳಿಯುತ್ತಿದ್ದುದನ್ನು ಗಮನಿಸಿದ್ದ. ಊರ ಪ್ರಮುಖ ದೇವಸ್ಥಾನ ಮುರಿದು ಬಿದ್ದುದನ್ನು ನೋಡಿ ತನ್ನಲ್ಲಿಯೇ ನಾನಾದರೂ ಇದನ್ನು ಪುನರುದ್ಧಾರ ಮಾಡಿಸಬೇಕೆಂದುಕೊಂಡ. ಆದರೆ ಅವನ ಹತ್ತಿರ ಹಣವಿರಲಿಲ್ಲ. ನಿವೃತ್ತಿ ಹಣ ಬರಲು ಇನ್ನೂ ಬಹಳ ವರ್ಷಗಳು ಬೇಕಾಗಿತ್ತು. ಹಣವುಳ್ಳವರು ಗ್ರಾಮದಲ್ಲಿ ಇದ್ದರೂ ದೇವಸ್ಥಾನದ ದುಃಸ್ಥಿತಿ ಬಗ್ಗೆ ಯಾರು ಯೋಚಿಸಿಯೇ ಇರಲಿಲ್ಲ.

೧೯೭೫ ರಲ್ಲಿ ನಿವೃತ್ತಿ ಹೊಂದಿದ ಮೇಲೆ ತನ್ನ ಊರಿಗೆ ನಿವೃತ್ತಿ ಹಣ ಇಪ್ಪತ್ತು ಸಾವಿರದ ಜೊತೆ ಬಂದ. ಈ ಹಣದಿಂದ ಊರಿನ ದೇವಸ್ಥಾನ ಪುನರ್ ರೂಪಿಸಲು ಯೋಚಿಸಿದ. ಬಡಗಿ ಮತ್ತು ಗಾರೆಕೆಲಸಗಾರರನ್ನು ನೇಮಿಸಿಕೊಂಡು ಅವರಿಗೆ ಬೇಕಾದ ವಸ್ತುಗಳನ್ನು ಒದಗಿಸಿದ. ಮೊದಮೊದಲು ಹಳ್ಳಿಯ ಜನ ಹೆಚ್ಚು ಇವನ ಕಡೆ ಗಮನಿಸಲಿಲ್ಲ. ದೇವಸ್ಥಾನ ಸಂಪೂರ್ಣವಾದ ಮೇಲೆ ಊರಿಗೆ ಊರೇ ಬದಲಾಯಿತು. ಕೆಲವರು ಮರ, ಮರಳು ಮುಂತಾದ ವಸ್ತುಗಳನ್ನು ದಾನವಾಗಿ ನೀಡಿದರು. ಕೆಲವರು ಸ್ವತಃ ನಿರ್ಮಾಣ ಕೆಲಸದಲ್ಲಿ ಭಾಗಿಯಾದರು. ಆಗ ಅವನ ಮನಸ್ಸೆಂದಿತು 'ನೀನು ಸ್ವಾರ್ಥಿಯಲ್ಲ ಎಂಬುದು ಜನರಿಗೆ ತಿಳಿದಿದೆ, ಜನ ನಿನ್ನೊಡನೆ ಇದ್ದಾರೆ ಮುಂದುವರಿಸು. ಇದರಿಂದ ಅವನ ಅಂತರಂಗದಲ್ಲಿ ಸಮಾಧಾನ ಮೂಡಿತು.

ಹುಟ್ಟುನಾಯಕ: ಹಜಾರೆಯನ್ನು ಸೇರಿದ ಯುವಕರು ಆತನನ್ನು ಪ್ರೀತಿಯಿಂದ 'ಅಣ್ಣ' ಎನ್ನುತ್ತಿದ್ದರು. ತಮ್ಮ ನಾಯಕನ ಗ್ರಾಮಾಭಿವೃದ್ಧಿಯ ಬಗ್ಗೆ ಇರುವ ವಿಚಾರಗಳನ್ನು ಕೇಳಿ ತಿಳಿದುಕೊಳ್ಳುತ್ತಿದ್ದರು. ಕೊನೆಕೊನೆಗೆ ಹೆಚ್ಚು ಹೆಚ್ಚು ಯುವಕರು ಆಕರ್ಷಿತರಾಗಿ ಹಜಾರೆ ನಾಯಕತ್ವದಲ್ಲಿ ಒಂದು ತರುಣ ಮಂಡಲ ಸ್ಥಾಪಿತವಾಯಿತು.

ಒಂದು ದಿವಸ ರಾತ್ರಿ ಪಕ್ಕದ ಗ್ರಾಮದ ಕೆಲವು ಕುಡುಕರು ರಾಲೆಗಾಂವ್‌ನ ೪೦ ವರ್ಷದ ಗುಲಾಬ್ ಭಾಲೇಕರ್ ಎಂಬುವನನ್ನು ತಮಗೆ ನಮಸ್ಕರಿಸಲಿಲ್ಲವೆಂದು ಥಳಿಸಿದರೆಂದು ತರುಣ ಮಂಡಲದ ಎಲ್ಲಾ ಸದಸ್ಯರೂ ದೇವಸ್ಥಾನದ ಹತ್ತಿರ ಸಭೆ ಸೇರಿದರು. ಇದೇ ಸಮಯವೆಂದು ಅರಿತ ಅಣ್ಣ ಹಜಾರೆ ಸಭೆಯಲ್ಲಿ ನೆರೆದಿದ್ದ ಜನರನ್ನು ಉದ್ದೇಶಿಸಿ ಕುಡಿತದ ಕೆಡುಕುಗಳ ಬಗ್ಗೆ, ಕಳ್ಳಭಟ್ಟಿ ಇಳಿಸುವ ಬಗ್ಗೆ ಮತ್ತು ಜೂಜಾಟದ ಬಗ್ಗೆ ಉಗ್ರವಾಗಿ ಖಂಡಿಸಿ ಕಳ್ಳಭಟ್ಟಿ ಕೇಂದ್ರಗಳನ್ನು ಕೂಡಲೇ ಮುಚ್ಚಬೇಕೆಂದು ಆಗ್ರಹಪಡಿಸಿದ. ಕೆಲವು ಕಳ್ಳಭಟ್ಟಿ ಕೇಂದ್ರದ ಮಾಲೀಕರು 'ಅಣ್ಣ'ನಿಗೆ ಮತ್ತು ಆತನ ಶಿಷ್ಯರಿಗೆ ಹೆದರಿ ಮುಚ್ಚಿದರು. ಇದರಿಂದ ತೃಪ್ತನಾಗದ ಹಜಾರೆ ತನ್ನ ಜನರಿಗೆ ನೀವು ಕುಡಿಯುವುದಾದರೆ ಊರ ಹೊರಗೆ ಎಲ್ಲಾದರೂ ಕುಡಿಯಿರಿ ಊರಿನಲ್ಲಿ ಮಾತ್ರ ಯಾರೂ ಕುಡಿದು ಅಸಭ್ಯವಾಗಿ ವರ್ತಿಸಕೂಡದು ಎಂದು ಕಟ್ಟಪ್ಪಣೆ ಮಾಡಿದ. ಇಷ್ಟಾದರೂ ಕೆಲವು ಜನ ಪಕ್ಕದ ಊರಿನಲ್ಲಿ ಕುಡಿದು ಊರಿಗೆ ಬಂದಾಗ, ತಾನು ಸೈನ್ಯದಲ್ಲಿ ಉಪಯೋಗಿಸುತ್ತಿದ್ದ ಬೆಲ್ಟ್‌ನಿಂದ ದೇವಸ್ಥಾನದ ಕಂಬಕ್ಕೆ ಕಟ್ಟಿಹಾಕಿದ. ಈಗಲೂ ಹಜಾರೆ ಹೇಳುತ್ತಾರೆ. 'ಗ್ರಾಮೀಣ ಜನರು ಒರಟಾಗಿದ್ದು ಅಲ್ಲಿ ಸುಧಾರಣೆ

ತರಬೇಕೆಂದರೆ ನಾವೂ ಸ್ವಲ್ಪ ಒರಟಾಗಿಯೇ ವರ್ತಿಸಬೇಕಾಗುತ್ತದೆ' ರಾಲೆಗಾಂವ್‌ನ ರೈತ ೪೪ ವರ್ಷದ ಹರಿಬಾಬು ಹೇಳುತ್ತಾನೆ "ನಾನು ಒಂಬತ್ತು ವರ್ಷದ ಹಿಂದೆ ಭಯಂಕರ ಕುಡುಕನಾಗಿದ್ದೆ. ನನಗೆ ಹಜಾರೆಯ ಭಯದ ಬಿಸಿತಟ್ಟಿದ ಮೇಲೆ ಇದುವರೆಗೆ ಒಂದು ತೊಟ್ಟನ್ನೂ ಕುಡಿದಿಲ್ಲ 'ಅಣ್ಣ' ನನ್ನನ್ನು ಉಳಿಸಿದ."

ಕುಡಿಯುವುದನ್ನು ಬಿಡಿಸಿದ್ದರಿಂದ ಆ ಹಳ್ಳಿಯ ಜೀವನ ಸುಧಾರಿಸಿತಾದರೂ ಆರ್ಥಿಕಸ್ಥಿತಿ ಬಹಳ ಕನಿಷ್ಠ ಮಟ್ಟದಲ್ಲಿತ್ತು. ಕಾರಣ ಕೈತುಂಬಾ ಕೆಲಸ ಸಿಗುತ್ತಿರಲಿಲ್ಲ, ಕಳ್ಳಭಟ್ಟಿ ಕೇಂದ್ರಗಳನ್ನು ಮುಚ್ಚಿದ್ದರಿಂದ ಅನೇಕ ಜನಕ್ಕೆ ನಿರುದ್ಯೋಗ ಒದಗಿತು. ಇದಕ್ಕೆ ಪರಿಹಾರವನ್ನು ಹಜಾರೆ ಹುಡುಕತೊಡಗಿದ. ವರ್ತಮಾನ ಪತ್ರಿಕೆಯೊಂದರಲ್ಲಿ ನಿರುದ್ಯೋಗಿ ಹಳ್ಳಿಯ ಜನಕ್ಕೆ ಸರಕಾರ ನೀರಾವರಿ ಯೋಜನಾ ಪ್ರದೇಶದಲ್ಲಿ ಉದ್ಯೋಗ ಒದಗಿಸುವುದಾಗಿ ಪ್ರಕಟವಾಗಿತ್ತು. ಹಜಾರೆ ಮತ್ತು ಅವನ ಶಿಷ್ಯರು ಹಳ್ಳಿಯ ಇನ್ನೂರು ಜನಕ್ಕೆ ಸರ್ಕಾರದ ವತಿಯಿಂದ ಯೋಜನಾ ಪ್ರದೇಶದಲ್ಲಿ ಕೆಲಸ ಕೊಡಿಸಿದರು. ಹಜಾರಿಗೆ ಇದರಿಂದ ತಿಳಿದ ವಿಷಯವೇನೆಂದರೆ ಸರ್ಕಾರ ಹಳ್ಳಿಗಾಡಿನ ಜನರ ಅಭಿವೃದ್ಧಿಗೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತದೆ. ಸಾಕಷ್ಟು ಪ್ರಚಾರವಿಲ್ಲದೆ ಈ ಜನರು ಸೌಲಭ್ಯದಿಂದ ವಂಚಿತರಾಗುತ್ತಾರೆ. ಈ ಕಾರಣಕ್ಕಾಗಿ ಆತ ಸರ್ಕಾರ ಯಾವ ಯಾವ ಅಭಿವೃದ್ಧಿ ಯೋಜನೆಗಳನ್ನು ಹಾಕಿಕೊಂಡಿದೆ, ಅವುಗಳಿಂದ ಜನರು ಹೇಗೆ ಪ್ರಯೋಜನ ಪಡೆಯಬಹುದು ಎಂಬುದನ್ನು ತಿಳಿಯಲು ಅನೇಕ ಕಛೇರಿಗಳನ್ನು ಸುತ್ತಿ ಅಧಿಕಾರಿಗಳನ್ನು ಭೇಟಿಮಾಡಿ, ವರ್ತಮಾನ ಪತ್ರಿಕೆಗಳಲ್ಲಿ ಬರುವ ವಿಷಯಗಳನ್ನೆಲ್ಲಾ ಒಂದು ಕಡೆ ಸಂಗ್ರಹಿಸಿ ಜನರಿಗೆ ತಿಳಿಯ ಹೇಳಿದ. ಇವನ ಆಸಕ್ತಿ ಬಗ್ಗೆ ಅಹಮದ್ ನಗರದ ನೀರಾವರಿ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ಹೇಳುತ್ತಾರೆ 'ಅವನೊಬ್ಬ ವಿಚಿತ್ರ ಹಟವಾದಿ. ಒಂದು ಸಾರಿ ನಾವು ನೀರಿನ ಸುವ್ಯವಸ್ಥಿತ ಬಳಕೆ ಬಗ್ಗೆ ಚರ್ಚಿಸುತ್ತಿದ್ದಾಗ ತಾನೂ ಬಂದು ನೆಲದ ಮೇಲೆ ಕೂತು ಎಲ್ಲವನ್ನೂ ಆಲಿಸುತ್ತಿದ್ದ ಮತ್ತು ಗುರುತು ಹಾಕಿಕೊಳ್ಳುತ್ತಿದ್ದ.'

ರಾಲೆಗಾಂವ್‌ಗೆ ನೀರಿನ ತೊಂದರೆ ಬಹಳವಿತ್ತು. ಇದರ ನಿವಾರಣೆ ಬಗ್ಗೆ ತಲೆ ಕೆಡಿಸಿಕೊಂಡ. ತಮ್ಮ ಊರಿನಿಂದ ೧೦೦ ಕಿ.ಮೀ. ದೂರದಲ್ಲಿರುವ ಪುರಂದರ್ ಎಂಬಲ್ಲಿ ನೀರನ್ನು ಶೇಖರಿಸಿ ಸಮರ್ಥವಾಗಿ ಭೂಮಿಯ ನೀರಾವರಿ ಮಾಡಿದ್ದನ್ನು ಪತ್ರಿಕೆಯಲ್ಲಿ ಓದಿ ತಾನೂ ಹೋಗಿ ಅದನ್ನು ನೋಡಿ ಅದೇ ರೀತಿಯ ಯೋಜನೆಯನ್ನು ತಮ್ಮ ಗ್ರಾಮಕ್ಕೂ ಮಾಡಿಕೊಡಬೇಕೆಂದು ಇಂಜಿನಿಯರ್‌ರವರನ್ನು ಬೇಡಿಕೊಂಡ. ತಮ್ಮ ಊರಿನ ಜನರಿಂದಲೇ ಕೆಲಸ ಮಾಡಿಸಿ ಕಡಿಮೆ ಖರ್ಚಿನಲ್ಲಿ ಬೇಗ ಮುಗಿಯುವಂತೆ ಮಾಡಿಸಿದ. ದೇವಸ್ಥಾನ ಕಟ್ಟಿದ ಮೇಲೆ ಗ್ರಾಮದ ಜನರಿಂದ ಕೆಲಸ ಮಾಡಿಸುವುದು ಬಹಳ ಸುಲಭವಾಗಿತ್ತು. ಈಗ ಶೇಕಡಾ ೪೧ ರಷ್ಟು ಜಮೀನು ನೀರಾವರಿಯಾಗಿದೆ. ವ್ಯವಸಾಯದ ಉತ್ಪನ್ನ ಐದು ಪಟ್ಟು ಜಾಸ್ತಿಯಾಗಿದೆ. ಆದರೂ ಶೇ|| ೩೦ ಜನ ಇನ್ನೂ ಬಡತನ ರೇಖೆಯಿಂದ ಕೆಳಗಿದ್ದಾರೆ. ಅನೇಕರ ಜೀವನಮಟ್ಟ ಸುಧಾರಿಸಿರುವುದಲ್ಲದೆ ಸಾಲ ಮುಕ್ತರಾಗಿದ್ದಾರೆ. ನಾನಾ ಔಟಿ ಎಂಬ ರೈತ ಹೇಳುತ್ತಾನೆ 'ಬಹಳ ವರ್ಷಗಳಿಂದ ಉಳಿದು ಕೊಂಡಿದ್ದ ಸಾಲ ರೂ. ೪೦೦೦೦ ತೀರಿಸಿ ಒಂದು ಹೊಸ ಮನೆ ಕಟ್ಟಿಕೊಂಡಿದ್ದೇನೆ.'

ರಾಳೆಗಾಂವ್‌ನ ಸ್ವಸಹಾಯದ ಪ್ರಯತ್ನಗಳಿಗೆ ಅನೇಕಬಾರಿ ಅಡಚಣೆಯಾದದ್ದು ಉಂಟು. ಒಮ್ಮೆ ಅಲ್ಲಿಯಜನ ಸೇರಿ ೧೦ ಕೊಠಡಿಗಳುಳ್ಳ ಒಂದು ಪ್ರೌಢಶಾಲೆ ಕಟ್ಟಡ ಕಟ್ಟಿ ಸರ್ಕಾರವನ್ನು ಉಪಾಧ್ಯಾಯರನ್ನು ನೇಮಕಮಾಡಿ ಶಾಲೆ ನಡೆಸಿಕೊಂಡು ಹೋಗ ಬೇಕೆಂದು ಬೇಡಿಕೊಂಡರು. ಆದರೆ ಸರ್ಕಾರ ಕೋರಿಕೆ ತಿರಸ್ಕರಿಸಿತು. ಇದಕ್ಕೆ ಕಾರಣ ವನ್ನೂ ಅರಿತರು. ಆಗತಾನೆ ನಡೆದ ಚುನಾವಣೆಯಲ್ಲಿ ಅಲ್ಲಿಯ ಪ್ರಮುಖ ರಾಜಕೀಯ ವ್ಯಕ್ತಿಗೆ ಓಟು ಆಗ್ರಾಮದಲ್ಲಿ ಬೀಳಲಿಲ್ಲವೆಂದು ಆತ ಸರ್ಕಾರದ ಮೇಲೆ ಪ್ರಭಾವ ಬೀರಿ ಕೋರಿಕೆ ತಿರಸ್ಕರಿಸುವಂತೆ ಮಾಡಿದ್ದ. ಆದರೆ ಹಜಾರೆ ಹೆದರದೆ ಪುಕ್ಕಟೆ ಊಟ ಮತ್ತು ವಸತಿ ಕೊಡುತ್ತೇನೆಂದು ಉಪಾಧ್ಯಾಯರನ್ನು ಕರೆತಂದು ಶಾಲೆ ನಡೆಸಿದ. ಈ ಶಾಲೆಯನ್ನು ಸರ್ಕಾರ ವಹಿಸಿಕೊಳ್ಳುವಂತೆ ಮುಂಬಯಿಯ ಸೆಕ್ರೆಟೇರಿಯಟ್‌ನವರೆಗೆ ಎಲ್ಲಾ ಕಛೇರಿ ಗಳನ್ನೂ ಸುತ್ತಿದ ಆದರೂ ಕೆಲಸವಾಗಲಿಲ್ಲ, ಹೀಗೆ ತಿರುಗುವಾಗ ಖರ್ಚು ದುಬಾರಿ ಯಾಗುತ್ತದೆಂದು ವರ್ತಮಾನ ಪತ್ರಿಕೆ ಹಾಸಿಕೊಂಡು ಬಸ್ ನಿಲ್ದಾಣದಲ್ಲಿ ಮಲಗು ತ್ತಿದ್ದ ಮತ್ತು ಸಮುದ್ರದಲ್ಲಿ ಸ್ನಾನಮಾಡುತ್ತಿದ್ದ. ಕೆಲಸವಾಗದೆ ಕೋಪಗೊಂಡು ಒಂದು ದಿನ ಗ್ರಾಮದ ೫೫೦ ಜನರನ್ನು ಕಲೆ ಹಾಕಿ ಅಹಮದ್‌ನಗರ ಜಿಲ್ಲಾ ಪರಿಷತ್ ಮುಂದೆ ಸತ್ಯಾಗ್ರಹ ಮಾಡಿಸಿದ. ಕೆಲವೇ ಗಂಟೆಗಳಲ್ಲಿ ಶಾಲೆಯನ್ನು ಸರ್ಕಾರ ತೆಗೆದುಕೊಳ್ಳಲು ಆದೇಶ ಹೊರಟಿತು. ಇಂದು ಈ ಶಾಲೆ ಸೈನಿಕ ಶಾಲೆಯಂತೆ ನಡೆಯುತ್ತಿದೆ. ಶಿಸ್ತಿಗೆ ಪ್ರಾಧಾನ್ಯ ನೀಡಲಾಗುತ್ತಿದೆ. ಬೆಳಿಗ್ಗೆ ಎದ್ದಕೂಡಲೇ ವ್ಯಾಯಾಮ ಮಾಡಬೇಕು. ಇಂದಿನ ವೈಜ್ಞಾನಿಕ ಸಾಧನೆಗಳನ್ನು ಅರಿಯಲು ಇಂಗ್ಲೀಷ್ ಅವಶ್ಯಕ. ಆದಕಾರಣ ಹೆಚ್ಚುವರಿ ಇಂಗ್ಲೀಷ್ ತರಗತಿಗಳನ್ನು ನಡೆಸಲಾಗುತ್ತಿದೆ.

ಹಜಾರೆಯವರು ಕೆಲವು ಕಟ್ಟಾಸಂಪ್ರದಾಯದ ಆಚರಣೆಗಳನ್ನು ಸುಧಾರಿಸಿದ್ದಾರೆ. ತರುಣಮಂಡಲ ವರ್ಷಕ್ಕೊಮ್ಮೆ ಸಾಮೂಹಿಕ ವಿವಾಹ ಏರ್ಪಡಿಸುತ್ತಿದೆ. ಯಾರ ಮದುವೆಗೂ ಸಾವಿರ ರೂಪಾಯಿಗಿಂತ ಹೆಚ್ಚು ಖರ್ಚಾಗಕೂಡದು. ಬಡಕುಟುಂಬಗಳು ಹಣ ಕೊಡಬೇಕಾಗಿಲ್ಲ. ಈ ವ್ಯವಸ್ಥೆಯಿಂದ ಆಕರ್ಷಿತರಾಗಿ ಪಕ್ಕದ ಹಳ್ಳಿಯ ಯುವಕರೂ ಇಲ್ಲಿ ಮದುವೆಯಾಗಲು ಇಷ್ಟಪಡುತ್ತಾರೆ. ಅಸ್ಪೃಶ್ಯತೆ ಕ್ಷೀಣಿಸುತ್ತಿದ್ದು ಇಂದು ಹರಿಜನರು ಸಾಮೂಹಿಕವಾಗಿ ನೀರನ್ನು ಬೇರೆಯವರ ಜೊತೆ ಹಂಚಿಕೊಳ್ಳುತ್ತಿದ್ದಾರೆ. ಮದುವೆಗಳಲ್ಲಿ ಒಟ್ಟಿಗೆ ಊಟ ಮಾಡುತ್ತಾರೆ. ವಾರ್ಷಿಕ ದನಗಳ ಜಾತ್ರೆಯ ಮೆರವಣಿಗೆ ಯಲ್ಲಿ ಹರಿಜನರ ರಾಸುಗಳೇ ಮುಂದೆ ಹೋಗುತ್ತವೆ.

ಈ ಎಲ್ಲಾ ಅಭಿವೃದ್ಧಿಗೂ ಕಾರಣ ಹಜಾರೆಯ ಶ್ರದ್ಧೆ. ಆತ ದೇವಸ್ಥಾನದ ಫೈಲುಗಳೇ ತುಂಬಿರುವ ಒಂದು ಕೊಠಡಿಯಲ್ಲಿ ವಾಸ. ಅದೇ ಅವನ ಹೋರಾಟದ ತಾಣ. ಪ್ರತಿ ದಿವಸ ದೇವಸ್ಥಾನದ ಹತ್ತಿರ ಪ್ರಾರ್ಥನೆ, ಹರಿಕಥೆ ಪ್ರವಚನ ಜೊತೆಗೆ ಸಭೆ ಇದ್ದೇ ಇರುತ್ತದೆ. ಜನ ಸಭೆಗಳಲ್ಲಿ ತುಂಬಿರುತ್ತಾರೆ. ಈತನ ಪ್ರಭಾವ ಸುತ್ತಮುತ್ತಲಿನ ಗ್ರಾಮಕ್ಕೂ ಹಬ್ಬಿದೆ. ೩೯ ವರ್ಷದ ರಘುನಾಥ ಥಾಂಗೆ ಎಂಬುವರು ತನ್ನ ಮುಖ್ಯೋಪಾಧ್ಯಾಯ ಹುದ್ದೆ ಬಿಟ್ಟು ತನ್ನ ಗ್ರಾಮ ಸುಧಾರಿಸಲು "ಅಣ್ಣನ" ಮಾರ್ಗದರ್ಶನದಲ್ಲಿ ನಡೆಯುತ್ತಿದ್ದಾರೆ ಮತ್ತು ಅವರ ಮಾರ್ಗದರ್ಶನಕ್ಕೆ ವಂದಿಸು ತ್ತಾರೆ.

ಅಣ್ಣನಿಗೆ ಇನ್ನೂ ತೃಪ್ತಿಯಿಲ್ಲ. ಅನೇಕ ಯೋಜನೆಗಳನ್ನು ಕಾರ್ಯಗತಗೊಳಿಸಲು ಯೋಚಿಸುತ್ತಿದ್ದಾನೆ. ವರ್ಷಪೂರ್ತಿ ವ್ಯವಸಾಯಕ್ಕೆ ಬೇಕಾದ ನೀರಾವರಿ, ಪ್ರತಿಮನೆಗೂ ಜೈವಿಕ ಅನಿಲದ ಯಂತ್ರ, ಪ್ರತಿ ಯುವಕನೂ ಹೆಚ್ಚು ವಿದ್ಯಾವಂತನಾಗಲು ಕಾಲೇಜು ಇವು ಅವನ ಮನಸ್ಸಿನಲ್ಲಿರುವ ಯೋಜನೆಗಳು. ಈಗಲಂತೂ ಅವರಿಗೆ ಬಿಡುವೇ ಇಲ್ಲ. ಅಕ್ಕ ಪಕ್ಕದ ಗ್ರಾಮದ ಜನರು ತಮ್ಮ ಸಮಸ್ಯೆಗಳ ಬಗ್ಗೆ ಚರ್ಚಿಸಲು, ಭಾಷಣ ಮಾಡಲು ಆಹ್ವಾನಿಸುತ್ತಿರುತ್ತಾರೆ. ನಾನು ಅವರ ಜೊತೆ ಇದ್ದಾಗ ಪಕ್ಕದ ಊರಿನ ಮುಸ್ಲಿಂ ಯುವಕನೊಬ್ಬ ತಮ್ಮ ಪ್ರವಾದಿ ಮಹಮ್ಮದ್‌ನ ಹುಟ್ಟುಹಬ್ಬ ಆಚರಿಸಲು ಆಹ್ವಾನಿಸಲು ಬಂದಿದ್ದ. ಅವರು ಹೋದಮೇಲೆ ನನಗೆ ಹೇಳಿದರು. ನನಗೆ ಮಹಮ್ಮದ್‌ನ ಬಗ್ಗೆ ಏನೂ ಗೊತ್ತಿಲ್ಲ. ಆದರೆ ನನ್ನ ಸಂದೇಶ 'ಹೇಗೆ ಹಳ್ಳಿಗಳ ಬದಲಾವಣೆಗೆ ನಾವು ಬದಲಾಗಬೇಕು' ಎಂಬುದನ್ನು ಹೇಳಿಬರುತ್ತೇನೆ ಎಂದರು.

ಅನುವಾದ: ಎಂ. ಕೆ. ರಾಮಸ್ವಾಮಿ

ದೀನರ ಎದುರು ಎಂದೂ ದುರಹಂಕಾರಿ ಆಗದಿರು. ದುರಹಂಕಾರಿಗಳ ಎದುರು ಎಂದೂ ದೀನನಾಗದಿರು.

ಜೆಫರ್‌ಸನ್ ಡೇವೀಸ್

ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ವಿಧಾನಕ್ಕಿಂತಲೂ ಶೀಘ್ರತರವಾಗಿ ಬಂಡವಾಳ ರವಾನೆ ಮಾಡಲು ಒಂದು ಮಾರ್ಗ ಉಂಟು ಗೊತ್ತೆ? ಅದರ ಹೆಸರು ವಿವಾಹ.

ಜೆ. ಎಚ್. ಎಂ. ಮ್ಯಾಕ್‌ಗವರ್ನ್

ಮಾರ್ಟನ್ ಸ್ಕಿಮಿಡ್‌ನ ಆಕಾಶಲೋಕ

ಜಾಯ್ ಸ್ಪಲ್ಲರ್

ಕ್ಯಾಲಿಫೋರ್ನಿಯಾದ ಪಾಲೋಮರ್ ಶಿಖರದ ಮೇಲೆ ಶಾಂತ ನಿರ್ಮಲ ರಾತ್ರಿಯಲ್ಲಿ ಡಾ|| ಮಾರ್ಟನ್ ಸ್ಕಿಮಿಡ್‌ನು ತನ್ನ ಎತ್ತರದ ತೆಳು ಚೌಕಟ್ಟಿನ ದೂರದರ್ಶಕದ ಗೂಡಿನಿಂದ ಗಗನಾಂತರಾಳಕ್ಕೆ ಗುರಿಯಿಟ್ಟು ನೋಡಿದ. ಮಾನವನ ಚಕ್ಷುಗಳಿಗಿಂತಲೂ ಒಂದು ಮಿಲಿಯನ್ ಹೆಚ್ಚು ಬೆಳಕನ್ನು ಶೇಖರಿಸುವ ದೂರದರ್ಶಕ ಮಾನವನಿಂದ ಈ ಹಿಂದೆ ಕಾಣಲಾಗದಂತಹ ಮಬ್ಬು ನಕ್ಷತ್ರಗಳನ್ನು ಮತ್ತು ದೂರದ ಆಕಾಶಗಂಗೆಯನ್ನು ಗುರುತಿಸಿದೆ. ಈ ಇಳಿವಯಸ್ಸಿನಲ್ಲಿ ಕ್ಯಾಲಿಫೋರ್ನಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಕಾಲ್‌ಟೆಕ್)ಯ ಖಗೋಳಶಾಸ್ತ್ರ ಪ್ರಾಧ್ಯಾಪಕ ೫೬ ವರ್ಷ ವಯಸ್ಸಿನ ಸ್ಕಿಮಿಡ್, ದಿಗ್ಭ್ರಮೆಗೊಳಿಸುವ ಮತ್ತು ಅತಿದೂರದ ರಹಸ್ಯಮಯವಾದ ಬಾನಿನಲ್ಲಿ ಹಿಂದೆಂದೂ ಗಮನಿಸಿರದ ಅರೆನಕ್ಷತ್ರ (ಕ್ವಾಸಾರ್)ಗಳನ್ನು ಅನ್ವೇಷಿಸಿದ್ದರು.

ಖಗೋಳ ದೂರಗಳನ್ನು ಕಾಲವೊಂದೆ ಸರಿದೂಗಿಸುವುದು. ಈ ಬ್ರಹ್ಮಾಂಡ ೧೫ ರಿಂದ ೨೦ ಸಾವಿರ ಮಿಲಿಯನ್ ವರ್ಷಗಳ ಹಿಂದೆ ಒಂದು 'ಮಹಾಭಾಜಣೆ' (ಬೃಹತ್‌ಕಾಯದ ಅಪ್ಪಳಿಸುವಿಕೆ)ಯ ಫಲವಾಗಿ ಉದ್ಭವಿಸಿತೆಂದು ಮತ್ತು ಭೌತದ್ರವ್ಯವನ್ನು ಎಲ್ಲಾ ದಶದಿಕ್ಕುಗಳಿಗೆ ರವಾನಿಸಿತೆಂದು ವಿಶ್ವ ವಿಕಾಸ ಕುರಿತಂತೆ ಖಗೋಳ ವಿಜ್ಞಾನಿಗಳು ನಂಬಿರುತ್ತಾರೆ. ಅತೀ ದೂರದಲ್ಲಿರುವ, ಇನ್ನೂ ಆವಿಷ್ಕರಿಸಬೇಕಾದ ಅರೆನಕ್ಷತ್ರಗಳು ೧೧ ರಿಂದ ೧೨ ಸಾವಿರ ಮಿಲಿಯನ್ ಜ್ಯೋತಿವರ್ಷ ದೂರದಲ್ಲಿವೆ (ಬೆಳಕು ಸೆಕೆಂಡಿಗೆ ೩ ಲಕ್ಷ ಕಿ.ಮಿ. ವೇಗದಲ್ಲಿ ಚಲಿಸುತ್ತದೆ ಅಥವಾ ೩೬೫ ದಿನಗಳಲ್ಲಿ ೯.೬ ಟ್ರಿಲಿಯನ್ ಒಂದು ಜ್ಯೋತಿವರ್ಷ). ಇದರ ಅರ್ಥವೇನೆಂದರೆ ನಾವು ದೃಷ್ಟಿಸುವ ಒಂದು ನಿರ್ದಿಷ್ಟ. ಅರೆನಕ್ಷತ್ರದಿಂದ ಹೊರ

೧೯೮೬ರ ಸೆಪ್ಟೆಂಬರ್ ತಿಂಗಳಿನ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ "ದಿ ಹೆವೆನ್ಲಿ ವರ್ಲ್ಡ್ ಆಫ್ ಮಾರ್ಟೆನ್ ಸ್ಕಿಮಿಡ್" ಲೇಖನದ ಅನುವಾದ.

ಹೊಮ್ಮುವ ಬೆಳಕು ಆ ಅರೆನಕ್ಷತ್ರವನ್ನು ೧೧ ರಿಂದ ೧೨ ಸಾವಿರ ಮಿಲಿಯನ್ ಜ್ಯೋತಿ ವರ್ಷಗಳ ಹಿಂದೆ ಬಿಟ್ಟಂತದ್ದಾಗಿದೆ. ಬೇರೆ ಮಾತಿನಲ್ಲಿ ಹೇಳುವುದಾದರೆ ನಾವು ಅಷ್ಟು ಹಿಂದಿನ ಕಾಲವನ್ನು ಈಗ ನೋಡುತ್ತಿದ್ದೇವೆ ಎಂದು ಅರ್ಥ ಎಂದು ಸ್ಕಿಮಿಡ್ ಹೇಳುತ್ತಾರೆ.

ಅರೆನಕ್ಷತ್ರಗಳು 'ದಟ್ಟ ಸಾಗರದ ತಡಿಯುಡೆಯು ಉತ್ಸವಾಗ್ನಿ' ಎಂದು ಒಮ್ಮೆ ನಿರೂಪಿಸಲಾಗಿತ್ತೆಂದು ಅಳತೆಗೂ ಮೀರಿದ ಈ ದೂರ ತಿಳಿಸುವಂತೆ ಅರೆನಕ್ಷತ್ರಗಳು ವಿಶ್ವದ ಭೌತದ್ರವ್ಯಕ್ಕೆ ಒಂದು ಮಿತಿಯನ್ನೂ ಹಾಕಿವೆ—ನಾವು ಕೊನೆಯ ಭೌತದ್ರವ್ಯವನ್ನು ಪತ್ತೆಹಚ್ಚಬಹುದು. ಆದರೆ ಸ್ಕಿಮಿಡ್ ಹೇಳುವಂತೆ ಇನ್ನೂ ಅಸಂಖ್ಯಾತ ಅರೆ ನಕ್ಷತ್ರಗಳನ್ನು ಆವಿಷ್ಕರಿಸಬೇಕಾಗಿದೆ.

ಪ್ರಾರಂಭಿಕ ದೃಷ್ಟಾಂತ : ಅರೆನಕ್ಷತ್ರಗಳು ವಿಶೇಷವಾಗಿ ದೂರದಲ್ಲಿ ಕಾಣುವ ನಕ್ಷತ್ರಗಳ ತರಹ ಗೋಚರಿಸುತ್ತವೆ. ಅವುಗಳ ಶೋಧನೆ ಮಂದಗಾಮಿಯಾಗಿದ್ದು ಅತ್ಯಂತ ವಿಧಾನವಾಗಿರುವುದು. ಹವಾಯಿಯನ್ ಅಗ್ನಿ ಪರ್ವತದ ಮೌನಾಕಿಯ ಇಳಿಜಾರಿನ ಮೇಲೆ ಹೊಸ ವೀಕ್ಷಣಾಲಯವೊಂದನ್ನು ಕಟ್ಟಲು ಸ್ಕಿಮಿಡ್‌ನು ದೃಷ್ಟಿ ಹರಿಸುತ್ತಿದ್ದಾನೆ. ಅಲ್ಲಿಯ ಚಾಕ್ಷುಷ ದೂರದರ್ಶಕ (Keck) ಪ್ರಪಂಚದಲ್ಲೇ ಅತ್ಯಂತ ದೊಡ್ಡದಾಗಿದ್ದು, ಚಂದ್ರನಷ್ಟು ದೂರದಲ್ಲಿಟ್ಟಿರುವ ಒಂದು ಮೊಂಬತ್ತಿಯ ಬೆಳಕನ್ನು ಪತ್ತೆಹಚ್ಚುವಷ್ಟು ಶಕ್ತಿಶಾಲಿಯಾಗಿದೆ. "ಇದರಿಂದ ನಮಗೆ ಮತ್ತಷ್ಟು ಮಂದಪ್ರಕಾಶದ ನಕ್ಷತ್ರಗಳು, ನಕ್ಷತ್ರಮಂಡಲ ಮತ್ತು ವಿಶ್ವದ ತುತ್ತ ತುದಿ-ಕಾಲದ ತುತ್ತತುದಿಯಲ್ಲಿರುವ ತೀರಾ ಕಳೆಗುಂದಿದ ಹಾಗೂ ಅತಿದೂರದ ಅರೆನಕ್ಷತ್ರಗಳನ್ನೂ ಕೂಡ ನೋಡಲು ಸಾಧ್ಯವಾಗಿದೆ" ಎಂದು ಸ್ಕಿಮಿಡ್ ಹೇಳುತ್ತಾನೆ.

೪೦೦೦ ಸದಸ್ಯರುಳ್ಳ ಗೌರವಾನ್ವಿತ ಅಮೇರಿಕಾದ ಖಗೋಳ ವಿಜ್ಞಾನ ಸಂಸ್ಥೆಯ ಎರಡು ವರ್ಷಗಳ ಅಧ್ಯಕ್ಷ ಪದವಿಯ ಅವಧಿಯನ್ನು ಈಗ ತಾನೆ ಪೂರ್ಣಗೊಳಿಸಿರುವ ಮಾರ್ಟನ್ ಸ್ಕಿಮಿಡ್‌ನಿಗೆ ಭೂಮಿಯ ಮೇಲಿನ ಈ ಕ್ಷಣ ವಿಶೇಷ ತೃಪ್ತಿಯನ್ನು ತಂದಿದೆ. ಭೂಮಿಯಿಂದ ಅರೆನಕ್ಷತ್ರಗಳಿಗಿರುವ ದೂರದ ಬಗ್ಗೆ ಅವನ ಪ್ರಾರಂಭಿಕ ದೃಷ್ಟಾಂತಗಳನ್ನು ಶೋಧಿಸಿದ ೨೨ ವರ್ಷಗಳ ಅನಂತರ, ಅವನ ಅಭಿಪ್ರಾಯ ಮತ್ತು ಶೋಧನೆಗಳನ್ನು ವಿವರಿಸಲು ಒಂದು ಚೌಕಟ್ಟು ಒದಗಿಬಂತು. ಇಂದು ಇವು ಖಗೋಳಶಾಸ್ತ್ರದ ಅಡಿಗಲ್ಲಾಗಿವೆ.

'ಸ್ಕಿಮಿಡ್‌ನ ಅನವರತ ಶ್ರಮದ ಪ್ರತಿಫಲವಾಗಿ ಬಂದ ಅಭಿಪ್ರಾಯಗಳು ಈಗ ಹೊರಹೊಮ್ಮಿವೆ' ಎಂದು ಫೆಸಿಫಿಕ್ ಖಗೋಳ ವಿಜ್ಞಾನ ಸಂಘದ ಕಾರ್ಯಕಾರಿ ಅಧಿಕಾರಿ ಆ್ಯಂಡ್ರಿ ಪ್ರಾಕ್‌ನೋಯಿ ಹೇಳುತ್ತಾನೆ.

ಕ್ಯಾಲಿಫೋರ್ನಿಯಾದ ತನ್ನ ಭವ್ಯ ಹಾಗೂ ಸುಸಜ್ಜಿತವಾದ ಮನೆಯಲ್ಲಿ ಕುಳಿತ್ತು ಸ್ಕಿಮಿಡ್, ಹೇಗೆ ೧೨ ವರ್ಷದ ಬಾಲಕ ಅಂದಿನ ಆಕ್ರಮಿತ ಹಾಲೆಂಡಿನಲ್ಲಿ ತನ್ನ ಮೊಟ್ಟ ಮೊದಲ ದೂರದರ್ಶಕವನ್ನು ರಚಿಸಿದನೆಂದು ಸಂತೋಷದಿಂದ ವಿವರಿಸುತ್ತಾನೆ. ಬಾಲಕ ಮಾರ್ಟನ್ ತನ್ನ ಖಗೋಲವೇತ್ತ ಹವ್ಯಾಸಿ ಚಿಕ್ಕಪ್ಪ ಡಿಕ್ ಕಳುಹಿಸಿದ ದೂರದರ್ಶಕದ

ಬಗ್ಗೆ "ಇದರೊಂದಿಗೆ ನಾನೇನು ಮಾಡಲಿ?" ಎಂದು ಬರೆದಾಗ ಡಿಕ್ ಮಾರುತ್ತರದಲ್ಲಿ ಕೆಲವು ನಕ್ಷತ್ರ ಪುಂಜದಲ್ಲಿರುವ ದ್ವಿನಕ್ಷತ್ರಗಳನ್ನು ಹುಡುಕು ಎಂದು ಹೇಳಿದ್ದರೇ ಹೊರತು ಈ ಬಾಲಕನಿಗೆ ಹೇಗೆ ಹುಡುಕಬೇಕೆಂಬ ಬಗ್ಗೆ ಮತ್ಯಾವುದೇ ಸುಳಿವುಗಳನ್ನು ನೀಡಿರಲಿಲ್ಲ. 'ಆದ್ದರಿಂದ ನಾನು ಸಹಜವಾಗಿಯೇ ಮುನ್ಸಿಪಲ್ ಲೈಬ್ರರಿಯ ಪುಸ್ತಕಗಳಿಗೆ ಮೊರೆ ಹೋಗಬೇಕಾಯಿತು. ಅಲ್ಲಿ ಮಾಹಿತಿಯನ್ನು ಬರೆದುಕೊಂಡೆ. ಅಂದು ಬರೆದ ಮಾಹಿತಿ ಇನ್ನೂ ನನ್ನ ಬಳಿ ಇದೆ."

ಅದ್ಭುತ ಕಾರ್ಯ : ೧೯೪೪ರಲ್ಲಿ ಜರ್ಮನಿಯ ಪಡೆ ಶಾಲೆಯನ್ನು ಮುಚ್ಚಿಸಿದಾಗ, ಸ್ಕಿಮಿಡ್ ಮತ್ತು ಖಗೋಳ ವಿಜ್ಞಾನದಲ್ಲಿ ಒಲವುಳ್ಳ ಆತನ ಮತ್ತೊಬ್ಬ ಸ್ನೇಹಿತ ಜಾನ್ ಬೋರ್ಗ್‌ಮನ್*, ತಮ್ಮ ಹವ್ಯಾಸದೆಡೆಗೆ ಹೆಚ್ಚು ವೇಳೆಯನ್ನು ವಿನಿಯೋಗಿಸಲು ಸ್ವತಂತ್ರರಾದರು. "ಅಂದು ಮಾಂಸ, ಸಕ್ಕರೆ, ತರಕಾರಿ ಮತ್ತು ಪೆಟ್ರೋಲ್ ನಿಮಗೆ ದೊರೆಯುತ್ತಿರಲಿಲ್ಲ. ಆಶ್ಚರ್ಯವೆಂದರೆ ಲೋಹದ ಕೆಲಸ ಮಾಡಿಕೊಳ್ಳಬಹುದಿತ್ತು. ಆ ಕಾರಣ ನಾನು ಮತ್ತು ಜಾನ್ ಖಗೋಳ ವಿಜ್ಞಾನಕ್ಕೆ ಸಂಬಂಧಪಟ್ಟ ಅನೇಕ ತಾಂತ್ರಿಕ ಕೆಲಸಗಳನ್ನು ಮಾಡಿಕೊಳ್ಳಲು ಸಾಧ್ಯವಾಯಿತು" ಎಂದು ಸ್ಕಿಮಿಡ್ ಹೇಳುತ್ತಾನೆ.

೧೯೪೯ರಲ್ಲಿ ಗ್ರೋನಿನ್‌ಜನ್ ವಿಶ್ವವಿದ್ಯಾಲಯ ಪದವಿ ಪಡೆದ ಬಳಿಕ ಸ್ಕಿಮಿಡ್ ಭೂಮಿಯ ಸಮಭಾಜಕ ವೃತ್ತದ ಸನಿಹದಿಂದ ನಕ್ಷತ್ರಗಳನ್ನು ವೀಕ್ಷಿಸುತ್ತಾ ಹಾಗೂ ಅವುಗಳ ನಕ್ಷೆಯನ್ನು ಬರೆಯುತ್ತಾ ಒಂದು ವರ್ಷ ಕಾಲ ಕೆನ್ಯಾದಲ್ಲಿ ಕಳೆದ. ಹಾಲೆಂಡಿಗೆ ಮರಳಿದವನು ಲೈಡೆನ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಮುಂದುವರೆಸುತ್ತ ಜೊತೆಗೆ ನಕ್ಷತ್ರಮಂಡಲದ ಜಲಜನಕದ ನಾಗಮುರಿಗೆಯ ರಚನೆಯ ಬಗ್ಗೆ ಪ್ರಪ್ರಥಮವಾಗಿ ಶೋಧನೆ ನಡೆಸಿದ. ಡಾಕ್ಟರಲ್ ಪದವಿಗಾಗಿ ಸಲ್ಲಿಸಿದ ತನ್ನ ನಿಬಂಧದಲ್ಲಿ ಹೇಗೆ ನಕ್ಷತ್ರ ಮಂಡಲದ ಆವರ್ತ ಗುರುತ್ವಾಕರ್ಷಣೆಯಿಂದ ನಿಷ್ಕರ್ಷಿಸಲ್ಪಟ್ಟಿದೆ ಎಂಬುದನ್ನು ಪ್ರಥಮವಾಗಿ ಗಣಿತಶಾಸ್ತ್ರದ ಮಾದರಿಯಲ್ಲಿ ವರ್ಣಿಸಿದ. ಒಬ್ಬ ಸ್ನಾತಕೋತ್ತರ ವಿದ್ಯಾರ್ಥಿಗೆ ಅದೊಂದು ಅದ್ಭುತ ಕಾರ್ಯವಾಗಿತ್ತು. ೧೯೫೦ರ ಮಧ್ಯಭಾಗದಿಂದ ಹೊಸ ಶೋಧನೆ ಉದ್ಭವಿಸುವವರೆಗೂ ಈ ಶೋಧನೆ ಜ್ಯೋತಿಷ್ಯ ಸಿದ್ಧಾಂತದಲ್ಲಿ ಪ್ರಾಯೋಗಿಕವಾಗಿ ಪ್ರಯೋಜನಕಾರಿಯಾಗಿದೆ.

ಸ್ಕಿಮಿಡ್‌ನ ಪ್ರತಿಭೆ ಆತನಿಗೆ ಡಾಕ್ಟರಲ್ ಪದವಿಯ ಅನಂತರ ಕ್ಯಾಲಿಫೋರ್ನಿಯಾದ ಮೌಂಟ್ ವಿಲ್‌ಸನ್ ವೀಕ್ಷಣಾಲಯದಲ್ಲಿ ಎರಡು ವರ್ಷದ ಸಂಶೋಧನೆ ಕೈಗೊಳ್ಳಲು ಕಾರ್ನೆಗಿ ವಿದ್ಯಾರ್ಥಿವೇತನ ದೊರಕಿಸಿತು. ಅನಂತರ ೧೯೫೯ರಲ್ಲಿ ಕ್ಯಾಲ್ಟೆಕ್‌ನಲ್ಲಿ ಸ್ಕಿಮಿಡ್‌ನಿಗೆ ಉಪನ್ಯಾಸಕ ಹುದ್ದೆ ಲಭಿಸಿತು.

೧೯೫೦ರ ಅಂತ್ಯದ ವೇಳೆಗೆ ಖಗೋಳವೇತ್ತರು ರೇಡಿಯೋ ದೂರದರ್ಶಕದ ಮೂಲಕ ಬಾನನ್ನು ನಿರ್ದೇಶಿಸುವ ಹಂತ ತಲುಪಿದರು. ಬ್ರಹ್ಮಾಂಡದಲ್ಲಿ ರೇಡಿಯೋ ಶಕ್ತಿಯು ಭಾರಿ ಸಿಡಿತವೊಂದು ಪತ್ತೆಯಾಯಿತು. ಇದರ ಕುರುಹು ಅತಿದೂರದ ನಕ್ಷತ್ರ ಮಂಡಲದವರೆಗೂ ವ್ಯಾಪಿಸಿತು. ಆದಾಗ್ಯೂ, ಅಪರಿಚಿತ ನೀಲಿ ವಸ್ತುಗಳಿಂದ ಬೇರೆ

* ಇಂದು ಇವನು ಗ್ರೋನಿನ್‌ಜನ್ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದಾನೆ.

ಬೇರೆ ವಿವಿಧ ಸಂಜ್ಞೆಗಳು ಸುಸ್ಪಷ್ಟವಾಗಿ ಬರುತ್ತಿದ್ದು, ಅವುಗಳನ್ನು ಕ್ವಾಸಿ–ಸ್ಟೆಲ್ಲಾರ್ ರೇಡಿಯೋ ಸೋರ್ಸಸ್ ಎಂದೂ ಅವುಗಳ ಹ್ರಸ್ವರೂಪ–ಕ್ವಾಸಾರ್ ಅಥವಾ ಅರೆನಕ್ಷತ್ರ ಎಂದು ನಂತರ ಕರೆದರು.

ಕುತೂಹಲ ಫಲಿತಾಂಶ: ನಕ್ಷತ್ರಗಳಿಂದ ಹೊರಹೊಮ್ಮುವ ಸಾಧಾರಣ ಬೆಳಕಿನ ರೋಹಿತದಲ್ಲಿ ಬೆಳಕು ಕಾಮನ ಬಿಲ್ಲಿನ ಬಣ್ಣವನ್ನು ಮತ್ತು ಅಲೆಯುದ್ದ ಅಥವಾ ತರಂಗಾಂತರವನ್ನು ಪಸರಿಸುತ್ತದೆ. ಒಂದು ನಿರ್ದಿಷ್ಟ ನಕ್ಷತ್ರದ ಮೂಲ ವಸ್ತುಗಳನ್ನು ಒಂದು ಗೊತ್ತಾದ ತರಂಗಾಂತರದಲ್ಲಿ ಅದರ ಕಪ್ಪು ಅಥವಾ ಪ್ರಜ್ವಲ ಪಟ್ಟಿಯಿಂದ ಪತ್ತೆಹಚ್ಚಬಹುದು. ಈ ಪಟ್ಟಿಗಳು ಬೆರಳಚ್ಚು ತಜ್ಞರ ರೀತಿಯಲ್ಲಿ ಸಹಕಾರಿಯಾಗಿವೆ. ಆದರೆ ಅರೆನಕ್ಷತ್ರಗಳ ರೋಹಿತವು ಪಟ್ಟಿಗಳನ್ನು ಹೊಂದಿದ್ದು ಇವು ವಿಷಮ ತರಂಗಾಂತರದಲ್ಲಿ ಗೋಚರಕ್ಕೆ ಬರುತ್ತವೆ. ನಕ್ಷತ್ರಗಳು ಮತ್ತು ನಕ್ಷತ್ರ ಮಂಡಲದ ಬಗ್ಗೆ ತಿಳಿದಿರುವುದಕ್ಕೆ ಹೋಲಿಸಿದರೆ ಅರೆನಕ್ಷತ್ರಗಳ ಬಗ್ಗೆ ಏನೂ ಅರಿವಿಗೆ ಬಂದಿಲ್ಲ.

ಇತ್ತೀಚೆಗೆ ಆಸ್ಟ್ರೇಲಿಯಾದ ಖಗೋಲವೆತ್ತರು ಪತ್ತೆಹಚ್ಚಿದ ೩C ೨೭೩ ಎಂಬ ಶಕ್ತಿಯುತ ರೇಡಿಯೋ ಮೂಲದ ಅರೆನಕ್ಷತ್ರದ ರೋಹಿತದ ಬಗ್ಗೆ ಸ್ಕಿಮಿಡ್‌ನಿಗೆ ೧೯೬೩ರ ಆದಿಭಾಗದಲ್ಲೇ ಸಮಸ್ಯೆಯುಂಟಾಗಿತ್ತು. ರೋಹಿತದಡೆಗೆ ದೃಷ್ಟಿಹರಿಸಿದಾಗ ಅವನಿಗೆ ೬ ಪ್ರಜ್ವಲ ಪಟ್ಟಿಗಳು ಕಂಡು ಬಂದವು. "ಅವುಗಳಲ್ಲಿ ಎರಡರ ಬಗ್ಗೆ ಏನೂ ಅರಿವಿಗೆ ಬರಲಿಲ್ಲ. ಆದರೆ ನಾನು ಆ ಜೋಡಿ ಪಟ್ಟಿಗಳನ್ನು ಅಲಕ್ಷಿಸಿದಾಗ ಇನ್ನುಳಿದ ನಾಲ್ಕು ಪಟ್ಟಿಗಳು ವ್ಯವಸ್ಥಿತವಾಗಿ ಅನುಕ್ರಮವಾದ ಅಂತರ ಮತ್ತು ಬಲವನ್ನು ಹೊಂದಿರುವುದು ಗೋಚರಿಸಿತು. ನಾನು ಶಕ್ತಿಯ ಸಮತಲದ ಚಿತ್ರವನ್ನು ಬಿಡಿಸಲು ನಿರ್ಧರಿಸಿದೆ" ಎಂದು ಸ್ಕಿಮಿಡ್ ಹೇಳುತ್ತಾನೆ. ರೇಖೆಗಳು ಸುಪರಿಚಿತವಿದ್ದವು. ವಿಶ್ವದಲ್ಲಿ ಅಸಾದೃಶ್ಯವಾಗಿರುವ ಮೂಲವಸ್ತು ಹೈಡ್ರೋಜನ್‌ನಂತೆ ಹೋಲುವ ಮಾದರಿಯನ್ನು ಈ ರೇಖೆಗಳು ಮೂಡಿಸಿದ್ದವು.

ವಿಕಸಿಸುವ ವಿಶ್ವ ಕ್ಷೀರಪಥದಿಂದ ಈ ಬೆಳಕಿನ ತರಂಗಗಳನ್ನು ಬಹುದೂರಕ್ಕೆ ಕೊಂಡೊಯ್ಯುವ ಪ್ರಯುಕ್ತ ಬಹುದೂರದ ನಕ್ಷತ್ರಮಂಡಲದಿಂದ ಬರುವ ಬೆಳಕಿನ ತರಂಗಗಳು ಲಂಬಿಸುತ್ತವೆ ಅಥವಾ 'ರಕ್ತಪಲ್ಲಟ' ಗೊಳ್ಳುತ್ತವೆ ಎಂದು ಬಹಳ ಹಿಂದಿನಿಂದ ವಿಜ್ಞಾನಿಗಳು ಭಾವಿಸಿದ್ದಾರೆ. ಇನ್ನೂ ದೂರದಲ್ಲಿ ಹಿಂದಕ್ಕೆ ಸರಿಯುವ ಅರೆನಕ್ಷತ್ರಗಳು ಅಥವಾ ನಕ್ಷತ್ರಮಂಡಲದಲ್ಲಿ ಅದರ ರಕ್ತಪಲ್ಲಟ ಮತ್ತೂ ದೊಡ್ಡದಿರುತ್ತದೆ. ಸ್ಕಿಮಿಡ್‌ನು ಜಾರು ಅಳತೆ ಪಟ್ಟಿ (ಸ್ಲೈಡ್ ರೂಲ್)ಯನ್ನು ತೆಗೆದುಕೊಂಡು ಲೆಕ್ಕಹಾಕಿದಾಗ ೩C೨೭೩ ಅರೆನಕ್ಷತ್ರದ ರೋಹಿತದಲ್ಲಿಯ ಪ್ರಜ್ವಲ ಪಟ್ಟಿ ಶೇ|| ೧೬ ರಷ್ಟು ರಕ್ತಪಲ್ಲಟಗೊಂಡಿರುವುದನ್ನು ಕಂಡುಕೊಂಡ. "ಮೊದಲನೆಯದಕ್ಕೆ ನಾನು ಅಲಕ್ಷಿಸಿದೆ. ಆದರೆ ಎರಡನೇ ಪಟ್ಟಿಯೂ ಶೇ|| ೧೬ ರಷ್ಟು ಪಲ್ಲಟಗೊಂಡಿದ್ದು ನೋಡಿದಾಗ ನನಗೆ ಕುತೂಹಲ ಕೆರಳಿತು" ಎನ್ನುತ್ತಾನೆ ಸ್ಕಿಮಿಡ್. ಯಾವಾಗ ಮೂರು ಮತ್ತು ನಾಲ್ಕನೆಯ ಪಟ್ಟಿ ಕೂಡ ಅದೇ ಫಲಿತಾಂಶವನ್ನು ಹೊರಗೆಡವಿದಾಗ ಸ್ಕಿಮಿಡ್‌ನಿಗೆ ಇದರಲ್ಲಿ ಏನೋ ಇದೆ ಎನಿಸಿತು.

ವಿಸ್ಮಯಗೊಳಿಸಿದ ಆವಿಷ್ಕಾರ: ಅರೆನಕ್ಷತ್ರ ೩C೪೮ರ ಬಗ್ಗೆ ಸಂಶೋಧನೆಯಲ್ಲಿ ನಿರತನಾಗಿದ್ದ ಸ್ನೇಹಿತ ಜೆಸ್ಸೆಗ್ರೀನ್ ಸ್ಟೈನ್‌ನನ್ನು ಆಹ್ವಾನಿಸಿದ. ಶೇ|| ೩೭ ರಷ್ಟು ರಕ್ತಪಲ್ಲಟ ೩C೪೮ನರೋಹಿತಕ್ಕೆ ಸರಿಹೊಂದುತ್ತದೆ ಎಂಬುದನ್ನು ಗಮನಿಸಿದ. ಆದರೆ ಅದು ಕುಚೋದ್ಯವಾಗುತ್ತದೆ. ಏಕೆಂದರೆ ಅರೆನಕ್ಷತ್ರವು ಅಂತಹ ಬೃಹತ್ ರಕ್ತಪಲ್ಲಟವು ಸೂಚಿಸುವುದಕ್ಕಿಂತ ಹೆಚ್ಚು ಭೂಮಿಗೆ ಸನಿಹದಲ್ಲಿದೆ ಎಂದು ಅವನು ಭಾವಿಸಿದ್ದ. ಸ್ಕಿಮಿಡ್‌ನ ಆವಿಷ್ಕಾರವನ್ನು ಆಲಿಸಿದ ಗ್ರೀನ್ ಸ್ಟೈನ್ ತನ್ನ ತಪ್ಪನ್ನು ಗ್ರಹಿಸಿಕೊಂಡ. ಆಗ ಸ್ಕಿಮಿಡ್ "ಆ ಎರಡು ಸಂಖ್ಯೆಗಳು ಸಮಸ್ತವನ್ನು ಸಮಜಾಯಿಸುತ್ತವೆ" ಎಂದ. ಸ್ಕಿಮಿಡ್ ಮತ್ತು ಗ್ರೀನ್‌ಸ್ಟೈನ್ ತತ್‌ಕ್ಷಣವೇ ನಿಜವಾಗಿಯೂ ಅರೆನಕ್ಷತ್ರಗಳು ಎಷ್ಟು ದೂರದಲ್ಲಿವೆ ಎಂಬುದನ್ನು ಕಂಡುಕೊಂಡರು. ೩C೨೭೩ ಅರೆನಕ್ಷತ್ರ ಭೂಮಿಯಿಂದ ಸುಮಾರು ೨ ಸಾವಿರ ಮಿಲಿಯನ್ ಜ್ಯೋತಿರ್ವರ್ಷಗಳಷ್ಟು ಹಾಗೂ ೩C೪೮ ೪ ಸಾವಿರ ಮಿಲಿಯನ್ ಜ್ಯೋತಿರ್ವರ್ಷಗಳಿಗೂ ಹೆಚ್ಚು ದೂರದಲ್ಲಿರುವುದನ್ನು ಪತ್ತೆಹಚ್ಚಿದರು.

ಈ ಆವಿಷ್ಕಾರ ಖಗೋಳ ಲೋಕವನ್ನು ಅಲ್ಲಾಡಿಸಿತು. ತನ್ನ ಈ ಶೋಧನೆಯಿಂದ ಸ್ಕಿಮಿಡ್ ಟೈಮ್ ನಿಯತಕಾಲಿಕೆಯ ಮುಖಪುಟದಲ್ಲಿ ರಾರಾಜಿಸಿದ. ಆದರೆ ೩೩ ವರ್ಷ ವಯಸ್ಸಿನ ಈ ಡಚ್ ಪ್ರಮುಖನ ಸಂಶೋಧನೆ ಕೇವಲ ಪ್ರಾರಂಭಿಕವಾಗಿತ್ತಷ್ಟೆ. ಅವನಿನ್ನೂ ತನ್ನ ವಾದವನ್ನು ಬೆಂಬಲಿಸುವುದು ಮತ್ತು ಬಹಳಷ್ಟು ದೂರದಲ್ಲಿರುವ ಅರೆನಕ್ಷತ್ರಗಳನ್ನು ಕಂಡು ಹಿಡಿಯುವುದೂ ಮಾಡಬೇಕಾಗಿದೆ.

೧೯೬೪ರಲ್ಲಿ ಸ್ಕಿಮಿಡನು ೩C ೪೮ ಗಿಂತಲೂ ಅತಿ ದೂರದಲ್ಲಿರುವ ಶೇ|| ೫೫ರಷ್ಟು ರಕ್ತಪಲ್ಲಟವಿರುವ ಅರೆನಕ್ಷತ್ರವೊಂದನ್ನು ಆವಿಷ್ಕರಿಸಿದನು. ಒಂದು ವರ್ಷಗಳ ಅನಂತರ ಇನ್ನೂ ದೂರದಲ್ಲಿರುವ ಶೇ|| ೧೦೦ ಮತ್ತು ಶೇ|| ೨೦೦ ರಷ್ಟು ರಕ್ತಪಲ್ಲಟ ಹೊಂದಿರುವ ಅರೆನಕ್ಷತ್ರಗಳನ್ನು ಪತ್ತೆ ಹಚ್ಚಿದನು. ೧೯೭೩ ರಲ್ಲಿ ಒಂದು ಅರೆನಕ್ಷತ್ರವು ಶೇ|| ೩೫೩ರ ರಕ್ತಪಲ್ಲಟದೊಂದಿಗೆ ಬೆಳಕಿನ ವೇಗದ ಶೇ|| ೯೧ ರಷ್ಟು ವೇಗದಲ್ಲಿ ನಮ್ಮ ನಕ್ಷತ್ರಮಂಡಲದಿಂದ ಹಿಂದೆ ಸರಿದುದನ್ನು ಪತ್ತೆಹಚ್ಚಿದ.

೧೯೮೭ರ ಸೆಪ್ಟೆಂಬರ್‌ನಲ್ಲಿ ಆಸ್ಟ್ರೇಲಿಯಾದ ಖಗೋಳ ಶಾಸ್ತ್ರಜ್ಞರು, ಪ್ರಚಲಿತ 'ಚಾಂಪಿಯನ್' ಪಿ. ಕೆ. ಎಸ್. ೨೦೦೦–೩೩೦ನ್ನು ಆವಿಷ್ಕರಿಸಿದರು. ಭೂಮಿಯಿಂದ ೧೨ ಸಾವಿರ ಮಿಲಿಯನ್ ಜ್ಯೋತಿರ್ವರ್ಷಗಳಷ್ಟು ದೂರದಲ್ಲಿ ಶೇ|| ೩೭೮ ರಷ್ಟು ಭಾರಿ ರಕ್ತಪಲ್ಲಟದೊಂದಿಗೆ ಇರುವ ಅರೆನಕ್ಷತ್ರವೊಂದನ್ನು ಪತ್ತೆ ಮಾಡಿದರು. ಆದರೆ ಅಷ್ಟು ದೂರದ ಅರೆನಕ್ಷತ್ರಗಳು ಬಹಳ ಅಪರೂಪ. "ಇನ್ನೂ ದೂರದಲ್ಲಿ ಯಾವುದೇ ಅರೆನಕ್ಷತ್ರಗಳನ್ನು ಕಾಣಲಾರೆವೆಂಬ ಹೇಳಿಕೆಯನ್ನು ನಾನು ಒಪ್ಪಿಕೊಳ್ಳಲು ಸಂಪೂರ್ಣ ಶಕ್ಯನಿದ್ದೇನೆ" ಎನ್ನುತ್ತಾರೆ ಸ್ಕಿಮಿಡ್.

ಮುಂದುರಿದ ಬೇಟೆ: ಅರೆ ನಕ್ಷತ್ರಗಳು ಗೂಢವಾದ ಕೃಷ್ಣವಿವರಗಳ ಬಗ್ಗೆ ಖಗೋಳ ಭೌತ ವಿಜ್ಞಾನಿಗಳಿಗೆ ಹೆಚ್ಚಿನ ಮಾಹಿತಿಯನ್ನು ನೀಡಿವೆ—ಪ್ರಾಯಶಃ ಮುರಿದುಬಿದ್ದ ನಕ್ಷತ್ರ ಮಂಡಲದ ಕುರುಹು ಅಥವಾ ನಕ್ಷತ್ರಮಂಡಲದ ಯಾವುದಾದರೂ ಭಾಗ–ಅಲ್ಲಿಂದ ಬೆಳಕು ತಪ್ಪಿಸಿಕೊಳ್ಳಲಾರದಷ್ಟು ಗುರುತ್ವಾಕರ್ಷಣ ಶಕ್ತಿ

ಅಧಿಕವಾಗಿರುತ್ತದೆ. ವಿಜ್ಞಾನಿಗಳ ಪ್ರಕಾರ ಈ ಕೃಷ್ಣವಿವರಗಳು ಅರೆನಕ್ಷತ್ರಗಳ ಕೇಂದ್ರ ಭಾಗದಲ್ಲಿವೆ. ಕೃಷ್ಣವಿವರಗಳಲ್ಲಿರುವ ಈ ದೈತ್ಯಶಕ್ತಿ ಯಾವ ಪ್ರಕ್ರಿಯೆಯ ಮೂಲಕ ಉದ್ಭವಿಸುತ್ತದೆ ಎಂಬುದು ಇನ್ನೂ ತಿಳಿದು ಬಂದಿಲ್ಲ. ಕೃಷ್ಣವಿವರಗಳಲ್ಲಿರುವ ಅಮೋಘ ದೈತ್ಯಶಕ್ತಿ ಪ್ರಜ್ವಲ ಅರೆನಕ್ಷತ್ರಗಳಿಗೆ ಇಂಧನವಾಗಿರಬಹುದು. ಆದಾಗ್ಯೂ ಈ ಬಗ್ಗೆ ಯಾವುದೇ ನಿಶ್ಚಿತ ಪುರಾವೆ ಅಸ್ತಿತ್ವದಲ್ಲಿಲ್ಲದಿದ್ದರೂ ಕೃಷ್ಣವಿವರಗಳು ಹೇಗೆ ಊಹೆಗೂ ಮೀರಿದ ಈ ದೈತ್ಯಶಕ್ತಿಯನ್ನು ಹೊಂದಿವೆ ಎಂದು ಮಾತ್ರ ವಿವರಿಸಬಲ್ಲವು.

ಮೌನಾಕಿಯಲ್ಲಿ ಸ್ಥಾಪಿಸಲ್ಪಡುವ ಸಂಯುಕ್ತ ಸಂಸ್ಥಾನದ ಬಾಹ್ಯಾಕಾಶ ನೌಕೆಯಿಂದ ಉಡಾಯಿಸುವ ಹೊಸ ಚಾಕ್ಷುಷದೂರದರ್ಶಕ ಮತ್ತು ಇನ್‌ಫ್ರಾ-ರೆಡ್ ಬಾಹ್ಯಾಕಾಶ ದೂರದರ್ಶಕ ೧೯೯೩ರ ವೇಳೆಗೆ ಅಂತರಿಕ್ಷದಲ್ಲಿ ಸುತ್ತುಹಾಕುವುದಿದ್ದು, ಇದರ ಸಹಾಯದಿಂದ ಪ್ರಾಯಶಃ ದೂರದ ಮಂದಪ್ರಕಾಶ ಸೂಸುವ ಅರೆನಕ್ಷತ್ರಗಳ ಭೇಟಿ ಮುಂದುವರೆಯಬಹುದು.

ಸ್ಕಿಮಿಡ್‌ನು ಈ ಹೊಸ ಚಾಕ್ಷುಷ ದೂರದರ್ಶಕದ ಬಗ್ಗೆ ಆಶಾಭಾವನೆ ಇಟ್ಟುಕೊಂಡಿದ್ದಾನೆ. "ಅದು ವಾತಾವರಣದ ಮೇಲ್ಮಟ್ಟದಲ್ಲಿರುತ್ತದೆ. ಭೂಮಿಯ ಮೇಲಿನ ದೂರದರ್ಶಕವಾದರೆ ಚಿತ್ರಗಳನ್ನು ಅಸ್ಪಷ್ಟಗೊಳಿಸುವುದು. ಇದು ನಮಗೆ ಅತಿಸೂಕ್ಷ್ಮ ವಿವರಗಳನ್ನು ನೀಡುತ್ತದೆ" ಎಂದು ಹೇಳುತ್ತಾನೆ.

ಕಾಲದ ತುತ್ತತುದಿ–ಅಗಾಧ ಆಕಾಶವನ್ನು ಅವನು ದಿಟ್ಟಿಸಿದಾಗ ಮಾರ್ಟನ್ ಸ್ಕಿಮಿಡ್‌ನಿಗೆ ಏನನ್ನಿಸಿತು ? "ಯಾವೊಬ್ಬನೂ ನಿಸ್ಸಹಾಯಕ. ಆದರೆ ಅವನು ದಿಗ್‌ಭ್ರಮೆಗೊಳ್ಳುತ್ತಾನೆ. ಈ ಸುವ್ಯವಸ್ಥಿತ ಬ್ರಹ್ಮಾಂಡದ ಬಗ್ಗೆ ವಿಜ್ಞಾನಿಗಳು ಹೆಚ್ಚು ಹೆಚ್ಚು ವಿವರಿಸಬಲ್ಲರು. ಆದರೆ ಈ ಬ್ರಹ್ಮಾಂಡ ಅಥವಾ ಮಾನವಕುಲ ಏತಕ್ಕೆ ಇಲ್ಲಿದೆ ಎಂಬುದನ್ನು ಹೇಳಲಾರರು. ಖಗೋಳ ವಿಜ್ಞಾನದ ಆವಿಷ್ಕಾರವು ಮಹಾಕಾವ್ಯದಿಂದ, ಕಲೆಯಿಂದ ಮತ್ತು ಸಂಗೀತದಿಂದ ದೊರೆಯುವ ಅನುಭವ ಸಂವೇದನಾ ಸ್ಫೂರ್ತಿಯನ್ನು ಹಾಗೂ ಅದು ಆತ್ಮೋದ್ಧಾರವನ್ನು ಮಾಡಬಲ್ಲದು" ಎಂದು ಅವನು ಹೇಳುತ್ತಾನೆ.

ಅನುವಾದ : ಎಸ್ ಎನ್. ಲಕ್ಷ್ಮೀಪತಿ

ಸಾಧಾರಣವಾಗಿ ಹೇಳುವುದಾದರೆ ಪಾಕಶಾಸ್ತ್ರದ ಶೋಧನಾನಂತರ ಮನುಕುಲ ನಿಸರ್ಗ ಬೇಡುವುದರ ಎರಡರಷ್ಟನ್ನು ತಿನ್ನುತ್ತಿದೆ.

ಬೆಂಜಮಿನ್ ಫ್ರ್ಯಾಂಕ್ಲಿನ್

ಹಾಸಿಗೆಯಡಿಯಲ್ಲಿ ಅಪ್ಪ ಗೊಂಬೆ

ಎರ್ಮಾ ಬಾಮ್‌ಬೆಕ್

ನಾನೊಂದು ಚಿಕ್ಕ ಮಗುವಾಗಿದ್ದಾಗ, ಒಬ್ಬ ತಂದೆಯೆಂದರೆ (ಫ್ರಿಜ್‌ನ) ಶೀತಕಾರಿಯೊಳಗಣ ಬೆಳಕಿದ್ದ ಹಾಗೆ. ಪ್ರತಿ ಮನೆಗೂ ಇರುತ್ತಿತ್ತು ಒಂದು. ಆದರೆ ಒಮ್ಮೆ ಅದರ ಬಾಗಿಲು ಮುಚ್ಚಿತೆಂದರೆ ಆಮೇಲೆ ಅದರ ಉಪಯೋಗವೇನು ಎಂಬುದು ಯಾರಿಗೂ ಗೊತ್ತಿಲ್ಲ.

ಪ್ರತಿ ಬೆಳಗ್ಗೆ ಮನೆ ಬಿಟ್ಟು ತೆರಳುತ್ತಿದ್ದ ನನ್ನ ತಂದೆ ರಾತ್ರಿ ಮತ್ತೆ ಎಲ್ಲರನ್ನೂ ಕಾಣಲು ತವಕಿಸುತ್ತಿದ್ದ ಹಾಗಿತ್ತು.

ಮನೆಯಲ್ಲಿ ಯಾರೊಬ್ಬರಿಂದಲೂ ಆಗದ ಉಪ್ಪಿನಕಾಯಿ ಭರಣಿಯ ಮುಚ್ಚಳ ತೆರೆವ ಕೆಲಸ ಆತ ಮಾಡುತ್ತಿದ್ದ.

ನಮ್ಮ ಇಡೀ ಮನೆಯಲ್ಲಿ ಏಕಾಂಗಿಯಾಗಿ ನೆಲಮಾಳಿಗೆಗೆ ಹೋಗಿ ಬರಲು ಭಯವಿಲ್ಲದಿದ್ದವನೂ ಆತ ಮಾತ್ರ.

ಗಡ್ಡ ಬೋಳಿಸುವಾಗ ಆತನಿಗೆ ಗಾಯವಾಗುತ್ತಿತ್ತಾದರೂ ಯಾರೂ ಆ ಗಾಯಕ್ಕೆ ಮುತ್ತಿಡುತ್ತಿದ್ದುದಿಲ್ಲ. ಮಾತ್ರವಲ್ಲ ಆ ಬಗ್ಗೆ ಕಾಳಜಿ ಕೂಡ ಮಾಡುತ್ತಿರಲಿಲ್ಲ. ಮಳೆ ಬಂದಾಗೆಲ್ಲ ಕಾರನ್ನು ಅವನೇ ತಂದು ಮನೆ ಬಾಗಿಲಲ್ಲಿ ನಿಲ್ಲಿಸುವುದು ಗೊತ್ತಿದ್ದ ವಿಚಾರವೇ ಆಗಿತ್ತು.

ಯಾರಾದರೂ ಅಸೌಖ್ಯದಲ್ಲಿ ಮಲಗಿದರೆ ಹೊರ ಹೋಗಿ ಮದ್ದು ತರುತ್ತಿದ್ದವನೂ ಆತನೆ.

ಆತ ಸದಾ ಕಾರ್ಯಮಗ್ನನಾಗಿರುತ್ತಿದ್ದ. ಆತ ಇಲಿ ಕತ್ತರಿ ಇಡುತ್ತಿದ್ದ. ಮುಂಬಾಗಿಲಿಗೆ ಬಂದಾಗ ಗುಲಾಬಿಯ ಮುಳ್ಳು ಚುಚ್ಚದಂತೆ ಅದನ್ನು ಕಸಿಮಾಡುತ್ತಿದ್ದ. ನನ್ನ ರೋಲರ್ ಸ್ಕೇಟ್‌ಗಳಿಗೆ ಎಣ್ಣೆ ಕೊಡುತ್ತಿದ್ದ ಮತ್ತೆ ನಾನು ಸೈಕಲು ಪಡೆದಾಗ

೧೯೮೬ರ ಮಾರ್ಚ್ ತಿಂಗಳಿನ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಎರ್ಮಾ ಬಾಮ್‌ಬೆಕ್ ಅವರ "ಡ್ಯಾಡಿ ಡಾಲ್ ಅಂಡರ್ ದಿ ಬೆಡ್" ಲೇಖನದ ಭಾವಾನುವಾದ.

ನನಗೆ ಸವಾರಿಯು ಹಿಡಿತ ಸಿಗುವವರೆಗೆ ನನ್ನ ಬದಿಯಲ್ಲೇ ಓಡೋಡುತ್ತ ಕಡಿಮೆಯೆಂದರೂ ಒಂದು ಸಾವಿರ ಕಿಲೋಮೀಟರು ಸುತ್ತಿದ್ದ.

ಅವನೇ ನನ್ನ ಪ್ರಗತಿ ಪತ್ರಗಳಿಗೆಲ್ಲ ಹಸ್ತಾಕ್ಷರ ಹಾಕಿದವ. ಲೆಕ್ಕವಿಲ್ಲದಷ್ಟು ಛಾಯಾ ಚಿತ್ರಗಳನ್ನವ ತೆಗೆದಿದ್ದ ಆದರೂ ಒಂದರಲ್ಲೂ ಅವನಿರಲಿಲ್ಲ. ಅಮ್ಮನ ಜೋಲಾಡುವ ಬಟ್ಟೆ ಸರಿಗೆಯನ್ನು ವಾರಕ್ಕೊಮ್ಮೆ ಎಳೆದು ಕಟ್ಟುವ ಕೆಲಸವೂ ಅವನದೇ ಆಗಿತ್ತು.

ನಾನು ಇತರೆಲ್ಲರ ತಂದೆಗಳಿಗೂ ಹೆದರುತ್ತಿದ್ದೆ. ಆದರೆ ನನ್ನ ತಂದೆಗಲ್ಲ. ಒಮ್ಮೆ ನಾನವನಿಗಾಗಿ ಚಹ ಮಾಡಿದ್ದೆ. ಅದು ಬರೀ ಸಕ್ಕರೆ ನೀರಾಗಿತ್ತು. ಆದರೂ ಪುಟ್ಟ ಕುರ್ಚಿಯೊಂದರ ಮೇಲೆ ಕುಳಿತು 'ಬಹಳ ರುಚಿ' ಎನ್ನುತ್ತಾ ಹೀರಿದ. ಅವನ ಮುಖದಲ್ಲಿ ಒದ್ದಾಟ ಎದ್ದು ಕಾಣುತ್ತಿತ್ತು.

ನಾನೊಮ್ಮೆ ಅವನೊಂದಿಗೆ ಮೀನು ಶಿಕಾರಿಗೆ ಹೋಗಿದ್ದೆ. ನಾನು ನೀರಲ್ಲಿ ಕಲ್ಲುಗಳನ್ನೆಸೆದಾಗ ಆತ ನನ್ನನ್ನೇ ಅದರೊಳಗೆ ಎಸೆದುಬಿಡುವುದಾಗಿ ಗದರಿಸಿದ. ಆತ ಹಾಗೇ ಮಾಡಲಾರ ಎಂಬ ಭರವಸೆ ಇರಲಿಲ್ಲ ನನಗೆ. ಹಾಗಾಗಿ ನಾನಾ ವರ್ಷವೆಲ್ಲ ಅವನ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದೆ. ಕೊನೆಗೊಮ್ಮೆ ಅವನದು ಕೇವಲ ಹುಸಿ ಗದರಿಕೆ ಎಂದು ನಿರ್ಣಯಿಸಿಕೊಂಡು ಮತ್ತೊಂದು ಕಲ್ಲೆಸೆದೆ. ಪೋಕರ್ ಆಡುವುದರಲ್ಲಿ ಅವ ಭೂಪ.

ನಾನು 'ಮನೆಯಾಟ' ಆಡುವಾಗಲೆಲ್ಲ ತಾಯಿಗೊಂಬೆ ಮಾಡುವುದು ಬಹಳ ಇರುತ್ತಿತ್ತು. ತಂದೆಗೊಂಬೆ ಮಾಡಬೇಕಾದ್ದೇನು ಎಂಬುದು ನನಗೆಂದೂ ಗೊತ್ತಾಗುತ್ತಿರಲಿಲ್ಲ. ಹಾಗಾಗಿ ನಾನು ಅದನ್ನು 'ನಾನೀಗ ಕೆಲಸಕ್ಕೆ ಹೋಗುತ್ತಿದ್ದೇನೆ' ಎಂದು ಹೇಳಿಸಿ ಆಮೇಲೆ ಹಾಸಿಗೆಯ ಕೆಳಗೆ ತಳ್ಳಿ ಬಿಡುತ್ತಿದ್ದೆ.

ನನಗಾಗ ಒಂಭತ್ತು ವರ್ಷ ತುಂಬಿತ್ತು. ಒಂದು ಮುಂಜಾನೆ ನನ್ನ ಅಪ್ಪ ಹಾಸಿಗೆಯಿಂದೇಳಲಿಲ್ಲ ಕೆಲಸಕ್ಕೂ ಹೋಗಲಿಲ್ಲ.

ಆತ ಆಸ್ಪತ್ರೆಗೆ ಹೋದವ ಮರುದಿನ ಸತ್ತ.

ಆಗೆಲ್ಲ ಲೆಕ್ಕವಿಲ್ಲದಷ್ಟು ಜನ ಮನೆಗೆ ಬಂದರು. ಬಗೆ ಬಗೆಯ ಒಳ್ಳೊಳ್ಳೆ ತಿಂಡಿ ತಿನಿಸುಗಳನ್ನೆಲ್ಲ ತಂದರು. ಅಂದಿನಷ್ಟು ಸಹಚರಿಗಳು ನಮಗೆ ಹಿಂದೆಂದೂ ಇರಲಿಲ್ಲ.

ನಾನು ನನ್ನ ಕೋಣೆಗೆ ಹೋಗಿ ನನ್ನ ಹಾಸಿಗೆಯಡಿಯಲ್ಲಿ ತಂದೆಗೊಂಬೆಗಾಗಿ ತಡಕಾಡಿದೆ. ಅದು ನನಗೆ ಸಿಕ್ಕಾಗ ಧೂಳೆಲ್ಲ ಕೊಡವಿ, ನಾನವನನ್ನು ಹಾಸಿಗೆಯ ಮೇಲೆ ಕುಳ್ಳಿರಿಸಿದೆ.

ಆತ ಎಂದೂ ಏನೂ ಮಾಡಿರಲಿಲ್ಲ. ಅವನ ವಿರಹ ಅಷ್ಟೊಂದು ನೋವು ಕೊಟ್ಟೀತೆಂದೂ ನಾನು ತಿಳಿದೇ ಇರಲಿಲ್ಲ.

ಅದು ಈಗಲೂ ನೋವುಂಟುಮಾಡುತ್ತಿದೆ.

ಭಾವಾನುವಾದ: ಶಂಪಾ ದೈತೋಟ

ಪುಸ್ತಕ ವಿಭಾಗ

ಲಿಯೋ ಟಾಲ್‌ಸ್ಟಾಯ್ ಅವರ ಮಹಾ ಕಾದಂಬರಿ

ಯುದ್ಧ ಮತ್ತು ಶಾಂತಿ

ಅನುವಾದ
ಪ್ರೊ|| ದೇಜಗೌ



ಲಿಯೋ ಟಾಲ್‌ಸ್ಟಾಯ್

'ಈ ವಿಷಯದಲ್ಲಿ ದೇವರ ಪಾತ್ರ ಏನಿದೆ? ಅದಿರಲಿ, ಜರ್ಮನರು ಕಲಿಸಿಕೊಟ್ಟಿರುವ ಸೈನ್ಯ ವಿಜ್ಞಾನ ಎಂಥದು? ಯುದ್ಧ ತಂತ್ರದ ಸ್ವರೂಪವೇನು? ನೆಪೋಲಿಯನ್ನನೊಡನೆ ಸೆಣಸುವಲ್ಲಿ ಆ ತಂತ್ರ ಎಷ್ಟರ ಮಟ್ಟಿಗೆ ಸಾರ್ಥಕವಾಗುತ್ತದೆ?' ಎಂದು ಮುದುಕ ತನ್ನ ಅಚ್ಚುಮೆಚ್ಚಿನ ವಿಷಯವೆತ್ತಿಕೊಂಡನು.

'ಸ್ವಲ್ಪ ಸಮಯ ಕೊಡಿ. ನೆನಪು ಮಾಡಿಕೊಂಡು ವಿವರಿಸುತ್ತೇನೆ, ಅಪ್ಪ' ಎಂದು ಆಂಡ್ರೂ ನಕ್ಕನು. ತಂದೆಯ ನ್ಯೂನತೆಗಳು ಅವನ ಗೌರವಾದರಗಳಿಗೆ ಅಡ್ಡಿಯಾಗಲಿಲ್ಲವೆಂಬ ಭಾವನೆ ಅವನ ನಗೆಯಲ್ಲಿ ಸೂಚಿತವಾಗುತ್ತಿತ್ತು. 'ಸರಿಯಾಗಿ ತಳವೂರಲು ನನಗೆ ಸಮಯವೇ ಸಿಕ್ಕಿಲ್ಲ.'

'ಇದೆಲ್ಲ ಅಸಂಬದ್ಧ ಪ್ರಲಾಪ' ಎಂದು ಮುದುಕ, ತನ್ನ ಕೃತಕ ಕೇಶದ ಹೆರಳು ಬಿಗಿಯಾಗಿ ಕೂತಿದೆಯೋ ಇಲ್ಲವೋ ಎಂದು ಅದನ್ನಲುಗಿಸುತ್ತ, ಮಗನ ಕೈಹಿಡಿದುಕೊಂಡು, ದನಿ ಎತ್ತರಿಸಿ ನುಡಿದನು. 'ನಿನ್ನ ಮಡದಿಗಾಗಿ ಮನೆ ಸಿದ್ಧವಾಗಿದೆ. ಮೇರಿ ಅವಳನ್ನಲ್ಲಿಗೆ ಕರೆದೊಯ್ದು ತೋರಿಸುತ್ತಾಳೆ. ಅವರೇನು ಮಾತಿಗೆ ಕೂತರೆ ನಿಲ್ಲಿಸೋದೇ ಇಲ್ಲ. ಅದು ಹೆಂಗಸರ ಸ್ವಭಾವ. ಅವಳನ್ನು ಸಂತೋಷದಿಂದ ನೋಡಿಕೊಳ್ಳುತ್ತೇನೆ. ಕುಳಿತುಕೊಂಡು ಮಾತಾಡು. ಮೈಕೇಲ್‌ಸನ್ ಸೈನ್ಯದ ಬಗ್ಗೆ ನಾನು ತಿಳಿದಿರೋದು—ಟಾಲ್‌ಸ್ಟಾಯ್‌ದು ಸಹ....ಏಕಕಾಲಿಕ ಧಾಳಿ....ಆದರೆ ತೆಂಕಣ ಸೈನ್ಯ ಮಾಡುವುದೇನಿದೆ? ಪ್ರಷ್ಯ ತಟಸ್ಥವಾಗಿದೆ........ಅದು ನನಗೆ ಗೊತ್ತಿದೆ. ಆಸ್ಟ್ರಿಯಾ ಸಮಾಚಾರವೇನು?' ಎಂದವನು ಕುರ್ಚಿಯಿಂದೆದ್ದು ಶತಪಥ ತಿರುಗಲಾರಂಭಿಸಿದನು. ಉಡುಪಿಗೆ ಸಂಬಂಧಿಸಿದ ಬೇರೆ ಬೇರೆ ಪದಾರ್ಥಗಳನ್ನು ಹಿಡಿದುಕೊಂಡು ಟಿಖಾನ್ ಅವನ ಹಿಂದೆ ಓಡಾಡುತ್ತಿದ್ದನು. 'ಸ್ವೀಡನ್ ಏನು ಮಾಡುತ್ತಿದೆ? ಅವರು ಪಾಮರೇನಿಯಾ ಹೇಗೆ ದಾಟುತ್ತಾರೆ?'

ಆಂಡ್ರೂ ತನ್ನ ತಂದೆಯ ಒತ್ತಾಯದಿಂದ ತಪ್ಪಿಸಿಕೊಳ್ಳಲಾರದೆ, ಮೊದಮೊದಲು ಮನಸ್ಸಿಲ್ಲದ ಮನಸ್ಸಿನಿಂದ, ಕ್ರಮೇಣ ಅಧಿಕಾಧಿಕವಾಗುತ್ತಿದ್ದ ಉತ್ಸಾಹದಿಂದ, ತನಗರಿವಿಲ್ಲದಂತೆಯೇ, ಅಭ್ಯಾಸ ಬಲವೆಂಬಂತೆ ರಷ್ಯನ್ ಭಾಷೆಯಿಂದ ಫ್ರೆಂಚ್ ಭಾಷೆಗೆ ಮಾತು ಬದಲಿಸುತ್ತ, ಮುಂಬರುವ ಧಾಳಿಯ ಕಾರ್ಯಯೋಜನೆಯನ್ನು ವಿವರಿಸತೊಡಗಿದನು. ತಾಟಸ್ಥ್ಯದಿಂದ ಕದಲಿಸಿ, ಯುದ್ಧೋನ್ಮುಖಗೊಳಿಸುವ ಸಲುವಾಗಿ, ತೊಂಬತ್ತು ಸಾವಿರ ಪ್ರಮಾಣದ ಸೈನ್ಯ ಪ್ರಷ್ಯಾವನ್ನು ಬೆದರಿಸಬೇಕಾಗಿದೆಯೆಂದು ತಿಳಿಸಿದನು. ಆ ಸೈನ್ಯದ ಒಂದು ತುಕಡಿ ಸ್ಟ್ರಾಲ್‌ಸುಂಡಿನಲ್ಲಿ ಸ್ವೀಡನ್ನಿನ ಸೈನ್ಯವನ್ನೆಂತು ಸೇರಿಕೊಳ್ಳಬೇಕಾಗಿದೆಯೆಂಬುದನ್ನೂ, ಇನ್ನೂರಿಪ್ಪತ್ತು ಸಾವಿರ ಆಸ್ಟ್ರಿಯನ್ ಸೈನಿಕರು ನೂರು ಸಾವಿರ ರಷ್ಯನ್ ಸೈನಿಕರೊಡನೆ ಕೂಡಿಕೊಂಡು ಇಟಲಿಯಲ್ಲಿ, ಹಾಗೂ ರೈನ್ ನದಿಯ ದಡದ ಮೇಲೆ ಹೇಗೆ ಕಾರ್ಯಾಚರಣೆ ನಡೆಸಬೇಕಾಗಿದೆಯೆಂಬುದನ್ನೂ, ಐವತ್ತು ಸಾವಿರ ರಷ್ಯನ್ ಯೋಧರೂ, ಅಷ್ಟೇ ಸಂಖ್ಯೆಯ ಆಂಗ್ಲ ಯೋಧರೂ ಒಟ್ಟಾಗಿ ಹೇಗೆ ನೇಪಲ್ಸ್ ಮೇಲೆ ಧಾಳಿ ಮಾಡಬೇಕಾಗಿದೆಯೆಂಬುದನ್ನೂ, ಒಟ್ಟು ಐನೂರು ಸಾವಿರ ಸೈನಿಕರು ಫ್ರೆಂಚ್ ಸೈನ್ಯವನ್ನೆಂತು ನಾನಾ ಕಡೆಗಳಿಂದ ಎದುರಿಸಬೇಕಾಗಿದೆಯೆಂಬುದನ್ನೂ ಅವನು ಸವಿವರವಾಗಿ ತಿಳಿಸಿದನು. ಆ ವಿವರಣೆಯ ಸಮಯದಲ್ಲಿ ಮುದುಕ ಅಲ್ಪಸ್ವಲ್ಪವೂ

ಆಸಕ್ತಿ ತೋರಿಸಲಿಲ್ಲ. ಅದನ್ನು ಕೇಳಿಸಿಕೊಳ್ಳದವನಂತೆ, ತಿರುಗಾಡುತ್ತಲೇ ಬಟ್ಟೆ ಹಾಕಿಕೊಳ್ಳುತ್ತಿದ್ದನು. ಮೂರು ಸಾರಿ ಅನಿರೀಕ್ಷಿತವಾಗಿ ನಡುವೆ ಬಾಯಿ ಹಾಕಿದ್ದೂ ಉಂಟು. 'ಬಿಳಿಯುದು, ಬಿಳಿಯುದು' ಎಂದೊಮ್ಮೆ ಅವನು ಅಬ್ಬರಿಸಿ ಮಗನ ಮಾತಿಗಡ್ಡಿಯಾದದ್ದೂ ಉಂಟು.

ತನಗೆ ಬೇಕಾದ ನಡುಕವಚ ಸಿಗಲಿಲ್ಲವೆಂದು ಅವನೊಮ್ಮೆ ಆ ಅಬ್ಬರದ ಮೂಲಕ ಸೂಚನೆ ನೀಡಿದಂತಿತ್ತು. 'ಅವಳು ಬೇಗ ಹೆರುತ್ತಾಳೇನು? ಕಷ್ಟ ಕಷ್ಟ! ಸರಿ, ಮುಂದೆ ಸಾಗಲಿ' ಎಂದವನು ಮತ್ತೊಮ್ಮೆ ನಡುವೆ ತಲೆ ಹಾಕಿದನು.

ಆಂಡ್ರೂ ಯುದ್ಧ ವರ್ಣನೆ ಮುಗಿಸುವಷ್ಟರಲ್ಲಿ ಅವನು ಮೂರನೆಯ ಸಾರಿ ಮಧ್ಯೆ ಪ್ರವೇಶಿಸಿದನು. ಮುದುಕ ಮುಪ್ಪಿನ ಕರ್ಕಶ ಧ್ವನಿಯಲ್ಲಿ ಹಾಡಲಾರಂಭಿಸಿದನು. 'ಯುದ್ಧಕ್ಕೆ ಹೊರಟಿಹನು ಮಾರ್ಲ್‌ಬರೋ; ಅವನೆಂದು ಮರಳುವನೊ ದೇವರೇ ಬಲ್ಲ!'[1]

ಮಗನ ಮುಖದಲ್ಲಿ ಮಂದಹಾಸ ಚಿಮ್ಮಿತು. 'ಈ ಯೋಜನೆ ನನಗೊಪ್ಪಿಗೆಯಾಗಿದೆಯೆಂದು ಹೇಳುತ್ತಿಲ್ಲ. ಅದರ ಸದ್ಯದ ಸ್ವರೂಪವನ್ನು ವಿವರಿಸಿದ್ದೇನಷ್ಟೆ. ನೆಪೋಲಿಯನ್ ಸಹ ಇಷ್ಟು ಹೊತ್ತಿಗೆ ಯೋಜನೆ ರೂಪಿಸಿಕೊಂಡಿರುತ್ತಾನೆ. ಅದು ಕಳಪೆಯಾಗಿರಲಾರದು' ಎಂದವನು ನುಡಿದನು.

'ನೀನು ಹೊಸದೇನೂ ಹೇಳಿಲ್ಲ' ಎಂದು ಮುದುಕ ಸರಸರನೆ ಚಿಂತಾಮಗ್ನನಾಗಿ ಪುನರುಕ್ತಿಸಿದನು. 'ಅವನೆಂದು ಮರಳುವನೊ ದೇವರೇ ಬಲ್ಲ. ಭೋಜನ ಮಂದಿರಕ್ಕೆ ಹೋಗೋಣ, ನಡೆ.'

ಅಧ್ಯಾಯ ೨೭

ನಿಗದಿಯಾದ ಕಾಲಕ್ಕೆ ಸರಿಯಾಗಿ ರಾಜಕುಮಾರ ವೇಷಭೂಷಾಲಂಕೃತನಾಗಿ ಭೋಜನ ಮಂದಿರವನ್ನು ಪ್ರವೇಶಿಸಿದನು. ಆ ಹೊತ್ತಿಗಾಗಲೇ ಅವನ ಸೊಸೆ, ಮಗಳು ಮತ್ತು ಕುಮಾರಿ ಬೌರಿಯನ್ನೆ ಶಿಲ್ಪಿಯೊಡನೆ ಅಲ್ಲಿ ಕಾಯುತ್ತಿದ್ದರು. ಸಮಾಜದಲ್ಲಿ ಶಿಲ್ಪಿಯ ಸ್ಥಾನ ಕ್ಷುದ್ರವಾದುದಾಗಿತ್ತು. ತಾನಂಥ ಗೌರವಕ್ಕರ್ಹನಾದವನೆಂದು ಅವನು ತಿಳಿದಿರಲಿಲ್ಲ. ಆದರೂ ಯಜಮಾನನ ವಿಚಿತ್ರ ವರ್ತನೆಯಿಂದಾಗಿ ಅವನಿಗಲ್ಲಿ ಸ್ಥಾನ ಲಭಿಸಿತ್ತು. ರಾಜಕುಮಾರ ಸಾಮಾಜಿಕ ಭೇದಗಣನೆಯನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದನು. ಪ್ರಮುಖ ಸರ್ಕಾರೀ ಅಧಿಕಾರಿಗಳನ್ನು ಸಹ ಅವನು ತನ್ನ ಮೇಜಿಗೆ ಸೇರಿಸುತ್ತಿರಲಿಲ್ಲ. ಮಾನವರೆಲ್ಲ ಸಮಾನರೆನ್ನುವ ತತ್ವಕ್ಕೆ ನಿದರ್ಶನವೆನ್ನುವಂತೆ ಅವನು ಅನಿರೀಕ್ಷಿತವಾಗಿ ಮೈಕೇಲ್ ಇವಾನೊವಿಚ್‌ನನ್ನು ಆರಿಸಿಕೊಂಡಿದ್ದನು. ಮೈಕೇಲ್ ತನಗಿಂತ ಅಥವಾ ಅವಳಿಗಿಂತ ಏತರಲ್ಲಿಯೂ ಕಡಿಮೆ ಇಲ್ಲವೆಂದು ಅವನು ಅನೇಕ ಸಾರಿ ಮಗಳಿಗೆ ಮನದಟ್ಟು ಮಾಡಿಕೊಟ್ಟಿದ್ದನು. ಮೈಕೇಲ್ ಕರವಸ್ತ್ರದಿಂದ ಮೂಗು ಹಿಂಡುವ ನೆಲುವಾಗಿ ಆಗಾಗ್ಗೆ ಮೂಲೆಗೆ ಹೋಗುತ್ತಿದ್ದುದುಂಟು. ಭೋಜನ ಸಮಯದಲ್ಲಿ ರಾಜಕುಮಾರ ಇತರರಿಗಿಂತ ಮಿಗಿಲಾಗಿ ಗುಮ್ಮನಗುಸಕನಂತಿದ್ದ ಮೈಕೇಲನೊಡನೆ ವಿಶೇಷವಾಗಿ ಮಾತಾಡುತ್ತಿದ್ದನು.

---

1 ಇದೊಂದು ಜನಪ್ರಿಯ ಫ್ರೆಂಚ್ ಹಾಡು.

ಇತರ ಕೋಣೆಗಳಂತೆಯೇ ಭೋಜನಶಾಲೆಯೂ ವೈಭವೋಪೇತವಾಗಿತ್ತು. ರಾಜಕುಮಾರ ಪ್ರವೇಶಿಸುವ ತನಕ ಕುಟುಂಬದ ಜನ ನಿಂತುಕೊಂಡು ಕಾದಿರುತ್ತಿದ್ದರು. ಒಂದೊಂದು ಕುರ್ಚಿಯ ಹಿಂದೆಯೂ ಸೇವಕರು ನಿಂತಿರುತ್ತಿದ್ದರು. ತೋಳಿನಲ್ಲಿ ಚೌಕ ವನ್ನು ತೂಗಾಡಿಸುತ್ತಿದ್ದ ಪಾರುಪತ್ಯಗಾರ ಮೇಜಿನ ಮೇಲೆ ಕಣ್ಣಾಡಿಸುತ್ತ, ಸೇವಕರಿಗೆ ಸನ್ನೆ ಮಾಡುತ್ತ, ಗಡಿಯಾರದ ಕಡೆಗೂ ರಾಜಕುಮಾರ ಪ್ರವೇಶಿಸಲಿದ್ದ ಬಾಗಿಲಿನ ಕಡೆಗೂ ದಿಟ್ಟಿಹರಿಸುತ್ತ, ಕಾರ್ಯನಿರತನಾಗಿದ್ದನು. ತನಗೆ ಹೊಸದೆಂದು ತೋರಿದ, ಬಲ್ಕೋನ್‌ಸ್ಕಿ ರಾಜಕುಮಾರರ ವಂಶವೃಕ್ಷವಿದ್ದ ದೊಡ್ಡ ಗಿಲೀಟು ಚೌಕಟ್ಟನ್ನು ಆಂಡ್ರೂ ನೋಡುತ್ತಿದ್ದನು. ಅದರೆದುರಿಗೆ ಕೆಟ್ಟದ್ದಾಗಿ ಕುಂಚಿಸಿದ್ದ (ಕ್ಷೇತ್ರದ ಕಲಾವಿದನೊಬ್ಬ ಕುಂಚಿಸಿದ್ದು) ಕಿರೀಟಧಾರಿ ರಾಜಕುಮಾರನ ವರ್ಣಚಿತ್ರದ ಚೌಕಟ್ಟೊಂದು ನೇತು ಹಾಕಿತ್ತು. ಅವನು ರೂರಿಕ್ ಸಂತತಿಗೆ ಸೇರಿದವನೆಂದೂ, ಬಲ್ಕೋನ್‌ಸ್ಕಿ ಮನೆತನದ ಪೂರ್ವಜನೆಂದೂ ಹೇಳಲಾಗಿತ್ತು. ಆಂಡ್ರೂ ಮತ್ತೆ ವಂಶವೃಕ್ಷದ ಚೌಕಟ್ಟನ್ನು ನೋಡಿದನು, ತಲೆ ಅಲ್ಲಾಡಿಸಿದನು. ಮೂಲಕ್ಕೆ ತದ್ವತ್ತಾದದ್ದೆಂಬ ವಿನೋದದಿಂದ ನಕ್ಕನು. 'ಇದು ಪಕ್ಕಾ ಅವನಂತೆಯೇ ಇದೆ!' ಎಂದು ಪಕ್ಕದಲ್ಲಿದ್ದ ಮೇರಿಯೊಡನೆ ಸಲ್ಲಪಿಸಿದನು.

ಮೇರಿ ವಿಸ್ಮಯದಿಂದ ಅಣ್ಣನ ಕಡೆಗೆ ನೋಡಿದಳು. ಅವನ ನಗುವಿನ ಅರ್ಥ ಅವಳಿಗೆ ಗ್ರಹಿಕೆಯಾಗಲಿಲ್ಲ. ತಂದೆ ಮಾಡಿದ್ದೆಲ್ಲ ಅವಳಲ್ಲಿ ಗೌರವ ಭಾವನೆಯನ್ನು ಉಕ್ಕಿಸುತ್ತಿತ್ತು: ಅಷ್ಟೇ ಅಲ್ಲ, ಅದು ಪ್ರಶ್ನಾತೀತವೆಂದು ಭಾವಿಸಿದ್ದಳು.

'ಪ್ರತಿಯೊಬ್ಬರಲ್ಲಿಯೂ ಏನಾದರೊಂದು ಡೊಂಕು ಇದ್ದೇ ಇರುತ್ತದೆ. ಇವರಂಥ ಧೀಮಂತರು ಇಂಥ ಅವಿವೇಕದಲ್ಲಿ ನಿರತರಾಗುತ್ತಾರೆಂದು ನಾನು ಕನಸು ಮನಸಿನಲ್ಲಿಯೂ ಯೋಚಿಸಲಾರೆ' ಎಂದು ಆಂಡ್ರೂ ನುಡಿದನು.

ತನ್ನಣ್ಣನ ವಿಮರ್ಶೆಯಲ್ಲಿ ತೋರಿದ ಧೈರ್ಯ ಅವಳಿಗರ್ಥವಾಗಲಿಲ್ಲ. ಅವಳು ಉತ್ತರ ಕೊಡಬೇಕೆನ್ನುವಷ್ಟರಲ್ಲಿ ಅಧ್ಯಯನ ಮಂದಿರದ ಕಡೆಯಿಂದ ನಿರೀಕ್ಷಿತ ಪಾದ ನಾದ ಕೇಳಿಸಿತು. ರಾಜಕುಮಾರ ರೂಢಿಯಂತೆ ಉಲ್ಲಾಸದಿಂದ ಸರಸರನೆ ನಡೆದು ಬಂದನು. ತನ್ನ ಮನೆಯ ಜಡ ಸಂಪ್ರದಾಯಕ್ಕೆ ವಿರುದ್ಧವೆನ್ನುವಂತೆ ಅವನ ಆಚಾರ ವ್ಯವಹಾರಗಳಲ್ಲಿ ಉದ್ದೇಶಪೂರ್ವಕವಾದ ಚಟುಲತೆ ಎದ್ದು ಕಾಣುವಂತಿತ್ತು. ಅಷ್ಟರಲ್ಲಿ ದೊಡ್ಡ ಗಡಿಯಾರ ಎರಡು ಹೊಡೆಯಿತು. ದಿವಾನಖಾನೆಯಲ್ಲಿದ್ದ ಮತ್ತೊಂದು ಗಡಿಯಾರದ ಕೀರಲುದನಿ ಅದರೊಡನೆ ಮೇಳವಿಸಿತು. ರಾಜಕುಮಾರ ಮೌನವಾಗಿ ನಿಂತನು; ಪೊದೆಯೊಳಗಿಂದ ಮಿರುಗುತ್ತಿದ್ದ ಅವನ ಕಣ್ಣುಗಳು ಅಲ್ಲಿದ್ದವರನ್ನೆಲ್ಲ ಅವಲೋಕಿಸಿ, ಕಿರಿಯ ರಾಜಕುಮಾರಿಯಲ್ಲಿ ನೆಲೆ ನಿಂತುವು. ಸಾರ್ ಚಕ್ರವರ್ತಿಯ ಪ್ರವೇಶ ಸಮಯದ ಆಸ್ಥಾನಿಕರಂತೆ ಅವಳು ಭಯ ಮಿಶ್ರಿತ ಗೌರವ ಭಾವನೆಯಿಂದ ನಿಂತಳು.. ಮುದುಕ ಎಲ್ಲಿದ್ದರೂ ಭಯ ಗೌರವಗಳ ವಾತಾವರಣ ನಿರ್ಮಾಣವಾಗುತ್ತಿತ್ತು. ಅವನು ಅವಳ ತಲೆಯನ್ನು ನೇವರಿಸಿ, ವಿಚಿತ್ರ ರೀತಿಯಲ್ಲಿ ಬೆನ್ನು ತಟ್ಟಿದನು.

ಅವಳ ಕಣ್ಣುಗಳಲ್ಲಿ ಕಣ್ಣು ಕೀಲಿಸಿ, 'ನಿನ್ನನ್ನು ನೋಡಿ ತುಂಬ ಸಂತೋಷವಾಯಿತು' ಎಂದು ನುಡಿದು, ಸರಸರನೆ ತನ್ನ ಜಾಗಕ್ಕೆ ಹೋಗಿ ಕುಳಿತುಕೊಂಡನು.

'ಕುಳಿತುಕೋ, ಕುಳಿತುಕೋ, ಮೈಕೇಲ್.' ತನ್ನ ಪಕ್ಕದಲ್ಲಿ ಕುಳಿತುಕೊಳ್ಳು ವಂತೆ ಸೊಸೆಗೆ ಜಾಗ ತೋರಿಸಿದನು. ಸೇವಕ ಅವಳಿಗಾಗಿ ಕುರ್ಚಿಯೊಂದನ್ನು ಸರಿಸಿದನು.

'ಹೋ, ಹೋ, ಏಕಿಷ್ಟು ಅವಸರ. ಅದು ಸಲ್ಲದು' ಎಂದು ಮುದುಕ ಅವಳ ದುಂಡು ಮೈಯ ಮೇಲೆ ಕಣ್ಣಾಡಿಸಿದನು. ಅವನು ವಾಡಿಕೆಯಂತೆ ನೀರಸವೂ, ನಿರು ತ್ಸಾಹವೂ ಆದ ರೀತಿಯಲ್ಲಿ ನಕ್ಕನು. ಆದರೆ ನಕ್ಕದ್ದು ತುಟಿಯೇ ಹೊರತು ಕಣ್ಣಲ್ಲ. 'ನೀನು ತಿರುಗಾಡಬೇಕು, ತಿರುಗಾಡಿದಷ್ಟೂ ಒಳ್ಳೆಯದು' ಎಂದು ನುಡಿದನು.

ಕಿರಿಯ ರಾಜಕುಮಾರಿ ಅವನ ಮಾತು ಕೇಳಲಿಷ್ಟಪಡಲಿಲ್ಲ. ಅವಳು ಮೌನ ವಾಗಿದ್ದರೂ, ಗಾಬರಿಗೊಂಡಂತಿದ್ದಳು. ರಾಜಕುಮಾರ ಅವಳ ತಂದೆಯ ಕುಶಲ ವಿಚಾರಿಸಿದನು. ಅವಳು ಮಾತಾಡುವ ಮನಸ್ಸಾಗಿ ನಕ್ಕಳು. ತನಗೆ ಪರಿಚಯವಿದ್ದ ಜನರ ಆಗು ಹೋಗುಗಳ ಬಗ್ಗೆ ವಿಚಾರಿಸಿದನು. ನಾಡಿನಾಡಿಗಳಲ್ಲಿ ಉತ್ಸಾಹ ಸಂಚರಿಸಿ ದಂತಾಗಿ, ಅವಳು ಗಳಗಳನೆ ಮಾತಾಡುತ್ತ, ತನ್ನ ಮೂಲಕ ಹೇಳಿ ಕಳಿಸಿದ್ದ ಹಲವರ ಸಂದೇಶಗಳನ್ನು ಒಪ್ಪಿಸಿದಳು, ಪಟ್ಟಣದ ಕಾಡು ಹರಟೆಯನ್ನು ವರ್ಣಿಸಿದಳು.

'ಪಾಪ ಬಡಪಾಯಿ, ಶ್ರೀಮಂತೆ ಅಪ್ರಾಕ್ಸಿನ ತನ್ನ ಗಂಡನನ್ನು ಕಳೆದು ಕೊಂಡಳು. ಅವಳ ದುಃಖ ಹೇಳತೀರದು. ಅತ್ತು ಅತ್ತು ಬಸವಳಿದಳು' ಎಂದವಳು ಹುರುಪಿನಿಂದ ಪ್ರಸ್ತಾಪಿಸಿದಳು.

ಅವಳ ಉತ್ಸಾಹ ಕ್ಷಣಕ್ಷಣಕ್ಕೂ ಹೆಚ್ಚುತ್ತಿದ್ದಂತೆ ರಾಜಕುಮಾರ ಅವರ ಕಡೆಗೆ ನಿಷ್ಠುರದಿಂದ ನೋಡುತ್ತಿದ್ದನು: ಅವಳ ಉದ್ದ ಆಳಗಳನ್ನಳೆದು, ಅವಳ ಬಗ್ಗೆ ಸ್ಪಷ್ಟಾ ಭಿಪ್ರಾಯವನ್ನು ರೂಪಿಸಿಕೊಂಡವನಂತೆ ಅವನು ತಕ್ಷಣವೆ ಮೈಕೇಲನ ಕಡೆಗೆ ತಿರುಗಿ 'ನೋಡು, ಮೈಕೇಲ್,ನಮ್ಮ ಬೋನಪಾರ್ಟಿಗೆ ಕಷ್ಟದ ಕಾಲ ಕಾದಿದೆ. ಅವನಿಗೆ ವಿರುದ್ಧವಾಗಿ ಏನೇನು ಸೈನ್ಯ ಜಮಾವಣೆಯಾಗುತ್ತಿದೆನ್ನುವುದನ್ನು ರಾಜಕುಮಾರ ಆಂಡ್ರೂ (ಅವನು ತನ್ನ ಮಗನನ್ನು ಸಂಬೋಧಿಸುತ್ತಿದ್ದುದೇ ಹಾಗೆ) ನನಗೆ ವಿವರಿಸಿ ದ್ದಾನೆ. ನಾನಾಗಲೀ, ನೀನಾಗಲೀ ಅವನ ಬಗ್ಗೆ ಅಷ್ಟೆಲ್ಲ ಆಲೋಚಿಸಿಯೇ ಇಲ್ಲ' ಎಂದು ನುಡಿದನು.

ಎಂದಾದರೂ ಬೋನಪಾರ್ಟಿಯ ಬಗ್ಗೆ ತಾನೂ ಯಜಮಾನನೂ ಕೂಡಿ ಚರ್ಚಿ ಸಿದ್ದಂತೆ ನೆನಪಾಗಲಿಲ್ಲ. ತಾನು ರಾಜಕುಮಾರನ ಅಚ್ಚುಮೆಚ್ಚಿನ ವಿಷಯಗಳನ್ನು ನೇತು ಹಾಕಲಿಕ್ಕಿರುವ ಗೂಟವೆಂಬುದನ್ನವನು ಕೂಡಲೇ ಗ್ರಹಿಸಿದನು. ಮುಂದೇನಾಗ ಬಹುದೆಂಬುದರ ಬಗ್ಗೆ ವಿಸ್ಮಯಗೊಳ್ಳುತ್ತ ಅವನು ಕಿರಿಯ ರಾಜಕುಮಾರನ ಕಡೆಗೆ ಹುಡುಕು ನೋಟ ಬೀರಿದನು.

'ಇವನು ಭಾರಿ ಯುಕ್ತಿವಂತ' ಎಂದು ರಾಜಕುಮಾರ ಮಗನಿಗೆ ಶಿಲ್ಪಿಯನ್ನು ತೋರಿಸುತ್ತ ನುಡಿದನು.

ಸಂಭಾಷಣೆ ಮತ್ತೆ ಯುದ್ಧ, ಬೋನಪಾರ್ಟಿ, ಸೇನಾನಿಗಳು ಮತ್ತು ಸಮ ಕಾಲೀನ ಮುತ್ಸದ್ದಿಗಳ ಕಡೆಗೆ ಸಾಗಿತು. ಆ ಕಾಲದ ಜನ ರಾಜಕೀಯದ ಅಥವಾ ಯುದ್ಧದ ಅ ಆ ಇ ಈ ಗಳನ್ನರಿಯದ ಬರಿಯ ಕೂಸುಗಳೆಂದೂ, ಬೋನಪಾರ್ಟಿ

ನಿಕೃಷ್ಟ ಕ್ಷುದ್ರ ಜಂತುವೆಂದೂ, ಪ್ರೊಟೆಂಕಿನ್ಸ್ ಅಥವಾ ಸುವೊರೋವ್‌ರಂಥ ಎದುರಾಳಿಗಳಿಲ್ಲದ್ದರಿಂದ ಅವನು ವಿಜಯ ಸಾಧಿಸುತ್ತಿದ್ದಾನೆಂದೂ, ಮುದುಕ ನಿಶ್ಚಿತ ಧ್ವನಿಯಲ್ಲಿ ಸ್ಪಷ್ಟಪಡಿಸಿದನು. ಯೂರೋಪಿನಲ್ಲಿ ರಾಜಕೀಯ ಸಮಸ್ಯೆಗಳಿಲ್ಲವೆಂದೂ, ಅದರಿಂದಾಗಿ ನಿಜವಾದ ಯುದ್ಧ ಸಂಭವಿಸಲಾರದೆಂದೂ, ಸಮಕಾಲೀನ ಯುದ್ಧಗಳು ಬೊಂಬೆಯಾಟದಂತಿವೆಯೆಂದೂ, ವಾಸ್ತವವನ್ನು ಸಾಧಿಸುತ್ತಿರುವಂತೆ ಜನ ನಟಿಸುತ್ತಿದ್ದಾರೆಂದೂ ಅವನು ವ್ಯಾಖ್ಯಾನ ಮಾಡಿದನು. ಈಚಿನ ಜನರ ಬಗ್ಗೆ ತಂದೆ ಮಾಡುತ್ತಿದ್ದ ವಿಡಂಬನೆಯನ್ನು ಆಂಡ್ರ್ಯೂ ಸಂತೋಷದಿಂದ ಸಹಿಸಿಕೊಂಡು, ಅವನನ್ನು ಪುಸಲಾಯಿಸಿ, ಅವನು ಹೇಳುವುದನ್ನೆಲ್ಲ ತಲ್ಲೀನನಾಗಿ ಕೇಳುತ್ತಿದ್ದನು.

'ಯಾವಾಗಲೂ ಹಳೆಯದೆಲ್ಲ ಒಳ್ಳೆಯದಾಗಿ ಕಾಣುತ್ತದೆ, ಸರಿ. ಆದರೆ ಮೋರೊ ಸೃಷ್ಟಿಸಿದ ವ್ಯೂಹದಲ್ಲಿ ಸುವೊರೋವ್ ಸಿಕ್ಕಿಕೊಂಡು, ಅದರಿಂದ ಪಾರಾಗುವ ಉಪಾಯ ತಿಳಿಯದೆ ಒದ್ದಾಡಲಿಲ್ಲವೆ ?' ಎಂದು ಎಳೆಯ ರಾಜಕುಮಾರ ಜವಾಬು ನೀಡಿದನು.

'ನಿನಗೆ ಹೇಳಿದವರು ಯಾರು ? ಯಾರು ?' ಎಂದು ಮುದುಕ ಕೂಗಿದನು. 'ಸುವೊರೋವ್!' ಅವನು ತನ್ನ ತಟ್ಟೆಯನ್ನು ಝಾಡಿಸಿದನು. ಕೂಡಲೇ ಟಿಖಾನ್ ಅದನ್ನು ಹಿಡಿದುಕೊಂಡನು. 'ಸುವೊರೋವ್!....ಯೋಚಿಸಿ ನೋಡು, ರಾಜಕುಮಾರ! ಇಬ್ಬರು....ಫ್ರೆಡರಿಕ್ ಮತ್ತು ಸುವೊರೋವ್; ಮೋರೊ!....ಸುವೊರೋವ್‌ಗೇನಾದರೂ ಸ್ವಾತಂತ್ರ್ಯವಿದ್ದಿದ್ದರೆ ಮೋರೊ ಬಂದಿಯಾಗುತ್ತಿದ್ದ. ಆದರೆ ಆಸ್ಟ್ರಿಯಾದ ಯುದ್ಧಮಂಡಲಿ ಇತ್ತಲ್ಲ? ಅದೊಂದು ಶುದ್ಧ ಐಲಾಟದ ವ್ಯವಸ್ಥೆ. ಅದು ಅವನಿಗೆ ಅಡ್ಡಿಯಾಯಿತು. ಪಿಶಾಚಿಯನ್ನು ಸಹ ಗಾಬರಿಗೊಳಿಸುವಂಥ ವ್ಯವಸ್ಥೆಯದು. ನೀನಲ್ಲಿಗೆ ಹೋದಾಗ ಆ ಯುದ್ಧ ಮಂಡಲಿಯ ವಿಷಯ ತಿಳಿಯುತ್ತದೆ. ಸುವೊರೋವ್ ಕೈಯಲ್ಲಿ ಸಾಧ್ಯವಾಗದ ಕಾರ್ಯ ಮೈಕೇಲ್ ಕುತುಜೋವ್‌ನಿಂದ ಸಾಧ್ಯವಾಗುತ್ತದೆಯೆ? ಇಲ್ಲ, ಮಗು. ಬೋನಪಾರ್ಟೆಯ, ನಿನ್ನ ಮತ್ತು ನಿನ್ನ ಸೇನಾನಿಗಳ ಬಾಜ ಬೇಯುವುದಿಲ್ಲ. ಫ್ರೆಂಚ ಫ್ರೆಂಚರೊಳಗೆ ಕಾದಾಟ ಸೃಷ್ಟಿಸಿ, ಅವರೇ ಪರಸ್ಪರವಾಗಿ ಬಡಿದಾಡುವಂತೆ ಹುನ್ನಾರು ಮಾಡಬೇಕು. ಫ್ರೆಂಚಿನವನಾದ ಮೋರೊನನ್ನು ಕರೆತರಲು ಜರ್ಮನ್ ಪಹಲೀನ್[1]ನನ್ನು ನ್ಯೂಯಾರ್ಕಿಗೆ ಕಳಿಸಲಾಗಿದೆಯಂತೆ' ಎಂದವನು ಆ ವರ್ಷ ರಷ್ಯನ್ ಸೈನ್ಯ ಸೇರುವಂತೆ ಮೋರೋವಿಗೆ ಕಳಿಸಿದ್ದ ಆಹ್ವಾನದ ವಿಷಯವನ್ನು ಪ್ರಸ್ತಾಪಿಸಿದನು.... 'ಅದ್ಭುತ!.... ಪೊಟೆಂಕಿನ್, ಸುವೊರೋವ್, ಆರ್ಲೋವ್ ಇವರೆಲ್ಲ ಜರ್ಮನರೆ? ಇಲ್ಲ, ಮಗನೆ; ನನ್ನ ಮಾತು ಕೇಳು, ಒಂದೇ ನೀವೆಲ್ಲರೂ ವಿವೇಕ ಕಳೆದು ಕೊಂಡಿದ್ದೀರಿ, ಇಲ್ಲ ನನ್ನ ಕಾಲ ಮುಗಿದಿದೆ. ಮುಂದೇನು ಕಾದಿದೆಯೋ ನೋಡೋಣ. ದೇವರು ನಿಮಗೆ ಸಹಾಯ ಮಾಡಲಿ! ಅವರ ಪೈಕಿ ಬೋನಪಾರ್ಟೆಯೊಬ್ಬನೇ ಮಹಾಸೇನಾನಿ! ಹ್ಞ....!'

'ಎಲ್ಲ ಯೋಜನೆಗಳೂ ಅತ್ಯುತ್ತಮವಾದುವೆಂದು ನಾನು ಹೇಳುವುದಿಲ್ಲ, ಅಪ್ಪ. ಬೋನಪಾರ್ಟೆಯ ಬಗೆಗಿನ ನಿಮ್ಮ ಅಭಿಪ್ರಾಯ ಮಾತ್ರ ನನಗೆ ವಿಸ್ಮಯವುಂಟು

---

1 ಪೀಟರ್ಸ್‌ಬರ್ಗ್ ಗವರ್ನರ್ ಜನರಲ್ ಆಗಿದ್ದ, ಪಾಲ್ ಕೊಲೆಯಲ್ಲಿ ಶಾಮೀಲಾಗಿದ್ದ ಪಿ. ಎ. ಪಹಲೆನ್‌ನ ಹೆಸರನ್ನು ವಿಡಂಬನೆಗಾಗಿ ಬಳಸಿಕೊಂಡಿದೆ.

ಮಾಡಿದೆ. ನೀವೆಷ್ಟೇ ತಮಾಷೆಮಾಡಿ, ಬೋನಪಾರ್ಟೆ ಮಾತ್ರ ಮಹಾಸೇನಾನಿ ಎಂಬುದು ಸತ್ಯ' ಎಂದು ರಾಜಕುಮಾರ ನುಡಿದನು.

'ಮೈಕೇಲ್' ಎಂದು ಹಿರಿಯ ರಾಜಕುಮಾರ ಕೂಗಿದಾಗ, ಎಲ್ಲರೂ ತನ್ನನ್ನು ಮರೆತಿದ್ದಾರೆಂಬ ಉತ್ಸಾಹದಿಂದ ಹುರಿದ ಬಾಡು ತಿನ್ನುವುದರಲ್ಲಿ ಮೈಕೇಲ್ ತಲ್ಲೀನನಾಗಿದ್ದ. 'ನಾನು ನಿನ್ನ ಬಳಿ ಹೇಳಿರಲಿಲ್ಲವೆ, ಬೋನಪಾರ್ಟೆ ಮಹಾ ತಂತ್ರಜ್ಞನೆಂದು? ಇವನೂ ಅದೇ ಹೇಳ್ತಾ ಇದ್ದಾನೆ'.

'ನಿಜ, ಮಹಾಸ್ವಾಮಿಯವರೆ' ಎಂದು ಶಿಲ್ಪಿ ಉತ್ತರಿಸಿದನು.

ರಾಜಕುಮಾರನ ತುಟಿಗಳಿಂದ ನೀರಸಹಾಸ ಹೊಮ್ಮಿತು. 'ಹುಟ್ಟುವಾಗಲೇ ಬೋನಪಾರ್ಟೆಯ ಬಾಯಲ್ಲಿ ಬೆಳ್ಳಿಯ ಚಂಚವಿತ್ತು. ಅವನ ಬಳಿ ಶ್ರೇಷ್ಠ ಸೈನಿಕರಿದ್ದಾರೆ. ಜತೆಗೆ ಅವನು ಜರ್ಮನ್‌ರ ಮೇಲೆ ಮೊದಲು ಧಾಳಿ ಮಾಡಿದ. ಸೋಮಾರಿಗಳು ಮಾತ್ರ ಜರ್ಮನರನ್ನು ಸೋಲಿಸಲಾಗದು. ಜಗತ್ತು ಹುಟ್ಟಿದಾಗಿನಿಂದ ಜರ್ಮನರ ಮೇಲೆ ಕತ್ತಿ ಕಟ್ಟಿ, ಮಗ್ಗ ಮಲಗಿಸಿದವರೇ ಇಲ್ಲ. ಅವರು ತಂತಮ್ಮೊಳಗೆ ಹೋರಾಡಿ ಕೆಟ್ಟರೇ ಹೊರತು ಬೇರೆಯವರನ್ನು ಸದೆ ಬಡಿಯಲಿಲ್ಲ. ಅವನು ಅವರನ್ನು ಗೆದ್ದು ಹೆಸರು ಮಾಡಿದ್ದಾನೆ'.

ಬೋನಪಾರ್ಟೆ ತನ್ನ ದಂಡಯಾತ್ರೆಗಳಲ್ಲಿ ಹಾಗೂ ರಾಜಕೀಯದಲ್ಲಿ ಏನೇನು ಪ್ರಮಾದವನ್ನೆಸಗಿದ್ದಾನೆಂಬುದನ್ನು ತನಗೆ ತೋಚಿದಂತೆ ರಾಜಕುಮಾರ ವಿವರಿಸಿದನು. ಮಗ ಮಾತ್ರ ಪ್ರತ್ಯುತ್ತರ ನೀಡಲಿಲ್ಲ. ತಂದೆ ಏನೇ ವಾದವಿವಾದ ಮಂಡಿಸಲಿ, ಅವನಂತೆಯೇ ಮಗ ತನ್ನ ವಾದ ವಿವಾದಗಳನ್ನು ಮಾರ್ಪಡಿಸಿಕೊಳ್ಳಲಾಗಲಿಲ್ಲ. ಅವನು ಮರುಮಾತಿಲ್ಲದೆ ಆಲಿಸಿದ; ತಮ್ಮ ತಂದೆ ಅಷ್ಟು ವರ್ಷಗಳಿಂದ ಏಕಾಕಿಯಾಗಿ ಹಳ್ಳಿಗಾಡಿನಲ್ಲಿದ್ದರೂ,ಯೂರೋಪಿನಲ್ಲಿ ನಡೆಯುತ್ತಿದ್ದ ಅತ್ಯಾಧುನಿಕ ಸೈನಿಕ ಮತ್ತು ರಾಜಕೀಯ ಘಟನೆಗಳನ್ನು ಸೂಕ್ಷ್ಮವಾಗಿಯೂ, ಕರಾರುವಾಕ್ಕಾಗಿಯೂ ಅರಿತುಕೊಂಡು, ಸಮರ್ಥವಾಗಿಚರ್ಚಿಸುತ್ತಿದ್ದುದನ್ನು ಕಂಡು ಅವನು ಅನೈಚ್ಛಿಕವಾಗಿಯೇ ವಿಸ್ಮಯಿಭೂತನಾದ.

'ನಾನು ಮುದುಕ, ಇತ್ತೀಚಿನ ವ್ಯವಹಾರಗಳು ನನಗೇನೂ ಅರ್ಥವಾಗುವುದಿಲ್ಲ ಎಂದು ತಿಳಿದೆಯಾ? ಆದರೆ ನನ್ನ ಮನಸ್ಸು ಕ್ಷೋಭೆಗೊಂಡಿದೆ. ರಾತ್ರಿವೇಳೆ ನನಗೆ ನಿದ್ದೆ ಹತ್ತುವುದಿಲ್ಲ. ಈಗ ಬಾ, ನಿನ್ನ ಈ ಮಹಾ ಸೇನಾನಿ ಇದ್ದಾನಲ್ಲ, ಅವನು ತನ್ನ ಕೌಶಲವನ್ನೆಲ್ಲಿ ಪ್ರದರ್ಶಿಸಿದ್ದಾನೆ? ಹೇಳು'. ಎಂದು ತಂದೆ ಮಾತು ಮುಗಿಸಿದನು.

'ಅದನ್ನೆಲ್ಲ ವಿವರಿಸಬೇಕಾದರೆ ತುಂಬ ಹೊತ್ತು ಹಿಡಿಯುತ್ತದೆ' ಎಂದು ಮಗ ಉತ್ತರಿಸಿದನು.

'ಹಾಗಾದರೆ ನಿನ್ನ ಬೋನಪಾರ್ಟೆಯ ಕಡೆಗೆ ಹೋಗಿ ಬಿಡು! ಕುಮಾರಿ ಬೌರಿಯನ್ನೆ, ಇಗೋ ಇಲ್ಲೊಬ್ಬನಿದ್ದಾನೆ ನೋಡು, ನಿಮ್ಮ ಚಕ್ರವರ್ತಿ ಇದ್ದಾನಲ್ಲ, ಆ ಮದ್ದು ಹುಡುಗ[2], ಅವನ ಭಟ್ಟಂಗಿ' ಎಂದವನು ಅತ್ಯುತ್ಕೃಷ್ಟ ಫ್ರೆಂಚ್ ಭಾಷೆಯಲ್ಲಿ ಉದ್ಗರಿಸಿದನು.

---

2 ಹಡಗಿನಲ್ಲಿ ಫಿರಂಗಿಗಳಿಗೆ ಮದ್ದನ್ನು ಹೊತ್ತು ತರುವ ಹುಡುಗ.

‘ನಾನು ಬೋನಪಾರ್ಟೆಕಡೆಯುವಳಲ್ಲವೆಂಬುದು ನಿಮಗೆ ತಿಳಿದಿದೆ, ರಾಜಕುಮಾರರೆ!’

‘ಅವನೆಂದು ಮರಳುವನೆಂದು ದೇವರೇ ಬಲ್ಲ’........ ಎಂದು ರಾಜಕುಮಾರ ಅಸಂಗತವಾಗಿ ಹೂಂಕರಿಸಿದನು; ಗಹಗಹಿಸಿ ನಗುತ್ತ ಭೋಜನ ಮಂದಿರದಿಂದ ತೆರಳಿದನು.

ಭೋಜನ ಸಾಗುತ್ತಿದ್ದಾಗ, ಚರ್ಚೆ ನಡೆಯುತ್ತಿದ್ದಾಗ ಕಿರಿಯ ರಾಜಕುಮಾರಿ ಭಯಚಕಿತಳಾಗಿ ಒಮ್ಮೆ ಮಾವನ ಕಡೆಗೆ, ಮತ್ತೊಮ್ಮೆ ಮೇರಿಯ ಕಡೆಗೆ ಕಣ್ಣು ಮಿಟುಕಿಸುತ್ತ, ತುಟಿಪಿಟಕ್ಕೆನ್ನದೆ ಕುಳಿತಿದ್ದಳು. ಮೇಜಿನಿಂದ ಹೊರದೆಗೆದಾಗ ಅವಳು ನಾದಿನಿಯ ಕೈಹಿಡಿದುಕೊಂಡು, ಮತ್ತೊಂದು ಕೋಣೆಗೆ ಸರಿದಳು.

‘ನಿಮ್ಮ ತಂದೆ ಎಂಥ ಬುದ್ಧಿವಂತರು. ಆದ್ದರಿಂದಲೇ ಅವರನ್ನು ಕಂಡರೆ ನನಗೆ ಹೆದರಿಕೆಯಾಗುತ್ತದೆ’ ಎಂದವಳು ವಿಸ್ಮಯ ವ್ಯಕ್ತಪಡಿಸಿದಳು.

‘ಓ, ಅವರು ತುಂಬ ದಯಾಳು’ ಎಂದು ಮೇರಿ ಮಾರ್ನುಡಿದಳು.

ಅಧ್ಯಾಯ ೨೮

ರಾಜಕುಮಾರ ಆಂಡ್ರ್ಯೂ ಮಾರನೆಯ ಸಂಜೆಯೇ ತೆರಳಬೇಕಾಗಿತ್ತು. ತನ್ನ ದಿನಚರಿಯನ್ನು ಬದಲಿಸಲಿಷ್ಟವಿಲ್ಲದ ಮುದುಕ ರಾಜಕುಮಾರ ಭೋಜನಾನಂತರ ಎಂದಿನಂತೆ ಹಾಸುಗೆಯ ಮೇಲೊರಗಿದನು. ಕಿರಿಯ ರಾಜಕುಮಾರಿ ತನ್ನ ನಾದಿನಿಯ ರೂಮಿನಲ್ಲಿದ್ದಳು. ರಾಜಕುಮಾರ ಆಂಡ್ರ್ಯೂ ಭುಜಕೀರ್ತಿಯಿಲ್ಲದ ಪಯಣದ ಕೋಟು ತೊಟ್ಟು, ತನಗೆಂದೇ ಮೀಸಲಾಗಿದ್ದ ಕೋಣೆಯಲ್ಲಿ ಚಾಕರನ ನೆರವಿನೊಡನೆ ಗಂಟು ಮೂಟೆ ಕಟ್ಟುತ್ತಿದ್ದನು. ತಾನೇ ಖುದ್ದಾಗಿ ಗಾಡಿಯನ್ನು ತನಿಖಿಸಿ, ಪೆಟ್ಟಿಗೆಗಳನ್ನು ತುಂಬಿಸಿ, ಕುದುರೆ ಹೂಡುವಂತೆ ಆಜ್ಞಾಪಿಸಿದನು. ಯಾವಾಗಲೂ ತನ್ನ ಬಳಿ ಇಟ್ಟುಕೊಳ್ಳುತ್ತಿದ್ದ ಸಾಮಾನುಗಳು ಮಾತ್ರ ಕೋಣೆಯಲ್ಲಿದ್ದುವು. ಒಂದು ಸಣ್ಣ ಪೆಟ್ಟಿಗೆ, ಬೆಳ್ಳಿಯ ತಟ್ಟೆಯಿದ್ದ ಅಡುಗೆ ಪಾತ್ರೆಗಳ ದೊಡ್ಡದೊಂದು ಸಂಪುಟ, ಎರಡು ತುರ್ಕಿ ಪಿಸ್ತೂಲುಗಳು ಮತ್ತು ಒಚಾಕೋವ್ ಮುತ್ತಿಗೆಯ ಕಾಲದಲ್ಲಿ ತನ್ನ ತಂದೆ ತಂದು ಕಾಣಿಕೆಯಾಗಿ ನೀಡಿದ್ದ ಕುಡುಗತ್ತಿ. ಇಷ್ಟೇ ರಾಜಕುಮಾರನ ಪ್ರಯಾಣಕಾಲದ ಆಸ್ತಿಗಳು. ಅವೆಲ್ಲ ಹೊಸದಾಗಿ, ಹಸನಾಗಿ ಸುಸ್ಥಿತಿಯಲ್ಲಿದ್ದುವು; ಮತ್ತು ಅವನ್ನೆಲ್ಲ ಜಾಗರೂಕತೆಯಿಂದ ಬಟ್ಟೆಯ ಹೊದಿಕೆಯೊಳಗಿರಿಸಿ, ಲಾಡಿಗಳಿಂದ ಭದ್ರಗೊಳಿಸಲಾಗಿತ್ತು.

ಪ್ರಯಾಣ ಹೊರಡುವಾಗ ಅಥವಾ ಜೀವನ ವಿಧಾನವನ್ನು ಮಾರ್ಪಡಿಸಿಕೊಳ್ಳುವಾಗ ಚಿಂತನಶೀಲರಾದ ಜನ ಗಂಭೀರ ಮನೋಭಾವವನ್ನು ತಾಳುತ್ತಾರೆ. ಅಂಥ ಸಂದರ್ಭದಲ್ಲಿ ಅವರು ಭೂತಕಾಲದ ಕಡೆಗೆ ಸಿಂಹಾವಲೋಕನ ದೃಷ್ಟಿಯನ್ನೆಸೆಯುತ್ತಾರೆ, ಭವಿಷ್ಯದ ಬಗ್ಗೆ ಯೋಜನೆ ರೂಪಿಸಿಕೊಳ್ಳುತ್ತಾರೆ. ಆಂಡ್ರ್ಯೂವಿನ ಮುಖ ಆಲೋಚನಾ ಮಗ್ನವಾಗಿದ್ದಂತೆ ಕೋಮಲವಾಗಿ ಕಂಡಿತು. ಅವನು ಹಿಂದಕ್ಕೆ ಕೈಕಟ್ಟಿಕೊಂಡು, ನೇರವಾಗಿ ನೋಡುತ್ತ, ಆಲೋಚನಾತ್ಮಕವಾಗಿ ತಲೆಯುಲುಗಿಸುತ್ತ,

ಕೋಣೆಯ ಮೂಲೆಯಿಂದ ಮೂಲೆಗೆ ಸರಸರನೆ ಹೆಜ್ಜೆಹಾಕುತ್ತಿದ್ದನು. ಅವನು ಯುದ್ಧಕ್ಕೆ ಹೋಗಲು ಹೆದರಿಕೊಂಡನೆ? ಅಥವಾ ಹೆಂಡತಿಯಿಂದಗಲಲಾರದೆ ವ್ಯಾಕುಲಗೊಂಡನೆ? ಪ್ರಾಯಶಃ ಎರಡೂ. ಆದರೆ ಅವನು ಅಂಥ ಮಾನಸಿಕ ಸ್ಥಿತಿಯಲ್ಲಿ ಯಾರಿಗೂ ಕಾಣಿಸಿಕೊಳ್ಳಲಿಚ್ಛಿಸಲಿಲ್ಲ. ನಡುವೆಯಲ್ಲಿ ಹೆಜ್ಜೆ ಸಪ್ಪಳ ಕೇಳಿದ ಕೂಡಲೆ ಕೈಕಟ್ಟನ್ನು ಸಡಿಲಿಸಿದನು; ಸಣ್ಣ ಪೆಟ್ಟಿಗೆಯ ಹೊದಿಕೆಯನ್ನು ಬಿಗಿಗೊಳಿಸುವ ಭಂಗಿಯಲ್ಲಿ ಮೇಜಿನ ಮುಂದೆ ನಿಂತನು; ಎಂದಿನಂತೆ ಸೌಮ್ಯವೂ ಅಭೇದ್ಯವೂ ಆದ ಮುಖ ಭಂಗಿಯನ್ನು ನಟಿಸಿದನು. ಅವನಿಗೆ ಕೇಳಿಸಿದ್ದು ಮೇರಿಯ ಭಾರವಾದ ಹೆಜ್ಜೆ.

'ಗಾಡಿಗೆ ಕುದುರೆ ಹೂಡುವಂತೆ ಆಣತಿಯಿತ್ತೆಯಂತೆ' ಎಂದವಳು ಏದುತ್ತ (ಅವಳು ಓಡೋಡುತ್ತ ಬಂದಿದ್ದಳು) ಕೂಗಿಕೊಂಡಳು.

'ನಿನ್ನೊಡನೆ ನಾನು ಏಕಾಂತದಲ್ಲಿ ಮಾತಾಡುವುದಿತ್ತು. ಎಷ್ಟು ದಿನ ನಾವು ಮತ್ತೆ ಪ್ರತ್ಯೇಕವಾಗಿರಬೇಕಾಗುತ್ತದೆಯೋ, ಭಗವಂತನೇ ಬಲ್ಲ. ಈಗ ಬಂದದ್ದಕ್ಕೆ ನೀನು ನನ್ನ ಮೇಲೆ ಕೋಪಗೊಂಡಿಲ್ಲವಷ್ಟೆ? ನೀನು ಬದಲಾಯಿಸಿದ್ದೀಯೆ, ಆಂಡ್ರ್ಯೂಷ' ಎಂದವಳು ಅಂಥ ಪ್ರಶ್ನೆಗೆ ವಿವರಣೆ ನೀಡಲೆಂಬಂತೆ ನುಡಿದಳು.

'ಆಂಡ್ರ್ಯೂಷ' ಎಂಬ ಅವನ ಮುದ್ದು ಹೆಸರನ್ನು ಉಚ್ಚರಿಸುವಾಗ ಅವಳು ಮುಗುಳು ನಕ್ಕಳು. ಬಾಲ್ಯದಲ್ಲಿ ಆಟದ ಸಂಗಾತಿಯಾಗಿದ್ದ ಆ ತೆಳ್ಳನೆಯ ತುಂಟ ಹುಡುಗ ಸುಂದರ ಗಂಭೀರ ವ್ಯಕ್ತಿಯಾಗಿ ಬೆಳೆದಿರುವಾಗ ಆಂಡ್ರ್ಯೂಷ ಎಂದು ಕರೆಯುವುದೇ ಅವಳ ದೃಷ್ಟಿಯಲ್ಲಿ ವಿಚಿತ್ರವಾಗಿ ಕಂಡಿತು.

ಅವನು ಮಂದಹಾಸದಿಂದಲೇ ಉತ್ತರಿಸಿ, 'ಲೀಸಾ ಎಲ್ಲಿ' ಎಂದು ಪ್ರಶ್ನಿಸಿದನು.

'ಅವಳಿಗೆ ತುಂಬ ಆಯಾಸವಾಗಿದೆ. ನನ್ನ ಕೋಣೆಯಲ್ಲಿ ಸೋಫಾದ ಮೇಲೆ ಮಲಗಿದ್ದಾಳೆ. ಓ ಆಂಡ್ರ್ಯೂ, ಅಂಥ ಮಡದಿಯನ್ನು ಪಡೆದು ನೀನೆಂಥ ಭಾಗ್ಯಶಾಲಿಯಪ್ಪ' ಎಂದವಳು ಸೋಫಾದ ಮೇಲೆ, ಅಣ್ಣನಿಗೆದುರಾಗಿ ಕುಳಿತುಕೊಂಡಳು. 'ಅವಳೊಂದು ಹಸುಗೂಸು: ಅವಳೊಂದು ಪ್ರೇಮದ ಪುತ್ಥಳಿ; ಅವಳೀಗ ನನ್ನ ಮುದ್ದಿನ ಮುದ್ದೆಯಾಗಿದ್ದಾಳೆ'.

ಆಂಡ್ರ್ಯೂ ತುಟಿಪಿಟಿಕ್ಕೆನ್ನಲಿಲ್ಲ. ಆದರೆ ಅವಳು ಅವನ ಮುಖದ ಮೇಲೆ ಮೂಡಿದ ಅಸಡ್ಡೆಯ ವಿಡಂಬನಾತ್ಮಕ ಭಾವವನ್ನು ಗಮನಿಸಿದಳು. 'ಸಣ್ಣ ಪುಟ್ಟ ದೋಷಗಳ ಬಗ್ಗೆ ಮನುಷ್ಯ ಕ್ಷಮಾಶೀಲನಾಗಿರಬೇಕು. ದೋಷಮುಕ್ತನಾದ ವ್ಯಕ್ತಿ ಸಿಗುತ್ತಾನೆಯೆ, ಆಂಡ್ರ್ಯೂ? ಅವಳು ಸಣ್ಣವಳಲ್ಲವೆಂಬುದನ್ನೂ, ಸಮಾಜದಲ್ಲಿ ಬೆಳೆದವಳೆಂಬುದನ್ನೂ ಮರೆಯಬೇಡ. ಈಗಿನ ಅವಳ ಸ್ಥಿತಿ ಆಶಾಜನಕವಾಗಿಲ್ಲ. ಪ್ರತಿಯೊಬ್ಬ ವ್ಯಕ್ತಿಯನ್ನೂ ಅವರವರ ದೃಷ್ಟಿಯಿಂದ ಗ್ರಹಿಸಬೇಕಾಗುತ್ತದೆ. ಯುಕ್ತವಾದ ಗ್ರಹಿಕೆಯೇ ಕ್ಷಮೆಗೆ ದಾರಿಯಾಗುತ್ತದೆ. ಈತನಕದ ಅವಳ ಜೀವನ ಸನ್ನಿವೇಶವನ್ನು ನೆನೆಸಿಕೋ. ತನ್ನ ಪತಿಯಿಂದಗಲಿ, ಈ ಗ್ರಾಮೀಣ ಪರಿಸರದಲ್ಲಿ ಏಕಾಕಿಯಾಗಿ ಬಾಳು ಸಾಗಿಸಬೇಕಾಗಿ ಬರುವ ಚಿತ್ರವನ್ನು ಕಲ್ಪಿಸಿಕೊಂಡಾಗ ಆ ಬಡಪಾಯಿಗೆ ಎಷ್ಟು ಸಂಕಟವಾಗಬೇಡ! ಆ ಕಡೆ ಯೋಚಿಸಿದಾಗ ಎದೆ ಜಗ್ಗೆನ್ನುತ್ತದೆ. ಸಹಾನುಭೂತಿಯಿಂದ ಆಲೋಚಿಸು'.

ತನ್ನ ತಂಗಿ ಹೇಳಿದ್ದನ್ನೆಲ್ಲ ಪೂರ್ಣವಾಗಿ ಗ್ರಹಿಸಿದವನಂತೆ ಆಂಡ್ರೂ ನಕ್ಕನು. "ನೀನಿಲ್ಲಿಯೇ ಇದ್ದೀಯಲ್ಲ? ಇಲ್ಲಿಯ ಜೀವನ ಅಸಹನೀಯವೆಂದು ನೀನೆಂದಾದರೂ ಯೋಚಿಸಿದೆಯಾ?'

'ನಾನೇ.... ನನ್ನ ವಿಷಯವೇ ಬೇರೆ. ಅನ್ಯ ರೀತಿಯ ಬದುಕೇ ನನಗೆ ಬೇಕಾಗಿಲ್ಲ. ಅದು ಗೊತ್ತೂ ಇಲ್ಲ. ನನಗದು ಹಿಡಿಸುವುದೂ ಇಲ್ಲ. ಆದರೆ ಆಂಡ್ರೂ, ನೀನು ಸರಿಯಾಗಿ ಯೋಚಿಸು; ನಾಗರಿಕ ಸಮಾಜದಲ್ಲಿ ಬೆಳೆದ ಹೆಣ್ಣನ್ನು, ಅವಳ ಬಾಳಿನ ಅತ್ಯುತ್ತಮ ದಿನಗಳಲ್ಲಿ, ಅಲಾದಿಯಾಗಿ ಈ ಹಳ್ಳಿಯಲ್ಲಿ ಸೆರೆ ಹಾಕುವುದು ತರವೆ? ಅವ್ಳಸಿಗೆ ಬಿಡುವೇ ಇಲ್ಲ. ನಾನೋ.... ನಾಜೂಕಿನ ಸಮಾಜಕ್ಕೊಗ್ಗಿದ ಹೆಣ್ಣನ್ನು ರಂಜಿಸುವ ರಸಿಕತೆಯಾಗಲೀ, ಶಕ್ತಿ ಸಾಮರ್ಥ್ಯಗಳಾಗಲೀ ನನ್ನಲ್ಲಿಲ್ಲ. ಇನ್ನುಳಿದವಳು ಬೌರಿಯನ್ನೆ ಒಬ್ಬಳೇ.'

'ಏಕೋ ಈ ನಿನ್ನ ಬೌರಿಯನ್ನೆ ನನಗೆ ಹಿಡಿಸುವುದಿಲ್ಲ' ಎಂದು ಆಂಡ್ರೂ ನುಡಿದನು.

'ಇಲ್ಲವೆ? ಅವಳು ತುಂಬ ಒಳ್ಳೆಯವಳು, ದಯಾಳು. ಮೇಲಾಗಿ ಅವಳ ಬಗ್ಗೆ ಕನಿಕರಿಸಬೇಕಾಗಿದೆ. ಅವಳಿಗೆ ಯಾರೂ ಇಲ್ಲ. ನಿಜ ಹೇಳುವುದಾದರೆ, ನನಗವಳು ಬೇಕಿಲ್ಲ. ಅಷ್ಟೇ ಅಲ್ಲ, ಅವಳು ನನಗಡ್ಡವಾಗಿದ್ದಾಳೆ. ನಾನು ಯಾವಾಗಲೂ ಕಾಡಿಯಾಗಿದ್ದೇನೆ, ಈಚೀಚೆಗೆ ಆ ಕಾಡುತನ ಹೆಚ್ಚಿದೆ. ಒಂಟಿತನವೊಂದೇ ನನಗೆ ಇಷ್ಟ.... ತಂದೆಗೆ ಅವಳಲ್ಲಿ ತುಂಬ ಮಮತೆ. ಮೈಕೇಲ್ ವಿಷಯದಲ್ಲಿಯೂ ಅಷ್ಟೇ. ಇವರಿಬ್ಬರ ಬಗ್ಗೆ ಅವರಿಗೆ ತುಂಬಾ ಸಹಾನುಭೂತಿಯಿದೆ. ಇವರಿಗೆ ಅವರೇ ಪೋಷಕರು. "ನಮಗೆ ಉಪಕಾರ ಮಾಡಿದ್ದಾರೆಂದು ನಾವು ಜನರನ್ನು ಪ್ರೀತಿಸುವುದಿಲ್ಲ; ನಮ್ಮಿಂದ ಅವರು ಪಡೆಯುತ್ತಿರುವ ಉಪಕಾರಕ್ಕಾಗಿ ನಾವು ಪ್ರೀತಿಸಬೇಕಾಗಿದೆ" ಎಂದು ಸ್ಟರ್ನ್ ಹೇಳುತ್ತಾನೆ. ತಂದೆಯನ್ನು ಕಳೆದುಕೊಂಡು ದಿಕ್ಕಿಲ್ಲದಿದ್ದಾಗ ತಂದೆ ಅವಳನ್ನು ಮನೆಗೆ ಕರೆತಂದರು. ಅವಳ ಸ್ವಭಾವ ಒಳ್ಳೆಯದು. ಅಪ್ಪ ಅವಳ ಓದುಗಾರಿಕೆಯನ್ನು ಮೆಚ್ಚುತ್ತಾರೆ. ಬಹು ಸ್ವಾರಸ್ಯವಾಗಿ ಓದುತ್ತಾಳೆ. ಅವಳಿಂದ ಪ್ರತಿ ಸಂಜೆಯೂ ಓದಿಸಿ ಕೇಳುತ್ತಾರೆ.'

'ಮೇರಿ, ಮುಚ್ಚು ಮರೆಯಿಲ್ಲದೆ ಹೇಳಬೇಕಾದರೆ, ಕೆಲವು ಸಾರಿ ತಂದೆಯ ವರ್ತನೆ ನಿನಗೆ ಕಷ್ಟಕರವಾಗಿ ತೋರಬಹುದಲ್ಲವೆ?' ಎಂದು ಆಂಡ್ರೂ ಹಠಾತ್ತನೆ ಪ್ರಶ್ನಿಸಿದನು.

ಆ ಪ್ರಶ್ನೆಯಿಂದ ಮೇರಿಗೆ ಮೊದಮೊದಲು ಅಚ್ಚರಿಯಾಯಿತು. ಅನಂತರ ದಿಗ್ಭ್ರಮೆಯಾದಂತಾಗಿ 'ನನಗೆ? ನನಗೆ?.... ನನಗೆ ಕಷ್ಟಕರವೆ?....' ಎಂದು ಆತಂಕ ವ್ಯಕ್ತಪಡಿಸಿದಳು.

'ಅವರು ಯಾವಾಗಲೂ ಕಠಿನ. ಈಚೀಚೆಗಂತು ಅವರೊಡನಿರುವುದೇ ತುಂಬ ಕಷ್ಟವಾಗಿರಬೇಕು' ಎಂದು ಆಂಡ್ರೂ ತನ್ನ ತಂಗಿಯನ್ನು ಪರೀಕ್ಷಿಸಲೆಂಬಂತೆ, ಇಲ್ಲ ಗಾಬರಿಗೊಳಿಸಲೆಂಬಂತೆ ತನ್ನ ತಂದೆಯ ಬಗ್ಗೆ ಹಗುರವಾಗಿ ಮಾತಾಡಿದನು.

'ಎಲ್ಲ ರೀತಿಯಿಂದಲೂ ನೀನು ಒಳ್ಳೆಯವ, ಆಂಡ್ರೂ. ಆದರೆ ನಿನ್ನಲ್ಲೊಂದು ತೆರನ ಬೌದ್ಧಿಕ ಗರ್ವವಿದೆ' ಎಂದು ರಾಜಕುಮಾರಿ ಸಂಭಾಷಣೆಯ ಜಾಡನ್ನು ಬಿಟ್ಟು, ಸ್ವಂತಾ

ಲೋಚನೆಯು ಬೆನ್ನು ಹತ್ತಿ, ತನ್ನ ಅಭಿಪ್ರಾಯವನ್ನು ಹೊರಗೆಡಹಿದಳು. 'ಇದು ಮಹಾಪಾಪ! ತಂದೆಯನ್ನು ಪರೀಕ್ಷಿಸ ಸಲ್ಲದು; ಒಂದು ಪಕ್ಷ ಪರೀಕ್ಷಿಸಬಹು ದೆಂದಿಟ್ಟುಕೊಳ್ಳೋಣ, ನಮ್ಮ ತಂದೆಯಂಥ ವ್ಯಕ್ತಿಯಲ್ಲಿ ಗೌರವಭಾವ ವಿನಾ ಬೇರಾವು ದಾದರೂ ಮೊಳೆಯಲವಕಾಶವುಂಟೆ? ನನಗೆ ಅವರ ಬಗ್ಗೆ ತೃಪ್ತಿಯಿದೆ, ಸಂತೋಷ ವಿದೆ. ನನ್ನಂತೆ ನೀವೂ ಸಂತುಷ್ಟವಾಗಿರಬೇಕೆಂಬುದೇ ನನ್ನ ಆಸೆ'.

ಅಣ್ಣ ಸಂಶಯಾತ್ಮಕವಾಗಿ ತಲೆ ಅಲ್ಲಾಡಿಸಿದನು.

'ನಿಜ ಹೇಳುವುದಾದರೆ, ಆಂಡ್ರೂ, ನನಗೆ ಕಠಿನವಾಗಿ ತೋರುವ ವಿಷಯ ಒಂದೇ ಒಂದು. ಅದು ಧಾರ್ಮಿಕ ವಿಷಯಗಳ ಬಗ್ಗೆ ಅವರು ಯೋಚಿಸುವ ರೀತಿ. ಅವರಂಥ ಮಹಾ ಮೇಧಾವಿ ಹಗಲಿನಂತೆ ಸ್ಪಷ್ಟವಾಗಿರುವ ಸಂಗತಿಯನ್ನು ಗ್ರಹಿಸದೆ, ದಾರಿ ಬಿಟ್ಟು ಹೋಗುತ್ತಿದ್ದಾರಲ್ಲ ಎಂಬೊಂದು ವಿಷಯ ಮಾತ್ರ ನನಗೆ ಅರ್ಥವಾಗುವುದಿಲ್ಲ. ನನ್ನ ಮನಸ್ಸಿಗೆ ಬೇಸರವಾಗಿರುವ ವಿಷಯ ಇದೊಂದೇ. ಈಚೀಚೆಗೆ ಈ ವಿಷಯದಲ್ಲಿಯೂ ಮೇಲ್ಪಾಡಿನ ಛಾಯೆಯನ್ನು ಗುರುತಿಸಿದ್ದೇನೆ. ಅವರ ವಿಡಂಬನೆಯು ಖಾರ ಕಡಮೆ ಯಾಗಿದೆ. ಇತ್ತೀಚೆಗೊಬ್ಬರು ಸನ್ಯಾಸಿ ಬಂದಿದ್ದರು; ಅವರನ್ನು ಗೌರವದಿಂದ ಕಂಡರು; ಅವರೊಡನೆ ದೀರ್ಘವಾಗಿ ಸಂಭಾಷಣೆ ನಡೆಸಿದರು.'

'ಅಹಾ, ಕಟ್ಟೊಲುಮೆಯ ತಂಗಿ, ನೀನು ಮತ್ತು ನಿನ್ನ ಸನ್ಯಾಸಿ ಇಬ್ಬರೂ ಶಕ್ತಿಯನ್ನು ವ್ಯರ್ಥವಾಗಿ ಹಾಳು ಮಾಡುತ್ತಿದ್ದೀರೆಂಬ ಶಂಕೆ ನನ್ನನ್ನು ಕಾಡುತ್ತಿದೆ.' ಎಂದು ಆಂಡ್ರೂ ವಾತ್ಸಲ್ಯದಿಂದ ಪರಿಹಾಸ ಮಾಡಿದನು.

'ಅಹಾ, ನನ್ನ ಪ್ರಾಣಮಿತ್ರ, ದೇವರಿಗೆ ನನ್ನ ಮೊರೆ ಮುಟ್ಟುತ್ತದೆಂದು ನಂಬಿ ದ್ದೇನೆ. ಆಂಡ್ರೂ...., ನಿನ್ನಿಂದ ನನಗೊಂದು ಮಹದುಪಕಾರವಾಗಬೇಕಾಗಿದೆ. ಅದೇನೆಂದು ಹೇಳಬಹುದೇ?' ಎಂದವಳು ತುಸು ಹೊತ್ತು ತೆಪ್ಪಗಿದ್ದು, ಅಂಜುತ್ತಂಜುತ್ತ ಪ್ರಶ್ನಿಸಿದಳು.

'ಅದೇನು?'

'ಅನುಗ್ರಹಿಸುವುದಾಗಿ ವಚನ ಕೊಟ್ಟರೆ ಮಾತ್ರ ಹೇಳುತ್ತೇನೆ. ಅದರಿಂದ ನಿನಗೇನೂ ತೊಂದರೆಯಾಗದು, ನಿನ್ನ ಯೋಗ್ಯತೆ ಕಡಮೆಯಾಗುವುದಿಲ್ಲ; ನನಗೆ ನೆಮ್ಮದಿ ದೊರೆಯುತ್ತದೆ. ವಾಗ್ದಾನ ನೀಡು, ಆಂಡ್ರೂಷ!....' ಎಂದವಳು ತನ್ನ ಚೀಲ ದೊಳಗೆ ಕೈ ಹಾಕಿದಳು. ಅದರೊಳಗಿದ್ದ ವಸ್ತುವನ್ನು ಹಿಡಿದುಕೊಂಡು, ತನ್ನ ಬಿನ್ನಹ ವನ್ನು ಮನ್ನಿಸುವ ತನಕ ಅದನ್ನು ಹೊರಗೆ ತೆಗೆಯಬಾರದೆಂದು, ಅವನ ಕಡೆಗೆ ಅಂಜಿಕೆ ಯಿಂದ ನೋಡಿದಳು.

'ಎಷ್ಟೇ ಕಷ್ಟವಾಗಲಿ....' ಎಂದು ಆಂಡ್ರೂ ಅದೇನೆಂಬುದನ್ನು ಊಹಿಸಿಕೊಂಡ ವನಂತೆ ಉತ್ತರಿಸಿದನು.

'ನಿನಗಿಷ್ಟ ಬಂದಂತೆ ಊಹಿಸಿಕೊ. ನೀನು ತಂದೆಗೆ ಸಮಾನ. ಈ ಒಂದು ವಿಷಯ ದಲ್ಲಿ ಮಾತ್ರ ನನಗೆ ಕೃಪೆ ತೋರಿಸು. ತಾವು ಯುದ್ಧದಲ್ಲಿ ಭಾಗವಹಿಸಿದಾಗಲೆಲ್ಲ ತಂದೆಯ ತಂದೆ ಅಂದರೆ ನಮ್ಮ ಮುತ್ತಾತ ಇದನ್ನು ಧರಿಸಿಕೊಂಡಿರುತ್ತಿದ್ದರು.' (ತನ್ನ ಚೀಲದಲ್ಲಿದ್ದುದನ್ನವಳು ಹೊರಗೆ ತೆಗೆದು ತೋರಿಸಲಿಲ್ಲ.) 'ಈಗಲಾದರೂ ಮಾತು ಕೊಡುವೆಯಾ?'

'ಖಂಡಿತವಾಗಿ, ಅದೇನು ಹೇಳು ?'

'ಆಂಡ್ರೂ, ಈ ವಿಗ್ರಹದೊಡನೆ ನಿನಗೆ ಶುಭವನ್ನು ಕೋರುತ್ತೇನೆ. ಇದನ್ನೆಂದೂ ನಿನ್ನ ಮೈಮೇಲಿಂದ ತೆಗೆಯುವುದಿಲ್ಲವೆಂದು ಭಾಷೆ ಕೊಡುವೆಯಾ ? ಕೊಡುವೆಯಾ ?'

'ಅದು ಒಂದು ಟನ್ ತೂಗಲಿಲ್ಲವಾದರೆ, ನನ್ನ ಕೊರಳನ್ನು ಮುರಿಯದಿದ್ದರೆ.... ನಿನ್ನ ಸಂತೋಷಾರ್ಥವಾಗಿ....' ಎಂದವನು ನುಡಿದನು. ತನ್ನ ಅಣಕದಿಂದಾಗಿ ತಂಗಿಯ ಮುಖದ ಮೇಲೆ ಸುಳಿದ ನೋವನ್ನು ಕಂಡು, ತಕ್ಷಣವೆ ಅವನು ವಿಷಾದ ವ್ಯಕ್ತಪಡಿಸಿದನು. 'ನನ್ನ ಮುದ್ದು ತಂಗಿ, ಅದನ್ನು ಸಂತೋಷದಿಂದ, ಅತ್ಯಂತ ಹರ್ಷದಿಂದ ಧರಿಸುತ್ತೇನೆ, ತಿಳಿಯಿತೆ?' ಎಂದು ಸಮಾಧಾನ ಮಾಡಿದನು.

'ನಿನ್ನ ಸಂಕಲ್ಪವೇನೇ ಇರಲಿ, ಭಗವಂತ ಮಾತ್ರ ನಿನ್ನನ್ನು ರಕ್ಷಿಸುತ್ತಾನೆ. ನಿನ್ನ ಮೇಲೆ ಸದಾ ಅವನ ಕೃಪೆಯಿರುತ್ತದೆ; ಅವನು ನಿನ್ನನ್ನು ತನ್ನೆಡೆಗೆ ಬರಮಾಡಿಕೊಳ್ಳು ತ್ತಾನೆ. ಸತ್ಯ ಶಾಂತಿಗಳು ಅವನಲ್ಲಿ ಮಾತ್ರ ನೆಲೆಸಿವೆ' ಎಂದವಳು, ಬೆಳ್ಳಿಯ ಚೈನಿಗೆ ಲಗತ್ತಿಸಿದ್ದ, ಚಿನ್ನದಲ್ಲಿ ಕುಂದಣಗೊಂಡ, ಸಣ್ಣದಾದ ಅಂಡಾಕಾರದ ಹಳೆಯ ಕೃಷ್ಣ ಮುಖದ ವಿಮೋಚಕನ ವಿಗ್ರಹವನ್ನು ಭಕ್ತಿಗೌರವದಿಂದ ಎರಡು ಕೈಗಳಲ್ಲಿಯೂ ಅಣ್ಣನ ಮುಂದೆ ಹಿಡಿದು, ಭಾವಕಂಪಿತ ಧ್ವನಿಯಲ್ಲಿ ನುಡಿದಳು. ಕ್ರೂಸೆಯ ಆಕಾರದಲ್ಲಿ ಕೈಯಾಡಿಸಿ, ವಿಗ್ರಹಕ್ಕೆ ಮುತ್ತಿಟ್ಟು, ಅದನ್ನು ಆಂಡ್ರೂವಿನ ಹಸ್ತದಲ್ಲಿರಿಸಿದಳು. 'ದಯೆಯಿಟ್ಟು, ನನಗಾಗಿ ಅಣ್ಣಾ....!'

ಅವಳ ವಿಶಾಲವಾದ ಅಂಜುಕುಳಿ ಕಣ್ಣುಗಳಿಂದ ಹೂ ಬೆಳಕಿನ ಕಿರಣಗಳು ಬೆಳಗಿದುವು. ಆ ಕಣ್ಣುಗಳು ಅವಳ ತೆಳ್ಳನೆಯ ರೋಗಿಷ್ಠ ಮುಖವನ್ನೆಲ್ಲ ಧವಳಿಸಿ, ಚೆಲುವುಗೊಳಿಸಿದುವು. ಅವಳಣ್ಣ ವಿಗ್ರಹ ತೆಗೆದುಕೊಳ್ಳುವಷ್ಟರಲ್ಲಿ, ಅವಳು ತಡೆದಳು. ಅವಳ ಭಾವ ಆಂಡ್ರೂವಿಗೆ ಅರ್ಥವಾಯಿತು; ಅವನು ಕ್ರೂಸೆಯಂತೆ ಕೈಯಾಡಿಸಿ, ವಿಗ್ರಹವನ್ನು ಚುಂಬಿಸಿದನು. ಆ ಹೃದಯಸ್ಪರ್ಶಿ ಸನ್ನಿವೇಶದಿಂದಾಗಿ ಅವನ ಮುಖದ ಮೇಲೆ ಕೋಮಲ ಭಾವ ನಲಿದಾಡಿತು; ಜತೆಗೆ ವ್ಯಂಗ್ಯಹಾಸವೂ ಇಲ್ಲದಿರಲಿಲ್ಲ.

'ನಿನಗೆ ಧನ್ಯವಾದಗಳು, ನನ್ನಕ್ಕರೆಯ ಅಣ್ಣ' ಎಂದವಳು ಅವನ ಹಣೆಯ ಮೇಲೆ ಮುತ್ತಿಟ್ಟು, ಸೋಫಾದ ಮೇಲೆ ಮತ್ತೆ ಕುಳಿತುಕೊಂಡಳು. ಸ್ವಲ್ಪ ಹೊತ್ತು ಅವರು ಮೌನವಾಗಿದ್ದರು.

'ನಾನು ಮೊದಲೇ ಹೇಳಿದಂತೆ, ಆಂಡ್ರೂ, ಹಿಂದಿನಂತೆ ನೀನು ಯಾವಾಗಲೂ ದಯಾಳುವಾಗಿರು, ಉದಾರಿಯಾಗಿರು. ಲೀಸಳನ್ನು ಕಠಿನ ಪರೀಕ್ಷೆಗೀಡು ಮಾಡಬೇಡ. ಅವಳ ಸ್ವಭಾವ ಒಳ್ಳೆಯದು, ಅವಳ ನಡೆ ಮಧುರ. ಅವಳ ಈಗಿನ ಸ್ಥಿತಿ ನಿಜಕ್ಕೂ ಕಷ್ಟಕರವಾಗಿದೆ' ಎಂದು ತಂಗಿ ಮತ್ತೆ ಹಳೆಯ ಮಾತನ್ನೆತ್ತಿಕೊಂಡಳು.

'ನಾನೆಂದಾದರೂ, ಮಾಷ, ನಿನ್ನ ಮುಂದೆ ನನ್ನ ಪತ್ನಿಯನ್ನು ದೂರಿದ್ದೇನೆ? ದೂಷಿಸಿದ್ದೇನೆ? ಇಷ್ಟೆಲ್ಲ ನನಗೇಕೆ ಹೇಳುತ್ತೀಯೆ ?'

ರಾಜಕುಮಾರಿ ಮೇರಿಯ ಮುಖದ ಮೇಲೆ ಕೆಂಪು ತೇಪೆಗಳು ಕಾಣಿಸಿಕೊಂಡವು. ಅವಳು ತಪ್ಪಿತಸ್ಥಳಂತೆ ತೆಪ್ಪಗಾದಳು.

'ಆ ವಿಷಯ ನಾನೆಂದೂ ಪ್ರಸ್ತಾಪಿಸಲಿಲ್ಲವಲ್ಲ. ಎಲ್ಲರ ಬಾಯಲ್ಲಿಯೂ ಹೀಗೇ ಇದ್ದೀಯೆ. ನನಗಂತು ಆ ಬಗ್ಗೆ ದುಃಖವಾಗಿದೆ' ಎಂದವನು ನುಡಿದನು.

ಅವಳ ಹಣೆ, ಕತ್ತು ಮತ್ತು ಕೆನ್ನೆಗಳ ಮೇಲಿನ ಕೆಂಪು ತೇಪೆಗಳು ಅಗಲವಾದವು. ಏನನ್ನೋ ಹೇಳಲು ಹೋಗಿ, ಅವಳ ಬಾಯಲ್ಲಿ ಮಾತು ಹೊರಡಲಿಲ್ಲ. ಅವಳಣ್ಣ ಸರಿಯಾಗಿಯೇ ಊಹಿಸಿದ್ದ. ಕಿರಿಯ ರಾಜಕುಮಾರಿ ಊಟದ ನಂತರ ಅತ್ತು ಅತ್ತು ಸುಸ್ತಾಗಿದ್ದಳು; ತನ್ನ ಹೆರಿಗೆಯ ಬಗ್ಗೆ ಹೆದರಿಕೆ ವ್ಯಕ್ತಪಡಿಸಿದ್ದಳು; ಕೇಡಿನ ಮುನ್ಸೂಚನೆಯನ್ನು ತೋಡಿಕೊಂಡಿದ್ದಳು; ತನ್ನ ವಿಧಿ, ಮಾವ ಹಾಗೂ ಗಂಡನ ಬಗೆಗೆ ಅಸಮಾಧಾನ ಸೂಚಿಸಿದ್ದಳು. ಅತ್ತು ಅತ್ತು ಸಾಕಾಗಿ ಗಾಢ ನಿದ್ರೆಯಲ್ಲಿ ಮುಳುಗಿದ್ದಳು. ಆಂಡ್ರ್ಯೂ ತನ್ನ ತಂಗಿಯ ಸ್ಥಿತಿಯನ್ನು ನೋಡಿ ಮರುಗಿದನು.

'ನಿನಗಿದು ತಿಳಿದಿರಲಿ, ಮಾಷ: ನಾನು ನನ್ನ ಮಡದಿಯನ್ನು ನಿಂದಿಸಲಾರೆ, ನಾನೆಂದೂ ಬಯ್ದಿಲ್ಲ, ಮುಂದೆಂದೂ ಅವಳ ಬಗ್ಗೆ ಆಕ್ಷೇಪವೆತ್ತುವುದಿಲ್ಲ. ಅವಳ ಬಗ್ಗೆ ನಾನೆಂದೂ ಆಕ್ಷೇಪಾರ್ಹ ರೀತಿಯಲ್ಲಿ ನಡೆದುಕೊಂಡಿಲ್ಲ. ಏನೇ ಬರಲಿ, ಎಂಥ ಸಂದರ್ಭವೇ ಒದಗಲಿ, ನಾನು ಹೀಗೆಯೇ ಇರುತ್ತೇನೆ; ನೀನು ನಿಜ ಅರಿಯಬೇಕಾದರೆ ....ನಾನು ಸುಖವಾಗಿದ್ದೇನೆಯೆ ಎಂದು ತಿಳಿಯುವ ಅಪೇಕ್ಷೆಯುಳ್ಳವಳಾದರೆ? ಇಲ್ಲ! ಅವಳು ಸುಖವಾಗಿದ್ದಾಳೆಯೆ? ಇಲ್ಲ! ಆದರೆ ಇದು ಏಕೆ, ಹೀಗೆ, ನನಗೆ ಗೊತ್ತಿಲ್ಲ....' ಎಂದವನು ಮೇಲೆದ್ದು, ತಂಗಿಯ ಬಳಿ ನಡೆದು, ಬಗ್ಗಿ, ಅವಳ ಹಣೆಯ ಮೇಲೆ ಮುತ್ತಿಟ್ಟನು.

ಭಾವಪೂರ್ಣವೂ, ಕರುಣಾಮಯವೂ, ಅಪೂರ್ವವೂ ಆದ ಕಾಂತಿ ಅವನ ಸುಂದರ ನೇತ್ರಗಳಲ್ಲಿ ಮಿಂಚಿತು. ಅವನ ದಿಟ್ಟಿ ತಂಗಿಯ ಮುಖದಲ್ಲಿ ನಿಲ್ಲದೆ, ಬಾಗಿಲ ಹೊರಗಿನ ಕತ್ತಲೆಯ ಕಡೆಗೆ ಹರಿದಿತ್ತು. 'ಅವಳ ಬಳಿ ಹೋಗೋಣ. ಹೋಗಿ ಬರ್ತೀನಿ ಅಂತ ಹೇಳ ಬೇಕಾಗಿದೆ. ನೀನು ಮುಂದೆ ಹೋಗಿ ಅವಳನ್ನೆಬ್ಬಿಸು. ನಿನ್ನ ಹಿಂದೆಯೇ ನಾನೂ ಬಂದುಬಿಡ್ತೇನೆ, ಪೆತ್ರೂಷ! ಎಂದು ಸೇವಕನನ್ನು ಕರೆದು, 'ಬಾ ಇಲ್ಲಿ ಈ ಸಾಮಾನು ತೆಗೆದುಕೊ, ಸೀಟಿನ ಮೇಲೆ ಬಲ ಪಕ್ಕದಲ್ಲಿಡು' ಎಂದು ಹೇಳಿದನು.

ರಾಜಕುಮಾರಿ ಮೇಲೆದ್ದು, ಬಾಗಿಲ ತನಕ ನಡೆದು, ತುಸು ತಡೆದು 'ಆಂಡ್ರ್ಯೂ, ನಿನಗೆ ದೇವರಲ್ಲಿ ಶ್ರದ್ಧೆಯಿದ್ದಿದ್ದರೆ, ನಿನ್ನಲ್ಲಿಲ್ಲದ ಪ್ರೇಮವನ್ನು ದಯಪಾಲಿಸುವಂತೆ ಮೊರೆಯಿಡುತ್ತಿದ್ದೆ; ನಿನ್ನ ಮೊರೆಗೆ ಖಂಡಿತವಾಗಿ ಪ್ರತಿಫಲ ಲಭಿಸುತ್ತಿತ್ತು' ಎಂದು ನುಡಿದಳು.

'ತಿಳಿಯಿತು, ಮಾಷ. ನೀನು ಮುಂದೆ ನಡೆ. ನಾನು ನಿನ್ನ ಹಿಂದೆಯೇ ಬಂದು ಬಿಡುತ್ತೇನೆ.'

ತನ್ನ ತಂಗಿಯ ಕೋಣೆಗೆ ಹೋಗುವಾಗ, ಒಂದು ರೆಕ್ಕೆಯನ್ನು ಮತ್ತೊಂದು ರೆಕ್ಕೆಗೆ ಸೇರಿಸುವ ಓಣಿಯಲ್ಲಿ ಆಂಡ್ರ್ಯೂ ಮಧುರ ಮಂದಹಾಸವನ್ನು ಬೀರುತ್ತಿದ್ದ ಬೌರಿಯನ್ನೆಯನ್ನು ಸಂಧಿಸಿದನು. ಆದಿನ ಅವಳು ಮೂರು ಬಾರಿ ವಿವಿಕ್ತ ಮಾರ್ಗದಲ್ಲಿ ನಗುನಗುತ್ತ ಅವನಿಗೆದುರಾಗಿದ್ದಳು. 'ಓ! ನಿಮ್ಮ ಕೋಣೆಯಲ್ಲಿದ್ದೀರೆಂದು ಭಾವಿಸಿದ್ದೆ' ಎಂದವಳು ನುಡಿದಾಗ, ಯಾವ ಕಾರಣಕ್ಕೋ ಮುಖ ಕೆಂಪೇರಿತು, ದಿಟ್ಟಿ ತಗ್ಗಿತು.

ಆಂಡ್ರೂ ನಿಷ್ಠುರದಿಂದ ಅವಳ ಕಡೆಗೆ ನೋಡಿದನು. ಕೂಡಲೇ ಕೋಪ ಅವನ ಮುಖದ ಮೇಲೆ ತಾಂಡವವಾಡಿತು ಅವನು ತಿರಸ್ಕಾರದಿಂದ ಅವಳ ಹಣೆ ಕೂದಲುಗಳನ್ನು ನೋಡಿದನೇ ಹೊರತು, ಅವಳ ಕಣ್ಣುಗಳ ಕಡೆಗೆ ದಿಟ್ಟಿ ಹರಿಸಲಿಲ್ಲ. ಆ ಫ್ರೆಂಚ್ ಹುಡುಗಿ ನಾಚಿಕೆಯಿಂದ ಮಾತಿಲ್ಲದೆ ಹೊರಟು ಹೋದಳು. ತಂಗಿಯು ಕೋಣೆ ಸೇರುವ ವೇಳೆಗೆ ಹೆಂಡತಿ ಎಚ್ಚರವಾಗಿದ್ದಳು. ಆತುರಾತುರವಾಗಿ ಹೊರಹೊಮ್ಮುತ್ತಿದ್ದ ಮಾತುಗಳ ಮೂಲಕ ಅವಳ ಸುಸ್ವರ ಕಂಠ ಕೇಳಿಸುತ್ತಿತ್ತು. ದೀರ್ಘ ಸಂಯಮದ ನಂತರ, ಕಳೆದು ಹೋದ ಕಾಲವನ್ನು ಕೂಡಿಕೊಳ್ಳಲೆಂಬಂತೆ ವೇಗ ವೇಗವಾಗಿ ಅವಳು ಫ್ರೆಂಚ್ ಭಾಷೆಯಲ್ಲಿ ಮಾತಾಡುತ್ತಿದ್ದಳು.

'ಮುಪ್ಪನ್ನು ಮರೆಸುವ ಸಲುವಾಗಿ ಕೃತಕ ಕೇಶದಿಂದಲಂಕರಿಸಿಕೊಂಡು, ಬಾಯಿ ತುಂಬ ಹಲ್ಲು ಕಟ್ಟಿಸಿಕೊಂಡಿರುವ ಮುದುಕಿ ಶ್ರೀಮಂತೆ ಜೂಬೊವಳ[1] 'ಮೂರ್ತಿಯನ್ನು ಕಲ್ಪಿಸಿಕೊ.... ಹ, ಹ್ಹ, ಹ್ಹ, ಮೇರಿ!'

ತನ್ನ ಹೆಂಡತಿಯ ಬಾಯಿಂದ ಜೂಬೊವಳ ಬಗೆಗೆ ಅದೇ ನಗುವನ್ನು ಅದೇ ಮಾತನ್ನು ಆ ಮೊದಲೇ ಐದು ಬಾರಿ ಆಂಡ್ರೂ ಇತರರೆದುರಿಗೆ ಕೇಳಿಸಿಕೊಂಡಿದ್ದನು. ಅವನು ಮೆಲ್ಲಮೆಲ್ಲಗೆ ಕೋಣೆಯೊಳಗೆ ಕಾಲಿರಿಸಿದನು. ಗುಲಾಬಿ ರಂಗಿನ ದುಂಡು ಮೊಗದ ಕಿರಿಯ ರಾಜಕುಮಾರಿ ಆರಾಮ ಕುರ್ಚಿಯಲ್ಲಿ ಕುಳಿತುಕೊಂಡು, ಕೈಯಲ್ಲಿ ಕಸೂತಿ ವಸ್ತ್ರ ಹಿಡಿದುಕೊಂಡು, ಎಡೆಬಿಡದೆ ಮಾತಾಡುತ್ತ ಪೀಟರ್ಸ್‌ಬರ್ಗಿನ ಜೀವನ ಸ್ಮೃತಿಗಳನ್ನು, ಅಲ್ಲಿ ಬಳಕೆಯಲ್ಲಿದ್ದ ಪದಗುಚ್ಛಗಳನ್ನು ಪುನರುಕ್ತಿಸುತ್ತಿದ್ದಳು. ಆಂಡ್ರೂ ಅವಳ ಬಳಿ ಹೋಗಿ, ಕೂದಲನ್ನು ನೇವರಿಸಿ, ಪ್ರಯಾಣದ ದಣಿವು ತೀರಿತೆ ಎಂದು ಕೇಳಿದನು. ಅವಳು ಒಂದೇ ಮಾತಿನಲ್ಲಿ ಉತ್ತರ ಮುಗಿಸಿ, ಹರಟೆ ಮುಂದುವರಿಸಿದಳು.

ಆರು ಕುದುರೆಗಳನ್ನು ಹೂಡಿದ ಗಾಡಿ ಮುಖಮಂಟಪದಲ್ಲಿ ಕಾದಿತ್ತು. ಶರನ್ನಿಶೆಯ ಗಾಢಾಂಧಕಾರದಲ್ಲಿ ಗಾಡಿಯ ಮೂಕಿ ಸಹ ಚಾಲಕನಿಗೆ ಕಾಣಿಸುತ್ತಿರಲಿಲ್ಲ. ಲಾಟೀನು ಹಿಡಿದ ಸೇವಕರು ಸುತ್ತಮುತ್ತ ಗಡಿಬಿಡಿಯಿಂದ ಓಡಾಡುತ್ತಿದ್ದರು. ದೊಡ್ಡ ದೊಡ್ಡ ಕಿಟಕಿಗಳಿಂದ ಚೆಲ್ಲುತ್ತಿದ್ದ ದೀಪಗಳ ಬೆಳಕಿನಲ್ಲಿ ಆ ಮಹಾಸೌಧ ಝಗಝಗಿಸಿ ರಾರಾಜಿಸುತ್ತಿತ್ತು. ಮನೆಯ ಆಳುಗಳು ಕಿರಿಯ ರಾಜಕುಮಾರನನ್ನು ಬೀಳ್ಕೊಡುವ ಸಲುವಾಗಿ ವಿಶಾಲಾಂಗಣದಲ್ಲಿ ಗುಂಪುಗೂಡಿದ್ದರು. ಮೈಕೇಲ್ ಇವಾನೋವಿಚ್, ಬೌರಿಯನ್ನೆ, ಮೇರಿ, ಕಿರಿಯ ರಾಜಕುಮಾರಿಯರೇ ಮೊದಲಾದ ಮನೆಯ ಜನ ಸ್ವಾಗತ ಮಂದಿರದಲ್ಲಿ ನೆರೆದಿದ್ದರು. ಏಕಾಂತದಲ್ಲಿ ಶುಭಕೋರುವ ಸಲುವಾಗಿ ತಂದೆ ತನ್ನ ಕೋಣೆಗೆ ಮಗನನ್ನು ಕರೆಸಿದ್ದನು. ಅವರು ಹೊರಬರುವುದನ್ನೇ ಎಲ್ಲರೂ ಕಾದು ಕೊಂಡಿದ್ದರು.

ಆಂಡ್ರೂ ಕೋಣೆಯೊಳಗೆ ಕಾಲಿರಿಸಿದಾಗ, ಮುಪ್ಪಿನ ಕನ್ನಡಕಗಳನ್ನೂ, ಬಿಳಿಯ ಮೇಲಂಗಿಯನ್ನೂ ಧರಿಸಿದ್ದ ತಂದೆ ಮೇಜಿನ ಮುಂದೆ ಕುಳಿತು ಬರೆಯುತ್ತಿದ್ದನು.

---

1 ಜುಬ್ ಎಂದರೆ ಹಲ್ಲು. ಇಲ್ಲಿ ಶ್ಲೇಷಾರ್ಥವಿದೆ.

ತನ್ನ ಮಗಳು ಜೊತೆಯಾಗಿ ಅವನು ಆ ದೇವರಲ್ಲಿ ಬೇರೆ ಯಾರನ್ನೂ ಬಯಸುತ್ತಿ
ತ್ತಿರಲಿಲ್ಲ. ಅವನೂ ಮತ್ತೆ ಬಿಟ್ಟು ಹೊರಳಿದನು.

'ಹೊರಟೆಯಾ!' ಎಂದಳು ನಡೆಯುತ್ತಿದ್ದಂತೆ ಬಂದ ಸಾಗುತ್ತಿತ್ತು.

'ಬಳಿಗೆ ಹೋಗಲು ಬಂದಿದ್ದೇನೆ'.

'ಇಲ್ಲಿ ನಿಂತ್ತಿರು' ಎಂದವನು ಕೆನ್ನೆ ತೋರಿಸಿದನು. 'ಧನ್ಯವಾದಗಳು.'

'ನನಗೇಕೆ ಧನ್ಯವಾದ?'

'ಹೆಂಡತಿಗೆ ನೀನು ಹಾಡಿಕೊಂಡು ಎದುರಾಗುತ್ತಿದ್ದೆಯಲ್ಲ. ಅದಕ್ಕಾಗಿ. ಎಲ್ಲ
ಮೊದಲು ನೀನೆ ನಮ್ಮ. ಧನ್ಯವಾದ, ಧನ್ಯವಾದ!' ಮಾತಿನ ಜತೆ ಜತೆಗೆ
ಲೆಕ್ಕವಿಲ್ಲ ಹಾಗೆ ಸಾಗುತ್ತಿತ್ತು. 'ಏನಾದರೂ ನನ್ನಿಂದಾಗಬೇಕಿದ್ದರೆ ಹೇಳು.
ಎರಡು ಕೆಲಸಗಳ ಏಕಕಾಲದಲ್ಲಿ ಸಾಧ್ಯ.'

'ನನ್ನ ಹೆಂಡತಿಯ ವಿಷಯ.... ಅವಳು ನಿನಗೆ ಹೊರೆಯಾಗುತ್ತಾಳೆಂದು
ನಾಚಿಕೆಯಾಗುತ್ತದೆ....'

'ಇದೆಲ್ಲ ಏನೆಂಬುದು. ಇನ್ನೇನಾದರೂ ಇದ್ದರೆ ಹೇಳು.'

'ಅವಳ ಜೊತೆ ಹೆತ್ತವರಾಗ ಮಾತಿನ್ನಿಂದ ಗಂಡು ಹುಟ್ಟು
ಕೊಳ್ಳ.... ಅದಾಗಿದ್ದರೆ ಆತಂಕವಿರುತ್ತಿರಲಿಲ್ಲ....'

ಮುದುಕ ಬರೆದ ನಿಲ್ಲಿಸಿ, ಅರ್ಥವಾಗದವನಂತೆ, ತನ್ನ ಕಣ್ಣ ದೃಷ್ಟಿ
ಮಗನ ಮೇಲೆ ನಾಟಿದನು.

'ಪ್ರಕೃತಿಯೇ ಕೈಕೊಟ್ಟರೆ ಯಾರೇನು ಮಾಡಲಾಗದೆಂಬುದು
ಎಂದು ರಾಜಕುಮಾರ ಗಾಬರಿಗೊಂಡವನಂತೆ ನುಡಿದನು. 'ನಾವಿದ
ಒಂದು ರೋಗವಾಗುವುದು. ಅದೆ ಅವಳು ಬಂದಿದ್ದ ರೀತಿ.
ಕೃಪೆ ನನ್ನ ಮನಸ್ಸನ್ನು ಕಾಡುತ್ತಿದೆ. ಸುತ್ತ ಮುತ್ತಲ ಜನ ಅವಳ
ಏನೇನೋ ಆಡುತ್ತಾರೆ. ಅವರಿಗೊಂದು ಕಥೆ ಬೇಕಂತೆ. ಅದರಿಂದ
ದ್ದೇನೆ.'

'ಹ್ಞಾ....ಹ್ಞಾ....' ಎಂದು ಮುದುಕ ತಾನು ಬರೆಯುತ್ತಿದ್ದುದನ್ನು
ಮೂಗಿನಲ್ಲಿಯೇ ಗೊಣಗಿಕೊಂಡನು. 'ಅದನ್ನ ನನಗೆ ಬಿಡು.' ಅವನು ನ್ಯೆ
ಹಿ ಮಾಡಿದನು. ಕೊನೆಗೆ ಮಗನ ಕಡೆಗೆ ಮೊಗವಾಗಿ ನಗಲಾರಂಭಿಸಿದನು. '
ಕ್ಕೆ ವ್ಯವಹಾರ, ಅಲ್ಲವೆ?'.

'ಕೆಟ್ಟ ವ್ಯವಹಾರ ಬರುವುದು, ಅಪ್ಪ?'

'ಹೌದು!' ಎಂದು ರಾಜಕುಮಾರ ಸಂಕ್ಷಿಪ್ತವಾಗಿಯೂ ಅರ್ಥವತ್ತಾಗಿ
ನುಡಿದನು.

'ನನಗರ್ಥವಾಗುತ್ತಿಲ್ಲ'.

'ಹೌದು. ಅದರ ಅರ್ಥ ಮಾಗಿಲ್ಲ, ಮಗು. ಎಲ್ಲರೂ ಒಂದೇ ಕಡೆ
ಯಾವೊಬ್ಬನೂ ಅವಮಾನಿತನಾಗಲಾರ. ಹೆದರಬೇಡ. ಯಾರಿಗೂ ಹೇಳ
ಅದೆಲ್ಲ ನನಗೆ ಗೊತ್ತಿದೆ.'

ಅವನು ಬಹುಕಾಲ ಬದುಕುವುದರಲ್ಲಿ ತನಗೆ ಸಂಶಯವಿಲ್ಲವೆಂದು ಆಂಡ್ರೂ ತನ್ನ ತಂದೆಗೆ ಹೇಳಲಿಲ್ಲ. ಹಾಗೆಲ್ಲ ಮಾತಾಡಬಾರದೇನೋ ಎಂದು ಅವನು ಭಾವಿಸಿದನು. 'ಆಗಲಿ, ಅಪ್ಪ, ನೀವು ಹೇಳಿದಂತೆ ನಡೆದುಕೊಳ್ಳುತ್ತೇನೆ' ಎಂದಿಷ್ಟೇ ಒರೆದನು.

'ಸರಿ, ಹಾಗಾದರೆ. ಹೋಗಿ ಬರ್ತೀಯಾ' ಚುಂಬಿಸಲೆಂದು ತಂದೆ ಮಗನ ಮುಂದೆ ಕೈಚಾಚಿದನು; ಅವನನ್ನು ಬಾಚಿ ತಬ್ಬಿಕೊಂಡನು. 'ರಾಜಕುಮಾರ ಆಂಡ್ರ್ಯೂ, ಇದನ್ನು ನೆನಪಿನಲ್ಲಿಟ್ಟುಕೋ. ನೀನು ಯುದ್ಧದಲ್ಲಿ ಮಡಿದರೆ ನನಗೆ, ಈ ನಿನ್ನ ತಂದೆಗೆ ಭಾರಿ ದುಃಖವಾಗುತ್ತದೆ....' ಅವನು ಹಠಾತ್ತನೆ ಮಾತು ನಿಲ್ಲಿಸಿದನು. ಕೆಲವು ಕ್ಷಣಗಳಲ್ಲಿಯೇ ಅವನು ಮತ್ತೆ ಸಿಡುಕು ದನಿಯಲ್ಲಿ ಚೀರಿದನು. 'ಆದರೆ, ಕಂದ, ನಿಕೊಲಾಸ್ ಬಲ್ಕೋನ್‌ಸ್ಕಿಯ ಮಗನಿಗೆ ಗೌರವ ತರುವ ರೀತಿಯಲ್ಲಿ ನೀನು ವರ್ತಿಸಲಿಲ್ಲವೆಂದು ತಿಳಿದದ್ದಾದರೆ, ನಾನು ಅವಮಾನದಿಂದ ತಲೆಯೆತ್ತಲಾರೆ.'

'ನೀವಿದನ್ನು ನನಗೆ ಹೇಳಬೇಕಾಗಿರಲಿಲ್ಲ, ಅಪ್ಪ' ಎಂದು ಮಗ ನಕ್ಕನು.

ಮುದುಕ ಮೌನ ತಾಳಿದನು.

'ನಾನು ಸಹ ನಿಮ್ಮಿಂದೊಂದು ಮಾತು ಕೇಳ ಬೇಕೆಂದಿದ್ದೆ' ಎಂದು ಆಂಡ್ರೂ ಮಾತು ಮುಂದುವರಿಸಿದನು. 'ನಾನು ಯುದ್ಧದಲ್ಲಿ ಮಡಿದು, ನನಗೊಬ್ಬ ಮಗ ಜನಿಸುವುದಾದರೆ ಅವನು ನಿಮ್ಮನ್ನು ಬಿಟ್ಟು ಹೋಗದಿರಲಿ, ಅಪ್ಪ. ನಾನು ನಿನ್ನೆ ತಿಳಿಸಿದ ಹಾಗೆ.... ಅವನು ನಿಮ್ಮ ಕಣ್ಮುಂದೆಯೇ ಬೆಳೆಯಲಿ.... ದಯೆಯಿಟ್ಟು ನನ್ನ ಇಷ್ಟಾರ್ಥ ನಡೆಸಿ ಕೊಡಿ.'

'ನಿನ್ನ ಹೆಂಡತಿಯ ಬಳಿ ಬಿಡಬಾರದೆ?' ಎಂದು ಮುದುಕ ನಕ್ಕನು.

ಅವರಿಬ್ಬರೂ ಎದುರು ಬದುರಾಗಿ ತುಟಿ ಪಿಟಕ್ಕೆನ್ನದೆ ತುಸುಕಾಲ ನಿಂತರು. ಮುದುಕನ ಹರಿತವಾದ ಕಣ್ಣುಗಳು ನೇರವಾಗಿ ಮಗನ ಕಣ್ಣುಗಳಲ್ಲಿ ಊರಿದ್ದುವು. ಹಿರಿಯ ರಾಜಕುಮಾರನ ಮುಖದ ಕೆಳಭಾಗ ಜಗ್ಗಿದಂತಾಯಿತು. ಪರಸ್ಪರ ಸ್ವಸ್ತಿ ಹೇಳಿದ್ದಾಯಿತು. 'ಹೋಗಿ ಬಾ!' ಎಂದವನು ಇದ್ದಕ್ಕಿದ್ದಂತೆ ಕುಪಿತ ಧ್ವನಿಯಲ್ಲಿ ಗಟ್ಟಿಯಾಗಿ ಕೂಗಿ ಬಾಗಿಲು ತೆರೆದನು.

'ಏನದು? ಏನು?' ಎಂದು ರಾಜಕುಮಾರಿಯರಿಬ್ಬರೂ ಕ್ಷಣಕಾಲ ಬಾಗಿಲಲ್ಲಿ ಆಂಡ್ರೂವನ್ನೂ, ಕುಪಿತ ಸ್ವರದ, ಬಿಳಿಯ ಮೇಲಂಗಿ ಕನ್ನಡಕ ಧರಿಸಿದ, ಕೃತಕ ಕೇಶವಿಲ್ಲದ ಮುದುಕನ ಆಕೃತಿಯನ್ನೂ ಕಂಡು ಪ್ರಶ್ನ ದೃಷ್ಟಿಯಿಂದ ಪರಸ್ಪರ ಮುಖ ನೋಡಿಕೊಂಡರು.

ಆಂಡ್ರೂ ನಿಟ್ಟುಸಿರೆದನೇ ಹೊರತು ಉತ್ತರಿಸಲಿಲ್ಲ.

'ಸರಿ' ಎಂದವನು ಸತಿಯ ಕಡೆಗೆ ತಿರುಗಿದನು. 'ಸರಿ' ಎಂಬ ಮಾತು ಔದಾಸೀನ್ಯ ದಿಂದ ಕೂಡಿದ ವ್ಯಂಗ್ಯವನ್ನು ಧ್ವನಿಸುತ್ತಿದ್ದಂತೆ ತೋರಿತು. 'ಇನ್ನು ಮುಂದೆ ನಿನ್ನ ನಾಟಕ ನಡೆಯಲಿ' ಎಂಬ ಧ್ವನಿ ಅವನ ಮಾತಿನಲ್ಲಿ ಪ್ರತಿಫಲಿಸುತ್ತಿದ್ದಂತೆ ಕಾಣು ತ್ತಿತ್ತು.

'ಆಂಡ್ರ್ಯೂ, ನಾನೀಗ ಸಿದ್ಧವಾಗಿದ್ದೇನೆ' ಎಂದು ಕಿರಿಯ ರಾಜಕುಮಾರಿ ಮ್ಲಾನ ವದನೆಯಾಗಿ, ಭಯಚಕಿತ ದೃಷ್ಟಿಯಿಂದ ಗಂಡನ ಕಡೆಗೆ ನೋಡಿದಳು.

ಗಂಡ ಅವಳನ್ನು ಬಾಚಿ ತಬ್ಬಿಕೊಂಡನು. ಅವಳು ಚೀರಿದಳು. ಪ್ರಜ್ಞಾಹೀನಳಾಗಿ ಗಂಡನ ತೋಳುಗಳ ಮೇಲೊರಗಿದಳು. ಅವನು ಹುಷಾರಾಗಿ, ಅವಳನ್ನು ತನ್ನ ತೋಳಿನಿಂದ ಬಿಡಿಸಿ, ಅವಳ ಮುಖವನ್ನೇ ದಿಟ್ಟಿಸುತ್ತ, ಅವಳನ್ನು ಮೆಲ್ಲಗೆ ಆರಾಮಕುರ್ಚಿಯಲ್ಲಿ ಕೂರಿಸಿದನು.

'ದೇವರು ನಿನ್ನನ್ನು ಚೆನ್ನಾಗಿಡಲಿ, ಮೇರಿ' ಎಂದವನು ತಂಗಿಯನ್ನು ಸೌಮ್ಯವಾಗಿ ಮಾತಾಡಿಸಿ, ಕೈಎಳೆದುಕೊಂಡು ಮುತ್ತಿಟ್ಟು, ಜೋರು ಜೋರಾಗಿ ಹೆಜ್ಜೆ ಹಾಕುತ್ತ, ಕೋಣೆಯಿಂದ ಹೊರಗೆ ಹೋದನು.

ಕಿರಿಯ ರಾಜಕುಮಾರಿ ಆರಾಮಕುರ್ಚಿಯಲ್ಲೊರಗಿದ್ದಳು. ಬೌರಿಯನ್ನೆ ಅವಳ ಕಪೋಲವನ್ನು ತಿಕ್ಕುತ್ತಿದ್ದಳು. ಅತ್ತಿಗೆಗೆ ಊರೆಯಾಗಿದ್ದ ಮೇರಿ ಸಾಶ್ರುನಯನೆಯಾಗಿ ಆಂಡ್ರ್ಯೂ ಹೋದ ಬಾಗಿಲ ಕಡೆಗೆ ನೋಡುತ್ತ, ಆ ದಿಕ್ಕಿಗೆದುರಾಗಿ ಕ್ರೂಸೆಯಾಕಾರದಲ್ಲಿ ಕೈಯಾಡಿಸಿದಳು. ಮುದುಕ ಸಿಟ್ಟಿನಿಂದ ಆಗಾಗ್ಗೆ ಮೂಗು ಹಿಂಡುವ ಧ್ವನಿ ಪಿಸ್ತೂಲ್ ಗುಂಡಿನ ಹಾಗೆ ಅಧ್ಯಯನ ಮಂದಿರದ ಕಡೆಯಿಂದ ಕೇಳಿಸುತ್ತಿತ್ತು. ಆಂಡ್ರ್ಯೂವಿನ ಗಾಡಿ ಮನೆ ದಾಟುವಷ್ಟರಲ್ಲಿ ಅಧ್ಯಯನ ಮಂದಿರದ ಬಾಗಿಲು ದಡಾರನೆ ತೆರೆಯಿತು. ಬಿಳಿಯ ನೀಲಂಗಿ ತೊದೆದ ಮುದುಕನ ಉಗ್ರಮೂರ್ತಿ ಹೊರಗೆ ತಲೆ ಹಾಕಿತು.

'ಹೊರಟೇ ಹೋದನೆ? ಸರಿಸರಿ, ಒಳ್ಳೆಯದಾಯಿತು' ಎಂದವನು ಗೊಣಗಿದನು. ಪ್ರಜ್ಞಾಹೀನಳಾಗಿದ್ದ ಕಿರಿಯ ರಾಜಕುಮಾರಿಯ ಕಡೆಗೆ ಸಿಡುಕು ದಿಟ್ಟಿ ಮಿಟುಕಿಸಿ, ಆಕ್ಷೇಪಕ ಭಂಗಿಯಲ್ಲಿ ತಲೆಯಲ್ಲಾಡಿಸಿ, ರಪ್ಪನೆ ಬಾಗಿಲು ಮುಚ್ಚಿಕೊಂಡನು.

ಪರ್ವ-೨

ಅಧ್ಯಾಯ ೧

೧೮೦೫ನೆಯ ಅಕ್ಟೋಬರ್ ತಿಂಗಳಲ್ಲಿ ರಷ್ಯಾ ಸೈನ್ಯ ಆಸ್ಟ್ರಿಯಾದ ಆರ್ಚ್‌ಡಚಿ ಪ್ರಾಂತ್ಯದ ನಗರ ಖೇಡಗಳನ್ನಾಕ್ರಮಿಸಿಕೊಂಡಿತ್ತು. ರಷ್ಯಾದಿಂದ ಹೊಸಹೊಸದಾಗಿ ಬರುತ್ತಿದ್ದ ತುಕಡಿಗಳು ಬ್ರೌನೌದುರ್ಗದ ಬಳಿ ಬೀಡು ಬಿಟ್ಟು, ಸುತ್ತಮುತ್ತಣ ನಿವಾಸಿಗಳಿಗೆ ಹೊರೆಯಾಗಿದ್ದುವು. ಬ್ರೌನೌ ಮಹಾಸೇನಾನಿ ಕುತುಜೋವ್ ಅವರ ಕೇಂದ್ರ ಕಾರ್ಯಸ್ಥಾನವಾಗಿತ್ತು.

೧೮೦೫ನೆಯ ಅಕ್ಟೋಬರ್ ೧೧ರಂದು ಬ್ರೌನೌ ತಲುಪಿದ ಪದಾತಿ ಬಲದ ತುಕಡಿಯೊಂದು ಪಟ್ಟಣದಿಂದಾಚೆ ಅರ್ಧ ಮೈಲಿ ದೂರದಲ್ಲಿ ಮಹಾಸೇನಾನಿಯ ತಪಾಸಣೆಗಾಗಿ ಕಾದು ನಿಂತಿತ್ತು. ಅರಷ್ಯನ್ ಪರಿಸರವಿದ್ದರೂ—ಹಣ್ಣು ತೋಟಗಳು, ಕಲ್ಲು ಬೇಲಿಗಳು, ಹೆಂಚಿನ ಮನೆಗಳು, ದೂರದ ಬೆಟ್ಟಗಳು ಇವು ಸುತ್ತಮುತ್ತ ಹರಡಿದ್ದವು. —ತಮ್ಮನ್ನೇ ಕುತೂಹಲದಿಂದ ದುರುಗುಟ್ಟಿಕೊಂಡು ನೋಡುತ್ತಿದ್ದ ಅಲ್ಲಿಯ ನಿವಾಸಿಗಳು ರಷ್ಯನ್ನರಲ್ಲದಿದ್ದರೂ, ರಷ್ಯಾದ ಯಾವ ಭಾಗದಲ್ಲಾದರೂ ತನಿಖೆಗೆ ಸಿದ್ಧವಾಗಿದ್ದ ರಷ್ಯನ್ ದಳದ ಹಾಗೆ ಆ ತುಕಡಿ ರಾರಾಜಿಸುತ್ತಿತ್ತು.

ಪ್ರಯಾಣದಲ್ಲಿರುವಾಗಲೇ ಮಹಾಸೇನಾನಿ ತಪಾಸಣೆ ನಡೆಸುವರೆಂಬ ಆಜ್ಞೆ ಪ್ರಯಾಣದ ಕೊನೆಯ ದಿನ ಸಂಜೆ ಪ್ರಕಟವಾಗಿತ್ತು. ನಿರೂಪದ ಮಾತುಗಳು ದಳದ ನಾಯಕನಿಗೆ ಸ್ಪಷ್ಟವಾಗಿರಲಿಲ್ಲ. ಪ್ರಯಾಣದ ಪಾಳಿಯಲ್ಲಿ ದಳಗಳನ್ನು ವ್ಯವಸ್ಥೆಗೊಳಿಸಬೇಕೇ ಬೇಡವೇ ಎಂಬ ಸಮಸ್ಯೆ ಅವರನ್ನು ಕಾಡುತ್ತಿತ್ತು. ಬೇರೆ ಬೇರೆ ಪಟಾಲಮ್ ನಾಯಕರೊಡನೆ ಸಮಾಲೋಚನೆ ನಡೆಸಿದ ನಂತರ, ಮೆರವಣಿಗೆಯ ಕ್ರಮದಲ್ಲಿ ತುಕಡಿಯನ್ನು ಹಾಜರು ಪಡಿಸುವಂತೆ ತೀರ್ಮಾನಿಸಲಾಯಿತು. ಸ್ವಲ್ಪ ಮಣಿಯುವುದಕ್ಕಿಂತ ಪೂರ್ತಿ ಮಣಿಯುವುದೇ ಮೇಲೆಂಬ ತತ್ತ್ವ ಆ ತೀರ್ಮಾನಕ್ಕೆ ಕಾರಣವಾಗಿತ್ತು. ಇಪ್ಪತ್ತು ಮೈಲಿಗಳ ಪ್ರಸ್ಥಾನದ ನಂತರ ಸೈನಿಕರು ಇಡೀ ರಾತ್ರಿ ಕಣ್ಣು ಮುಚ್ಚದೆ ದುರಸ್ತು ಮಾಡಿ ಸ್ವಚ್ಛಗೊಳಿಸುತ್ತಿದ್ದರು. ಸಹಾಯಕರು ಮತ್ತು ದಳನಾಯಕರು ಅಂದಾಜು ಲೆಕ್ಕ ನಿರ್ದೇಶನಗಳಲ್ಲಿ ಆಸಕ್ತರಾಗಿದ್ದರು. ಪ್ರಾತಃಕಾಲದ ಹೊತ್ತಿಗೆ ಸೈನ್ಯ, ಹಿಂದಿನ ದಿನದ ಕೊನೆಯ ಹಂತದ ಪ್ರಯಾಣದಲ್ಲಿದ್ದಂತೆ ಗೊತ್ತು ಗುರಿಯಿಲ್ಲದೆ ಅಲೆದಾಡುವ ಅಸ್ತವ್ಯಸ್ತ ನೆರವಿಯಾಗದೆ, ಎರಡು ಸಾವಿರ ಯೋಧರ ಸುವ್ಯವಸ್ಥಿತ ವ್ಯೂಹವಾಗಿತ್ತು. ಪ್ರತಿಯೊಬ್ಬ ಯೋಧನಿಗೂ ಅವನವನ ಸ್ಥಾನ ಗೊತ್ತಿತ್ತು, ಅವನವನ ಕರ್ತವ್ಯ ತಿಳಿದಿತ್ತು. ಅವರ ಮುಂಡಿ ಪಟ್ಟಿಗಳು ಸ್ವಸ್ಥಾನವಲ್ಲಿದ್ದು ಚೊಕ್ಕಟತನದಿಂದ ಮಿರುಗುತ್ತಿದ್ದುವು. ಈ ವ್ಯವಸ್ಥೆ ಕೇವಲ ಬಾಹ್ಯ ವಿಚಾರಗಳಿಗೆ ಮಾತ್ರವೇ ಸಂಬಂಧವುಳ್ಳದ್ದಾಗಿರಲಿಲ್ಲ. ಮಹಾಸೇನಾನಿ ಏನಾದರೂ ಸಮವಸ್ತ್ರಗಳ ಕೆಳಗೆ ನೋಡಲು

ಮನಸ್ಸು ಮಾಡಿದ್ದರೆ, ಅವನು ಪ್ರತಿಯೊಬ್ಬನ ಮೈಮೇಲೆ ಮಡಿ ಶರಟನ್ನೂ, ಪ್ರತಿಯೊಂದು ಬೆನ್ನು ಚೀಲದಲ್ಲಿ, ಸೈನಿಕರೇ ಹೇಳುವಂತೆ ದಬ್ಬಳ, ಸಾಬೂನು ಇತ್ಯಾದಿ ನಿರ್ದಿಷ್ಟ ಸಾಮಗ್ರಿಗಳನ್ನೂ ಕಾಣಬಹುದಿತ್ತು. ಒಂದೇ ಒಂದು ವಿಷಯದಲ್ಲಿ ಮಾತ್ರ ಯಾರಿಗೂ ಸಮಾಧಾನವಿರಲಿಲ್ಲ. ಅದು ಯೋಧರ ಬೂಟುಗಳ ಅವಸ್ಥೆಗೆ ಸಂಬಂಧಿಸಿದ್ದು. ಅರ್ಧಕ್ಕಿಂತ ಹೆಚ್ಚು ಜನರ ಬೂಟುಗಳು ತೂತಾಗಿದ್ದುವು. ಈ ನ್ಯೂನತೆಗೆ ದಳಪತಿಯ ದೋಷ ಕಾರಣವಾಗಿರಲಿಲ್ಲ. ಎಷ್ಟು ತಗಾದೆ ಪತ್ರಗಳನ್ನು ಕಳಿಸಿದರೂ ಆಸ್ಟ್ರಿಯಾ ಸರ್ಕಾರದ ಮೋತಿಖಾನೆಯ ಇಲಾಖೆ ಬೂಟುಗಳನ್ನೊದಗಿಸಿರಲಿಲ್ಲ. ಏಳುನೂರು ಮೈಲಿಗಳ ದೂರ ಸೈನ್ಯ ಸಾಗಿತ್ತು.

ದಳಪತಿ ನರೆತ ಹುಬ್ಬು ಕೆನ್ನೆಗೂದಲುಗಳುಳ್ಳ, ವಯಸ್ಸಾದ, ಸಿಡುಕಿನ ದಷ್ಟಪುಷ್ಟ ಕಾಯದ ಟೊಣೆಯ; ಭುಜಗಳೆರಡರ ನಡುವಣ ಅಗಲಕ್ಕಿಂತ, ಎದೆ ಬೆನ್ನುಗಳ ನಡುವಣ ಸೀಮೆ ಅಗಲವಾಗಿದ್ದು, ವೃತ್ತಾಕಾರವಾಗಿ ಬೆಳೆದಿದ್ದನು. ಮಡಿಸಿದೆಡೆ ಎದ್ದು ಕಾಣುತ್ತಿದ್ದ ನೆರಿಗೆಗಳುಳ್ಳ ಹೊಚ್ಚ ಹೊಸ ಸಮವಸ್ತ್ರವನ್ನವನು ಧರಿಸಿದ್ದನು. ದಪ್ಪನೆಯ ಸುವರ್ಣ ಭುಜಕೀರ್ತಿಗಳು ಅವನ ಮಜಬೂತಾದ ಭುಜಗಳ ಮೇಲೆ ಒರಗಿರುವುದಕ್ಕಿಂತ ಹೆಚ್ಚಾಗಿ ನಿಂತಂತೆ ಕಾಣುತ್ತಿದ್ದುವು. ತನ್ನ ಜೀವನದ ಅತ್ಯಂತ ಪವಿತ್ರ ಕರ್ತವ್ಯವನ್ನು ನೆರವೇರಿಸುವ ಹೆಮ್ಮೆ ಅವನ ಮುಖದಲ್ಲಿ ಪ್ರಖರವಾಗಿತ್ತು. ಅವನು ಮುಂಚೂಣಿಯಲ್ಲಿ ನಡೆಯುತ್ತಿದ್ದು, ಜಗ್ಗಿ ಎಳೆದಂತೆ, ತುಸು ಹಿಂದಕ್ಕೆ ಬಾಗುತ್ತಿದ್ದನು. ತನ್ನ ತುಕಡಿಯ ಬಗ್ಗೆ ದಳಪತಿಗೆ ಅಭಿಮಾನವಿತ್ತು, ಆನಂದವಿತ್ತು; ಅವನ ಪೂರ್ಣ ಮನಸ್ಸು ಅದರಲ್ಲಿ ಮಗ್ನವಾಗಿತ್ತು: ಆದರೂ ಸೈನ್ಯ ಸಂಬಂಧವಾದ ಸಂಗತಿಗಳ ಜತೆಗೆ ಲೈಂಗಿಕಾಸಕ್ತಿ ಹಾಗೂ ಸಾಮಾಜಿಕ ಹಿತಗಳು ಅಷ್ಟೇ ದಟ್ಟವಾಗಿ ಅವನ ಆಲೋಚನೆಯ ಭಾಗವಾಗಿದ್ದುವೆಂಬುವನ್ನು ಅವನ ಬಿಂಕ ಸಾರಿ ಹೇಳುತ್ತಿತ್ತು.

'ಸ್ವಾಮಿ, ಮೈಕೇಲ್ ಮಿಾತ್ರಿಚ್‌ರೆ, ಏನು ಸಮಾಚಾರ?' ಎಂದವನು ಮತ್ತೊಬ್ಬ ನಾಯಕನನ್ನು ಚುಡಾಯಿಸಿದನು. ಆ ನಾಯಕ ನಗುನಗುತ್ತ ಒತ್ತರಿಸಿಕೊಂಡು ಮುಂದೆ ಬಂದನು. (ಅವರಿಬ್ಬರೂ ಆನಂದೋನ್ಮತ್ತರಾಗಿದ್ದರೆಂಬುದು ಸ್ಪಷ್ಟ) 'ರಾತ್ರಿ ಹೇಗಿತ್ತು? ಕೈಗೆ ಬಿಡುವೇ ಇಲ್ಲ. ಏನೇ ಆಗಲಿ, ಸೈನ್ಯದ ಉದ್ಯೋಗ ಕೆಟ್ಟದ್ದಲ್ಲ; ಏನ್ ಹೇಳ್ತೀಯೆ?'

ಆ ಮಾತಿನ ಕುಚೋದ್ಯವನ್ನು ಗ್ರಹಿಸಿದ ತುಕಡಿಯ ನಾಯಕ ನಕ್ಕನು.

ಅಷ್ಟರಲ್ಲಿ ಸನ್ನೆಯಾಳುಗಳಿದ್ದ ಪಟ್ಟಣದ ದಾರಿಯಲ್ಲಿ ಇಬ್ಬರು ಕುದುರೆ ಸವಾರರು ಕಾಣಿಸಿಕೊಂಡರು. ಅವರು ಅಂಗರಕ್ಷಕ ದಳದ ಸೈನಿಕರು. ಅವರನ್ನು ಕೊಸಾಕ್ ಒಬ್ಬ ಹಿಂಬಾಲಿಸುತ್ತಿದ್ದನು.

ಹಿಂದಿನ ದಿನ ಪ್ರಕಟಿಸಿದ್ದ ನಿರೂಪ ಸ್ಪಷ್ಟವಾಗಿರಲಿಲ್ಲವಾದ್ದರಿಂದ, ಅದನ್ನು ಸ್ಥಿರೀಕರಿಸುವ ಸಲುವಾಗಿ ಅಂಗರಕ್ಷಕರನ್ನು ಕಳಿಸಲಾಗಿತ್ತು. ಪ್ರಸ್ಥಾನ ಸಮಯದಲ್ಲಿ ಯಾವ ಸ್ಥಿತಿಯಲ್ಲಿರುತ್ತದೆಯೋ ಅದೇ ಸ್ಥಿತಿಯಲ್ಲಿ ಸೇನಾ ತುಕಡಿಯನ್ನು ಪರಿಶೀಲಿಸಬೇಕೆಂಬ ಇಚ್ಛೆಯನ್ನು ಮಹಾ ಸೇನಾನಿ ವ್ಯಕ್ತಪಡಿಸಿದ್ದನು; ವಿಶೇಷ ಸಿದ್ಧತೆ ಅನಾವಶ್ಯಕವೆಂದೂ, ಸಿಲುವಂಗಿ ಗಂಟು ಮೂಟೆಗಳನ್ನು ಬದಲಿಸಕೂಡದೆಂದೂ ತಿಳಿಸಲಾಯಿತು,

ವಿಯನ್ನಾದ ಯುದ್ಧ ಮಂಡಲಿಯ ಸದಸ್ಯನೊಬ್ಬ ಹಿಂದಿನ ದಿನವೇ ಕುತುಜೋವ್ ಬಳಿ ಬಂದು, ಆರ್ಚ್‌ಡ್ಯೂಕ್ ಫರ್ಡಿನೆಂಡ್ ಮತ್ತು ಮ್ಯಾಕ್‌ರ ಸೈನ್ಯವನ್ನು ಕೂಡಿಕೊಳ್ಳಬೇಕೆಂಬ ವಿಚಾರದಲ್ಲಿ ಸಲಹೆ ಸೂಚನೆಗಳನ್ನು ತಂದಿದ್ದನು. ಆ ಸೇರಿಕೆ ಸರಿಯಲ್ಲವೆಂಬುದು ಕುತುಜೋವ್‌ನ ಅಭಿಪ್ರಾಯ. ತನ್ನ ನಿಲವಿನ ಸಮರ್ಥನೆಗಾಗಿ ಇತರ ಪ್ರಮಾಣಗಳ ಜತೆಗೆ ರಷ್ಯಾದಿಂದ ಬಂದಿದ್ದ ಸೈನ್ಯದ ರಿಕ್ತ ಸ್ಥಿತಿಯನ್ನು ಆಸ್ಟ್ರಿಯಾದ ಸೇನಾನಿಗೆ ತೋರಿಸಬೇಕೆಂದು ಅವನು ಬಗೆದಿದ್ದನು. ಇದೇ ಉದ್ದೇಶದಿಂದ ಅವನು ಸೈನ್ಯವನ್ನು ಸಂಧಿಸುವುದೆಂದು ನಿಶ್ಚಯಿಸಿದ್ದನು. ಅದು ಎಷ್ಟೆಷ್ಟು ಹೀನಸ್ಥಿತಿಯಲ್ಲಿದ್ದರೂ, ಅಷ್ಟಷ್ಟರ ಮಟ್ಟಿಗೆ ಸೇನಾನಿ ತೃಪ್ತನಾಗುತ್ತಿದ್ದನು. ಈ ವಿಷಯ ಅಂಗರಕ್ಷಕರಿಗೆ ತಿಳಿದಿರಲಿಲ್ಲವಾದರೂ, ಸೈನಿಕರು ನಿಲುವಂಗಿಗಳನ್ನು ತೆಗೆಯದೆ ಪ್ರಸ್ಥಾನ ಸ್ಥಿತಿಯಲ್ಲಿ ನಿಂತಿರಬೇಕೆಂದೂ, ಇಲ್ಲದಿದ್ದರೆ ಸೇನಾನಿಗೆ ಅತೃಪ್ತಿಯಾಗುತ್ತದೆಂದೂ ಅವರು ಸುಸ್ಪಷ್ಟವಾದ ನಿರೂಪವನ್ನು ಹುಟ್ಟಿಸಿದ್ದರು. ಅದು ತಿಳಿದೊಡನೆಯೇ ತುಕಡಿಯ ನಾಯಕ ತಲೆ ತಗ್ಗಿಸಿದನು, ಮಾತಿಲ್ಲದೆ ಭುಜ ಹಾರಿಸಿದನು, ಕೋಪದ ಭಂಗಿಯಲ್ಲಿ ಕೈಗಳನ್ನು ಬೀಸಿದನು. 'ಎಲ್ಲ ಕಲಸುಮೇಲೋಗರವಾಯಿತು' ಎಂದವನು ಪ್ರತಿಕ್ರಿಯೆ ವ್ಯಕ್ತಪಡಿಸಿದನು.

'ನೋಡಿದೆಯಾ, ಮೈಕೇಲ್ ಮಿತ್ರಿಚ್, ನಾನು ಹೇಳಿದ್ದೇ ನಿಜವಾಯಿತು. 'ಪ್ರಸ್ಥಾನ ಸ್ಥಿತಿ' ಎಂದರೆ 'ನಿಲುವಂಗಿ ತೊಟ್ಟುಕೊಂಡೇ' ಎಂದು ನಾನು ಅರ್ಥಮಾಡಿರಲಿಲ್ಲವೆ ?' ಎಂದವನು ನಿಂದನೆಯ ಧಾಟಿಯಲ್ಲಿ ದಳಪತಿಗೆ ಹೇಳಿದನು. 'ಅಯ್ಯೋ ಭಗವಂತ' ಎಂದವನು ದೃಢಸಂಕಲ್ಪದಿಂದ ಮುಂದೆ ಹೆಜ್ಜೆ ಹಾಕಿದನು. 'ತುಕಡಿಗಳ ನಾಯಕರೆ!' ಎಂದವನು ರೂಢಿಯ ಅಧಿಕಾರವಾಣಿಯಲ್ಲಿ ಕೂಗಿದನು....'ಸಾರ್ಜೆಂಟ್ ಮೇಜರ್‌ರೆ! ....ಅವರೆಷ್ಟು ಹೊತ್ತಿಗೆ ಬರುತ್ತಾರೆ ?' ಎಂದವನು ಅಂಗರಕ್ಷಕರನ್ನು ಗೌರವಪೂರ್ಣವಾದ ಸೌಜನ್ಯದಿಂದ ಕೇಳಿದನು.

'ಒಂದು ಗಂಟೆಯೊಳಗೆ'

'ಬಟ್ಟೆ ಬದಲಿಸಲು ನಮಗೆ ಸಮಯವಿದೆಯೆ ?'

'ನನಗೆ ಗೊತ್ತಿಲ್ಲ. ಸೇನಾನಿ....'

ದಳಪತಿ ಯೋಧ ಪಂಕ್ತಿಯ ಬಳಿಗೈದಿ, ನಿಲವಂಗಿ ಹಾಕಿಕೊಳ್ಳುವಂತೆ ಸೈನಿಕರಿಗೆ ಆಜ್ಞಾಪಿಸಿದನು. ತುಕಡಿಯ ನಾಯಕರು ತಂತಮ್ಮ ತುಕಡಿಗಳ ಬಳಿಗೋಡಿದರು. ಸಾರ್ಜೆಂಟ್ ಮೇಜರರ ಗುಂಪಿನಲ್ಲಿ ಗಡಿಬಿಡಿಯಾಯಿತು. (ನಿಲುವಂಗಿಗಳು ಸುಸ್ಥಿತಿಯಲ್ಲಿರಲಿಲ್ಲ.) ಚೌಕಾಕಾರವಾಗಿ ವ್ಯೂಹಗೊಂಡಿದ್ದು ನಿಶ್ಶಬ್ದವಾಗಿದ್ದ ಪದಾತಿದಳದಲ್ಲಿ ತಾರಾಟ ತಳ್ಳಾಟಗಳೂ, ಕೋಲಾಹಲವೂ ಪ್ರಾರಂಭವಾದುವು. ಎಲ್ಲ ಕಡೆಯೂ ಸೈನಿಕರು ಹಿಂದೆ ಮುಂದೆ ಓಡಾಡುತ್ತ, ಹೆಗಲ ಜಗ್ಗಿನಿಂದಲೇ ಬೆನ್ನು ಚೀಲಗಳನ್ನು ಬಿಸಾಡುತ್ತ, ತಲೆಯ ಪಟ್ಟಿಗಳನ್ನು ಸೆಳೆಯುತ್ತ, ಮೇಲಂಗಿಗಳ ಪಟ್ಟಿಗಳನ್ನು ಬಿಚ್ಚುತ್ತ, ಕೈಗಳನ್ನು ಮೇಲೆತ್ತಿ ಅಂಗಿಯ ತೋಳುಗಳನ್ನು ಕಳಚುತ್ತಿದ್ದರು.

ಅರ್ಧ ಗಂಟೆಯಲ್ಲಿ ಎಲ್ಲವೂ ಮತ್ತೆ ವ್ಯವಸ್ಥೆಗೊಂಡಿತು. ಸೈನ್ಯ ಕಪ್ಪು ಬಣ್ಣದಿಂದ ಬೂದು ಬಣ್ಣಕ್ಕೆ ತಿರುಗಿತು. ದಳಪತಿ ಚುರುಕಾಗಿ ಹೆಜ್ಜೆಯಿಡುತ್ತ ದಳದ ಮುಂದೆ ಹೋಗಿ, ದೂರದಿಂದಲೇ ಅದನ್ನು ತನಿಖಿಸಿದನು.

'ಇದು ಹೇಗಾದರೂ ಇರಲಿ ! ಇದು !' ಎಂದವನು ಗಟ್ಟಿಯಾಗಿ ಒರಲಿ, ನಿಶ್ಚಲವಾಗಿ ನಿಂತುಕೊಂಡನು. 'ಮೂರನೆಯ ತುಕಡಿಯ ನಾಯಕ !'

'ಮೂರನೆಯ ತುಕಡಿಯ ನಾಯಕ ಸೇನಾನಿಗೆ ಬೇಕಾಗಿದೆ'....ನಾಯಕ ಸೇನಾನಿಗೆ ....ತುಕಡಿ ನಾಯಕನಿಗೆ'. ಸೇನಾ ಶ್ರೇಣಿಗಳಲ್ಲಿ ಈ ಘೋಷಣೆ ಹಬ್ಬಿತು; ಸಹಾಯಕ ಸೇನಾಪತಿಯೊಬ್ಬ ತಪ್ಪಿಸಿಕೊಂಡಿದ್ದ ಅಧಿಕಾರಿಯ ಶೋಧನೆಗೆಂದು ಓಡಿದನು.

ಅತ್ಯುತ್ಸಾಹದ ಆ ಘೋಷಣೆ, ಮತ್ತೆ ಮತ್ತೆ ಉಕ್ತಗೊಂಡು, ಗುರಿ ಮುಟ್ಟುವ ಹೊತ್ತಿಗೆ 'ಸೇನಾನಿ ಮೂರನೆಯ ತುಕಡಿಗೆ' ಎಂದು ತಪ್ಪು ತಪ್ಪಾಗಿ ಕೇಳಿಸಿತು. ಅಷ್ಟರಲ್ಲಿ ನಾಪತ್ತೆಯಾಗಿದ್ದ ಅಧಿಕಾರಿ ತನ್ನ ತುಕಡಿಯ ಹಿಂದಿನಿಂದ ಪ್ರತ್ಯಕ್ಷನಾದನು. ನಡು ವಯಸ್ಸಿನ, ಶೀಘ್ರಗಾಮಿಯಲ್ಲದ ಅವನು ವಿಚಿತ್ರವಾದ ಕುಂಟೋಟದಲ್ಲಿ ಮುಗ್ಗರಿಸುತ್ತ ಸೇನಾನಿಯ ಕಡೆಗೆ ಧಾವಿಸಿದನು. ಗಟ್ಟಿಮಾಡದ ಪಾಠವನ್ನು ವಾಚಿಸಲಾರದ ಶಾಲೆಯ ಹುಡುಗನ ಇರಿಸು ಮುರಿಸು ಕ್ಯಾಪ್ಟನ್ನನ ಮುಖದ ಮೇಲೆ ಅಚ್ಚೊತ್ತಿದಂತಿತ್ತು. ಅವನ ಮುಖದ ಮೇಲೆ ಮೂಡಿದ ಕೆಂಪು ಮಚ್ಚೆಗಳಲ್ಲಿ ಗಾಬರಿಯ ಚಿಹ್ನೆಗಳು ಕಾಣಿಸುತ್ತಿದ್ದುವು. ಅವನ ಬಾಯಿ ಹೆದರಿಕೆಯಿಂದ ಕಂಪಿಸುತ್ತಿತ್ತು. ಏದುತ್ತ ಬಿರುಸಿನಿಂದ ಬರುತ್ತಿದ್ದ ಅವನ ಹೆಜ್ಜೆ ಸೇನಾನಿ ಸಮೀಪವಾದಂತೆ ಮಂದವಾದುವು. ಸೇನಾನಿ ಅವನನ್ನು ಅಡಿಯಿಂದ ಮುಡಿಯವರೆಗೆ ನೋಡುತ್ತಿದ್ದನು.

'ಇಷ್ಟರಲ್ಲಿಯೇ ನಿನ್ನ ಜನರಿಗೆಲ್ಲ ಪಾವುಡೆ ತೊಡಿಸುತ್ತೀಯೆಂದು ಕಾಣುತ್ತದೆ ! ಏನಿದು ?' ಎಂದು ದಳಪತಿ ತನ್ನ ದವಡೆಯನ್ನು ಮುಂಚಾಚಿ ಅಬ್ಬರಿಸಿದನು. ಹಾಗೆ ಅಬ್ಬರಿಸುವಾಗ ಅವನ ದೃಷ್ಟಿ, ಇತರ ವೇಷ ಭೂಷಣಗಳಿಗೆ ಅಪವಾದವಾಗಿದ್ದ, ನೀಲಿ ಬಟ್ಟೆ ನಿಲುವಂಗಿಯನ್ನು ಧರಿಸಿದ್ದ ಮೂರನೆಯ ತುಕಡಿಯ ಸೈನಿಕನೊಬ್ಬನ ಮೇಲೆ ಕೇಂದ್ರೀಕೃತವಾಗಿತ್ತು. 'ಏನು ಮಾಡ್ತಾ ಇದ್ದೀಯಾ ? ಯಾವ ಕ್ಷಣದಲ್ಲಾದರೂ ಮಹಾಸೇನಾನಿ ಬಂದು ಬಿಡಬಹುದು. ನಿನ್ನ ಸ್ಥಾನವನ್ನೇಕೆ ಬದಲಿಸಿದೆ ? ಏ ? ವಿವಿಧ ವೇಷಗಳ ಪ್ರದರ್ಶನಕ್ಕೆ ಸಿದ್ಧಪಡಿಸುವ ವಿಧಾನವನ್ನು ನಿನಗೆ ಕಲಿಸ ಬೇಕಾಗಿದೆಯೆಂದು ತೋರುತ್ತದೆ, ಅಲ್ಲವೆ ?.... ಏ ?'

ತುಕಡಿಯ ನಾಯಕ ಮೇಲಧಿಕಾರಿಯನ್ನೇ ನಿಶ್ಚಲ ದೃಷ್ಟಿಯಿಂದ ನೋಡುತ್ತ ಎರಡು ಬೆರಳುಗಳಿಂದ ಗಟ್ಟಿಯಾಗಿ ತನ್ನ ಟೋಪಿಯನ್ನು ಮುಕುತ್ತಿದ್ದನು. ಆ ಅಮುಕಿನಲ್ಲಿ ಮಾತ್ರ ತನ್ನ ಬಿಡುಗಡೆಯಿದೆಯೆಂದು ಅವನು ಭಾವಿಸಿಕೊಂಡಂತಿತ್ತು.

'ಮಾತಾಡಯ್ಯ; ಏಕೆ ಮಾತಾಡುತ್ತಿಲ್ಲ ? ಅಗೋ, ಅಲ್ಲಿರುವವನಿಗೆ ಹಂಗೇರಿಯವನಂತೆ ವೇಷ ಹಾಕಿದ್ದೀಯಲ್ಲ, ಅವನು ಯಾರು ?' ಎಂದು ದಳಪತಿ ಕಟುವಾಗಿ ಅಣಕಿಸಿದನು.

'ಮಹಾಸ್ವಾಮಿ....'

'ಮಹಾಸ್ವಾಮಿ, ಏನು ಅಪ್ಪಣೆ ಕೊಡಿಸಿದಿರಿ ? ಮಹಾಸ್ವಾಮಿಯವರೆ ! ಆದರೆ ಮಹಾಸ್ವಾಮಿಯವರ ಸಮಾಚಾರ ಏನಾಗಿದೆ ?.... ಯಾರಿಗೂ ಗೊತ್ತಿಲ್ಲ'.

'ಮಹಾಸ್ವಾಮಿ, ಅಧಿಕಾರಿ ಡೋಲಖೊವ್‌ರನ್ನು ಕೆಳಗಿನ ದರ್ಜೆಗಿಳಿಸಲಾಗಿದೆ' ಎಂದು ಕಪ್ತಾನ್ ಮೆಲ್ಲಗೆ ನುಡಿದನು.

'ಹಾಗಾದರೆ ಅವರನ್ನು ಸರ್ವ ಮಹಾಸೇನಾನಿ ಹುದ್ದೆಗೇರಿಸಿದೆಯೋ ಅಥವಾ ಸಾಮಾನ್ಯ ಸೈನಿಕನ ದರ್ಜೆಗೋ? ಸೈನಿಕನ ದರ್ಜೆಗಾದರೆ ಇತರರಂತೆ ಅವರಿಗೆ ಸಾಧಾರಣ ಸಮವಸ್ತ್ರ ಕೊಡಬೇಕಾಗುತ್ತದೆ'.

'ಮಹಾಸ್ವಾಮಿ, ಪ್ರಸ್ಥಾನ ಸಮಯದಲ್ಲಿ ಅವರಿಗೆ ನೀವೇ ಅನುಮತಿ ಕೊಟ್ಟಿರಿ'.

'ಅವನಿಗನುಮತಿ ಕೊಟ್ಟೆನೆ? ಅನುಮತಿ? ನಿಮ್ಮಂಥ ಕಿರಿಯರಿಗೆ ತಕ್ಕಂತೆ ನುಡಿದೆ' ಎಂದು ದಳಪತಿ ತುಸು ಶಾಂತವಾಗಿ ನುಡಿದನು. 'ಅನುಮತಿ ನಿಜವೆ....ನಾನು ಪ್ರಸ್ತಾಪಿಸುತ್ತಿರುವುದು ನಿನ್ನ ವಿಷಯ, ನಿನ್ನ ವಿಷಯ ಮಾತ್ರ....ಏನು?' ಪ್ರೇರೇಪಿತನ ಗೊಂಡ ಕೋಪದಿಂದ ಅವನು 'ನಿನ್ನ ಸೈನಿಕರು ಲಕ್ಷಣವಾದ ಉಡುಪು ತೊಡಬೇಕೆಂದು ನಾನು ಇಚ್ಛಿಸುತ್ತೇನೆ' ಎಂದು ನುಡಿದನು.

ಅನಂತರ ದಳಪತಿ ಸಹಾಯಕಾಧಿಕಾರಿಯನ್ನು ನೋಡುವ ಸಲುವಾಗಿ ಸೈನ್ಯ ವಿನ್ಯಾಸದ ಕಡೆಗೆ ಚುರುಕಾಗಿ ಹೆಜ್ಜೆ ಹಾಕಿದನು. ಕೋಪಪ್ರದರ್ಶನದಿಂದ ಅವನಿಗೆ ತೃಪ್ತಿಯಾಯಿತು. ವ್ಯೂಹದ ಬಳಿಸಿಂತು, ಮತ್ತೆ ಕೋಪಪ್ರದರ್ಶನಕ್ಕಾಗಿ ನೆಪ ಹುಡುಕುತ್ತಿದ್ದನು. ಬಿಲ್ಲೆಯನ್ನುಜ್ಜಿ ಹೊಳಪುಗೊಳಿಸದಿದ್ದುದಕ್ಕಾಗಿ ಅಧಿಕಾರಿಯೊಬ್ಬನ ಮೇಲೆ ರೇಗಾಡಿದನು. ಸೈನಿಕರ ಸಾಲು ನೇರವಾಗಿರದಿದ್ದುದಕ್ಕಾಗಿ ಮತ್ತೊಬ್ಬನಮೇಲೆ ಹಾರಾಡಿದನು. ಮುಂದೆ ಮೂರನೆ ತುಕಡಿಯ ಬಳಿ ಸೇರಿದನು.

'ನೀನು ಹೇಗೆ ನಿಂತಿದ್ದೀಯೆ, ಗೊತ್ತೆ? ನಿನ್ನ ಕಾಲೆಲ್ಲಿದೆ? ನಾನು ಹೇಳೋದು ನಿನ್ನ ಕಾಲು?' ಎಂದವನು ಐದುಮಂದಿಯಿಂದಾಚೆ ನಿಂತಿದ್ದ ನೀಲಿಧೂಸರವರ್ಣದ ಸಮವಸ್ತ್ರಧಾರಿ ದೋಲೊಖೊವನ ಕಡೆಗೆ ಬೊಬ್ಬಿರಿದನು. ಅವನ ಕೂಗಿನಲ್ಲಿ ನೋವಿನ ಧ್ವನಿಯಿದ್ದಂತೆ ತೋರುತ್ತಿತ್ತು.

ಬಾಗಿದ ಮೊಳಕಾಲನ್ನು ನಿಧಾನವಾಗಿ ನೇರಗೊಳಿಸುತ್ತ ದೋಲೊಖೊವ್ ತಿಳಿಯಾದ ಸೊಕ್ಕುಗಣ್ಣುಗಳಿಂದ ಸೇನಾನಿಯ ಮುಖವನ್ನೆ ನೋಡುತ್ತಿದ್ದನು.

'ಈ ನೀಲಿಕೋಟೇಕೆ? ತೆಗೆದು ಬಿಸಾಡಿ....ಸಾರ್ಜೆಂಟ್ ಮೇಜರರೆ! ಅವನ ಕೋಟು ಬದಲಾಯಿಸಿ....ತತ್' ಎಂದವನು ಮಾತು ಮುಗಿಸುವ ಮುನ್ನವೇ 'ಸೇನಾನಿಗಳೆ, ನಾನು ನಿಮ್ಮ ಆಜ್ಞೆಯನ್ನು ಪರಿಪಾಲಿಸಬೇಕು, ನಿಜ. ಆದರೆ ನಿಮ್ಮ.... ಗಳನ್ನು ಸಹಿಸಬೇಕಾಗಿಲ್ಲ' ಎಂದು ದೋಲೊಖೊವ್ ನಡುವೆ ಬಾಯಿಹಾಕಿದನು.

'ಸಿಪಾಯಿಗಳು ಮಾತಾಡಕೂಡದು!....ಮಾತು ನಿಲ್ಲಿಸಿ, ಮಾತುಕೂಡದು ಜೋಕೆ!'

'ಬಯ್ಗುಳಗಳನ್ನು ಸಹಿಸಬೇಕಾಗಿಲ್ಲ' ಎಂದು ದೋಲೊಖೊವ್ ಘಣಘಣ ಧ್ವನಿಯಲ್ಲಿ ಮೊಳಗಿದನು.

ಸೇನಾನಿಯ ಮತ್ತು ಸೈನಿಕನ ದೃಷ್ಟಿ ಸಂಧಿಸಿದುವು. ಸೇನಾನಿ ಬಿಗಿಯಾಗಿದ್ದ ಕೊರಳುಪಟ್ಟಿಯನ್ನು ಕೋಪದಿಂದ ಸಡಿಲಗೊಳಿಸುತ್ತ, ಸ್ತಬ್ಧನಾದನು. ಅವನು ಮರಳು ವಾಗ 'ನಿಮ್ಮ ಕೋಟು ಬದಲಾಯಿಸಿ ಕೊಳ್ಳುವಷ್ಟು ಸೌಜನ್ಯವಿರಲೆಂದು ವಿನಂತಿಸಿ ಕೊಳ್ಳುತ್ತೇನೆ' ಎಂದು ನುಡಿದನು.

ಅಧ್ಯಾಯ ೨

'ಅವರು ಆಗಮಿಸುತ್ತಿದ್ದಾರೆ' ಎಂದು ಸಂಕೇತಕಾರ ಅಸ್ಪರಲ್ಲಿ ಘೋಷಿಸಿದನು.

ಮುಖ ಕೆಂಪೇರಿದ ದಳಪತಿ ಕುದುರೆಯ ಬಳಿಗೆ ಓಡಿದನು, ನಡುಗುವ ಕೈಗಳಿಂದ ರಿಕಾಪು ಹಿಡಿದುಕೊಂಡನು, ಕಾಟರದ ಮೇಲೆ ತನ್ನ ಮೈಯ್ಯನ್ನಿಡಾಡಿ, ಸರಿಯಾಗಿ ಕುಳಿತುಕೊಂಡು, ಬಾಗುಕತ್ತಿಯನ್ನೆಳೆದನು; ಸಹರ್ಷ ದೃಢ ಮುಖಭಾವದಿಂದ, ಸೊಟ್ಟ ಸೊಟ್ಟವಾಗಿ ಬಾಯಿತೆರೆದು ಕೂಗಲನುವಾದನು. ರೆಕ್ಕೆ ಪುಕ್ಕಗಳನ್ನು ಕೊಕ್ಕಿಸಿಕೊಳ್ಳುವ ಪಕ್ಷಿಯಂತೆ ಸೈನ್ಯತತ್ತರಿಸುತ್ತ, ಕ್ಷಣಮಾತ್ರದಲ್ಲಿ ಮೌನಾಂಬುಧಿಯಲ್ಲಿ ಮುಳುಗಿತು.

'ಜಾಗ್ರತೆ' ಎಂದು ದಳಪತಿ ಅಂತರಾತ್ಮವನ್ನು ನಡುಗಿಸುವ ಧ್ವನಿಯಲ್ಲಿ ಮೊಳಗಿದನು. ಆತ್ಮ ಸಂತೋಷವನ್ನುಕ್ಕಿಸುತ್ತಿದ್ದ ಆ ಮೊಳಗು ಸೈನಿಕರಿಗೆ ಕಠೋರ ಶಾಸನದಂತೆ, ಆಗಮಿಸಲಿದ್ದ ಮುಖ್ಯಧಿಕಾರಿಗೆ ಸ್ವಾಗತ ಘೋಷಣೆಯಂತೆ ತೋರುತ್ತಿತ್ತು.

ಇಕ್ಕಡೆಯ ಸಾಲುಮರಗಳ, ಹಳ್ಳಿಗಾಡಿನ ವಿಶಾಲರಸ್ತೆಯಲ್ಲಿ, ಆರು ಕುದುರೆ ಹೂಡಿದ ಎತ್ತರದ ನಸುನೀಲಿ ಬಣ್ಣದ ವಿಯನ್ನಾ ವಾಹನವೊಂದು ಲಂಘಕಗಳ ಕಿರಿಕಿರಿ ಶಬ್ದದೊಡನೆ ಚುರುಕಾಗಿ ಕುಲುಕೋಟದಲ್ಲಿ ಸನ್ನಿಹಿತವಾಯಿತು. ಅದರ ಹಿಂದೆಯೇ ಪರಿವಾರವನ್ನೂ ಬೆಂಗಾವಲ ಪಡೆಯನ್ನೂ ಹೊತ್ತ ವಾಹನಗಳು ನಾಗಾಲೋಟದಲ್ಲಿ ಆಗಮಿಸಿದುವು. ಕುತುಜೋವನ ಪಕ್ಕದಲ್ಲಿ ಆಸ್ಟ್ರಿಯಾದ ಸೇನಾನಿ ಕುಳಿತಿದ್ದನು. ಅವನು ಧರಿಸಿದ್ದ ಶ್ವೇತ ಸಮವಸ್ತ್ರ ರಷ್ಯಾ ಸೈನಿಕರ ಕೃಷ್ಣ ವರ್ಣದ ಸಮವಸ್ತ್ರಗಳ ಮಧ್ಯೆ ವಿಚಿತ್ರವಾಗಿ ಕಾಣುತ್ತಿತ್ತು. ವಾಹನ ದಳದ ಮುಂದುಗಡೆ ನಿಂತಿತು. ಕುತುಜೋವ್ ಮತ್ತು ಆಸ್ಟ್ರಿಯಾ ಸೇನಾನಿ ತಗ್ಗಿದ ದನಿಯಲ್ಲಿ ಮಾತಾಡಿಕೊಳ್ಳುತ್ತಿದ್ದರು. ಕುತುಜೋವ್ ನಸುನಗುತ್ತ, ಭಾರವಾಗಿ ಹೆಜ್ಜೆಯಿಡುತ್ತ, ವಾಹನದಿಂದ ಕೆಳಗಿಳಿಯುವಾಗ, ಎರಡು ಸಾವಿರ ಮಂದಿ ಯೋಧರು ಉಸಿರುಕಟ್ಟಿಕೊಂಡು ಅವನನ್ನೆ ನಿಟ್ಟಿಸುತ್ತಿದ್ದರು. ದಳಪತಿಯ ಅಸ್ತಿತ್ವವೇ ಇಲ್ಲದಂತಾಗಿತ್ತು.

ಹುಕುಂ ಮೊಳಗಿತು; ದಂಡು ನಡುಗಿತು; ಝಣಝಣತ್ಕಾರದೊಡನೆ ಗೌರವ ಬಂದೂಕವನ್ನದು ಪ್ರದರ್ಶಿಸಿತು. ಅನಂತರ ಸ್ಮಶಾನ ನೀರವತೆಯಲ್ಲಿ ಮಹಾಸೇನಾನಿಯ ದುರ್ಬಲ ಧ್ವನಿ ಕೇಳಿಸಿತು. 'ಮಹಾ....ಸ್ವಾಮಿ....ಯವರಿಗೆ ಜಯವಾಗಲಿ' ಎಂದು ಪಡೆ ಗರ್ಜಿಸಿತು. ಮತ್ತೆ ನಿಶ್ಶಬ್ದ ನೆಲಸಿತು. ದಂಡು ಚಲನೆಯಲ್ಲಿದ್ದಾಗ ಕುತುಜೋವ್ ಮೌನಧರಿಸಿದನು. ಅನಂತರ ಅವನೂ ಶ್ವೇತಸಮವಸ್ತ್ರಧಾರಿಯೂ ಪರಿವಾರದೊಡನೆ ಸಿಪಾಯಿ ಸಾಲುಗಳ ನಡುವೆ ನಡೆದರು.

ದಳಪತಿ ಮಹಾಸೇನಾನಿಗೆ ವಂದನೆ ಸಲ್ಲಿಸಿ, ದಾಸಾನುದಾಸನಂತೆ ಹಲ್ಲುಗಿಂಜುತ್ತ, ಅವನನ್ನು ದಿಟ್ಟಿಯಿಂದ ನುಂಗಿಕೊಳ್ಳುತ್ತಿದ್ದ ರೀತಿಯಿಂದ, ತನ್ನ ಜಗ್ಗು ನಡೆಯನ್ನು ನಿಯಂತ್ರಿಸಿಕೊಳ್ಳುತ್ತ, ಆಗಾಗ್ಗೆ ಮುಂದೆ ಬಾಗಿ ಬಳುಕುತ್ತ ಸೇನಾನಿಗಳ ಬೆನ್ನು ಹಿಂದೆ, ಸಿಪಾಯಿ ಸಾಲುಗಳ ನಡುವೆ ಸಾವಧಾನದಿಂದ ಸರಿಯುತ್ತಿದ್ದ ಭಂಗಿಯಿಂದ, ಸೇನಾನಿಯ ಮಾತು ಅಥವಾ ಸನ್ನೆ ಮೊಗದೋರುವುದೆ ತಡ ಅವನು ಮುನ್ನುಗ್ಗುತ್ತಿದ್ದ ಹೋಡಿಯಿಂದ ಅವನು ದಳಪತಿಯ ಕರ್ತವ್ಯ ನಿರ್ವಹಣೆಯಲ್ಲಿ ತೋರುತ್ತಿದ್ದ ಉತ್ಸಾಹಕ್ಕಿಂತ ಮಿಗಿಲಾದ

ಸಂಭ್ರಮವನ್ನು ಕೆಳಗಿನ ಅಧಿಕಾರಿಯ ಕರ್ತವ್ಯ ನಿರ್ವಹಣೆಯಲ್ಲಿ ಪ್ರಕಟಿಸುತ್ತಿದ್ದಂತೆ ಭಾಸವಾಗುತ್ತಿತ್ತು. ಅವನ ನಿಯಮ ನಿಷ್ಠೆ ಮತ್ತು ಕರ್ತವ್ಯ ಶ್ರದ್ಧೆಗಳಿಂದಾಗಿ, ಅದೇ ಸಮಯದಲ್ಲಿ ಬ್ರೌನಾ ತಲುಪಿದ್ದ ಪಡೆಗಳೊಡನೆ ಹೋಲಿಸಿ ನೋಡುವಲ್ಲಿ, ಪಡೆ ಅತ್ಯುತ್ತಮಾವಸ್ಥೆಯಲ್ಲಿತ್ತೆಂದು ಸ್ಪಷ್ಟವಾಗಿತ್ತು. ದಾರಿತಪ್ಪಿದ ಸೈನಿಕರ ಮತ್ತು ರೋಗಿಗಳ ಸಂಖ್ಯೆ ೨೧೭ಕ್ಕಿಂತ ಹೆಚ್ಚಾಗಿರಲಿಲ್ಲ. ಬೂಟುಗಳ ವಿಷಯ ಬಿಟ್ಟರೆ, ಉಳಿದದ್ದೆಲ್ಲ ಸಕ್ರಮವಾಗಿತ್ತು.

ಒಮ್ಮೊಮ್ಮೆ ತುರ್ಕಿಯುದ್ಧದಲ್ಲಿ ಪರಿಚಯವಾಗಿದ್ದ ಅಧಿಕಾರಿಗಳ ಬಳಿ ನಿಂತು ಸ್ನೇಹವಾಣಿಯಿಂದ ಮಾತಾಡಿಸುತ್ತ, ಮತ್ತೊಮ್ಮೆ ಸೈನಿಕರ ಸುಖದುಃಖ ವಿಚಾರಿಸುತ್ತ ಕುತುಜೋವ್ ಸಿಪಾಯಿಗಳ ನಡುವೆ ಮುಂದೆಮುಂದೆ ಸಾಗುತ್ತಿದ್ದನು. ಮೇಲಿಂದ ಮೇಲೆ ಅವರ ಬೂಟುಗಳ ಕಡೆಗೆ ದೃಷ್ಟಿ ಹರಿಸುತ್ತ, ಸಂಕಟದಿಂದ ತಲೆಯಲ್ಲಾಡಿಸುತ್ತ, ಆಸ್ಟ್ರಿಯಾ ಸೇನಾನಿಗೆ ಅವುಗಳ ಹೀನಾವಸ್ಥೆಯನ್ನು ಬೆರಳುಮಾಡಿ ತೋರಿಸುತ್ತಿದ್ದನು. ತಾನು ಯಾರನ್ನೂ ದೂಷಿಸುತ್ತಿದ್ದಿಲ್ಲವೆಂದೂ, ಆದರೆ ಅದನ್ನು ಗಮನಿಸದಿರಲು ಸಾಧ್ಯವಾಗದೆಂದೂ ಅವನ ಮನೋಭಾವದಿಂದ ವ್ಯಕ್ತವಾಗುತ್ತಿತ್ತು. ಮಹಾಸೇನಾನಿಯ ಬಾಯಿಂದ ಉದುರುತ್ತಿದ್ದ ಮಾತೆಲ್ಲಿಯಾದರೂ ತಪ್ಪಿಹೋದೀತೆಂಬ ಭಯದಿಂದ ತನ್ನ ಪಡೆಯ ವಿಷಯ ಬಂದಾಗಲೆಲ್ಲ ಅವನು ಮುನ್ನುಗ್ಗುತ್ತಿದ್ದನು. ಕುತುಜೋವ್ ಹಿಂದುಗಡೆ ಮೆಲ್ಮಾತು ಕೇಳಿಸುವಷ್ಟು ದೂರದಲ್ಲಿ ಅವನ ಪರಿವಾರದ ಇಪ್ಪತ್ತುಮಂದಿ ಸೈನಿಕರು ಅವನನ್ನನುಸರಿಸುತ್ತಿದ್ದರು. ಅವರು ತಂತಮ್ಮೊಳಗೆ ಮಾತಾಡಿಕೊಳ್ಳುತ್ತ, ಆಗಾಗ್ಗೆ ನಗುತ್ತಿದ್ದರು. ಮಹಾಸೇನಾನಿಗೆ ಅತ್ಯಂತ ಸಮೀಪದಲ್ಲಿ ಸುಂದರಾಕಾರಾದ ಸಹಾಯಾಧಿಕಾರಿ ಚಲಿಸುತ್ತಿದ್ದನು. ಅವನೇ ರಾಜಕುಮಾರ ಬಲ್ಕೋನ್‌ಸ್ಕಿ. ಅವನ ಪಕ್ಕದಲ್ಲಿದ್ದವನೇ ದಷ್ಟಪುಷ್ಟನೂ, ದಯಾಳುವೂ, ಹಸನ್ಮುಖಿಯೂ, ಸುಂದರವದನನೂ, ಆರ್ದ್ರನೇತ್ರನೂ, ಉನ್ನತಾಕಾರನೂ ಆದ ಅಧಿಕಾರಿ, ಗೆಳೆಯ ನೆಸ್‌ವೀತ್‌ಸ್ಕಿ. ತನ್ನ ಪಕ್ಕದಲ್ಲಿ ಸಾಗುತ್ತಿದ್ದ ನೀಲವರ್ಣದ ರಾಹುತಪಡೆಯ ಅಧಿಕಾರಿಯೊಬ್ಬನ ಪ್ರಚೋದನೆಯಿಂದಾಗಿ ನೆಸ್‌ವೀತ್‌ಸ್ಕಿ ನಗುವನ್ನು ತಡೆಯುವುದು ಕಷ್ಟವಾಗಿತ್ತು. ಆ ಅಧಿಕಾರಿ ನಿಶ್ಚಲ ದೃಷ್ಟಿಯಿಂದ, ಹಾಗೂ ಹಾಸರಹಿತ ಗಂಭೀರ ಮುಖಮುದ್ರೆಯಿಂದ ದಳಪತಿಯ ಬೆನ್ನನ್ನೇ ವೀಕ್ಷಿಸುತ್ತ, ಅವನ ಪ್ರತಿಯೊಂದು ಚಲನೆಯನ್ನು ಅನುಕರಿಸುತ್ತಿದ್ದನು. ದಳಪತಿ ಮುನ್ನೆಗೆದು, ತಲೆಸೊಂಟ ಬಗ್ಗಿಸಿದಾಗಲೆಲ್ಲ ಅವನು ಸಹ ಮುಂದೆ ಹಾರಿ ಅವನಂತೆಯೇ ಅಂಗಚಲನೆಯನ್ನೆಸಗುತ್ತಿದ್ದನು. ನೆಸ್‌ವೀತ್‌ಸ್ಕಿನಕ್ಕು, ಇತರರನ್ನು ಮೊಳಕೈಯಿಂದ ತಿವಿದು, ಅವನ ನಕಲಿಯ ಕಡೆಗೆ ಅವರ ಗಮನ ಸೆಳೆಯುತ್ತಿದ್ದನು.

ಗೂಡುಗಳಿಂದ ನಿಮಿರಿ ತಮ್ಮ ಮಹಾಸೇನಾನಿಯನ್ನು ನೋಡುತ್ತಿದ್ದ ಕಣ್ಣುಗಳನ್ನು ದಾಟಿ ಕುತುಜೋವ್ ನಿಧಾನವಾಗಿ ನಿರುತ್ಸಾಹವಾಗಿ ಹೆಜ್ಜೆಯಿಡುತ್ತಿದ್ದನು. ಮೂರನೆಯ ತುಕಡಿಯನ್ನು ಮುಟ್ಟುತ್ತಲೇ ಅವನು ಹಠಾತ್ತನೆ ನಿಂತನು. ಅವನ ನಿಲುಗಡೆಯನ್ನು ನಿರೀಕ್ಷಿಸದ ಅವನ ಪರಿವಾರ ಅನೈಚ್ಛಿಕವೆಂಬಂತೆ ಅವನಲ್ಲಿಗೆ ಸರಿಯಿತು.

ನೀಲಿ ನಿಲವಂಗಿಗಾಗಿ ಛೀಮಾರಿ ಮಾಡಿಸಿಕೊಂಡಿದ್ದ ಕೆಂಪು ಮೂಗಿನ ಕಪ್ತಾನನ್ನು ಗುರುತಿಸಿ 'ಆಹ, ಟಿಮೋಖಿನ್' ಎಂದವನು ನುಡಿದನು. ಛೀಮಾರಿ ಮಾಡಿದ್ದ

ದಳಪತಿಯ ಮೇಲೆ ಟಿಮೋಖಿನ್ ನಾಲಗೆಯನ್ನು ಸಾಕಷ್ಟು ಚಾಚಿದ್ದ. ಆದರೆ ಮಹಾ ಸೇನಾನಿ ಮಾತಾಡಿಸಿದಾಗ ಅವನು ಭೂಮಿಗೆ ಹದುಗಿ ಹೋದ; ಅವನ ದೃಷ್ಟಿ ತನ್ನ ಮೇಲೆಯೇ ನಾಟಿ ಕೊಂಡಿದ್ದಾಗ ಟಿಮೋಖಿನ್ ಚಡಪಡಿಸತೊಡಗಿದ. ಅವನ ಸಂಕಟ ವನ್ನರಿತ ಕುತುಜೋವ್, ಅವನಿಗೆ ಶುಭವನ್ನೆ ಕೋರಿ, ಊದಿಕೊಂಡಂತಿದ್ದ ಗಾಯದ ಕಲೆಗಳುಳ್ಳ ಅವನ ಮುಖದ ಕಡೆಗೆ ಕಂಡೂಕಾಣದಂತೆ ನಸುನಗೆ ಸೂಸಿ, ಮುಂದೆ ನಡೆದನು.

'ಮತ್ತೊಬ್ಬ ಇಸ್ಮೈಲ್‌ಗೆಳೆಯ! ಧೈರ್ಯಗಾರ! ಅವರ ಬಗ್ಗೆ ನಿಮಗೆ ತೃಪ್ತಿ ಯಿದೆಯೆ?' ಎಂದವನು ದಳಪತಿಯನ್ನು ಪ್ರಶ್ನಿಸಿದನು.

ಕನ್ನಡಿಯಂತೆ ರಾಹುತದಳದ ಅಧಿಕಾರಿ ತನ್ನ ಚಲನವಲನಗಳನ್ನು ಅಣಕಿಸುತ್ತಿದ್ದ ನೆಂಬುದನ್ನರಿಯದ ದಳಪತಿ ಮುಂದೆ ಹರಿದು, ನಡುಬಗ್ಗಿಸಿ 'ಹೌದು ಮಹಾಸ್ವಾಮಿ' ಎಂದು ನುಡಿದನು.

'ನಮ್ಮೆಲ್ಲರಲ್ಲಿಯೂ ದೌರ್ಬಲ್ಯಗಳಿವೆ' ಎಂದು ಕುತುಜೋವ್ ನಗುತ್ತ, ಅವನಿದ್ದೆಡೆ ಯಿಂದ ಕಾಲುಕೀಳುತ್ತ, 'ಅವನಿಗೆ ಬೇಕಸ್[1] ದೇವತೆಯ ಬಗ್ಗೆ ತುಂಬ ಪಕ್ಷಪಾತವಿದೆ' ಎಂದು ನುಡಿದನು.

ಆ ವಿಷಯವಾಗಿ ಮಾತಾಡಿದರೆ ತಾನು ಆಕ್ಷೇಪಕ್ಕೆ ಪಾತ್ರವಾಗಬಹುದೆಂದು ಹೆದರಿ ದಳಪತಿ ಉತ್ತರ ನೀಡಲಿಲ್ಲ. ಆ ಸಮಯದಲ್ಲಿ ರಾಹುತದಳದ ಅಧಿಕಾರಿಯ ಕಣ್ಣು ಕೆಂಪುಮೂಗಿನ ಕಫ್ತಾನನ ಮುಖದ ಮೇಲೆ ಹಾಗೂ ಅವನ ಬೆಸ್ಸಿಗಂಟಿಕೊಂಡಿದ್ದ ಹೊಟ್ಟೆಯ ಮೇಲೆ ಬಿದ್ದಿತ್ತು. ಅವನು ಕಫ್ತಾನನ ಭಂಗಿ ಭಣಿತೆಗಳನ್ನೆಷ್ಟು ಕರಾರು ವಾಕ್ಕಾಗಿ ಅಣಕಿಸುತ್ತಿದ್ದನೆಂದರೆ, ನೆಸ್‌ವಿತ್‌ಸ್ಕಿ ನಗು ತಡೆಯಲಾಗಲಿಲ್ಲ. ಕುತುಜೋವ್ ಹಿಂದಕ್ಕೆ ಕಣ್ಣು ಹೊರಳಿಸಿದನು. ಅಧಿಕಾರಿ ಮುಖದ ಮೇಲೆ ಸಂಪೂರ್ಣ ಹತೋಟಿ ಯಿಟ್ಟುಕೊಂಡಿದ್ದನು. ಆದ್ದರಿಂದ ಮಹಾಸೇನಾನಿಯ ದೃಷ್ಟಿ ತನ್ನ ಮೇಲೆ ಬೀಳುವ ಮುನ್ನ ಚೇಷ್ಟೆ ಮುಗಿದು, ಅವನ ಮುಖದ ಮೇಲೆ ಗಂಭೀರ ಗೌರವ ಮುಗ್ಧ ಮನೋಭಾವ ನಲಿದಾಡುತ್ತಿತ್ತು.

ಮೂರನೆಯ ತುಕಡಿ ಕೊನೆಯದಾಗಿತ್ತು. ಏನನ್ನೋ ಸ್ಮೃತಿಪಥಕ್ಕೆ ತಂದು ಕೊಳ್ಳುವ ಪ್ರಯತ್ನದಲ್ಲಿ ಕುತುಜೋವ್ ಆಲೋಚನಾ ಮಗ್ನನಾದನು. ಪರಿವಾರದಲ್ಲಿದ್ದ ರಾಜಕುಮಾರ ಆಂಡ್ರೂ ಮುಂದೆ ಹೆಜ್ಜೆಯಿಟ್ಟು, ಫ್ರೆಂಚ್ ಭಾಷೆಯಲ್ಲಿ ಮೃದುವಾಗಿ 'ಕೆಳದರ್ಜೆಗಿಳಿಸಿರುವ ಡೋಲಖೊವ್‌ನ ವಿಷಯ ಜ್ಞಾಪಿಸುವಂತೆ ನನಗೆ ಹೇಳಿದ್ದಿರಿ.' ಎಂದು ನುಡಿದನು.

'ಡೋಲಖೊವ್ ಎಲ್ಲಿ?' ಎಂದು ಕುತುಜೋವ್ ಪ್ರಶ್ನಿಸಿದನು.

ಅಧಿಕಾರಿಯ ನಿಲುವಂಗಿಯನ್ನು ತ್ಯಜಿಸಿ ಸೈನಿಕರಿಗೆಂದು ಗೊತ್ತಾಗಿದ್ದ ಬೂದಿ ಬಣ್ಣದ ನಿಲುವಂಗಿಯನ್ನು ಧರಿಸಿದ್ದ ಡೋಲಖೊವ್ ಕೂಗಿ ಕರೆಯುವ ತನಕ ಕಾಯಲಿಲ್ಲ. ಚೆಂಗೂದಲಿನ, ತಿಳಿನೀಲಿಗಣ್ಣುಗಳ, ಸುಂದರಾಕಾರದ ಸೈನಿಕ ಸಿಪಾಯಿಗಳ ಸಾಲಿನಿಂದ ಮುಂದೆ ಹರಿದು, ಮಹಾಸೇನಾನಿಯ ಸನ್ನಿಧಿಗೆ ಸರಿದು ಬಂದೂಕ ಮರ್ಯಾದೆ ಸಲ್ಲಿಸಿದನು.

---

[1] ಗ್ರೀಕ್ ಮದ್ಯದೇವತೆ

'ನೀನೇನಾದರೂ ದೂರು ಕೊಡುವುದಿದೆಯೆ ?' ಎಂದು ಕುತುಜೋವ್ ತುಸು ಹುಬ್ಬುಗಂಟಿಕ್ಕಿಕೊಂಡು ಪ್ರಶ್ನಿಸಿದನು.

'ಇವರೇ ದೋಲಖೊವ್' ಎಂದು ರಾಜಕುಮಾರ ಆಂಡ್ರೂ ನುಡಿದನು.

'ಆಹಾ, ಇದರಿಂದ ನೀನು ಪಾಠಕಲಿಯಬೇಕಾಗಿದೆ. ನಿನ್ನ ಕರ್ತವ್ಯ ಮರೆಯಬೇಡ. ಚಕ್ರವರ್ತಿಗಳು ಉದಾರರಾಗಿದ್ದಾರೆ. ನೀನು ಯೋಗ್ಯತೆ ಗಳಿಸುವುದಾದರೆ, ನಿನ್ನ ವಿಷಯ ಮರೆಯುವುದಿಲ್ಲ' ಎಂದು ಕುತುಜೋವ್ ಸ್ಪಷ್ಟಪಡಿಸಿದನು.

ದಳಪತಿಯು ಮುಂದಿದ್ದಾಗ ಅವನ ನೀಲಿಗಣ್ಣುಗಳಲ್ಲಿ ಅಭಿವ್ಯಕ್ತಗೊಂಡಿದ್ದ ಧೈರ್ಯವೇ ಮಹಾಸೇನಾನಿಯ ಮುಂದೆಯೂ ಹೊರಸೂಸುತ್ತಿತ್ತು. ಮಹಾಸೇನಾನಿಯಿಂದ ಸಾಮಾನ್ಯನನ್ನು ಪ್ರತ್ಯೇಕಿಸುವಂತಿದ್ದ ಸಾಂಪ್ರದಾಯಿಕ ಸಂವರಣವನ್ನು ಹರಿದು ಬಿಡಬೇಕೆಂಬ ಮನೋಭಾವನೆ ಆ ನೋಟದಲ್ಲಿ ಪ್ರತಿಫಲಿಸುತ್ತಿದ್ದಂತೆ ಭಾಸವಾಗುತ್ತಿತ್ತು.

'ಮಹಾಸ್ವಾಮಿಯವರಲ್ಲಿ ನನ್ನದೊಂದು ಬಿನ್ನಹವಿದೆ' ಎಂದು ದೋಲಖೊವ್‌ನ ಸದೃಢವಾದ ಕಂಚಿನ ಕಂಠ ಸಾವಧಾನವಾಗಿ ಮೊಳಗಿತು. 'ನನ್ನ ತಪ್ಪಿಗೆ ತಕ್ಕ ಪ್ರಾಯಶ್ಚಿತ್ತ ಮಾಡಿಕೊಂಡು, ಘನತೆವೆತ್ತ ಸಾರ್ವಭೌಮರಿಗೂ ಮಾತೃಭೂಮಿಗೂ ನಿಷ್ಠೆಯಿಂದ ಸೇವೆ ಸಲ್ಲಿಸುವ ಅವಕಾಶ ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.'

ಕುತುಜೋವ್ ಬೇರೆ ದಿಕ್ಕಿಗೆ ಮುಖವಾದನು. ಟಿಮೊಖಿನ್ನನ ಕಡೆಯಿಂದ ಕಾಲ್ತೆಗೆದಾಗ ಮೂಡಿದ ಮುಗುಳುನಗೆ ಮತ್ತೆ ಅವನ ಮುಖದ ಮೇಲೆ ಸುಳಿಯಿತು. ದೋಲಖೊವ್ ಆ ಹಿಂದೆ ಹೇಳಿದ್ದ, ಮತ್ತೆ ಹೇಳಬಹುದಾದ ವಿಷಯಗಳೆಲ್ಲ ತನಗೆ ಬಹು ಹಿಂದೆಯೇ ತಿಳಿದಿದ್ದುವೆಂಬ, ಆ ಬಗ್ಗೆ ತನಗೆ ಬೇಸರವಾಗಿತ್ತೆಂಬ, ಅವು ತನಗೆ ಬೇಕಾಗಿಲ್ಲವೆಂಬ ಭಾವನೆ ಅವನ ಭ್ರೂಭಂಗದಿಂದ ಅಭಿವ್ಯಕ್ತವಾಗುತ್ತಿತ್ತು. ಅವನು ಒಡನೆಯೇ ತನ್ನ ವಾಹನವನ್ನೇರಿದನು.

ಪಡೆ ಬೇರೆ ಬೇರೆ ತುಕಡಿಗಳಾಗಿ ಬೇರ್ಪಟ್ಟಿತು. ಅವು ಬ್ರೌನೌ ಬಳಿಯ ಬಿಡದಿಗೆ ತೆರಳಿದುವು. ಅಲ್ಲಿ ಸೈನಿಕರು ಉಡುಪು ಬೂಟುಗಳನ್ನು ಪಡೆದು, ದೀರ್ಘ ಪ್ರಯಾಣದ ನಂತರ ವಿಶ್ರಾಂತಿ ಪಡೆಯಬಹುದೆಂದು ಹಾರೈಸಿದ್ದರು.

ದಳಪತಿ ಕುದುರೆಯೇರಿ ಬಿಡದಿ ಮುಖವಾಗಿದ್ದ ಮೂರನೆಯ ದಳವನ್ನು ಸೇರಿ, ಮುಂಚೂಣಿಯಲ್ಲಿದ್ದ ಕಫ್ತಾನ್ ಟಿಮೊಖಿನ್‌ನನ್ನು ಸಂಧಿಸಿ, 'ನನ್ನ ಬಗ್ಗೆ ನಿನಗೆ ವೈರವಿರಲಾರದಲ್ಲವೆ, ಪ್ರಖೋರ್ ಇಗ್ನಾತಿಚ್ ?' ಎಂದು ಪ್ರಶ್ನಿಸಿದನು. ತನಿಖೆ ಸುಸೂತ್ರವಾಗಿ ನೆರವೇರಿದುದರಿಂದ ದಳಪತಿಯ ಮುಖ ಅದಮ್ಯ ಆನಂದದಿಂದ ತೊಳಗುತ್ತಿತ್ತು. 'ಸಾರ್ವಭೌಮರ ಸೇವೆಯಲ್ಲಿರುವಾಗ ಇದನ್ನೆಲ್ಲ ಸಹಿಸಿಕೊಳ್ಳಬೇಕಾಗುತ್ತದೆ.... ಅನ್ಯಮಾರ್ಗವೇ ಇಲ್ಲ.... ಮೆರವಣಿಗೆಯಲ್ಲಿ ಕೆಲವರು ಅವಸರ ಮಾಡುತ್ತಾರೆ.... ನಾನಂತು ಮೊದಲೇ ತಪ್ಪೊಪ್ಪಿಕೊಳ್ಳುತ್ತೇನೆ. ನನ್ನ ವಿಷಯ ನಿಮಗೆ ತಿಳಿದಿದೆಯಲ್ಲ ?....ಅವರು ತುಂಬ ಸಂತುಷ್ಟರಾದರು....' ಎಂದವನು ಕಫ್ತಾನನ ಮುಂದೆ ಕೈ ಚಾಚಿದನು.

'ನಾನಂಥ ಧೈರ್ಯಶಾಲಿಯೆಂದು ತಿಳಿದು, ಸೇನಾನಿಗಳೆ, ಅವನ್ನೆಲ್ಲ ಹೇಳಬೇಡಿ' ಎಂದು ಕಫ್ತಾನ ಉತ್ತರಿಸುವಾಗ ಅವನ ಮೂಗು ಹೆಚ್ಚು ಹೆಚ್ಚು ಕೆಂಪಾಗುತ್ತಿತ್ತು ;

ಅವನು ನಕ್ಕಾಗ ಮುಂದುಗಡೆಯ ಎರಡು ಹಲ್ಲು ಗೈರುಹಾಜರಿಯೆಂದು ತಿಳಿಯುತ್ತಿತ್ತು. ಇಸ್ಮೈಲ್ ಕಡೆಗೆ ಬಂದೂಕ ಗುರಿಯಿಟ್ಟಾಗ ಅದರ ಹಿಂದುದಿ ಬಡಿದು ಅವು ಭಗ್ನವಾಗಿದ್ದುವು.

'ನಾನವನನ್ನು ಮರೆಯುವುದಿಲ್ಲವೆಂದು ದೋಲಖೊವ್‌ಗೆ ತಿಳಿಸು. ಅವನು ನಿರಾತಂಕವಾಗಿರಬಹುದು. ನಾನೊಂದು ಪ್ರಶ್ನೆ ಕೇಳಬೇಕೆಂದಿದ್ದೇನೆ, ದಯವಿಟ್ಟು ಉತ್ತರ ಹೇಳಿ. ಸಾಮಾನ್ಯವಾಗಿ ಅವನ ನಡತೆ ಹೇಗಿದೆ ?....'

'ಚಾಕರಿಯ ವಿಷಯ ಹೇಳುವುದಾದರೆ ಅವನಲ್ಲಿ ಸಂಪ್ರದಾಯ ನಿಷ್ಠೆಯಿದೆ, ಮಹಾಸ್ವಾಮಿ. ಆದರೆ ಅವನ ನಡತೆ....' ಎಂದು ಟಿಮೊಖಿನ್ ಮಾತು ತಡೆದನು.

'ಅವನ ನಡತೆಯ ಬಗ್ಗೆ ಶಂಕೆಯೆ ?' ಎಂದು ದಳಪತಿ ಪ್ರಶ್ನಿಸಿದನು.

'ಅದು ಒಂದೊಂದು ದಿನ ಒಂದೊಂದು ತೆರ' ಎಂದು ಕಫ್ತಾನ್ ಉತ್ತರಿಸಿದನು. 'ಒಂದು ದಿನ ವಿವೇಕಿಯಂತೆ, ಸುಶಿಕ್ಷಿತನಂತೆ, ಸತ್ಸ್ವಭಾವದವನಂತೆ ಕಂಡು ಬಂದರೆ, ಮಾರನೆಯ ದಿನವೇ ಅವನು ವನ್ಯಮೃಗವಾಗುತ್ತಾನೆ.. ಪೋಲೆಂಡಿನಲ್ಲಿ ಅವನು ಹೆಚ್ಚು ಕಡಮೆ ಒಬ್ಬ ಯಹೂದ್ಯನನ್ನು ಮುಗಿಸಿದ್ದ.'

'ಓಹೋ, ಸರಿ, ಸರಿ' ಎಂದು ದಳಪತಿ ಸೋಜಿಗ ವ್ಯಕ್ತಪಡಿಸಿದನು. 'ಆದರೂ ವಿಪತ್ತಿನಲ್ಲಿರುವ ತರುಣನ ಬಗ್ಗೆ ಮರುಕವಿರಬೇಕು. ಅವರಿಗೆ ದೊಡ್ಡ ದೊಡ್ಡ ಕಡೆ ನಂಟುತನವಿದೆ....ಹಾಗಾದರೆ ನೀವು....'

'ಆಗಬಹುದು, ಮಹಾಸ್ವಾಮಿ' ಎಂದು ಟಿಮೊಖಿನ್ ದಳಪತಿಯ ಇಚ್ಛೆಯನ್ನು ಅರ್ಥಮಾಡಿಕೊಂಡವನಂತೆ ನಕ್ಕನು.

'ಅವಶ್ಯವಾಗಿ ಆಗಬಹುದು'

ದಳಪತಿ ಸಿಪಾಯಿಗಳ ಸಮೂಹದಲ್ಲಿ ದೋಲಖೊವ್‌ನನ್ನು ಹುಡುಕಿ, ಕುದುರೆಯ ಲಗಾಮು ಹಿಡಿದೆಳೆದು ನಿಲ್ಲಿಸಿ 'ಮುಂದಿನ ವ್ಯವಹಾರದನಂತರ....ಭುಜಕೀರ್ತಿಗಳು.'

ದೋಲಖೊವ್ ಸುತ್ತಲೂ ಕಣ್ಣು ಹೊರಳಿಸಿದನು, ಆದರೆ ಏನೂ ಮಾತಾಡಲಿಲ್ಲ, ಅವನ ತುಟಿಗಳ ಮೇಲಣ ಅಣಕುನಗೆ ಬದಲಾವಣೆ ಹೊಂದಲಿಲ್ಲ.

'ಸರಿ, ಸರಿ' ಎಂದು ದಳಪತಿ ಮಾತು ಮುಂದುವರಿಸಿದನು. 'ನನ್ನ ಪರವಾಗಿ ಯೋಧರರಿಗೆ ಒಂದೊಂದು ಗಳಾಸು ವೋದ್ಕ' ಎಂದವನು ಎಲ್ಲರಿಗೂ ಕೇಳಿಸುವಂತೆ ಹೇಳಿದನು. 'ಎಲ್ಲರಿಗೂ ಧನ್ಯವಾದಗಳು. ದೇವರನ್ನು ಸ್ತುತಿಸೋಣ' ಎಂದವನು ನುಡಿದು, ಆ ತುಕಡಿಯನ್ನು ಹಿಂದೆ ಹಾಕಿ, ಮುಂದಿನ ತುಕಡಿಯನ್ನು ತಲುಪಿದನು.

'ಅವರು ನಿಜಕ್ಕೂ ಒಳ್ಳೆಯವರು. ಯಾರು ಬೇಕಾದರೂ ಅವರ ಬಳಿ ಕೆಲಸಮಾಡಬಹುದು' ಎಂದು ಟಿಮೊಖಿನ್ ತನ್ನ ಕೆಳಗಿನ ಅಧಿಕಾರಿಯೊಡನೆ ಹೇಳಿದನು.

'ಒಂದು ಮಾತಿನಲ್ಲಿ ಹೇಳುವುದಾದರೆ ಅವರು ನಿಷ್ಕಪಟಿ....' ಎಂದು ಕೆಳಗಿನ ಅಧಿಕಾರಿ ನಕ್ಕನು(ದಳಪತಿಗೆ ಹೃದಯ ಸಾಮ್ರಾಜ್ಯದ ಚಕ್ರವರ್ತಿ ಎಂಬ ಅಡ್ಡ ಹೆಸರಿತ್ತು.)

ತಪಾಸಣೆಯ ನಂತರ ಅಧಿಕಾರಿಗಳು ಸುಪ್ರಸನ್ನರಾಗಿದ್ದರು. ಅವರ ಆನಂದದ ಸೋಂಕು ಸೈನಿಕರಿಗೂ ಅಂಟಿಕೊಂಡಿತು. ತುಕಡಿ ಉತ್ಸಾಹದಿಂದ ಮುಂದುವರಿಯಿತು. ಎಲ್ಲಿ ನೋಡಿದರೂ ಸೈನಿಕರ ಧ್ವನಿಗಳೇ ಕೇಳುತ್ತಿದ್ದುವು.

'ಕುತುಜೋವನಿಗೆ ಒಂದು ಕಣ್ಣು ಕಾಣಿಸುವುದಿಲ್ಲವೆಂದು ಅವರು ಹೇಳಿದರಲ್ಲವೆ?'

'ಹೌದು. ಪೂರ್ತಿ ಕುರುಡು!'

'ಹಾಗೇನೂ ಇಲ್ಲ, ಮಿತ್ರ. ನಿನ್ನ ಕಣ್ಣಿಗಿಂತಲೂ ಅವರ ಕಣ್ಣು ಚುರುಕಾಗಿವೆ. ಬೂಟುಗಳು, ಕಾಲು ಪಟ್ಟಿಗಳು....ಎಲ್ಲವನ್ನು ಅವರು ಸೂಕ್ಷ್ಮವಾಗಿ ಪರಿಶೀಲಿಸಿದರು.'

'ಅವರು ನನ್ನ ಅಡಿ ನೋಡಿದಾಗ, ಗೆಳೆಯ....ನನ್ನ ಬಗ್ಗೆ ಅವರು....'

'ಅವರ ಜತೆಯಲ್ಲಿ ಮತ್ತೊಬ್ಬರಿದ್ದರಲ್ಲ, ಆಸ್ಟ್ರಿಯನ್, ಅವರಿಗೆ ಸುಣ್ಣ ಬಳಿದಂತೆ, ಹಿಟ್ಟನಂತೆ ಬೆಳ್ಳಗೆ ಕಾಣುತ್ತಿದ್ದರು. ಬಂದೂಕಗಳಂತೆ ಅವರನ್ನು ಉಜ್ಜಿ ಹೊಳಪು ಮಾಡುತ್ತಾರೆಂದು ತೋರುತ್ತದೆ.'

'ಅಯ್ಯ, ಫೇದೆಷಾನ್....ಯುದ್ಧ ಯಾವಾಗ ಪ್ರಾರಂಭವಾಗುತ್ತದೆಂದು ಅವರು ಹೇಳಿದರೆ? ನೀನವರ ಬಳಿ ಇದ್ದೆ. ಜೋನಪಾರ್ಟ್ ಬ್ರೌನೌನಲ್ಲಿದ್ದನೆಂದು ಪ್ರತಿಯೊಬ್ಬರು ಹೇಳುತ್ತಿದ್ದರು.'

'ಜೋನಪಾರ್ಟ್ ನಿಜವೆ?....ಅವನು ದಡ್ಡ. ಅವನಿಗೆ ಗೊತ್ತಿಲ್ಲದ್ದನ್ನು ಕೇಳಿದರೆ ಏನು ಪ್ರಯೋಜನ? ಪ್ರಷ್ಯಾದ ಜನ ಈಗ ದಂಗೆಯೆದ್ದಿದ್ದಾರೆ. ಆಸ್ಟ್ರಿಯಾದವರು ಅವರನ್ನು ಅದುಮಿಟ್ಟಿದ್ದಾರೆ. ಅವರನ್ನಡಗಿಸಿದನಂತರ ಬೋನಪಾರ್ಟಿಯ ಮೇಲೆ ಯುದ್ಧ ಪ್ರಾರಂಭವಾಗುತ್ತದೆ. ಜೋನಪಾರ್ಟ್ ಬ್ರೌನೌನಲ್ಲಿದ್ದಾನೆಂದು ಅವರು ಹೇಳುತ್ತಿದ್ದಾರೆ. ಇದು ನಿನ್ನ ದಡ್ಡತನವನ್ನು ತೋರಿಸುತ್ತದೆ. ಇವುಗಳನ್ನು ಕೇಳಿಸಿಕೊಳ್ಳುವಾಗ ಎಚ್ಚರದಿಂದಿರುವುದೊಳ್ಳೆಯದು'.

'ಈ ಉಸ್ತುವಾರಿದಳದ ಅಧಿಕಾರಿಗಳಿದ್ದಾರಲ್ಲ ಹಾಳು ಶನಿಗಳು! ಆರನೆಯ ತುಕಡಿ ಈಗಾಗಲೇ ಹಳ್ಳಿ ಸೇರಿದೆ, ನೋಡು....ನಾವು ಬಿಡದಿ ತಲುಪುವ ಮುನ್ನ ಅವರು ಬಕ್ ಗೋಧಿಯ ಅಡುಗೆ ಮುಗಿಸಿರುತ್ತಾರೆ'.

'ಎಲವೊ ಶನಿ, ನನಗೊಂದು ಬಿಸ್ಕತ್ತು ಕೊಡಯ್ಯ'.

'ನಿನ್ನೆ ನನಗೆ ನೀನು ಹೊಗೆಸೊಪ್ಪು ಕೊಟ್ಟೆಯಾ? ಈಗ ಅರ್ಥವಾಯಿತೆ, ಗೆಳೆಯ? ಹೋಗಲಿ ತಕ್ಕೊ'

'ಇಲ್ಲಿಯೇ ನಿಲ್ಲುವಂತೆ ಆಜ್ಞೆ ಮಾಡಬಹುದು. ಇಲ್ಲವೇ ಊಟ ತಿಂಡಿಗಳಿಲ್ಲದೆ ಇನ್ನು ನಾಲ್ಕು ಮೈಲಿ ನಡೆಯಬೇಕಾಗಬಹುದು.'

'ಜರ್ಮನಿಯವರು ನಮ್ಮನ್ನು ಗಾಡಿಯಲ್ಲಿ ಕೂರಿಸಿಕೊಂಡಾಗ ಸುಖವಾಗಿತ್ತಲ್ಲವೆ? ಸುಮ್ಮನೆ ಕುಳಿತುಕೊಂಡರೆ ಸಾಕು, ಗಾಡಿ ಹೊತ್ತುಕೊಂಡು ಹೋಗುತ್ತದೆ'.

'ಇಲ್ಲಿಯ ಜನ ತುಂಬ ನಿರ್ಗತಿಕರು, ಮಿತ್ರ. ಅಲ್ಲಿಯವರೆಲ್ಲ ಪೋಲರಂತೆ ಕಾಣುತ್ತಿದ್ದರು. ಎಲ್ಲರೂ ರಷ್ಯಾದ ಸಿಂಹಾಸನಕ್ಕೆ ಅಧೀನವಾಗಿರುವವರು. ಆದರೆ ಇಲ್ಲಿಯವರೆಲ್ಲ ಜರ್ಮನರು.'

'ಗಾಯಕರೆಲ್ಲ ಮುಂಚೂಣಿಗೆ ಬನ್ನಿ' ಎಂದು ಕಫ್ತಾನ ಆಜ್ಞೆ ಮಾಡಿದನು.

ವಿವಿಧಶ್ರೇಣಿಗಳಿಂದ ಇಪ್ಪತ್ತು ಜನ ಮುಂದಲೆಗೆ ಓಡಿದರು. ಡೋಲು ಬಡಿಗನೊಬ್ಬ ಅವರ ನಾಯಕನಾಗಿ ಗಾಯಕರಿಗೆದುರಾಗಿ ನಿಂತುಕೊಂಡು, ಆಡಂಬರದಿಂದ ತೋಳು ಬೀಸುತ್ತ, ಸುದೀರ್ಘ ಸೈನಿಕ ಗೀತವೊಂದನ್ನು ಪ್ರಾರಂಭಿಸಿದನು. 'ಬೆಳ್ಳನೆ

ಬೆಳಗಾಯಿತು, ರವಿ ಮೂಡಿದನು' ಎಂಬ ಮಾತುಗಳಿಂದ ಆರಂಭವಾಗಿ ಆ ಗೀತ 'ತಂದೆ ಕಾಮೆನ್‌ಸ್ಕಿಯರ ನೇತೃತ್ವದಲಿ, ಓ ಸೋದರರೆ, ಜಯ ಶತವ ಗಳಿಸೋಣ' ಎಂಬ ಸಾಲಿನಿಂದ ಮುಕ್ತಾಯಗೊಳ್ಳುತ್ತಿತ್ತು. ತುರ್ಕಿದಂಡಯಾತ್ರೆಯ ಸಮಯದಲ್ಲಿ ರಚನೆಗೊಂಡಿದ್ದರೂ ಆ ಗೀತೆಯನ್ನೇ ಈಗ ಆಸ್ಟ್ರಿಯಾದಲ್ಲಿಯೂ ಬಳಸುತ್ತಿದ್ದರು. ಅದರಲ್ಲಿಯ 'ತಂದೆ ಕಾಮೆನ್‌ಸ್ಕಿ' ಎಂಬ ಮಾತುಗಳಿಗೆ ಬದಲಾಗಿ ತಂದೆ ಕುತುಜೋವ್ ಎಂಬ ಪದಗಳನ್ನು ಜೋಡಿಸಿದ್ದರು.

ಕೊನೆಯ ಪದಗಳನ್ನು ದೀರ್ಘವಾಗಿ ಎಳೆದು, ಏನನ್ನೋ ಭೂಮಿಗೆಸೆಯುವ ರೀತಿಯಲ್ಲಿ ಕೈಗಳನ್ನು ತೂಗೆದು, ಆ ಡೋಲು ಬಡಿಗ ನಲವತ್ತು ವರ್ಷದ ಸುಂದರ ಸಣಕಲ ಸೈನಿಕ ಕಣ್ಣು ಕಿರಿದುಮಾಡಿ, ಗಾಯಕರ ಕಡೆಗೆ ಕಠೋರದೃಷ್ಟಿ ಬೀರಿದನು. ಎಲ್ಲ ಕಣ್ಣುಗಳೂ ತನ್ನಲ್ಲಿಯೇ ನಾಟಿವೆಯೆಂಬುದನ್ನು ಖಾತ್ರಿಮಾಡಿಕೊಂಡು, ಯಾವುದೋ ಅತ್ಯಮೂಲ್ಯವೂ ಅಗೋಚರವೂ ಆದ ವಸ್ತುವನ್ನು ಜಾಗರೂಕತೆಯಿಂದ ತಲೆಯ ಮೇಲೆತ್ತಿಟ್ಟುಕೊಳ್ಳುವ ಭಂಗಿಯಲ್ಲಿ ಎರಡು ಕೈಗಳನ್ನು ಮೇಲೇರಿಸಿದನು. ಕೆಲವು ಕ್ಷಣ ಮಾತ್ರ ಆ ವಸ್ತುವನ್ನು ಮೇಲಿರಿಸಿಕೊಂಡಿದ್ದು, ಕೆಳಗೆ ಬಿಸಾಡಿದ ನಂತರ 'ಓ ನನ್ನ ಕುಂಜವೇ, ನಿಕುಂಜವೇ' ಎಂದು ಹಾಡಲಾರಂಭಿಸಿದನು.

'ಓ ನನ್ನ ಕುಂಜವೇ, ನವ ನಿಕುಂಜವೇ' ಎಂದು ವಿಂಶತಿಧ್ವನಿಗಳು ಮೊಳಗಿಸಿದುವು. ವಾದ್ಯ ಸಾಧನದ ಭಾರದಿಂದ ಜಗ್ಗುತ್ತಿದ್ದರೂ ದಂತದ ಚಿಟಿಕೆ ಬಾರಿಸುವವ ಮುಂದಂಡೆಗೆ ಧಾವಿಸಿದನು; ತುಕಡಿಯ ಮುಂದೆ ಹಿಂದು ಹಿಂದಕ್ಕೆ ಹೆಜ್ಜೆಯಿಡುತ್ತ, ತೋಳು ಗಳನ್ನು ತೂಗಿಸುತ್ತ, ಯಾರನ್ನೋ ತರ್ಜಿಸುವಂತೆ ಚಿಟಿಕೆಗಳನ್ನು ಝಳಪಿಸಿದನು. ಸೈನಿಕರು ತೋಳುಗಳನ್ನು ಬೀಸುತ್ತ, ಕಾಲ ಮಾನಕ್ಕನುಗುಣವಾಗಿ ದಾಪುಗಾಲಿಡು ತ್ತಿದ್ದರು. ತುಕಡಿಯ ಹಿಂದುಗಡೆ ಚಕ್ರದ ಚೀತ್ಕಾರವೂ, ಲಂಘಕಗಳ ಕಿರಿಕಿರಿ ಶಬ್ದವೂ, ಕುದುರೆಗೊರಸುಗಳ ಟಣತ್ಕಾರವೂ ಕೇಳಿಸುತ್ತಿದ್ದುವು. ಕುತುಜೋವ್ ಮತ್ತು ಆತನ ಪರಿವಾರ ನಗರಕ್ಕೆ ಹಿಂದಿರುಗುತ್ತಿದ್ದರು. ಸೈನಿಕರು ಸಂಪ್ರದಾಯ ಬಿಟ್ಟು ಹಾಯಾಗಿ ಹೆಜ್ಜೆ ಹಾಕಬಹುದೆಂದು ಮಹಾಸೇನಾನಿ ಸನ್ನೆಮಾಡಿದನು. ಪ್ರಗಮನಾಸಕ್ತ ಹರ್ಷೋತ್ಕರ್ಷ ಪ್ರವೃತ್ತಿಯ ಸೈನಿಕರ ಸಂಗೀತದ ನಾದ ಮಾಧುರ್ಯಕ್ಕೂ ನೃತ್ಯದ ಮನೋಹರತೆಗೂ ಮಾರುಹೋದ ಸೇನಾನಿ ಮತ್ತು ಆತನ ಪರಿವಾರದ ಜನ ಆನಂದಾಬ್ಧಿಯಲ್ಲಿ ಓಲಾಡುತ್ತಿದ್ದರು. ಬಲಪಾರ್ಶ್ವದಿಂದ ಎರಡನೆಯ ಸಾಲಿನ ಪಕ್ಕದಲ್ಲಿ ವಾಹನ ಸಾಗುತ್ತಿದ್ದಾಗ ನೀಲಿಗಣ್ಣಿನ ಸೈನಿಕ ಅನೈಚ್ಛಿಕವಾಗಿಯೆಂಬಂತೆ ಅವರ ಗಮನ ಸೆಳೆದನು. ತುಕಡಿಯ ಜತೆಯಲ್ಲಿ ಹೆಜ್ಜೆಹಾಕದೆ ವೇಗವಾಗಿ ಸಾಗುತ್ತಿದ್ದವರ ಬಗ್ಗೆ ಕನಿಕರಿಸುತ್ತಿದ್ದನೆಂಬಂತೆ ದೃಷ್ಟಿಸುತ್ತ, ಸಂಗೀತದ ತಾಳಲಯಗಳಿಗೆ ತಕ್ಕಂತೆ ವಿಶೇಷ ವಿಲಾಸದಿಂದ ಹೆಜ್ಜೆ ಹಾಕುತ್ತಿದ್ದ ಡೋಲಖೊವನೇ ಆ ವ್ಯಕ್ತಿ. ದಳಪತಿಯನ್ನು ಅಣಕಿಸು ತ್ತಿದ್ದ ಕುತುಜೋವ್ ಪರಿವಾರದ ಅಶ್ವಸೈನ್ಯಾಧಿಕಾರಿ ವಾಹನದಿಂದ ಹಿಂದೆ ಸರಿದು, ಡೋಲಖೊವ್‌ನ ಬಳಿ ಸವಾರಿ ಮಾಡಿಕೊಂಡು ಹೋದನು.

ಅಶ್ವದಳಪತಿ ಝರ್ಕ್ಯೋವ್ ಹಿಂದೊಮ್ಮೆ ಪೀಟರ್ಸ್‌ಬರ್ಗ್‌ನಲ್ಲಿದ್ದಾಗ ದೋಲ ಖೊವ್‌ನ ನೇತೃತ್ವದಲ್ಲಿ ಸಂಘಟನೆಗೊಂಡಿದ್ದ ಉಗ್ರಗಾಮಿ ಪಕ್ಷದ ಸದಸ್ಯನಾಗಿದ್ದ.

ಸಾಮಾನ್ಯ ಸೈನಿಕನಂತಿದ್ದ ದೋಲಖೋವ್‌ನನ್ನು ಝೆರ್ಕೋವ್ ವಿದೇಶದಲ್ಲಿ ಸಂಧಿಸಿದ್ದನು. ಆಗವನು ಯೋಗ್ಯನಂತೆ ಕಂಡಿರಲಿಲ್ಲ. ಆದರೀಗ ಕುತುಜೋವ್ ಖುದ್ದಾಗಿ ಅವನನ್ನು ಮಾತಾಡಿಸಿದ್ದರಿಂದ, ಝೆರ್ಕೋವ್ ತುಕಡಿಯ ಜತೆಜತೆಗೆ ಕುದುರೆಯನ್ನು ನಡೆಸುತ್ತ ಅತ್ಯಾದರದಿಂದ ಹಳೆಯ ಗೆಳೆಯನ ಬಳಿಸಾರಿ 'ಏನಯ್ಯ ಮಿತ್ರ, ಹೇಗಿದ್ದೀಯಾ?' ಎಂದು ಹಾಡಿನ ನಡುವೆ ಪ್ರಶ್ನಿಸಿದನು.

'ನಾನು ಹೇಗಿದ್ದೀನಿ? ನಿಮಗೆ ಕಾಣಿಸ್ತಾ ಇಲ್ಲವೆ?' ಎಂದು ದೋಲಖೋವ್ ಬೇಸರದಿಂದ ಉತ್ತರವಿತ್ತನು.

ಝೆರ್ಕೋವ್‌ನ ನಿರುಪಾಧಿಕವೂ ನಿರಾತಂಕವೂ ಆದ ಮಾತಿನ ಗತ್ತಿಗೆ ಮತ್ತು ದೋಲಖೋವ್‌ನ ಉದ್ದೇಶಪೂರ್ವಕವಾದ ನಿರುತ್ಸಾಹದ ಉತ್ತರಕ್ಕೆ ಉಲ್ಲಾಸಭರಿತವಾದ ಸಂಗೀತ ವಿಶೇಷ ಕಳೆಯನ್ನು ಕೂಡಿಸಿತ್ತು.

'ಅಧಿಕಾರಿಗಳ ಜತೆಯಲ್ಲಿ ನೀನೆಂತು ಏಗುತ್ತಿದ್ದೀಯೆ?' ಎಂದು ಝೆರ್ಕೋವ್ ಪ್ರಶ್ನಿಸಿದನು.

'ಸೊಗಸಾಗಿ. ಅವರು ಒಳ್ಳೆಯವರು. ಈ ಅಧಿಕಾರಿಗಳ ಜತೆ ಹೇಗೆ ಸೇರಿದಿರಿ?'

'ನಾನಿಲ್ಲಿ ನೇಮಕಗೊಂಡಿದ್ದೇನೆ. ಈಗ ನಾನು ಕೆಲಸದಮೇಲೆ ಬಂದಿದ್ದೇನೆ.'

ಇಬ್ಬರೂ ಮೌನವಾದರು.

'ಬಲಗಡೆಯ ದೊಗಳೆದೋಳಿಂ ಗಿಡಗನನು ಮೇಲೆ ಹಾರಿಸಿದಳವಳು' ಎಂಬ ಹಾಡು ಧೈರ್ಯೋತ್ಸಾಹಗಳ ಅನೈಚ್ಛಿಕ ಸಂವೇದನಾ ತರಂಗಗಳನ್ನೆಬ್ಬಿಸಿತು. ಆ ಹಾಡಿನ ಪ್ರಭಾವವಿರದಿದ್ದರೆ ಪ್ರಾಯಶಃ ಅವರ ಸಂವಾದ ವ್ಯತ್ಯಾಸವಾಗುತ್ತಿತ್ತು.

'ಆಸ್ಟ್ರಿಯಾ ಜನರನ್ನು ಹಣ್ಣುಗಾಯಿ ನೀರುಗಾಯಿ ಮಾಡಲಾಗಿದೆಯಂತೆ, ನಿಜವೆ?' ಎಂದು ದೋಲಖೋವ್ ಪ್ರಶ್ನಿಸಿದನು.

'ಹಾಳು ಶನಿಗೆ ಮಾತ್ರ ತಿಳಿದಿರಬೇಕು! ಹಾಗೆ ಮಾತಾಡಿಕೊಳ್ತಾರೆ.'

'ಸಂತೋಷ' ಎಂದು ದೋಲಖೋವ್ ಸಂಕ್ಷೇಪವಾಗಿಯೂ ಸ್ಪಷ್ಟವಾಗಿಯೂ ನುಡಿದನು.

'ಒಂದು ಸಂಜೆ ಬಾ, ಫ್ಯಾರೊ ಇಸ್ಪೀಟ್ ಆಡೋಣ' ಎಂದು ಝೆರ್ಕೋವ್ ಆಹ್ವಾನಿಸಿದನು.

'ಏಕೆ, ನಿಮ್ಮ ಹತ್ತಿರ ಬಹಳ ಹಣ ಇದೆಯೆ?'

'ಖಂಡಿತ ಬಾ'

'ಬರಲಾರೆ. ನಾನು ಆಣೆಯಿಟ್ಟುಕೊಂಡಿದ್ದೇನೆ. ನನಗೆ ಪೂರ್ವಸ್ಥಾನ ಲಭಿಸುವ ತನಕ ಕುಡಿಯುವುದಿಲ್ಲ, ಜೂಜಾಡುವುದಿಲ್ಲ.'

'ಅದೆಲ್ಲ ಎಲ್ಲಿಯತನಕ? ಒಂದು ಸಾರಿ ಅದರಲ್ಲಿ ಪ್ರವೃತ್ತನಾಗುವ ತನಕ.'

'ನೋಡೋಣ'

ಅವರು ಮತ್ತೆ ಮೌನತಾಳಿದರು.

ನನ್ನಿಂದೇನಾದರೂ ಆಗಬೇಕಾಗಿದ್ದರೆ, ಬಾ ಅಧಿಕಾರದಲ್ಲಿರುವವರಿಂದ ಅಷ್ಟಿಷ್ಟು ಪ್ರಯೋಜನವಾಗಬಹುದು.'

ಡೋಲಖೊವ್ ಮುಗುಳುನಗೆ ಬೀರಿದನು. 'ನನ್ನನ್ನು ಓಂಸಿಸಬೇಡಿ. ನನಗೇನಾದರೂ ಬೇಕಾಗಿದ್ದರೆ ಯಾರ ಬಳಿಯೂ ಯಾಚಿಸುವುದಿಲ್ಲ; ಕಸಿದುಕೊಳ್ಳುತ್ತೇನೆ.'

'ಪರವಾ ಇಲ್ಲ. ನಾನು....'

'ಆದರೆ ನಾನು ಮಾತ್ರ....'

'ಹೋಗಿ ಬರ್ತೇನೆ'

'ನಿಮ್ಮ ಆರೋಗ್ಯ ಚೆನ್ನಾಗಿರಲಿ'

'ದೂರಾ, ಬಹು ದೂರಾ
ಇಹುದೆನ್ನ ತಾಯಿ ನಾಡು'

ಝೆರ್ಕೋವ್ ಹಿಮ್ಮಡಿಯ ಚೋದಕದಿಂದ ಕುದುರೆಯನ್ನು ತಿವಿದನು. ಅದು ಆವೇಶದ ಭರದಲ್ಲಿ ಯಾವ ಕಾಲಿನಿಂದ ನಾಗಾಲೋಟ ಪ್ರಾರಂಭಿಸುವುದೆಂಬುದನ್ನರಿಯದೆ, ಹಿಂಗಾಲುಗಳ ಮೇಲೆ ಕುಪ್ಪಳಿಸುತ್ತಿತ್ತು. ಕೆಲವು ಕ್ಷಣಗಳಲ್ಲಿಯೇ ಅದು ಪ್ಲುತಗತಿಯಿಂದ ತುಕಡಿಯನ್ನು ದಾಟಿ, ವಾಹನವನ್ನು ಮುಟ್ಟಿತು.

ಅಧ್ಯಾಯ ೩

ತಪಾಸಣೆ ಮುಗಿಸಿ ಹಿಂದಿರುಗಿದನಂತರ ಕುತುಜೋವ್ ಆಸ್ಟ್ರಿಯಾದ ಸೇನಾನಿಯನ್ನು ತನ್ನ ಖಾಸಗಿ ಕೋಣೆಗೆ ಕರೆದೊಯ್ದನು. ಸೈನ್ಯಾಗಮನ ಸಮಯದಲ್ಲಿ ಅದರ ಸ್ಥಿತಿಗತಿಗಳು ಎಂಥವಿದ್ದುವೆನ್ನುವುದರ ಬಗೆಗಿನ ಪತ್ರವ್ಯವಹಾರಗಳನ್ನು ಮುಂಚೂಣಿ ಸೈನ್ಯದ ಚಮೂಪತಿ ಫರ್ಡಿನೆಂಡಿನಿಂದ ಬಂದಿದ್ದ ಕಾಗದ ಪತ್ರಗಳನ್ನು ತರುವಂತೆ ಸಹಾಯಾಧಿಕಾರಿಗೆ ಹೇಳಿಕಳಿಸಿದನು. ರಾಜಕುಮಾರ ಆಂಡ್ರ್ಯೂ ಬಲ್ಕೋನ್‌ಸ್ಕಿ ಸಂಬಂಧಪಟ್ಟ ಪತ್ರಗಳೊಡನೆ ಕೋಣೆಗೆ ಬಂದನು. ಮೇಜಿನ ಮೇಲಿದ್ದ ನೀಲಿ ನಕ್ಷೆಯನ್ನು ಹರಡಿಕೊಂಡು ಕುತುಜೋವ್‌ನೂ ಆಸ್ಟ್ರಿಯಾ ಯುದ್ಧಮಂಡಲಿಯ ಸದಸ್ಯನೊಬ್ಬನೂ ಕುಳಿತಿದ್ದರು.

ಬಲ್ಕೋನ್‌ಸ್ಕಿ ಕಣ್ಣಿಗೆ ಬಿದ್ದ ಕೂಡಲೇ ತುಸು ಕಾಯುವಂತೆ ಅವನಿಗೆ ಸೂಚನೆ ನೀಡುವ ಭಂಗಿಯಲ್ಲಿ 'ಆಹ'....ಎಂದು ಕುತುಜೋವ್ ಉದ್ಗಾರ ತೆಗೆದು, ಫ್ರೆಂಚ್ ಭಾಷೆಯಲ್ಲಿ ತನ್ನ ಸಂಭಾಷಣೆಯನ್ನು ಮುಂದುವರಿಸಿದನು.

'ಸೇನಾನಿಗಳೇ, ನಾನು ಹೇಳುವುದಿಷ್ಟೆ' ಎಂದು ಕುತುಜೋವ್ ದನಿಯೆತ್ತಿದಾಗ ಅವನ ವಾಕ್ಸರಣಿ ಹಾಗೂ ಸ್ವರವಿಧಾನದ ಆಹ್ಲಾದಕರ ಲಾಲಿತ್ಯದಿಂದಾಗಿ, ಪ್ರತಿಯೊಬ್ಬರೂ ಅವನ ಮಾತನ್ನು ಜಾಗರೂಕತೆಯಿಂದ ಆಲಿಸುತ್ತಿದ್ದರು. ಕುತುಜೋವ್ ಸಹ ತನ್ನ ಧ್ವನಿಗೆ ತಾನೇ ಮಾರುಹೋಗಿ ಅದನ್ನು ಕೇಳಿಸಿಕೊಳ್ಳುತ್ತಿದ್ದನು. 'ನಾನು ಹೇಳುವುದಿಷ್ಟೇ, ಸೇನಾನಿಗಳೇ. ಈ ವ್ಯವಹಾರ ನನ್ನ ಸ್ವಂತ ಇಚ್ಛೆಯನ್ನವಲಂಬಿಸಿದ್ದರೆ ಸಾರ್ವಭೌಮ ಫ್ರಾನ್ಸಿಸ್‌ರ ಸಂಕಲ್ಪವೆಂದೋ ಈಡೇರುತ್ತಿತ್ತು. ಬಹು ಹಿಂದೆಯೇ ನಾನು ಆರ್ಚ್‌ಡ್ಯೂಕರೊಡನೆ ಸೇರಿಕೊಳ್ಳುತ್ತಿದ್ದೆ. ಹೆಚ್ಚು ತಿಳಿವಳಿಕೆ ಹಾಗೂ ಕೌಶಲ

ವುಳ್ಳ ಸೇನಾನಿಯ ಕೈಗೆ ಸೈನ್ಯದ ಪರಮೋಚ್ಚಾಧಿಕಾರವನ್ನು ವಹಿಸಿಕೊಟ್ಟು, ಭಾರಿ ಹೊಣೆಗಾರಿಕೆಯಿಂದ ಮುಕ್ತನಾಗುವುದಾದರೆ ನನಗೆ ವೈಯಕ್ತಿಕವಾಗಿ ಅತ್ಯಂತ ಸಂತೋಷವಾಗುತ್ತದೆಂದು ಆಣೆಯಿಟ್ಟು ಹೇಳುತ್ತೇನೆ. ಆಸ್ಟ್ರಿಯಾದಲ್ಲಿ ಅಂಥ ಸಮರ್ಥ ಸೇನಾನಿಗಳು ಹಲವರಿದ್ದರೆಂಬುದನ್ನು ನಾನು ಬಲ್ಲೆ. ಆದರೆ ಪರಿಸರ ಮತ್ತು ಘಟನೆಗಳು ತುಂಬ ಕ್ರೂರವಾಗಿರುತ್ತವೆ, ಸೇನಾನಿಗಳೆ' ಎಂದವನು ನಕ್ಕನು. 'ನಾನು ಹೇಳಿದ್ದನ್ನು ನಂಬಬೇಕೆ, ಬೇಡವೆ ಎನ್ನುವ ವಿಚಾರದಲ್ಲಿ ನೀವು ಸ್ವತಂತ್ರರು. ಆ ಬಗ್ಗೆ ನಾನು ಅಂಜಬೇಕಾಗಿಲ್ಲ. ಆದರೆ ಹಾಗೆ ಹೇಳಲಿಕ್ಕೆ ನಿಮಗೆ ಆಧಾರವಿಲ್ಲ. ಇದಿಷ್ಟೇ ಮುಖ್ಯ ವಿಷಯ' ಎಂಬ ಭಾವನೆ ಅವನ ನಗುವಿನಲ್ಲಿ ಅಡಕಗೊಂಡಿದ್ದಂತಿತ್ತು.

ಆಸ್ಟ್ರಿಯಾದ ಸೇನಾನಿ ಅಸಮಾಧಾನಗೊಂಡಂತೆ ಕಂಡನು. ಅದೇ ಧಾಟಿಯಲ್ಲಿ ಪ್ರತ್ಯುತ್ತರ ನೀಡುವುದೊಂದೇ ಅವನ ಮುಂದಿದ್ದ ದಾರಿ. 'ಅದಕ್ಕೆ ಪ್ರತಿಯಾಗಿ ತಮ್ಮಂಥ ಮಹಾಸೇನಾನಿಗಳು ಸಮಾನೋದ್ದೇಶವುಳ್ಳ ಈ ಸಂಗ್ರಾಮದಲ್ಲಿ ಸಹಭಾಗಿಯಾಗುವು ದಾದರೆ ಸಾರ್ವಭೌಮರಿಗೆ ಮಹದಾನಂದವಾಗುತ್ತದೆ. ಸದ್ಯದ ವಿಳಂಬದಿಂದ, ಯುದ್ಧ ರಂಗದಲ್ಲಿ ಯಾವಾಗಲೂ ಜಯವನ್ನೆ ಗಿಟ್ಟಿಸುವ, ಅತ್ಯುತ್ಕೃಷ್ಟವೆಂದು ಪರಿಗಣನೆ ಗೊಂಡಿರುವ ರಷ್ಯನ್ ಸೈನ್ಯಕ್ಕೆ ಮತ್ತು ಅದರ ಸೇನಾನಿಗೆ ಜಯಪ್ರಶಸ್ತಿಯ ಅವಕಾಶ ತಪ್ಪಿಹೋಗುತ್ತದೆಂಬುದೇ ನಮ್ಮೆಲ್ಲರ ಆಲೋಚನೆಯಾಗಿದೆ' ಎಂದವನು ಪ್ರಶಂಸಿಸಿದರೂ, ಮೊದಲೇ ಸಿದ್ಧಪಡಿಸಿಕೊಂಡಂತಿದ್ದ ಅವನ ಮಾತಿನ ಧಾಟಿಯಲ್ಲಿ ಸಿಡುಕಿನ ಮತ್ತು ಜಗಳಗಂಟಿತನದ ದನಿ ಮಿಡಿಯುತ್ತಿತ್ತು.

ಕುತುಜೋವ್ ಸಹ ಅದೇ ದಾಟಿಯಲ್ಲಿ ನಕ್ಕನು. 'ಅದೇ ನನ್ನ ದೃಢ ನಿಶ್ಚಯ. ಆರ್ಚ್‌ಡ್ಯೂಕ್ ಫರ್ಡಿನೆಂಡ್ ಅವರು ನನಗೆ ಕೃಪೆಯಿಂದ ಬರೆದಿರುವ ಪತ್ರದ ಪ್ರಕಾರ ಸೇನಾನಿ ಮ್ಯಾಕರಂಥ ಸಮರ್ಥನಾಯಕರ ದಕ್ಷ ನಿರ್ದೇಶನದಲ್ಲಿ ಆಸ್ಟ್ರಿಯಾದ ಸೈನ್ಯಗಳು ಈಗಾಗಲೇ ನಿರ್ಣಾಯಕ ವಿಜಯವನ್ನು ಸಾಧಿಸಿವೆಯೆಂದೂ, ನಮ್ಮ ಸಹಾಯ ಅವರಿಗೆ ಬೇಕಾಗಿಲ್ಲವೆಂದೂ ನನಗೆ ಮನವರಿಕೆಯಾಗಿದೆ.'

ಸೇನಾನಿಯ ಹುಬ್ಬು ಗಂಟಿಕ್ಕಿತು. ಆಸ್ಟ್ರಿಯನ್ ಸೈನ್ಯದ ಪರಾಜಯದ ಬಗ್ಗೆ ನಿರ್ದಿಷ್ಟ ವರ್ತಮಾನವಿರಲಿಲ್ಲವೆಂಬುದು ನಿಜ. ಆದರೂ ಗಾಳಿಯಲ್ಲಿ ತೇಲುತ್ತಿದ್ದ ಅನನುಕೂಲವಾದ ಕಿಂವದಂತಿಗಳು ಸದ್ಯದ ಸ್ಥಿತಿಗತಿಗಳನ್ನು ಸ್ಥಿರೀಕರಿಸುತ್ತಿದ್ದುವು. ಆದ್ದರಿಂದ ಕುತುಜೋವ್ ಮುಂದಿಟ್ಟಿದ್ದ ಆಸ್ಟ್ರಿಯನ್ ವಿಜಯದ ಸೂಚನೆಯಲ್ಲಿ ವ್ಯಂಗ್ಯ ಧ್ವನಿತವಾಗುತ್ತಿತ್ತು. ಅವನ ನಗುವಿನಲ್ಲಿ ಖಾರವಿರಲಿಲ್ಲವಾದರೂ, ಯುದ್ಧದ ಬಗ್ಗೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಹಕ್ಕು ತನಗಿದೆಯೆಂಬ ಭಾವನೆ ಅವನ ನಗೆಮೋಡಿ ಯಿಂದ ಭಾಸವಾಗುತ್ತಿತ್ತು. ಮ್ಯಾಕನ ಸೈನ್ಯದಿಂದ ಬಂದಿದ್ದ ಕೊನೆಯ ಕಾಗದ ವಿಜಯ ಸಮಾಚಾರದ ಜತೆಗೆ ವ್ಯೂಹೋಪಾಯದ ದೃಷ್ಟಿಯಿಂದ ತನ್ನ ಸೈನ್ಯದ ಪರಿಸ್ಥಿತಿ ಅನುಕೂಲಕರವಾಗಿತ್ತೆಂದು ಸಾರುತ್ತಿತ್ತು.

'ಆ ಕಾಗದವನ್ನಿಲ್ಲಿ ತಾ' ಎಂದು ಕುತುಜೋವ್ ಆಂಡ್ರೂವಿಗೆ ಹೇಳಿದನು. 'ದಯೆಯಿಟ್ಟು ನೋಡಿ' ಎಂದು ಕುತುಜೋವ್ ಬಾಯಿಯ ಮೂಲೆಗಳಲ್ಲಿ ವ್ಯಂಗ್ಯ ಹಾಸವನ್ನು ಚೆಲ್ಲುತ್ತ, ಜರ್ಮನ್ ಭಾಷೆಯಲ್ಲಿದ್ದ ಫರ್ಡಿನೆಂಡನ ಪತ್ರವನ್ನೋದಿದನು.

ಮುಂದುವರಿಯುವುದು

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

1. ಶ್ರೀಕೃಷ್ಣ ಆಲನಹಳ್ಳಿ
ನಂ. 12, 4ನೇ ಮುಖ್ಯ ರಸ್ತೆ, ವಿ. ವಿ. ಮೊಹಲ್ಲಾ, ಮೈಸೂರು–೫೭೦೦೦೨

2. ಡಾ॥ ಸಿ. ಪಿ. ಕೃಷ್ಣಕುಮಾರ್, ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೫೭೦೦೦೬

3. ಡಾ॥ ಸಿ. ಪಿ. ಸಿದ್ಧಾಶ್ರಮ
ಕನ್ನಡ ಅಧ್ಯಾಪಕ, ಯುವರಾಜಾ ಕಾಲೇಜು, ಮೈಸೂರು–೫೭೦೦೦೫

4. ಪರಮಶಿವ ನಡುಬೆಟ್ಟು, ಮುಖ್ಯೋಪಾಧ್ಯಾಯ
ಸರ್ಕಾರಿ ಪ್ರೌಢಶಾಲೆ, ಚಾಮುಂಡಿಬೆಟ್ಟ, ಮೈಸೂರು

5. ಪ್ರೊ॥ ಎ. ಎನ್. ಮೂರ್ತಿರಾವ್
25, ಕಾಳಿದಾಸ ರಸ್ತೆ, ವಿ. ವಿ. ಮೊಹಲ್ಲ, ಮೈಸೂರು–೫೭೦೦೦೨

6. ಯಶವಂತ ಚಿತ್ತಾಲ
2, ಬ್ಯಾಂಡ್ ಸ್ಟ್ಯಾಂಡ್ ಅಪಾರ್ಟ್‌ಮೆಂಟ್, 212–ಎ, ಬ್ಯಾಂಡ್ ಸ್ಟ್ಯಾಂಡ್
ಬಾಂದ್ರಾ, ಬೊಂಬಾಯಿ–೫೦

7. ಡಾ॥ ಶಾಂತಿನಾಥ ದೇಸಾಯಿ, ಇಂಗ್ಲೀಷ್ ವಿಭಾಗದ ಮುಖ್ಯಸ್ಥರು
ಶಿವಾಜಿ ವಿಶ್ವವಿದ್ಯಾನಿಲಯ, ಕೊಲ್ಹಾಪುರ್, ಮಹಾರಾಷ್ಟ್ರ–೪೧೬೦೦೪

8. ಡಾ॥ ಯು. ಆರ್. ಅನಂತಮೂರ್ತಿ
849, ಟಿ. ಕೆ. ಲೇಔಟ್, ಹೊಸ ಕಾಂತರಾಜ ಅರಸ್ ರಸ್ತೆ, ಮೈಸೂರು–೯

9. ಚೆನ್ನವೀರ ಕಣವಿ
"ಚೆಂಬೆಳಕು," ಕಲ್ಯಾಣನಗರ, ಧಾರವಾಡ

10. ತಿಪ್ಪೇಸ್ವಾಮಿ, ಅಧ್ಯಾಪಕ
ಹಿಂದೀ ವಿಭಾಗ, ಮಾನಸಗಂಗೋತ್ರಿ, ಮೈಸೂರು ೫೭೦೦೦೬

11. ಎಂ. ಕೆ. ರಾಮಸ್ವಾಮಿ, ಭೌತಶಾಸ್ತ್ರ ಉಪನ್ಯಾಸಕ
ಮಹಾರಾಜ ಸರ್ಕಾರಿ ಕಿರಿಯ ಕಾಲೇಜು, ಮೈಸೂರು–೫೭೦೦೦೫

12. ಎಸ್. ಎನ್. ಲಕ್ಷ್ಮೀಪತಿ
ನಂ. 87, 4ನೇ ಕ್ರಾಸ್, 5ನೇ ಬಿ ಮೈನ್, ಆರ್. ಪಿ. ಸಿ. ಬಡಾವಣೆ,
ವಿಜಯನಗರ, ಬೆಂಗಳೂರು–೫೬೦೦೪೦

13. ಶಂಪಾ ದೈತೋಟ
ಮುಂಡಾಜೆ, ದಕ್ಷಿಣ ಕನ್ನಡ ಜಿಲ್ಲೆ–೫೭೪೨೨೮

14. ಪ್ರೊ|| ದೇ. ಜವರೇಗೌಡ, ವಿಶ್ರಾಂತ ಉಪಕುಲಪತಿಗಳು
ಜಯಲಕ್ಷ್ಮೀಪುರಂ, ಮೈಸೂರು ೫೭೦೦೧೨



'ಪೊದೆಯೊಳಡಗಿದ ಕರಿಯು ಭಿಲ್ಲ ದುರ್ವಿಧಿ ಕೊಲದೆ
ಕಳ್ಳತನದಲಿ ಮೈಯನಷ್ಟೆ ಭೇದಿಸಿ ಭಾವೆಯೆಸೆದಿದ್ದ
ನಿಷ್ಕಾರಣ ಕ್ರೌರ್ಯದಿಂದ'

* * * * *

'ಜೀವಕ್ಕೆ ಬಿಗಿದ ಘಟಸರ್ಪವಾಯಿತು ದೇಹ'

* * * * *

ಕನಸಿನಲ್ಲೂ ಎಣಿಸಿರಲಿಲ್ಲ
ಹಿಂದೊಮ್ಮೆ ತಂದೆಯನ್ನು ಬಾಧಿಸಿದ ದುಃಖ
ಇಂದು ಮಗನನ್ನೂ ವ್ಯಾಧಿಸಲೆಂದು
ಚರಿತ್ರೆಯೆಂದು ಹಾಡಿದ ಗೀತೆ
ಆತ್ಮಚರಿತ್ರೆಯಾಗಿ ವೇಧಿಸಲೆಂದು

ಗಂಗಾಧರ ಚಿತ್ತಾಲ